ಶೀ:- ದಕ್ಷಿಣಕನ್ನಡದ ಇತಿಹಾಸ
(ತೌಳವ ಚರಿತ್ರೆ)

ಲೇ:- ಕೇಶವ ಕೃಷ್ಣ ಕುಡ್ವ, ಕಾರ್ಕಳ



1948

1948

# ದಕ್ಷಿಣ ಕನ್ನಡದ ಇತಿಹಾಸ

## (ತುಳುವ ಚರಿತ್ರೆ)


ಕೇಶವ ಕೃಷ್ಣ ಕುಡ್ವ, ಕಾರ್ಕಳ.

*(B. A., L. L. B., Recipient of the Kinloch Forbes Gold Medal and Prize of the Bombay University for 1927.)*


ಡಿಸ್ಟ್ರಿಕ್ಟ ಎಡ್ಯುಕೇಶನಲ್ ಆಫೀಸರರಾದ
ಶ್ರೀ ಎನ್. ಸುಬ್ಬರಾವರ ಮುನ್ನುಡಿ ಸಹಿತ.




೧೯೪೮

ವರು? ಸಾಮಂತರಾಗಿದ್ದ ಬಂಗ, ಚೌಟ ಮೊದಲಾದ ವರ ಪಾಡೇನು? ಇದನ್ನೆಲ್ಲಾ ಇಲ್ಲಿ ಓದಬಹುದು.

ಕರ್ನಾಟಕದ ಐಕ್ಯತೆಗಾಗಿ ಕನ್ನಡಿಗರೆಲ್ಲರೂ ಸಾಧಿಸುತ್ತಿರುವ ಈ ಸಂಧಿಯಲ್ಲಿ ಕನ್ನಡನಾಡಿನ ಅಂಗವೊಂದಾದ ತುಳುನಾಡಿನ ಚರಿತ್ರೆಯನ್ನೋದಲು ಸರ್ವ ಕನ್ನಡಿಗರೂ ಆಶಿಸಬಹುದು.

ರೂ. 2/12

# ದಕ್ಷಿಣ ಕನ್ನಡದ ಇತಿಹಾಸ

## (ತುಳುವ ಚರಿತ್ರೆ)

ಕೇಶವ ಕೃಷ್ಣ ಕುಡ್ವ, ಕಾರ್ಕಳ.

*(B. A., L. L. B., Recipient of the Kinloch Forbes Gold Medal and Prize of the Bombay University for 1927.)*



ಡಿಸ್ಟ್ರಿಕ್ಟ ಎಡ್ಯುಕೇಶನಲ್ ಆಫೀಸರರಾದ

ಶ್ರೀ ಎಸ್. ಸುಬ್ಬರಾವರ ಮುನ್ನುಡಿ ಸಹಿತ.



೧೯೪೮

ಬೆಲೆ: ರೂ. ೨—೧೨—೦.



P, P. C. order D. Dis P. Cen. 4/28/48 dated 9—6—1948.

Published by the author, Keshava Krishna Kudva, Karkal,
Lalbagh, Mangalore
and Printed by The Mangalore Trading Association, Limited,
at the Sharada Press, Car-Street, Mangalore.

# ಮುನ್ನುಡಿ

ಈ ಪುಸ್ತಕವನ್ನು ಬರೆದವರು ನನಗೆ ಸುಪರಿಚಿತರೂ ಸ್ನೇಹಿತರೂ ಆಗಿರುವ ಮಂಗಳೂರ ತಹಶಿಲ್ದಾರ್ ಶ್ರೀಯುತ ಕೆ. ಕೇಶವಕೃಷ್ಣ ಕುಡ್ವ, ಬಿ. ಎ., ಎಲ್. ಎಲ್. ಬಿ., ಎಂಬವರು. ಇವರು ೧೯೨೭ನೇ ಇಸವಿಯಲ್ಲಿ ಬೊಂಬ್ಯಾ ವಿಶ್ವವಿದ್ಯಾಲಯದಲ್ಲಿ ರೋಮನ್‌ಲೊ ಮತ್ತು ಜುರಿಸ್ಪ್ರುಡೆನ್ಸ್ ಸಂಬಂಧ ಬಹುಮಾನವನ್ನೂ ಕಿನ್‌ಲೊಕ್ ಫೋರ್ಬ್ಸ್ ಚಿನ್ನದ ಪದಕವನ್ನೂ (Kinloch Forbes Gold Medal and Prize for Roman Law and Jurisprudence) ಪಡೆದವರು. ಇದುವರೆಗೂ ಇವರು ತಮ್ಮ ಲೌಕಿಕ ಜೀವನದ ಉದ್ಯಮದಲ್ಲಿಯೇ ಮಗ್ನರಾಗಿದ್ದು ಯಾವ ಶಾಖೆಯಲ್ಲಿಯೂ ಬರೆಹಗಾರರಾಗಿ ಮುಂದೆ ಬರಲಿಲ್ಲವೆಂದು ತೋರುತ್ತದೆ. ಆದರೆ ಈಗ ವೃತ್ತಿಯಿಂದ ನಿವೃತ್ತಿಗೊಳ್ಳುವ ಸಮಯದಲ್ಲಿ ಇವರಲ್ಲಿ ವೈಯಕ್ತಿಕವಾಗಿ ಅಡಕವಾಗಿದ್ದ ಐತಿಹಾಸಿಕ ಅಭಿರುಚಿಯೂ, ಅದಕ್ಕೆ ತಕ್ಕುದಾದ ವಿಮರ್ಶಾತ್ಮಕ ದೃಷ್ಟಿಯಿಂದ ಬರೆಯುವ ಸಾಮರ್ಥ್ಯವೂ ಈ ಪುಸ್ತಕದ ರೂಪದಲ್ಲಿ ಪ್ರಕಾಶಕ್ಕೆ ಬಂದಿವೆ.

ಇವರಿಂದ ಬರೆಯಲ್ಪಟ್ಟ "ದಕ್ಷಿಣ ಕನ್ನಡದ ಇತಿಹಾಸ"ವೆಂಬ ಹೆಸರುಳ್ಳ ಈ ಪುಸ್ತಕವು ದಕ್ಷಿಣ ಕನ್ನಡ ಜಿಲ್ಲೆಯ ಒಂದು ಸುಸಜ್ಜಿತವಾದ ಐತಿಹಾಸಿಕ ಬೊಕ್ಕಸದಂತೆ ಇದೆ. ಇದು ತನ್ನದೇ ಆದ ಒಂದು ವೈಶಿಷ್ಟ್ಯದಿಂದ ಕೂಡಿದೆ. ಪುರಾಣ, ಇತಿಹಾಸ, ಜನಪದ ಸಾಹಿತ್ಯ ವೊದಲಾದ ಚಾರಿತ್ರಿಕ ಸಾಮಗ್ರಿಗಳ ಪೂರ್ಣ ಬೆಂಬಲದಿಂದ ವ್ಯವಸ್ಥಿತ ಹಿನ್ನೆಲೆಯಿಂದ ರೂಪುಗೊಂಡು ಜೀವಕಲೆಯಿಂದ ಕೂಡಿದ ಜಿಲ್ಲೆಯ ಚರಿತ್ರೆಯು ಕಣ್ಣಿಗೆ ಕಟ್ಟುವಂತೆ ರಚಿತವಾಗಿದೆ. ನಮ್ಮ ಜಿಲ್ಲೆಯ ಚರಿತ್ರೆಯು ಇಷ್ಟು ಸಂಗ್ರಾಹಕವಾಗಿ, ವಿರಳವಾಗಿ ಯಾವ ಒಂದು ಪುಸ್ತಕದಲ್ಲಿಯೂ ಇದುವರೇಗೆ ರಚಿತವಾಗಿರುವಂತೆ ಕಂಡುಬರುವುದಿಲ್ಲ. ಸಂಬಂಧಪಟ್ಟ ರಾಜವಂಶಗಳ ಮತ್ತು ಇತರ ಪ್ರಭುತ್ವಗಳ ಚರಿತ್ರಾಂಶಗಳು ಕಾಲಾನುಕ್ರಮದಲ್ಲಿ ಸಂದರ್ಭೋಚಿತವಾಗಿ ಜೋಡಿಸಲ್ಪಟ್ಟಿವೆ.

ಐತಿಹಾಸಿಕ ಸಂಶೋಧನೆ, ವಿಮರ್ಶೆ ಮತ್ತು ವಸ್ತುವ್ಯವಸ್ಥೆ- ಪ್ರೌಢ ಮಟ್ಟದಲ್ಲಿ, ನಿಷ್ಪಕ್ಷಪಾತ ಭಾವದಿಂದ, ಸರಳವಾದ ಶೈಲಿಯಲ್ಲಿ ಮಾಡಲ್ಪಟ್ಟಿವೆಂಬುದು ಪ್ರತಿ ಒಂದು ಭಾಗದಲ್ಲಿ ವ್ಯಕ್ತವಾಗುತ್ತದೆ. ಯಥಾರ್ಥ ಭಾವವೂ,

ಅನಾಡಂಬರದ ವಾಗ್ಸರಣಿಯೂ, ಇವರ ಐತಿಹಾಸಿಕ ದೃಷ್ಟಿಯನ್ನೇ ಬಹು ಪ್ರಶಸ್ತವಾಗಿ ಸೂಚಿಸುವವು. ಇವರ ಈ ಬಗೆಯ ಕೃತಿಯಲ್ಲಿ ಅದಕ್ಕೆ ವೈಯುಕ್ತಿಕವಾದ ಒಂದು ಅಪರೂಪದ ಸ್ಫೂರ್ತಿಯುಂ ನೆಲೆಗೊಂಡಂತಿದ್ದು ಈ ಗ್ರಂಥವು ಚಿರಕಾಲ ಕನ್ನಡಿಗರಿಗೆ ಉಪಯುಕ್ತವಾಗಿ ನಿಲ್ಲುವುದೆಂಬುದರಲ್ಲಿ ಸಂದೇಹವಿಲ್ಲ.

ಅಖಂಡ ಉತ್ಸಾಹದಿಂದಲೂ, ಶ್ರದ್ಧೆಯಿಂದಲೂ ಮಾತ್ರವೆ ಇಂಥ ಪರಿಶ್ರಮವನ್ನು ಇವರು ವಹಿಸಿ ಈ ಗ್ರಂಥವನ್ನು ಪೂರೈಸಿರಬೇಕು. ಇವರ ಉದ್ಯಮ ಕಾಲದಲ್ಲಿ ರಿವೆನ್ಯು ಇನ್ಸಪೆಕ್ಟರರಾಗಿಯೂ ತಹಶಿಲ್ದಾರರಾಗಿಯೂ ಸಂಚರಿಸುತ್ತಿರುವ ಕಾಲದಲ್ಲಿ, ಸ್ವತಹ ಐತಿಹಾಸಿಕ ಸಾಮಗ್ರಿಗಳನ್ನು ಸಂಗ್ರಹಿಸಿಕೊಳ್ಳಲು ಇವರಿಗೆ ಹೆಚ್ಚಿನ ಅವಕಾಶವು ದೊರೆತಿರಬೇಕು. ಇಂಥಾ ಸಂದರ್ಭಗಳನ್ನು ಉಪಯೋಗಿಸಿಕೊಂಡು ಇವರು ಈ ಗ್ರಂಥವನ್ನು ಬರೆದಂತೆ ತೋರುತ್ತದೆ. ಈ ರೀತಿಯಲ್ಲಿ ಕೆಲಸ ಮಾಡುವವರು ವಿರಳ. ಆದುದರಿಂದ ನಮ್ಮ ಜಿಲ್ಲೆಯ ಮತ್ತು ಹೊರಗಣ ಕನ್ನಡಾಭಿಮಾನಿಗಳ ಹೃತ್ಪೂರ್ವಕವಾದ ಸಾದರವು ಈ ಪುಸ್ತಕಕ್ಕೆ ದೊರೆಯಲೆಂದು ಹಾರೈಸುತ್ತೇನೆ.

*Mangalore,*
*7–5–1948.*

N. Subba Rao,
*Dt. Educational Officer, S. Kanara.*

# ಪ್ರಸ್ತಾವನೆ

ತುಳುನಾಡಿನ ಈ ಚಿಕ್ಕ ಇತಿಹಾಸವು ನನ್ನ ಹಲವು ವರ್ಷಗಳ ಶ್ರಮದ ಫಲವಾಗಿ, ರೂಪಗೊಂಡು, - ತುಳುವದ ಮತ್ತು ಇತರ ಕನ್ನಡ ಪ್ರಾಂತ್ಯದ ಮಹಾಜನರ ಆದರವನ್ನು ಈಗ ಯಾಚಿಸುತ್ತದೆ. ತುಳು ನಾಡಿನ ಚರಿತ್ರೆಯನ್ನು ಹಿಂದೆ ಶ್ರೀ ಗಣಪತಿ ಐಗಳರು ಬರೆದಿದ್ದರು. ಆದರೆ ಆ ಚರಿತ್ರೆಯ ಪ್ರತಿಗಳು ಈಗ ದೊರಕುವುದಿಲ್ಲ; ಅದನ್ನು ಬರೆದೀಗ ೨೦ ವರ್ಷಗಳ ಮೇಲಾಯಿತು. ಶ್ರೀ ಐಗಳರ ಬಳಿಕ ಅನೇಕರು ತುಳುವ ಇತಿಹಾಸದ ಹಲವು ವಿಶಿಷ್ಟ ಸಂಗತಿಗಳ ಕುರಿತು ತಮ್ಮ ಅಮೌಲ್ಯ ಲೇಖ ಮತ್ತು ಗ್ರಂಥಗಳ ಮೂಲಕ ಬೆಳಕನ್ನು ಬೀರಿರುವರಾದರೂ ಆ ಇತಿಹಾಸವನ್ನು ಆಮೂಲಾಗ್ರ ಕಥಾಸರಣಿಯಾಗಿ ಬರೆದವರಿಲ್ಲ. ತುಳುವದ ಮಹಾಜನರು ತಮ್ಮ ಮಕ್ಕಳಿಗೆ ಹೇಳಲಿಕ್ಕಾದರೂ ಸಹಾಯವಾಗಲೆಂದು ನಾನು ಈ ಕೃತಿಯನ್ನು ಬರೆದ್ದಾಗಿರುತ್ತದೆ.

ಈ ಇತಿಹಾಸಕ್ಕೊಂದು ಮುನ್ನುಡಿಯನ್ನು ಬರೆದುಕೊಟ್ಟ ನನ್ನ ಮಾನ್ಯ ಮಿತ್ರರಾದ ಶ್ರೀ ನಿರೋಡಿ ಸುಬ್ಬರಾವ್, (ಬಿ. ಎ., ಎಲ್. ಟಿ., ಜಿಲ್ಲಾ ಎಡ್ಯುಕೇಶನ್ ಆಫೀಸರರು) ರಿಗೆ ನನ್ನ ಕೃತಜ್ಞತೆಯನ್ನು ಹೇಳಿತೀರದು. ನನ್ನ ಕುರಿತೂ ಈ ಇತಿಹಾಸದ ಕುರಿತೂ ಅವರು ಬರೆದಿರುವ ಪ್ರೀತಿಯ ವಾಕ್ಯಗಳು ನನ್ನನ್ನು ಎಷ್ಟೋ ಸ್ಫೂರ್ತಿಗೊಳಿಸಿರುತ್ತವೆ. ೩೫ ವರ್ಷ ರಾಜಭೃತ್ಯನಾಗಿ, ನಿಸ್ಸಾರ ಜೀವನವನ್ನು ಕಳೆದು, ಈಗ ಕನ್ನಡಿಗರ ಸೇವೆಗೆಂದು ಹೊರಟಿರುವ ಈ ನನ್ನ ದುಡುಕುತನವನ್ನು ಅವರಂತೆಯೇ ಕನ್ನಡನಾಡಿನ ಇತರ ಮಹಾಶಯರೂ ಕ್ಷಮಿಸದಿರರೆಂದು ನಾನು ನಂಬುತ್ತೇನೆ.

ಈ ಕಾರ್ಯವನ್ನು ಕೈಕೊಳ್ಳಲಿಕ್ಕೆ ಹಲವು ವರ್ಷಗಳಿಂದಲೂ ನನ್ನನ್ನು ಎಡೆಬಿಡದೆ ಉತ್ತೇಜಿಸಿದ-ಸ್ವದೇಶಾಭಿಮಾನಿಯ ಸಂಪಾದಕರೂ ನನ್ನ ಮಿತ್ರರೂ ಆದ - ಶ್ರೀ ಅಚ್ಯುತ ಶ್ರೀನಿವಾಸ ಕಾಮತರಿಗೆ ನಾನು ತುಂಬಾ ಆಭಾರಿಯಾಗಿದ್ದೇನೆ. ಪ್ರಕಾಶಿಸುವ ಸಂದರ್ಭದಲ್ಲಿ ಒದಗಿದ ಕಷ್ಟಗಳಿಗೆ ಎದೆಗುಂದದಂತೆ ನನ್ನನ್ನು ಹಿಡಿದೆತ್ತಿದ - ಮಂಗಳೂರಿನ ಪ್ರಸಿದ್ಧ ತಾಜಮಹಾಲು ಭವನಗಳ ಮಾಲೀಕರಾದ ಶ್ರೀಮಾನ್ ಕುಡ್ವಿ ಶ್ರೀನಿವಾಸ ಶ್ಯಾನಭಾಗರಿಗೂ ನನ್ನ ಹೃದಯಪೂರ್ವಕ ವಂದನೆಗಳನ್ನು ನಾನು ಅರ್ಪಿಸುತ್ತೇನೆ.

ನಾನು ಈ ಗ್ರಂಥವನ್ನು ಬರೆಯಲಿಕ್ಕೆ ಓದಿ, ಉಪಯೋಗಿಸಿಕೊಂಡ ಗ್ರಂಥಗಳ ಮತ್ತು ಶಾಸನ, ಲೇಖಗಳ ವಿವರಗಳನ್ನು ಸಂದರ್ಭಾನುಸಾರವಾಗಿ ನಾನು ಅಲ್ಲಲ್ಲಿ ಕೊಟ್ಟಿರುತ್ತೇನೆ. ಆ ಗ್ರಂಥಗಳನ್ನೂ ಲೇಖಗಳನ್ನೂ ಬರೆದ ಮಹನೀಯರಿಗೆ ನಾನು ತುಂಬಾ ಋಣಿಯಾಗಿದ್ದೇನೆ.

**ಮಂಗಳೂರು,**
**21-5-1948.**

**ಕೇಶವ ಕೃಷ್ಣಕುಡ್ವ,**
**ಕಾರ್ಕಳ.**

---

# ಅನುಕ್ರಮಣಿಕೆ

# ದಯವಿಟ್ಟು ಈ ತಿದ್ದುಪಡಿಗಳನ್ನು ಮಾಡಿಕೊಳ್ಳಿರಿ

| ಪುಟ. | ಪಂಕ್ತಿ. | ಬದಲಾಗಿ. | ಓದಿರಿ. |
| --- | --- | --- | --- |
| ೧೪ | ೧೨ | ಸತೀ. | ಪತಿ. |
| ೪೧ | ಕೆಳಗಿನಿಂದ ೩ನೇ. | ಆ ಸಂಗತಿಗಳು ಕಾಲದಲ್ಲಿ. | ಕಾಲದಲ್ಲಿ ಆ ಸಂಗತಿಗಳು |
| ೧೦೨ | ೨೦ | ನಾಲ್ಕು. | ನಾಲ್ಕೈದು. |
| ೧೨೮ | ಕೊನೆಯ ೨. | ನಾವಿರ್ ಶಹನ್ನು. | ನಾದಿರ ಶಹನು. |
| | | ಮಹಮ್ಮದ ಶಹನನು. | ಮಹಮ್ಮದ ಶಹನನ್ನು. |
| ೧೬೦ | ೪ | ಕೊನ್ಸುವೇಟ್. | ಕೊನ್ಸುಲೇಟ್. |
| ೧೭೨ | ಕೊನೆಯ | ಪ್ರತಿಷ್ಠಿಸಿದ. | ಪ್ರತಿಷ್ಠಿಸಿದ್ದೆಂದು ಹೇಳುವ. |

# ತುಳುನಾಡ ರಾಣಿ

(ಚೌಪದಿ)

ಕೊಡಲಿ ರಾಮನ ಸಿಡಿಲಿಗಳುಕಿ ಹಿಂಜರಿದು ।
ಕಡಲಾರೆ,– ನೀನಲೆಗಳನ್ನೊಡೆದು ವರಮಂ ॥
ಪಡೆದ ಶಾಸನದಾದೆ ತುಳುನಾಡ ರಾಣಿ ।
ಬೆಡಗಿಂದ ಧರೆಗಾದೆ ಕೊರಳ ಕಟ್ಟಾಣಿ ॥ ೧ ॥

ಗಟ್ಟಗಳ ಮೆಟ್ಟಲಿನ ಅಟ್ಟಳಿಗೆ ಏರಿ ।
ಸಾಟಿ ಇರದೊಡ್ಡೋಲಗದ ಸೊಗು ವಿೂರಿ ॥
ಅಟ್ಟಹಾಸದ ಕಡಲು ಕಾಲ್ ತೊಳೆಯುತ್ತಿರಲು ।
ಒಟ್ಟಿರಿಸಿದಾ ಪುಣ್ಯರಜ ಎನಿಸೆ ಮಳಲು ॥ ೨ ॥

ಮಳೆಮುಗಿಲ ವೇಣಿಯಲಿ ಮಳೆಬಿಲ್ಲಹಾರಂ ।
ತಿಳಿಯೆ ಬೆಳದಿಂಗಳಿನ ಕವಚ ಸಿಂಗಾರಂ, ॥
ಹೊಲದ ಹಸುರುಡಿಗೆ, ನೇತ್ರಾವತಿಯ ಮಾಲೆ– ।
ಮಳೆಗಾಳಿ ಸಾರುತಿಹುದಿಂದು ತವಲೀಲೆ ॥ ೩ ॥

ದುಡುಕಿದಾ ಸೂರೆಗರ ಹಾವಳಿಗೆ ನೊಂದೆ ।
ಕಡಲಣುಗೆ! ಬಡವಾದೆ ಕಾವರಿಲ್ಲೆಂದೆ! ॥
ಪಡುಗಡಲ ದಾಟಿ ಸೋದರಿಯೊದಗೆ ಮುನ್ನಾ ।
ಕೆಡುಗಾಲ ಅಡಗಿ ಬೀಸಿತು ಶಾಂತಿ ಪವನಾ ॥ ೪ ॥

ತಲೆದೂಗೆ ತೆಂಗು, ನೇಗಿಲು ನಗಲು, ಹೊಳೆಯು ।
ಸುಳಿದೋಡೆ, ತಲೆ ಎತ್ತಿ ಕಂಗೊಳಿಸೆ ಬೆಳೆಯು, ॥
ಮಳಿಗೆ ತಕ್ಕಡಿ ಕುಣಿಯೆ, ಶಂಖ ದೇಗುಲದಿ ।
ಮೊಳಗೆ, ಮನೆ ಮಕ್ಕಳಿಂದುಲಿಯೆ ಗದ್ದಲದಿ ॥ ೫ ॥

ಮೆರೆಯುಲಿಂತೀಶ್ವರನ ಕೃಪೆಯಿಂದ ನಾಡು ।
ಪರಮೇಶನೊಲುಮೆಯಿಂ, ಶಾಂತಿಗಿದು ಬೀಡು ॥
ಬರಲೆಮಗೆ ಜನ್ಮನಿನ್ನುದರದಲಿ ತಾಯೆ! ।
ದೊರೆಯುಲೆಮಗನುದಿನವು ನಿನ್ನಡಿಯ ಸೇವೆ! ॥ ೬ ॥

**ಯಂ. ಎನ್. ಕಾಮತ್.**



ಕಾರ್ಕಳದ ಗೋಮಟೇಶ್ವರನ ಪ್ರತಿಮೆ.

# ದಕ್ಷಿಣ ಕನ್ನಡದ ಇತಿಹಾಸ

## ಅಧ್ಯಾಯ ೧

೧. ತುಳುನಾಡು—೨. ತುಳುಭಾಷೆ—೩. ತುಳುಜನರು.

### ೧. ತುಳುನಾಡು

ಪ್ರಾಚೀನ ಕಾಲದಲ್ಲಿ ಗೋಕರ್ಣದಿಂದ ಚಂದ್ರಗಿರಿ ಹೊಳೆ ತನಕವಿರುವ ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳ ಅಂಶಗಳನ್ನು 'ತುಳುವ' ಎಂದು ಕರೆಯುತ್ತಿದ್ದರು. ತುಳುವ ಪ್ರಾಂತ್ಯವು ಮೊದಲಿನಿಂದಲೂ ಕರ್ಣಾಟಕ ದೇಶಕ್ಕೆ ಸೇರಿದ್ದು ಅದರ ಕರಾವಳಿ ಪ್ರದೇಶವಾಗಿತ್ತು. ಹದಿನಾರನೇ ಶತಮಾನದ ತನಕ ಅದಕ್ಕೆ ಕನ್ನಡ ಜಿಲ್ಲೆಯೆಂಬ ಹೆಸರಿರಲಿಲ್ಲ. ಕರ್ಣಾಟಕ ದೇಶದ ಅರಸರೊಡನೆ ವ್ಯಾಪಾರ ವ್ಯವಹಾರಗಳನ್ನು ಬೆಳೆಸ ಬಂದ ಪಾಶ್ಚಾತ್ಯರು ಸಮುದ್ರದಾರಿಯಾಗಿ ಬರುತ್ತಾ ಅವರಿಗೆ ಮೊದಲು ಕಾಣಸಿಕ್ಕುವ ಕರ್ಣಾಟಕದ ಈ ಕರಾವಳಿ ಪ್ರದೇಶಕ್ಕೆ 'ಕೆನರಾ' ಎಂದು ಕರೆಯ ಪ್ರಾರಂಭಿಸಿ ಆ ಬಳಿಕ ಕನ್ನಡ ಜಿಲ್ಲೆಯೆಂಬ ಹೆಸರು ಬಂತು.

ಈ ನಾಡಿಗೆ ತುಳುವ ಎಂಬ ಹೆಸರು ಹೇಗೆ ಬಂತೆಂಬ ಕುರಿತು ಭಿನ್ನಾಭಿಪ್ರಾಯವಿದೆ. ಕೇರಳವು ತುಳುವದಿಂದ ಪ್ರತ್ಯೇಕವಾಗುವ ಮೊದಲು ತುಳುಂಬನ್ ಪೆರುಮಾಳನೆಂಬ ಅರಸನು ಕೋಟೇಶ್ವರದಲ್ಲಿ ತನ್ನ ರಾಜಧಾನಿಯನ್ನು ಮಾಡಿಕೊಂಡು ಈ ನಾಡನ್ನು ಆಳುತ್ತಿದ್ದನೆಂದೂ ಅವನಿಂದ ಈ ನಾಡಿಗೆ ತುಳುನಾಡೆಂಬ ಹೆಸರು ಬಂತೆಂದೂ ಕೇರಳದಲ್ಲಿ ಹೇಳುತ್ತಾರೆ. ಶ್ರೀ ಅಮ್ಮುಣಜೆ ಶ್ರೀನಿವಾಸ ಹೆಗ್ಡೆಯವರು ಬರೆದಿರುವ "ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳಪಾಂಡ್ಯರಾಯನ ಅಳಿಯಕಟ್ಟು" ಎಂಬ ಗ್ರಂಥದಲ್ಲಿ ತುಳುವ ಎಂಬ ಹೆಸರು ಹೇಗೆ ಬಂತೆಂಬ ಕುರಿತು ಬೇರೆ ರೀತಿ ಹೇಳಿದೆ. ಪರಶುರಾಮನಿಂದ ಈ ನಾಡನ್ನು ಪಡೆದ ರಾಮಭೋಜನೆಂಬ ಅರಸನು ಅನೇಕ ಯಜ್ಞಗಳನ್ನು ಮಾಡಿ ದೇಶದೇಶಗಳಿಂದಲೂ ಆ ಯಜ್ಞಗಳಿಗೆ ಬಂದ ಬ್ರಾಹ್ಮಣರಿಗೆಲ್ಲಾ ತುಲಾಪುರುಷ ದಾನಗಳನ್ನೂ ಹಾಗೆಯೇ ತುಲಾಭಾರಗಳನ್ನೂ ತೂಗಿಸಿ

ಕೊಟ್ಟನು. ಹಾಗೆ ದಾನಗಳನ್ನು ಪಡೆದ ಬ್ರಾಹ್ಮಣರು ಎಲ್ಲಾ ಕಡೆಗಳಲ್ಲಿಯೂ ಆ ಅರಸನ ಕೀರ್ತಿಯನ್ನು ಹಬ್ಬುತ್ತಾ ಅವನನ್ನು ತುಲಾಭಾರನೆಂದೂ–ತುಲಾ ರಾಜನೆಂದೂ–ತುಲಾದೇಶಾಧಿಪತಿಯೆಂದೂ ಕರೆದರು. ಹೀಗೆ ಈ ನಾಡಿಗೆ ತುಲಾದೇಶ ಅಥವಾ ತುಳುವ ಎಂಬ ಹೆಸರೂ, ಇಲ್ಲಿಯ ಜನರಿಗೆ ತೌಳವರೆಂಬ ಹೆಸರೂ ಬಂತೆಂದು ಶ್ರೀ ಹೆಗ್ಡೆಯರ ಗ್ರಂಥದಲ್ಲಿ ಹೇಳಿದೆ. ಶ್ರೀ ಭಾಸ್ಕರ ಆನಂದ ಸಾಲೆತ್ತೂರರು ತಮ್ಮ "ಪ್ರಾಚೀನ ಕರ್ಣಾಟಕ (೧ನೇ ಭಾಗ ತುಳುವ ಚರಿತ್ರೆ)"ಯಲ್ಲಿ ತೂಲು ಅಂದರೆ ಹಳೆಗನ್ನಡದಲ್ಲಿ ಹೊಡಿ ಎಂಬ ಅರ್ಥವಿದೆ. ತುಳುವರು ಮೊದಲಿನಿಂದ ರಣಪ್ರಿಯರಾದ್ದರಿಂದ ಅವರಿಗೆ ಇತರ ಕನ್ನಡಿಗರು ತುಳುವರು ಅಂದರೆ ರಣಪ್ರಿಯರೆಂಬ ಹೆಸರಿಟ್ಟಿರಬಹುದೆಂದು ಊಹಿಸುತ್ತಾರೆ.

ಇವುಗಳಲ್ಲಿ ಯಾವದಕ್ಕೂ ಸರಿಯಾದ ಆಧಾರವಿಲ್ಲ. ತುಳುಭಾಷೆ ಯನ್ನಾಡುವ ಜನರಿರುವ ನಾಡಾದ್ದರಿಂದ ತುಳುವ ಎಂಬ ಹೆಸರು ಬಂತೆಂದು ನಾವು ಎಣಿಸಬಹುದು. ತುಳುವ ಎಂಬ ಹೆಸರು ಈ ನಾಡಿಗೆ ಕ್ರೈಸ್ತ ಶಕದ ಮೊದಲಿತ್ತೆಂದು ತೋರುವುದಿಲ್ಲ.

## ೨. ತುಳುಭಾಷೆ

ತುಳುಭಾಷೆಯು ಪಂಚದ್ರಾವಿಡ ಭಾಷೆಗಳಲ್ಲೊಂದಾಗಿದೆ. ಅದು ಹಿಂದೆ ಕನ್ನಡ, ತೆಲುಗು, ಮಲೆಯಾಳಿ, ತಮಿಳು ಭಾಷೆಗಳೊಂದಿಗೆ ಸರಿಸಮಾನತೆಯಲ್ಲೇ ಹುಟ್ಟಿ ಬೆಳೆದಿರಬೇಕು. ಆದರೆ ರಾಜಾಶ್ರಯವಿಲ್ಲದೆ, ಸಾಹಿತ್ಯವನ್ನು ಬೆಳೆಸದೆ, ಸ್ವತಂತ್ರ ತನ್ನದೇ ಆದ ಲಿಪಿಯಿಲ್ಲದೆ, ಈಗ ಅದು ಆ ಉಳಿದ ನಾಲ್ಕು ದ್ರಾವಿಡ ಭಾಷೆಗಳಿಂದ ಹಿಂದೆ ಬಿದ್ದಿರುತ್ತದೆ. ಇತ್ತೀಚೆ ಶ್ರೀ ಎಸ್. ಯು. ಪಣಿಯಾಡಿ ಯರು ಉಡುಪಿಯಿಂದ ತುಳುವ ಸಾಹಿತ್ಯ ಮಾಲೆಯೊಂದನ್ನು ಪ್ರಕಟಿಸುತ್ತಿದ್ದಾ ರಾದರೂ ತುಳುಭಾಷೆಯು ಸಾಹಿತ್ಯದ ವಾಹನವಾಗಿ ರೂಢಿಗೆ ಬರುವಂತಿಲ್ಲ ವೆಂದು ತೋರುತ್ತದೆ. ಆದರೆ ಮನೆಭಾಷೆಯಾಗಿ ಅದೆಂದೂ ಅಳಿಯದು. ಅದಕ್ಕೆ ವ್ಯಾಕರಣವಿದೆ. ತುಳುಜನರು ಅದರ ಮೇಲೆ ತುಂಬಾ ಅಭಿಮಾನ ವುಳ್ಳವರಾಗಿದ್ದಾರೆ. ತುಳುವದ ಪುರಾತನ ವೀರರ ಚರಿತ್ರೆಗಳನ್ನು ಹಾಡುವ ಪಾಡ್ದೊನೆ (ಯಾ ಪಾಡ್ದನ)ಗಳು ತುಳುಭಾಷೆಯಲ್ಲಿವೆ. ಅವುಗಳು ತುಳುವದ ಜನರಿಗೆ ಇಂದೂ ಬಹಳ ಪ್ರಿಯವಾಗಿವೆ. ಭಾಷೆಯು ಸಾಹಿತ್ಯದ ಕೃತಕ ಅಲಂಕಾರಗಳಿಲ್ಲದೆ ಇರುವ ಭಾಷೆಯಾದರೂ ತುಳುಜನರ ವೀರರಸವು ಅವರ

ಭಾಷೆಯಲ್ಲಿ ಕಂಡುಬರುತ್ತದೆ. ತುಳುಜನರು ಒಬ್ಬರೊಡನೊಬ್ಬರು ತುಳು ಭಾಷೆಯಿಂದಲ್ಲದೆ ಇತರ ಭಾಷೆಯಿಂದ ಸಂಭಾಷಿಸಲಿಷ್ಟಪಡರು. ಇತ್ತೀಚೆ ತುಳುಭಾಷೆಯಲ್ಲಿ ನಮ್ಮ ದಕ್ಷಿಣ ಕನ್ನಡದ ಕೆಲವು ಧುರೀಣರು ಕೊಡುತ್ತಿರುವ ಭಾಷಣಗಳಿಂದ ಆ ಭಾಷೆಯ ಮಹತ್ವಿಕೆಯನ್ನು ತಿಳಿಯಲು ಸಾಧ್ಯವಿದೆ.

ತುಳುವವು ಇತಿಹಾಸ ಪ್ರಾರಂಭದಿಂದಲೂ ಕರ್ಣಾಟಕ ಪ್ರಾಂತ್ಯದ ಭಾಗವಾಗಿದ್ದು ಕನ್ನಡ ಅರಸರೇ ಈ ತುಳುವದ ಸಾರ್ವಭೌಮರಾಗಿದ್ದುದರಿಂದ ಕನ್ನಡ ಭಾಷೆಯು ತುಳುವದಲ್ಲಿ ರಾಜಕೀಯ, ವಾಣಿಜ್ಯ ವ್ಯವಹಾರಗಳಲ್ಲಿಯೂ ಸಾಹಿತ್ಯದಲ್ಲಿಯೂ ಉಪಯೋಗಿಸಲ್ಪಡಲು ಕಾರಣವಾಯಿತು. ಜೈನ ಅರಸರು ತುಳುಭಾಷೆಯನ್ನಾಡುವ ಅರಸರಾಗಿದ್ದರೂ ಆ ಕಾಲದಲ್ಲಿಯೂ ಕನ್ನಡವೇ ಪ್ರಧಾನ ಭಾಷೆಯಾಗಿದ್ದು ತುಳುಭಾಷೆಯು ತುಳುಜನರ ಪ್ರೇಮದ ಮನೆಭಾಷೆಯಾಗಿ ಮಾತ್ರ ಈಗಿನಂತೆಯೇ ಇತ್ತೆಂದು ತೋರುತ್ತದೆ.

ಪ್ರಾಚೀನ ಕಾಲದಲ್ಲಿ ಗೋಕರ್ಣದಿಂದ ಚಂದ್ರಗಿರಿ ತನಕ ತುಳುಭಾಷೆಯೇ ರೂಢಿಯಲ್ಲಿತ್ತು. ಉತ್ತರ ಕನ್ನಡದ ಹವೀಕ ಬ್ರಾಹ್ಮಣರಲ್ಲಿ ಆ ಕಾಲದ ತುಳು ಭಾಷೆಯ ಗ್ರಂಥಗಳಿವೆ. ಈಗ ತುಳುಭಾಷೆಯು ಈ ಜಿಲ್ಲೆಯ ಉತ್ತರ ಭಾಗದಲ್ಲಿ ಸೀತಾನದಿಯಿಂದಾಚೆ ರೂಢಿಯಲ್ಲಿಲ್ಲ. ಕನ್ನಡ ಅರಸರಾದ ಇಕ್ಕೇರಿ ನಾಯಕರು ಉತ್ತರ ಭಾಗದಲ್ಲಿ ತುಳು ಅರಸರ ಅಧಿಕಾರವನ್ನು ಸಂಪೂರ್ಣ ನಿರ್ಮೂಲಿಸಿ, ಅದನ್ನು ತಮ್ಮ ಸ್ವಂತ ಆಳ್ವಿಕೆಯಲ್ಲಿಟ್ಟುಕೊಂಡದ್ದರಿಂದ ಅಲ್ಲಿ ಕನ್ನಡವೇ ಸರ್ವ ಉದ್ದಿಶ್ಯಗಳಿಗೂ ರೂಢಿಗೆ ಬಂದಿರಬೇಕು.

ಸ್ವತಂತ್ರ ತುಳು ಲಿಪಿಯೊಂದಿದೆ ಎಂದು ಕೆಲವರು ಹೇಳುತ್ತಾರೆ. ಆದರೆ ಅದು ಸ್ವತಂತ್ರ ಲಿಪಿಯಲ್ಲ - ಮಲೆಯಾಳಿ ಲಿಪಿಯೇ ಎಂದು ಇತರರು ಹೇಳುತ್ತಾರೆ. ಹೇಗಿದ್ದರೂ ಪುಸ್ತಕಗಳು ಛಾಪೆಯಾಗಲು ಪ್ರಾರಂಭವಾದಂದಿನಿಂದ ತುಳುಭಾಷೆಯ ಗ್ರಂಥಗಳನ್ನೂ ಕನ್ನಡ ಲಿಪಿಯಲ್ಲಿಯೇ ಬರೆಯುವುದು ಜರ್ಮನ್ ಮಿಶ್ಯನರಿಗಳಿಂದ ರೂಢಿಗೆ ಬಂದಿರುತ್ತದೆ.

## ೩. ತುಳುಜನರು

ಈ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ ಹದಿನೈದು ಲಕ್ಷಕ್ಕೆ ಏರಿದ ಜನರಿದ್ದಾರೆ. ಬ್ರಿಟಿಷ್ ಅಧಿಕಾರದ ಸಮಯ ವಿಂಗಡಿಸಿದ ಅದರ ಆರು ತಾಲೂಕುಗಳಲ್ಲಿ ಈ ಕೆಳಗಿನಂತೆ ಜನಸಂಖ್ಯೆ ಇದೆ: —

| ತಾಲೂಕು | ಬ್ರಾಹ್ಮಣರು | ಇತರ ಹಿಂದುಗಳು | ಹಿಂದುಗಳ ಜುಮ್ಲಾ | ಮುಸ್ಲಿಮರು | ಕ್ರೈಸ್ತರು | ಇತರರು | ಒಟ್ಟಾರೆ ಜುಮ್ಲಾ |
|---|---|---|---|---|---|---|---|
| ಕುಂದಾಪುರ | 24,168 | 1,15,171 | 1,39,339 | 9,042 | 6,438 | 4,421 | 1,59,240 |
| ಕಾಸರಗೋಡು | 21,370 | 2,09,777 | 2,31,147 | 95,542 | 5,464 | 10,148 | 3,42,301 |
| ಮಂಗಳೂರು | 42,497 | 2,09,191 | 2,51,688 | 56,679 | 74,276 | 8,628 | 3,91,271 |
| ಪುತ್ತೂರು | 25,421 | 1,39,810 | 1,65,231 | 29,492 | 8,740 | 17,238 | 2,20,701 |
| ಉಡುಪಿ | 38,514 | 1,63,115 | 2,01,659 | 10,879 | 27,207 | 10,602 | 2,50,347 |
| ಕಾರ್ಕಳ | 15,871 | 1,03,312 | 1,19,183 | 6,298 | 17,001 | 10,997 | 1,53,479 |
| ಜುಮ್ಲಾ | 1,67,871 | 9,40.376 | 11,08,247 | 2,07,932 | 1,39,126 | 62,034 | 15,17,339 |

ಇವು 1941ನೇ ಇಸವಿಯ ಖಾನೆಸುಮಾರಿಯ ಅಂಕೆಗಳು.

ಪ್ರತಿಯೊಂದು ತಾಲೂಕಿನಲ್ಲಿಯೂ ಹಿಂದುಗಳೇ ಬಹುಸಂಖ್ಯಾತರಾಗಿದ್ದಾರೆ; ಮುಸ್ಲಿಮರ ಹೆಚ್ಚಿನ ಸಂಖ್ಯೆಯು ಮಂಗಳೂರು ಕಾಸರಗೋಡು ತಾಲೂಕುಗಳಲ್ಲಿಯೂ ಕ್ರೈಸ್ತರ ಹೆಚ್ಚಿನ ಸಂಖ್ಯೆಯು ಮಂಗಳೂರು ಉಡುಪಿ ತಾಲೂಕುಗಳಲ್ಲಿಯೂ ಇದೆ.

ಜೈನರು ಕುಂದಾಪುರ ಕಾಸರಗೋಡು ತಾಲೂಕುಗಳಲ್ಲಿ ಮುನ್ನೂರಕ್ಕಿಂತ ಕಡಿಮೆ ಇರುತ್ತಾರೆ. ಅವರು ಮಂಗಳೂರು, ಪುತ್ತೂರು, ಕಾರ್ಕಳ ತಾಲೂಕುಗಳಲ್ಲಿಯೇ ಹೆಚ್ಚಿದ್ದಾರೆ. ಅವರ ಸಂಖ್ಯೆಯು ಕಡಿಮೆಯಾಗುತ್ತಾ ಬರುತ್ತಿದೆ. ಬುಕಾನನನೆಂಬ ಬಿಳೇ ಪ್ರವಾಸಿಯು ಈ ಜಿಲ್ಲೆಯನ್ನು 1801ರಲ್ಲಿ ಸಂಚರಿಸುವಾಗ ಗಂಗೊಳ್ಳಿ ಹೊಳೆಯ ದಕ್ಷಿಣಕ್ಕಿರುವ ಈ ಜಿಲ್ಲೆಯ ಅಂಶದಲ್ಲಿ ಒಟ್ಟಾರೆ ಜನಸಂಖ್ಯೆಯು 3 ಲಕ್ಷ 96 ಸಾವಿರವೆಂದು ಆತನು ಆತನ ಗ್ರಂಥದಲ್ಲಿ ಹೇಳುತ್ತಾನೆ. ಅವರಲ್ಲಿ ಜೈನರು 14 ಸಾವಿರ ಇದ್ದರು. 1801ರಿಂದ 1931ರ ನಡುವೆ ಈ ಜಿಲ್ಲೆಯ ಜನಸಂಖ್ಯೆಯು ನಾಲ್ಕು ಪಾಲಂತೆ ಹೆಚ್ಚುವಾಗ ಜೈನರ ಸಂಖ್ಯೆಯು ನೂರಕ್ಕೆ 60ರಂತೆ ಕಡಿಮೆಯಾಗಿದೆ.

| | 1801 | 1931 |
|---|---|---|
| ಜಿಲ್ಲೆಯ ಜನಸಂಖ್ಯೆ (ಕುಂದಾಪುರ ತಾಲೂಕು ಬಿಟ್ಟು) | 3,99,672 | 12,17,935 |
| ಜೈನರ ಸಂಖ್ಯೆ . . | 14,092 | 8,590 |

ಬ್ರಾಹ್ಮಣರು ಎಲ್ಲಾ ತಾಲೂಕುಗಳಲ್ಲಿದ್ದರೂ ಅವರ ಸಂಖ್ಯೆಯು ಉಡುಪಿ ಮಂಗಳೂರು ತಾಲೂಕುಗಳಲ್ಲಿ ಹೆಚ್ಚಿದೆ. ಉಳಿದಿರುವ 9 ಲಕ್ಷ 40 ಸಾವಿರ ಇತರ ಹಿಂದುಗಳಲ್ಲಿ 98,356 ಜನರು ಹಿಂದುಳಿದ ತರಗತಿಗಳಿಗೆ ಸೇರಿದವರಾಗಿದ್ದಾರೆ:-

| ತಾಲೂಕು | ಹಿಂದುಳಿದ ತರಗತಿಯವರು | (ಬ್ರಾಹ್ಮಣರಲ್ಲದ) ಇತರ ಸವರ್ಣ ಹಿಂದುಗಳು | ಜುಮ್ಲಾ |
|---|---|---|---|
| 1. ಕುಂದಾಪುರ | 8,510 | 106,661 | 115,171 |
| 2. ಉಡುಪಿ | 10,585 | 152,530 | 163,115 |
| 3. ಕಾರ್ಕಳ | 12,485 | 90,827 | 103,312 |
| 4. ಮಂಗಳೂರು | 16,504 | 192,687 | 209,191 |
| 5. ಪುತ್ತೂರು | 28,851 | 110,959 | 139,810 |
| 6. ಕಾಸರಗೋಡು | 21,421 | 188,356 | 209,777 |
| ಜುಮ್ಲಾ | 98,356 | 842,020 | 940,376 |

ಹಿಂದುಗಳಲ್ಲಿ ಹಿಂದುಳಿದ ತರಗತಿಯವರು ಪುತ್ತೂರು ತಾಲೂಕಿನಲ್ಲೇ ಹೆಚ್ಚಿದ್ದಾರೆ. ಉಳಿದ ಹಿಂದುಗಳಲ್ಲಿ ಕಾಸರಗೋಡು ತಾಲೂಕಿನ ಚಂದ್ರಗಿರಿ ಹೊಳೆಯ ಆಚೆಗೆ ಇರುವ ಮಲೆಯಾಳಿ ಭಾಷೆಯ ಜನರನ್ನು ಬಿಟ್ಟು ಸುಮಾರು 7½ ಲಕ್ಷ ಜನ ತುಳುವರೆಂದು ಹಿಡಿಯಬಹುದು. ಅವರಲ್ಲಿ 2 ಲಕ್ಷ ಬಿಲ್ಲವರು (ಹಳೇ ಪೈಕರು ಕೂಡಿ) 1½ ಲಕ್ಷ ಬಂಟರು (ನಾಡವರು ಕೂಡಿ) 40 ಸಾವಿರ ಮೊಗೇರರು, 30 ಸಾವಿರ ದೇವಾಡಿಗರು, 30 ಸಾವಿರ ಗಾಣಿಗರೆಂದೆಣಿಸಬಹುದು. ತುಳು ಕನ್ನಡ ಭಾಷೆಗಳನ್ನಾಡುವ ಸವರ್ಣ ಹಿಂದುಗಳ ಹಿರಿಯರೂ ಕನ್ನಡ, ತುಳು ಭಾಷೆಗಳನ್ನಾಡುವ ಹಿಂದುಳಿದ ತರಗತಿಯವರ ಹಿರಿಯರೂ, ಬ್ರಾಹ್ಮಣರಲ್ಲಿ ಶಿವಳ್ಳಿ ಮತ್ತು ಕೋಟ ಬ್ರಾಹ್ಮಣರ ಹಿರಿಯರೂ, ಸ್ಥಾನಿಕ ಯಾ ಶಿವಬ್ರಾಹ್ಮಣರ ಹಿರಿಯರೂ ಈ ತುಳುವದಲ್ಲಿ ಮೊದಲಿದ್ದ ಜನರು. ಮುಸ್ಲಿಮ್, ಕ್ರೈಸ್ತ ಮತಗಳ ಅನುಯಾಯಿಗಳು ಪ್ರಾಚೀನ ತುಳುವರಲ್ಲಿರಲಿಲ್ಲ. ಬ್ರಾಹ್ಮಣರಲ್ಲಿ ಕೊಂಕಣೀ ಭಾಷೆಯನ್ನಾಡುವ ಸಾರಸ್ವತ, ಗೌಡ ಸಾರಸ್ವತ, ಬಾರ್ದೇಶಕಾರ್ ವಗೈರರೂ,– ಕನ್ನಡ ಭಾಷೆಯನ್ನಾಡುವ ಕರ್ಣಾಟಕ, ಕಂದಾವರ ಬ್ರಾಹ್ಮಣರೂ,– ಮರಾಠಿ ಭಾಷೆಯನ್ನಾಡುವ ಇತರರೂ ತುಳುವಕ್ಕೆ ಇತ್ತೀಚೆ ಕೆಲವು ಶತಮಾನಗಳ ಹಿಂದೆ ಬಂದು ಸೇರಿಕೊಂಡವರು. ಅವರ ಹಿರಿಯರಾಗಲಿ, ಅವರ ಮೊದಲೇ ಬಂದ ಹವೀಕ ಬ್ರಾಹ್ಮಣರ ಹಿರಿಯರಾಗಲಿ ಪ್ರಾಚೀನ ಯಾ ನಡುವಣ ತುಳುವ ಚರಿತ್ರೆಯಲ್ಲಿ ಭಾಗ ವಹಿಸಿದ್ದೇನೂ ಇಲ್ಲ.

ಪ್ರಾಚೀನ ತುಳುವದಲ್ಲಿದ್ದವರು ಮೂರೇ ವಂಶ ಯಾ ವರ್ಣದವರೆಂದು ಹೇಳಬಹುದು. ಮೊನ್ನೆ ತನಕ ನಾವು ಹೊಲೆಯ, ಕೊರಗರೆಂದು ಕರೆಯುತ್ತಿದ್ದ ಹರಿಜನರ ಹಿರಿಯರು ಇಲ್ಲಿಯ ಮೂಲನಿವಾಸಿಗಳು. ಶಿವಳ್ಳಿ, ಕೋಟ ಬ್ರಾಹ್ಮಣರ ಹಿರಿಯರೂ, ಶಿವಬ್ರಾಹ್ಮಣರ ಹಿರಿಯರೂ ತುಳುವಕ್ಕೆ ಪ್ರಾಚೀನ ಕಾಲದಲ್ಲಿ ಬಂದು ಸೇರಿದ ಆರ್ಯ ವಂಶಜರು–ಬಂಟ, ನಾಡವ, ಬಿಲ್ಲವ, ಹಳೇ ಪೈಕ, ಮೊಗೇರ, ದೇವಾಡಿಗ, ಗಾಣಿಗ, ಕೆಲಸಿ ಮೊದಲಾದ ತುಳು ಮತ್ತು ಕನ್ನಡ ಭಾಷೆಗಳನ್ನಾಡುವ ಬ್ರಾಹ್ಮಣೇತರ ಸವರ್ಣ ಹಿಂದುಗಳ ಹಿರಿಯರು ತುಳುವಕ್ಕೆ ಆರ್ಯ ವಂಶಜರ ಮೊದಲು ಬಂದು ಸೇರಿಕೊಂಡ ದ್ರಾವಿಡ ವಂಶಜರು. ಈ ಆರ್ಯ ದ್ರಾವಿಡರ ಮತ್ತು ಈ ಮೂಲನಿವಾಸಿಗಳ ಚರಿತ್ರೆಯೇ ತುಳುವದ ಪ್ರಾಚೀನ ಇತಿಹಾಸವಾಗಿದೆ. ತುಳುವದಲ್ಲಿ ಮೊದಲಿಂದ ಇದ್ದವರ

ವಂಶಜರಲ್ಲಿ ಹಲವರೀಗ ಕನ್ನಡ ಭಾಷೆಯುನ್ನಾಡುತ್ತಾರೆ. ಆದರೆ ಈಗ ತುಳು ಭಾಷೆಯುನ್ನಾಡುವವರೆಲ್ಲಾ ತುಳುವದ ಪ್ರಾಚೀನ ವಂಶಜರೆಂದೇ ಹೇಳಬಹುದು.

---

# ಅಧ್ಯಾಯ ೨

## ತುಳುವೋತ್ಪತ್ತಿ

**೧. ಪರಶುರಾಮನ ಕಥೆ—೨. ರಾಮಾಯಣ, ಮಹಾಭಾರತಗಳ ಕಾಲ.**

## ೧. ಪರಶುರಾಮನ ಕಥೆ

ಕೊಂಕಣ, ತುಳುವ, ಕೇರಳಗಳು ಪರಶುರಾಮನಿಂದ ಸೃಷ್ಟಿಸಲ್ಪಟ್ಟವೆಂದು ಪ್ರಾಚೀನ ಕಾಲದಿಂದ ಈ ತನಕ ಹಿಂದೂಗಳಲ್ಲಿ ನಡೆದುಬಂದ ನಂಬಿಕೆಯಾಗಿದೆ. ಪರಶುರಾಮನ ವೃತ್ತಾಂತವು ಪುರಾಣಗಳಲ್ಲಿಯೂ ಮಹಾಭಾರತದಲ್ಲಿಯೂ ಇದೆಯಾದರೂ ಒಂದೇ ರೀತಿ ಇಲ್ಲ. ಹಲವು ಗ್ರಂಥಗಳಲ್ಲಿ ಹಲವು ತರದ ವಿವರಗಳು ಸೇರಿವೆ– ಆ ವಿವರಗಳಲ್ಲಿ ಹಲವು ವ್ಯತ್ಯಾಸಗಳಿವೆ. ಹಿಂದುಗಳು ಸರ್ವಸಾಧಾರಣವಾಗಿ ಈಗ ಪರಶುರಾಮನನ್ನು ವಿಷ್ಣುವಿನ ಆರನೇ ಅವತಾರವೆಂದು ಕರೆಯುತ್ತಾರೆ. ಆ ಅವತಾರದ ಕಥೆಯ ಸಾರಾಂಶವನ್ನು ಶ್ರೀ ಅ. ಶ್ರೀನಿವಾಸ ಹೆಗ್ಡೆಯರು ತಮ್ಮ "ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳಪಾಂಡ್ಯರಾಯನ ಅಳಿಯಕಟ್ಟು" ಎಂಬ ತಮ್ಮ ಗ್ರಂಥದಲ್ಲಿ ೨ನೇ ಅಧ್ಯಾಯವಾಗಿ ಕೊಟ್ಟಿರುತ್ತಾರೆ.

ಕ್ಷೀರಸಾಗರದಲ್ಲಿ ಶ್ರೀವಿಷ್ಣುವು ದೈತ್ಯರನ್ನು ನಿಗ್ರಹಿಸಿ ವಿಶ್ರಮಿಸುತ್ತಿರುವಾಗ ಅವನ ಬಲಗೈ ಆಯುಧವಾದ ಸುದರ್ಶನವು ಗರ್ವವನ್ನು ತಾಳಿ ದೈತ್ಯಸಂಹಾರಕ್ಕೆ ತಾನಿಲ್ಲದಿದ್ದರೆ ಶ್ರೀವಿಷ್ಣುವಿಗೆ ಸಾಧ್ಯವಿರಲಿಲ್ಲವೆಂದು ಹಿಗ್ಗತೊಡಗಿತು. ಚಕ್ರದ ಆ ಗರ್ವವನ್ನು ಮುರಿಯಲಿಕ್ಕಾಗಿ ಶ್ರೀವಿಷ್ಣುವು ಅದನ್ನು ಕುರಿತು "ನೀನು ಮರ್ತ್ಯಲೋಕದಲ್ಲಿ ಸಹಸ್ರಬಾಹುಗಳುಳ್ಳ ವೀರಕ್ಷತ್ರಿಯನಾಗಿ ಜನಿಸು. ನಾನು ಅಲ್ಲಿ ನಿನ್ನ ಪರಾಕ್ರಮ ಬಲಗಳನ್ನು ಪರೀಕ್ಷಿಸುವೆನು" ಎಂದು ವಿಧಿಸಿದನು. ಕೃತಯುಗದಲ್ಲಿ ಎಂಟು ಸಾವಿರ ವರ್ಷಗಳು ಸಲ್ಲುವಾಗ, ಸುದರ್ಶನ ಚಕ್ರವು ಕ್ಷತ್ರಿಯಕುಲದಲ್ಲಿ ಕಾರ್ತವೀರ್ಯಾರ್ಜುನನೆಂಬ ಹೆಸರಿ

ನಿಂದ ಜನಿಸಿತು. ಕಾರ್ತವೀರ್ಯಾರ್ಜುನನು ಸುತ್ತಲಿರುವ ಸಕಲ ರಾಜರನ್ನು ಗೆದ್ದು ಏಕಚಕ್ರಾಧಿಪತಿಯಾಗಿ ರಾಜ್ಯವನ್ನಾಳುತ್ತಿದ್ದನು. ಆಗ ಒಂದು ದಿನ ಆತನು ಬೇಟೆಗೆಂದು ಅರಣ್ಯಕ್ಕೆ ಹೋದಲ್ಲಿ, ದಣಿದು, ಹತ್ತಿರವಿದ್ದ ಜಮದಗ್ನಿ ಋಷಿಯ ಆಶ್ರಮವನ್ನು ಸೇರಿದನು. ಆಗ ಆ ಋಷಿಯು ಅರಸನನ್ನೂ ಆತನ ಪರಿವಾರವನ್ನೂ ತನ್ನಲ್ಲಿರುವ ಕಾಮಧೇನುವಿನ ಸಹಾಯದಿಂದ ಮೃಷ್ಟಾನ್ನ ಭಕ್ಷ್ಯಭೋಜ್ಯಾದಿಗಳಿಂದ ತೃಪ್ತಿಪಡಿಸಲು ಆ ಅರಸನು ಅದನ್ನು ಕಂಡು ಅಡವಿಗಳಲ್ಲಿರುವ ಋಷಿಗಳಿಗೆ ಕಾಮಧೇನುವಿನಿಂದ ಪ್ರಯೋಜನವಿಲ್ಲವೆಂದು ಭಾವಿಸಿ, ಆ ಧೇನುವನ್ನು ತನಗೆ ಕೊಡಬೇಕೆಂದು ಜಮದಗ್ನಿಯೊಡನೆ ಕೇಳಿದನು. ಜಮದಗ್ನಿಯು ಒಪ್ಪದ್ದರಿಂದ ಕಾರ್ತವೀರ್ಯಾರ್ಜುನನು ಅವನನ್ನು ಕೊಂದು ಅವನ ಶಿರಸ್ಸನ್ನು ಕಾಮಧೇನುವಿನ ಕೊರಳಿಗೆ ಕಟ್ಟಿ ಎಳಕೊಂಡು ಹೋಗಲು, ಅದು ಜಮದಗ್ನಿಯ ಪುತ್ರನಾದ ಪರಶುರಾಮನ ಬಳಿಗೆ ಓಡಿಹೋಯಿತು. ಪರಶುರಾಮನು ಧೇನುವಿನ ಕತ್ತಿನಲ್ಲಿರುವ ಶಿರಸ್ಸು ತನ್ನ ತಂದೆಯದೆಂದು ತಿಳಿದು ಅದನ್ನು ತಂದು ತನ್ನ ತಂದೆಯ ಮುಂಡಕ್ಕೆ ಇಟ್ಟು ಜೋಡಿಸಿದೊಡನೆ ಜಮದಗ್ನಿಯು ಜೀವವನ್ನು ಹೊಂದಿ ನಡೆದ ಸಮಾಚಾರವನ್ನೆಲ್ಲಾ ಆತನಿಗೆ ತಿಳಿಸಿದನು. ಪರಶುರಾಮನು ಅದನ್ನು ಕೇಳಿ ಕೋಪೋದ್ರೇಕದಿಂದ ತನ್ನ ಪರಶು ಎಂಬ ಆಯುಧವನ್ನು ಹಿಡಕೊಂಡು ಕಾರ್ತವೀರ್ಯಾರ್ಜುನನ ಪಟ್ಟಣವನ್ನು ಹೊಕ್ಕು, ಕೋಟೆಯನ್ನು ನಾಶಮಾಡಿ. ಕಾರ್ತವೀರ್ಯಾರ್ಜುನನನ್ನು ಪರಶುವಿನಿಂದ ಸಂಹರಿಸಿದನು. ಆ ಬಳಿಕ ಎಲ್ಲಾ ಕ್ಷತ್ರಿಯರೊಡನೆ ಯುದ್ಧಮಾಡಿ ಅವರನ್ನು ನಿರ್ನಾಮಗೈದನು.

ಅನಂತರ ಒಂದು ದಿನ, ಪರಶುರಾಮನ ತಾಯಿಯಾದ ರೇಣುಕಾದೇವಿಯು ಎಂದಿನಂತೆ ಗಂಗಾನದಿಯ ಜಲವನ್ನು ತರಲಿಕ್ಕೆ ಹೋಗುವಾಗ, ಆಕಾಶದಲ್ಲಿ ಓರ್ವ ಗಂಧರ್ವನನ್ನು ಕಂಡು ಆತನ ಸೌಂದರ್ಯಕ್ಕೆ ಮೆಚ್ಚಿ, ಗಂಗಾನದಿಯಲ್ಲಿ ಸ್ನಾನಮಾಡಿ, ಎಂದಿನಂತೆ ಮಳಲಿನಿಂದ ಗಡಿಗೆಯನ್ನು ಮಾಡಲು. ಗಡಿಗೆಯು ಆಗದಿರುವದನ್ನು ಕಂಡು, ದುಃಖಿತಳಾಗಿ, ಮಣ್ಣಿನ ಪಾತ್ರೆಯಲ್ಲಿ ನೀರು ತಂದು ಈ ವಾರ್ತೆಯನ್ನು ತನ್ನ ಪತಿಯೊಡನೆ ಹೇಳಲು ಆತನು ಮಹಾಕೋಪದಿಂದ ತನ್ನ ಏಳುಜನ ಮಕ್ಕಳನ್ನು ಕರೆದು ಅವಳ ಶಿರಚ್ಛೇದ ಮಾಡಿರೆಂದು ಆಜ್ಞೆ ಮಾಡಲು ಅದಕ್ಕೆ ಯಾರೂ ಒಪ್ಪಲಿಲ್ಲ. ಬಳಿಕ ಕನಿಷ್ಠಪುತ್ರನಾದ ಪರಶುರಾಮನಿಗೆ ಹೇಳಲು, ಆತನು ತಕ್ಷಣವೇ ತಾಯಿಯ ಶಿರಸ್ಸನ್ನು ಕಡಿದುಬಿಟ್ಟನು.

ಆಗಲಾ ಋಷಿಯು ಮಗನ ಕೆಲಸಕ್ಕೆ ಮೆಚ್ಚಿ– ಮಗೂ ನಿನಗೆ ಬೇಕಾದ ವರಗಳನ್ನು ಬೇಡಿಕೊಳ್ಳೆಂದನು. ಅದಕ್ಕೆ ಅವನು ತನ್ನ ತಾಯಿಯ ಜೀವದಾನ ಕೊಟ್ಟು ಎಂದಿನಂತೆ ರಕ್ಷಿಸಿ ನಡಿಸಬೇಕೆಂದು ಪ್ರಾರ್ಥಿಸಿದನು. ಋಷಿವರನು ಪುತ್ರನ ಬೇಡಿಕೆಯಂತೆ ತನ್ನ ಕಮಂಡಲೋದಕವನ್ನು ಪ್ರೋಕ್ಷಿಸಲು ತಕ್ಷಣವೇ ಆ ಪತಿವ್ರತೆಯು ಎಚ್ಚತ್ತು ಎಂದಿನಂತೆ ನಡೆಕೊಂಡಿದ್ದಳು.

ತರುವಾಯ ಪರಶುರಾಮನು ಈ ಮಾತೃಹತ್ಯ ಮತ್ತು ಕ್ಷತ್ರಿಯಕುಲ ಸಂಹಾರದ ದೋಷಪರಿಹಾರಾರ್ಥವಾಗಿ ಭೂಮಿಯಲ್ಲಿರುವ ಸಕಲ ತೀರ್ಥಕ್ಷೇತ್ರಗಳನ್ನು ಸಂಚರಿಸಿ, ತೀರ್ಥಹಳ್ಳಿಗೆ ಬಂದು ಅಲ್ಲಿರುವ ತುಂಗಭದ್ರಾನದಿಯಲ್ಲಿ ಸ್ನಾನಮಾಡಿ ಸರ್ವಪಾಪವನ್ನು ಕಳಕೊಂಡನು. ಆ ಮೇಲೆ ಗಂಗಾತೀರಕ್ಕೆ ಹೋಗಿ, ಕಾಶ್ಯಪಾದಿ ಋಷಿವರರನ್ನು ಕರೆಸಿ, ಅಶ್ವಮೇಧಾದಿ ಯಾಗಗಳನ್ನು ರಚಿಸಿ, ಚತುಸ್ಸಾಗರ ಮಧ್ಯ ಇರುವ ಎಲ್ಲಾ ಭೂಮಿಗಳನ್ನು ಗಂಗೋದಕದಿಂದ ಧಾರಾಳಪೂರ್ವಕವಾಗಿ ಕಾಶ್ಯಪಾದಿ ಮಹಾಋಷಿಗಳಿಗೆ ದಾನಕೊಟ್ಟನು. ಆಗ ಆ ಋಷಿಗಳು ಅಪೇಕ್ಷಿಸಿದಂತೆ ರಾಜ್ಯಾಧಿಕಾರವನ್ನು ನಹುಶನೆಂಬ ಮಹಾರಾಜನಿಗೆ ಬಿಟ್ಟುಕೊಟ್ಟು, ತಾನು ಅಲ್ಲಿಂದ ಪಶ್ಚಿಮಸಮುದ್ರ ತೀರದಲ್ಲಿರುವ ಕುಟಶಾದ್ರಿ ಪರ್ವತಕ್ಕೆ ಬಂದು, ಸಮುದ್ರರಾಜನನ್ನು ಸ್ತುತಿಸಿ, ತನಗೆ ವಾಸಮಾಡಲಿಕ್ಕೆ ಸ್ವಲ್ಪ ಸ್ಥಳವನ್ನು ಕೊಡಬೇಕೆಂದು ಹೇಳಿದನು. ತಾನು ತನ್ನ ಪರಶುವನ್ನು ಬಿಸಾಡುತ್ತೇನೆ; ಅದು ಸಂಚರಿಸಿದಷ್ಟು ಸ್ಥಳವನ್ನು ಬಿಟ್ಟುಕೊಡಬೇಕೆಂದು ಪರಶುರಾಮನು ಹೇಳಿದ್ದಕ್ಕೆ ಸಮುದ್ರರಾಜನು ಸಮ್ಮತಿಸಿದನು.

ಮರುದಿನ ಬೆಳಿಗ್ಗೆ ಪರಶುರಾಮನು ತನ್ನ ಪರಶುವನ್ನು ಪೂಜಿಸಿ, ಅದನ್ನು ತೆಗೆದು ಬಿಸಾಡಲು, ಸಮುದ್ರರಾಜನು ಆತನಿಗೆ ಶ್ರೀಶೈಲನಾಶಿಕುದ್ರಿ ಎಂಬ ಸ್ಥಳ ಮೊದಲುಗೊಂಡು ದಕ್ಷಿಣಕ್ಕೆ ಕನ್ಯಾಕುಮಾರಿ ವರೆಗೆ ಮುನ್ನೂರು ಯೋಜನ ಉದ್ದ - ಸಿಂಹಾದ್ರಿಯಿಂದ ಸಮುದ್ರ ಪರಿಯಂತರ ನೂರು ಯೋಜನ ಅಗಲದ ಭೂಮಿಯನ್ನು ಬಿಟ್ಟುಕೊಟ್ಟನು. ಆ ರಾಜ್ಯಕ್ಕೆ ಸಮುದ್ರದಲ್ಲಿರುವ ೭೭ ದ್ವೀಪಗಳನ್ನು ಸೇರಿಸಿ ಅದು ಘೋರಾಷ್ಟ್ರವೆಂತ ಕರೆಯಲ್ಪಟ್ಟಿತು.

ಈ ಘೋರಾಷ್ಟ್ರಕ್ಕೆ ರಾಮಭೋಜನೆಂಬ ಅರಸನನ್ನು ನೇಮಿಸಿ, ಪರಶುರಾಮನು ಗೋಮಂತಿಕಾಪರ್ವತದಲ್ಲಿ ವಾಸಮಾಡಿಕೊಂಡಿದ್ದನು. ರಾಮಭೋಜರಾಯನು ಹಲವು ಯಜ್ಞಗಳನ್ನು ಮಾಡಿ ಬಂದ ಬ್ರಾಹ್ಮಣರಿಗೆಲ್ಲಾ ತುಲಾಪುರುಷ ದಾನಗಳನ್ನೂ ತುಲಾಭಾರಗಳನ್ನೂ ತೂಗಿಸಿಕೊಟ್ಟನು. ಅನಂ

ತರ ಬ್ರಾಹ್ಮಣರು ತಮ್ಮ ತಮ್ಮ ದೇಶಕ್ಕೆ ಹೋಗಿ ಆ ಅರಸನ ಕೀರ್ತಿಯನ್ನು ಹಬ್ಬಿದರು. ಆತನನ್ನು ಕೆಲವರು ತುಲಾರಾಜನೆಂತಲೂ ಇನ್ನು ಕೆಲವರು ತುಲಾದೇಶಾಧಿಪತಿಯೆಂದೂ ಕರೆಯತೊಡಗಿ ಆ ದೇಶದಲ್ಲಿ ವಾಸಿಸುವ ಜನರಿಗೆಲ್ಲಾ ತೌಳವರೆಂಬ ಹೆಸರು ಬಂತು. ರಾಮಭೋಜರಾಯನು ತನ್ನ ಏಳುಜನ ಮಕ್ಕಳಿಗೆ ತನ್ನ ರಾಜ್ಯವನ್ನು ತನ್ನ ಜೀವಕಾಲದಲ್ಲಿಯೇ ವಿಂಗಡಿಸಿಕೊಟ್ಟನು. ಆ ಏಳು ಅಂಶಗಳು ತೌಳವ, ಹವಿಗ ಕೇರಳ, ಆರಟ, ಮಹಾರಾಷ್ಟ್ರ, ಕರಾಟ, ಮತ್ತು ಕೊಂಕಣಗಳಾಗಿವೆ. ಪರಶುರಾಮನ ಕಥೆಯು ಶ್ರೀ ಹೆಗ್ಡೆಯರ ಗ್ರಂಥದಲ್ಲಿ ಮೇಲೆ ಹೇಳಿದಂತೆ ಇದೆ. ಈ ಕಥೆಯು ಬೇರೆ ಬೇರೆ ವಿವರಗಳೊಂದಿಗೆ ಹಲವು ಪುರಾಣಗಳಲ್ಲಿದೆ ಪರಶುರಾಮನು ಸಮುದ್ರರಾಜನಿಂದ ಪಡೆದ ಪ್ರದೇಶಕ್ಕೆ ಶೂರ್ಪಾರಕ ಎಂಬ ಹೆಸರೂ ಪುರಾಣಗಳಲ್ಲಿಯೂ ಮಹಾಭಾರತದಲ್ಲಿಯೂ ಕಾಣುತ್ತದೆ.

ಪರಶುರಾಮನ ಕಥೆಗೆ ತುಳು ಬ್ರಾಹ್ಮಣರು ಇನ್ನೂ ಹೆಚ್ಚಿನ ವಿವರಗಳನ್ನು ಕೂಡಿಸಿರುತ್ತಾರೆ. ಅಹಿಕ್ಷೇತ್ರದಿಂದ ಆಗಿಂದಾಗ ತುಳುವಕ್ಕೆ ಬಂದು ಹೋಗಿಕೊಂಡಿದ್ದ ಬ್ರಾಹ್ಮಣರು ಪರಶುರಾಮನ ಕೋಪಕ್ಕೆ ಪಾತ್ರರಾಗಲು, ಪರಶುರಾಮನು ಕೆಲವು ಬೆಸ್ತರ ಬಲೆಗಳನ್ನು ತೆಕ್ಕೊಂಡು ಅವುಗಳಿಂದ ಯಜ್ಞೋಪವೀತಗಳನ್ನು ತಯಾರಿಸಿ, ಆ ಬೆಸ್ತರ ಕೊರಳಿಗೆ ಹಾಕಿ ಅವರನ್ನು ಬ್ರಾಹ್ಮಣರನ್ನಾಗಿ ಮಾಡಿ ತಾನು ತಪಸ್ಸಿಗೆ ಹೋದನು. ಹೋಗುತ್ತಾ ಆ ಬೆಸ್ತರು ತಮ್ಮ ಕಷ್ಟಕಾಲದಲ್ಲಿ ತನ್ನ ನೆನಪನ್ನು ಮಾಡಿದರೆ ತಾನು ಬರುತ್ತೇನೆಂದು ಅವರಿಗೆ ಭರವಸೆಯನ್ನಿತ್ತಿದ್ದನು. ಕೆಲವು ಸಮಯ ದಾಟುತ್ತಲೇ, ಕಷ್ಟಗಳೇನೂ ಬಾರದಿದ್ದರೂ ಪರಶುರಾಮನಿಗೆ ತಮ್ಮ ನೆನಪಿದೆಯೋ ಎಂದು ತಿಳಿಯುವ ಆಶೆಯು ಆ ಬ್ರಾಹ್ಮಣರಲ್ಲಿ ಹುಟ್ಟಿತು. ಅವರು ಪರಶುರಾಮನನ್ನು ಪ್ರಾರ್ಥಿಸಲು ಅವನು ಪ್ರತ್ಯಕ್ಷನಾಗಿ, ತನ್ನನ್ನು ನಿಷ್ಕಾರಣವಾಗಿ ಬರಮಾಡಿದ್ದಕ್ಕೆ ಅವರ ಮೇಲೆ ಕೋಪಗೊಂಡು ಅವರನ್ನು ಬ್ರಾಹ್ಮಣಿಕೆಯಿಂದ ಹಿಂದಿನ ಶೂದ್ರತ್ವಕ್ಕೆ ತಳ್ಳಿ ಹೋದನು. ಹೀಗಾಗಿ ಮಯೂರವರ್ಮನು, ಅದರ ಬಹಳ ಕಾಲದ ಬಳಿಕ, ತುಳು ಬ್ರಾಹ್ಮಣರನ್ನು ಅಹಿಕ್ಷೇತ್ರದಿಂದಿಲ್ಲಿಗೆ ಕರತರುವ ತನಕ, ಇಲ್ಲಿ ಬ್ರಾಹ್ಮಣರಿರಲಿಲ್ಲ.

ಈ ಕಥೆ, ಈ ವಿವರಗಳಲ್ಲಿ ಅಡಗಿರುವ ಐತಿಹಾಸಿಕ ವಿಷಯವೆಷ್ಟೆಂದು ಹೇಳಸಾಧ್ಯವಿಲ್ಲ. ಭೂಲೋಕವು ಈಗಿರುವ ರೂಪವನ್ನೇ ಮೊದಲಿಂದಲೂ

ತಾಳಿದ್ದಲ್ಲ. ಬಹಳ ಪ್ರಾಚೀನ ಕಾಲದಲ್ಲಿ ಈಗ ವಿಂಧ್ಯಾಚಲವಿರುವಲ್ಲಿ ಸಮುದ್ರ ವಿದ್ದು ದಕ್ಷಿಣ ಹಿಂದುಸ್ಥಾನವು ದ್ವೀಪವಾಗಿತ್ತು. ಆಗ ಸಮುದ್ರವು ಇದ್ದಲ್ಲಿ ಅತ್ತ ವಿಂಧ್ಯಾಚಲವೂ ಇತ್ತ ಸಂಹ್ಯಾದ್ರಿಯೂ ಏನೋ ಅದ್ಭುತ ಉತ್ಪಾತಗಳ ಬೆಸೆಯಿಂದ ಆವಿರ್ಭವಿಸಿದವು. ವಿಂಧ್ಯಾಚಲದಿಂದ ಉತ್ತರ ಹಿಂದುಸ್ಥಾನವೂ ದಕ್ಷಿಣ ಹಿಂದುಸ್ಥಾನವೂ ಸೇರಿ ಒಂದೇ ದೇಶವಾಯಿತು. ಸಂಹ್ಯಾದ್ರಿಯಿಂದ ಸಮುದ್ರವು ದೂರಸರಿದು ಅಲ್ಲಿ ತಗ್ಗಿನಲ್ಲಿ ಅಗಲ ಕಿರಿದಾದ ಕಾಡುಪ್ರದೇಶ ವೊಂದು ಬೆಳೆಯಿತು. ಆ ಕಾಡುಪ್ರದೇಶವೇ ಈಗ ಕನ್ಯಾಕುಮಾರಿಯಿಂದ ಉತ್ತರಕ್ಕೆ ಸಂಹ್ಯಾದ್ರಿಯಿಂದ ಪಶ್ಚಿಮಕ್ಕೆ – ಕೇರಳ, ತುಳುವ, ಹೈಗ, ಕೊಂಕಣ ಗಳನ್ನೊಳಕೊಂಡಿರುವ ದೇಶವಾಗಿದೆ. ಈ ದೇಶವು ಬಹಳಕಾಲ ಕಾಡಾಗಿಯೇ ಇದ್ದು ಪರಶುರಾಮನ ಕಾಲದ ತನಕ ಆರ್ಯರಿಗೆ ಅದರ ಅರಿವಿರಲಿಲ್ಲದಿರ ಬಹುದು. ಪರಶುರಾಮನು ಅದನ್ನು ಕಂಡುಹಿಡಿದು ಅಲ್ಲಿ ಆರ್ಯರನ್ನು ಸ್ಥಾಪಿಸಿದ್ದರಿಂದ ಆ ದೇಶವು ಪರಶುರಾಮನಿಂದ ಸೃಷ್ಟಿಸಲ್ಪಟ್ಟಿತೆಂದು ಕಾಲ ಹೋಗುತ್ತಾ ಪುರಾಣಕಥೆಗಳು ಹೇಳತೊಡಗಿರಬಹುದು.

ಪರಶುರಾಮನು ಕಂಡುಹಿಡಿಯುವ ಸಮಯ ತುಳುವದಲ್ಲಿ ಸಮುದ್ರದ ತೀರಗಳಲ್ಲಿ ಬೆಸ್ತರ ವಾಸ್ತವ್ಯಗಳು ಮಾತ್ರವಿದ್ದು ಉಳಿದ ದೇಶವೆಲ್ಲಾ ಕಾಡಾಗಿರ ಬೇಕು. ಆತನು ಇಲ್ಲಿ ಬಿಟ್ಟುಹೋದ ಆರ್ಯರು ಬಹಳ ಕಮ್ಮಿ ಸಂಖ್ಯೆಯವ ರಾಗಿ, ಹೊರಗಿನ ಆರ್ಯರ ಸಂಪರ್ಕವು ಅವರಿಗೆ ತಪ್ಪಿಹೋದ್ದರಿಂದ ಅವರು ತಮ್ಮ ನಾಗರೀಕತೆ, ಸಂಸ್ಕೃತಿಗಳನ್ನು ಮರೆತು, ಬೆಸ್ತರೊಡನೆ ಸಂಪೂರ್ಣ ಮಿಶ್ರವಾಗಿರಬಹುದು.

ಹಾಗಾದರೆ ಈ ತುಳುವ ನಾಡನ್ನು ಮೊತ್ತಮೊದಲು ಕಂಡುಹಿಡಿದ ಆರ್ಯನಾಯಕನಾದ ಪರಶುರಾಮನು ಯಾವ ಕಾಲದಲ್ಲಿದ್ದನು? ಈ ಪ್ರಶ್ನೆಗೆ ಸಮರ್ಪಕವಾದ ಉತ್ತರವಿನ್ನೂ ದೊರಕುವುದಿಲ್ಲ. ಮಹಿಷ್ಮತೀ ನಗರವು ನರ್ಮದಾತೀರದಲ್ಲಿತ್ತೆಂದೂ ಸುರಭಿ (ಕಾಮಧೇನು) ಯೆಂಬುದು ಮೈಸೂರಿನ ಸೊರಾಬ್ ತಾಲೂಕೆಂದೂ ಹೇಳುತ್ತಾರೆ. ಇದು ಸರಿಯಾದರೆ ಆರ್ಯರು ವಿಂಧ್ಯಾಚಲವನ್ನು ದಾಟಿ ದಕ್ಷಿಣಕ್ಕೆ ಹರಡಿದ ಬಳಿಕ ಕಾರ್ತವೀರ್ಯಾರ್ಜುನ ನೆಂಬ ಅರಸನು ನರ್ಮದೆಯ ತೀರದಲ್ಲಿ ರಾಜ್ಯವನ್ನಾಳಿಕೊಂಡಿದ್ದನೆಂದೂ, ಆತನು ದಕ್ಷಿಣಕ್ಕೆ ಸಂಚರಿಸುತ್ತಾ ಬಂದವನು, ಫಲವತ್ತಾದ ಸುರಭಿ ತಾಲೂಕು ಜಮದಗ್ನಿ ಬ್ರಾಹ್ಮಣನೊಬ್ಬನ ವಶವಿರುವುದನ್ನು ಕಂಡು, ಅದನ್ನು ಸ್ವಾಧೀನಪಡಿಸಿ

ಕೊಳ್ಳ ಪ್ರಯತ್ನಿಸಿದನೆಂದೂ-ಇದರಿಂದ ಬ್ರಾಹ್ಮಣ ಕ್ಷತ್ರಿಯರೊಳಗೆ ಘೋ
ಯುದ್ಧ ತೊಡಗಿ, ಬ್ರಾಹ್ಮಣರು ಜಯಶೀಲರಾಗಿ, ಕ್ಷತ್ರಿಯರನ್ನು ನಿರ್ನಾ
ಗೊಳಿಸಹೊರಟರೆಂದೂ ತಿಳಿಯಬಹುದು. ಸೊರಾಬ್ ತಾಲೂಕಿನ ಚಂ
ಗುಟ್ಟೆಯೆಂಬಲ್ಲಿ ಪರಶುರಾಮನ ತಾಯಿಯಾದ ರೇಣುಕಾದೇವಿಯ ದೇ
ಲಯವಿದೆ. ಅದನ್ನು ಆಕೆಯು ಪತಿಯೊಡನೆ ಸಹಗಮನವಾಡಿದ ಸ್ಥಳದಲ್ಲಿಯೇ
ಕಟ್ಟಿತ್ತೆಂದು ಜನರು ನಂಬುತ್ತಾರೆ. ಹೇಗೂ ಪರಶುರಾಮನು ಈ ತುಳುವ
ಆಚೆ ಸಂಹ್ಯಾದ್ರಿಯ ಮೇಲಿರುವ ಪ್ರದೇಶದಲ್ಲಿ ಹುಟ್ಟಿ ಬೆಳೆದವನೆಂದು ತೋರ
ತ್ತದೆ. ಆತನ ಕಾಲವು ಕ್ರೈಸ್ತ ಶಕದ ೨೦ ಶತಮಾನಗಳ ಹಿಂದೆಯಾದರು
ಇರಬೇಕು. ಆ ಕಾಲದಲ್ಲಿ ತುಳುವಕ್ಕಿನ್ನೂ ಆರ್ಯದ್ರಾವಿಡರ ಪ್ರವೇಶವಾಗಿ
ಲಿಲ್ಲ. ಮೂಲನಿವಾಸಿಗಳು ಕಾಡುಗಳಲ್ಲಿ ವಾಸಿಸಿಕೊಂಡಿದ್ದು - ಸಮುದ್
ತೀರದಲ್ಲಿ ಅಲ್ಲಲ್ಲಿ ಮೀನು ಹಿಡಿದು ಜೀವಿಸಿಕೊಂಡಿರುವ ಬೆಸ್ತರು ಮಾತ್ರವಿದ್ದರು

## ೨. ರಾಮಾಯಣ, ಮಹಾಭಾರತಗಳ ಕಾಲ

ರಾಮಾಯಣ ಕಾಲವು ಯಾವದೆಂದು ಇನ್ನೂ ನಿಶ್ಚಯವಿಲ್ಲ. ರಾಮಾ
ಯಣ ಕಾಲದಲ್ಲಿ ಆರ್ಯರು ವಿಂಧ್ಯಾಚಲವನ್ನು ದಾಟಿ ದಕ್ಷಿಣಕ್ಕೆ ಬರತೊ
ಗಿದರು. ರಾಮಾಯಣದಲ್ಲಿ ತುಳುವ ಪ್ರದೇಶದ ಕುರಿತು ಏನೂ ಹೇಳುವುದಿಲ್ಲ
ರಾವಣನು ತುಳುವದ ಉತ್ತರ ತಲೆಯಾದ ಗೋಕರ್ಣದಲ್ಲಿ ಲಿಂಗಸ್ಥಾಪನ
ಮಾಡಿದ್ದನೆಂದಿದೆ. ಆದರೆ ರಾಮನು ಸೀತೆಯನ್ನು ಹುಡುಕುತ್ತಾ ಸಹ್ಯಾ
ದ್ರಿಯ ಪೂರ್ವದಿಂದಲೇ ಲಂಕೆಗೆ ಮುಂದರಿಸಿದ್ದನಲ್ಲದೆ ತುಳುವದಲ್ಲಿ ಆವನು
ಕಾಲಿಡಲಿಲ್ಲ.

ಮಹಾಭಾರತ ಕಾಲವು ಕ್ರೈಸ್ತಪೂರ್ವ ೧೪ನೇ ಶತಮಾನವೆಂದು ಜವಾ
ಹರಲಾಲರು ತಮ್ಮ "ಡಿಸ್ಕವರಿ ಆಫ್ ಇಂಡಿಯಾ"ದಲ್ಲಿ ಅಭಿಪ್ರಾಯಪಟ್ಟಿದ್ದಾರೆ
ಮಹಾಭಾರತದ ವೀರರಲ್ಲಿ ಅರ್ಜುನನು ದಕ್ಷಿಣ ಹಿಂದುಸ್ಥಾನದಲ್ಲಿ ತಿರುಗ-
ದ್ರಾವಿಡ, ನಾಗ, ರಾಜಪುತ್ರಿಯರನ್ನು ವರಿಸಿ, ಅವರನ್ನು ಅಲ್ಲಿಯೇ ಬಿಟ್ಟು
ಹಸ್ತಿನಾವತಿಗೆ ಮರಳಿದ ವೃತ್ತಾಂತವಿದೆ. ಪಾಂಡವರ ಅಜ್ಞಾತವಾಸವು ಧಾರ
ವಾಡ ಜಿಲ್ಲೆಯಲ್ಲಾಗಿರಬೇಕೆಂದು ಕೆಲವರು ಹೇಳುತ್ತಾರೆ. ದಕ್ಷಿಣ ಹಿಂದು
ಸ್ಥಾನದಲ್ಲಿ ಪ್ರಬಲರಾಗಿದ್ದ ನಾಗ, ದ್ರಾವಿಡರಲ್ಲಿ ಆರ್ಯ ಸಂಸ್ಕೃತಿಯ ಕುರಿತ
ಮನ್ನಣೆಯನ್ನು ಕಲ್ಪಿಸಿ- ಈ ಹಿಂದೂದೇಶದಲ್ಲಿ ಆರ್ಯದ್ರಾವಿಡ ಮಿತ್ರತೆಯಿಂ

ಒಂದೇ ಹಿಂದೂ ಜನಾಂಗವಾಗುವಂತೆ ಪ್ರಯತ್ನಿಸಿದವರಲ್ಲಿ ಪಾಂಡವರಿಗೂ ಚಂದ್ರವಂಶದ ಇತರ ಆರ್ಯರಿಗೂ ಅಗ್ರಸ್ಥಾನವನ್ನೀಯಬೇಕು. ತುಳುವದಲ್ಲಿ ಪಾಂಡವರು ಬಂದದ್ದಾಗಲಿ ಉಳಕೊಂಡದ್ದಾಗಲಿ ತೋರುವುದಿಲ್ಲವಾದರೂ ಪಾಂಡವರ ಸಂಬಂಧವನ್ನು ತುಳುನಾಡಿನವರೂ ಹೇಳಿಕೊಳ್ಳುತ್ತಾರೆ. ಕದ್ರಿಯಲ್ಲಿ "ಪಾಂಡವರ ಗವಿ"ಗಳಿವೆ. ಕಾಸರಗೋಡಿನಿಂದ ನೂರು ಮೈಲು ದೂರ ಪೂರ್ವಕ್ಕೆ "ಪಾಂಡವರ ಕೆರೆ"ಯೊಂದಿದೆ. ಉಡ್ಪಿಯ ಬಳಿ ಬಬ್ರುವಾಹನನ ಮಣಿಪುರವಿದೆ. ಮಂಗಳೂರು ತಾಲೂಕಿನ ಸರ್ಪಾಡಿ ಗ್ರಾಮದ ಕುಟಕುಂಜೆಯಲ್ಲಿ "ಪಾಂಡವರ ಕಲ್ಲು" ಇದೆ. ಪಾಂಡವರು ವನವಾಸದಲ್ಲಿರುವಾಗ ತುಳುನಾಡಿಗೆ ಬಂದಿದ್ದರೆಂದು ಜನರು ನಂಬುತ್ತಾರೆ.

ಆದರೆ ಇದೇ ರೀತಿ ಪಾಂಡವರ ಸಂಬಂಧವನ್ನು ಹೇಳಿಕೊಳ್ಳುವ ಕೆರೆ, ಪಟ್ಟಣ, ಕಲ್ಲು, ಗವಿಗಳು ದಕ್ಷಿಣ ಹಿಂದೂದೇಶದ ಪ್ರತಿಯೊಂದು ಕಡೆ ಇವೆ. ಇದರಿಂದ ಪಾಂಡವರು ದಕ್ಷಿಣ ಹಿಂದೂದೇಶದವರ ಮನಸ್ಸನ್ನು ಸೂರೆಗೊಂಡಂತೆ ತೋರುತ್ತದಲ್ಲದೆ ಅವರು ಪ್ರತಿಯೊಂದು ಕಡೆ ಹೋಗಿದ್ದರೆಂದು ಹೇಳಲು ಸಾಧ್ಯವಿಲ್ಲ. ಮಹಾಭಾರತ ಕಾಲದಲ್ಲಿ ಈ ನಾಡಿಗೆ ಪ್ರತ್ಯೇಕ ವ್ಯಕ್ತಿತ್ವವಿತ್ತೆಂತೂ ತೋರುವುದಿಲ್ಲ. ತುಳುವಕ್ಕೆ ಆರ್ಯ ದ್ರಾವಿಡರ ಪ್ರವೇಶವು ಮಹಾಭಾರತ ಕಾಲದ ಬಳಿಕವಾಗಿರಬೇಕು.

# ಅಧ್ಯಾಯ ೩

**೧. ತುಳುವಕ್ಕೆ ಆರ್ಯ ದ್ರಾವಿಡರ ಪ್ರವೇಶ—೨. ಬುದ್ಧ, ಮಹಾವೀರರ ಕಾಲ. ೩. ಚಂದ್ರಗುಪ್ತ, ಅಶೋಕರ ಸಾಮ್ರಾಜ್ಯ.**

## ೧. ತುಳುವಕ್ಕೆ ಆರ್ಯ ದ್ರಾವಿಡರ ಪ್ರವೇಶ

ರಾಮಾಯಣ ಕಾಲದಲ್ಲಿ ವಿಂಧ್ಯಾಚಲದ ದಕ್ಷಿಣಕ್ಕೆ ಹೆಚ್ಚಿನ ನಾಗರೀಕ ರಾಜ್ಯಗಳಿರಲಿಲ್ಲ. ಕಾಡು ತುಂಬಿ, ಕಾಡಿನ ಮಧ್ಯ ಅಲ್ಲಲ್ಲಿ ಋಷಿಗಳ ಆಶ್ರಮಗಳು ಮಾತ್ರವಿದ್ದವು. ಈಗ ಬಳ್ಳಾರಿ ಇರುವಲ್ಲಿದ್ದ ಕಿಷ್ಕಿಂದೆಗೆ ಶ್ರೀರಾಮನು ಮುಟ್ಟುವ ತನಕ, ಆತನಿಗೆ ನಾಗರೀಕ ಜನರ್‍ಯಾರೂ ಸಿಕ್ಕಿರಲಿಲ್ಲ.

ರಾಮಾಯಣ ಕಾಲದ ಬಳಿಕ, ಮಹಾಭಾರತ ಕಾಲದ ಮೊದಲು, ದಕ್ಷಿಣ ಹಿಂದುಸ್ಥಾನದಲ್ಲಿ ಆರ್ಯರು ತುಂಬಾ ಪ್ರವೇಶಿಸಿ, ಅಲ್ಲಿ ತಮ್ಮ ಸಂಸ್ಕೃತಿ, ನಾಗರೀಕತೆಗಳನ್ನು ಹರಡಿದ್ದರು; ದಕ್ಷಿಣ ಹಿಂದುಸ್ಥಾನದಲ್ಲಿ ಅನೇಕ ನಾಗರೀಕ ರಾಜ್ಯಗಳು ಸ್ಥಾಪನೆಯಾಗಿದ್ದುವು. ಆ ರಾಜ್ಯಗಳ ಜನರು ಮೊದಲೇ ಸಂಸ್ಕೃತಿ. ನಾಗರೀಕತೆಯಲ್ಲಿ ಮುಂದರಿದಿದ್ದರೂ, ಅವರ ಸಂಸ್ಕೃತಿಯು ಆರ್ಯ ಸಂಸ್ಕೃತಿಗೆ ಬಗ್ಗಿ, ಆರ್ಯ ಸಂಸ್ಕೃತಿಯ ರೂಪವನ್ನು ತಾಳತೊಡಗಿತ್ತು. ಆರ್ಯ ಸಂಸ್ಕೃತಿಯು ಆ ದ್ರಾವಿಡ ಸಂಸ್ಕೃತಿಯ ರಸವನ್ನು ಹೀರಿ, ತನ್ನ ಹೊರ ರೂಪವನ್ನು ಇಟ್ಟುಕೊಂಡರೂ ಒಳಗಿನಿಂದ ಸಂಪೂರ್ಣ ಮಾರ್ಪಾಟನ್ನು ಹೊಂದಿತ್ತು.

ದಕ್ಷಿಣ ಹಿಂದುಸ್ಥಾನದಲ್ಲೆಲ್ಲಾ ದ್ರಾವಿಡ, ನಾಗವಂಶಗಳ ಅರಸರು ರಾಜ್ಯಗಳನ್ನಾಳುತ್ತಿದ್ದರು; ಕಾಡುಗಳಲ್ಲಿ ನಾಗರೀಕತೆಗಿನ್ನೂ ಹೊರಗಾದ ಮೂಲ ನಿವಾಸಿಗಳಿದ್ದರು. ಪಾಂಡವರ ಕಾಲಕ್ಕೆ ಮೊದಲೇ, ಆರ್ಯರಲ್ಲಿ, ವರ್ಣಾಶ್ರಮ ಧರ್ಮವೂ ಏಕಪತ್ನೀ ಏಕಸತೀ ಪದ್ಧತಿಗಳೂ ಶಿಥಿಲವಾಗಿ ಹೋಗಿದ್ದವು. ಮಹಾಭಾರತದಲ್ಲಿ ವರ್ಣಿಸಿರುವ ಕಾಲದಲ್ಲಿ ಆರ್ಯಸಮಾಜಗಳಲ್ಲಿಯ ಕ್ಷತ್ರಿಯರು ದ್ರಾವಿಡ ಕನ್ಯೆಯರನ್ನೂ ಮೂಲನಿವಾಸಿಗಳ ಕನ್ಯೆಯರನ್ನೂ ಕೂಡ ಮದುವೆಯಾಗುತ್ತಿದ್ದರು. ಹಿಡಿಂಬಿಯು ಮೂಲನಿವಾಸಿಗಳ ಪಂಗಡಕ್ಕೆ ಸೇರಿದವಳು; ಚಿತ್ರಾಂಗದೆ, ಪ್ರಮೀಳೆಯರು ದ್ರಾವಿಡ ಕನ್ಯೆಯರು; ಉಲೂಪಿಯು ನಾಗಕನ್ಯೆ—ಇವರೆಲ್ಲಾ ಭೀಮಾರ್ಜುನರೊಡನೆ ವಿವಾಹವಾಗುತ್ತಾರೆ. ದ್ರೌಪದಿಗೆ ಐದು ಜನ ಗಂಡಂದಿರಿದ್ದರೂ ಅವಳು ಪತಿವ್ರತೆಯೆಂದೇ ಅನ್ನಿಸಿಕೊಳ್ಳುತ್ತಾಳೆ. ಧೃತರಾಷ್ಟ್ರ ಪಾಂಡುಗಳಿಬ್ಬರೂ ಕ್ಷತ್ರಿಯ ರಾಣಿಯಲ್ಲಿ ವೇದವ್ಯಾಸನ ಪ್ರಸಾದದಿಂದ ಜನಿಸುತ್ತಾರಾದರೂ ವ್ಯಭಿಚಾರದಲ್ಲಿ ಹುಟ್ಟಿದವರೆಂದು ಯಾರೂ ಅವರನ್ನು ಹೀಯಾಳಿಸುವುದಿಲ್ಲ. ಕುಂತಿಯು ಅನೇಕ ದೇವತೆಗಳ ವರದಿಂದ, ತನ್ನ ಗಂಡನ ಆಕ್ಷೇಪಯಿಲ್ಲದೆ, ತಾನು ಮಕ್ಕಳನ್ನು ಪಡೆಯುತ್ತಾಳೆ ಮಾತ್ರವಲ್ಲ ತನ್ನ ಸವತಿಗೂ ಗಂಡನ ಸಮ್ಮತಿಯಿಂದ ಆ ಜ್ಞಾನವನ್ನು ಕಲಿಸುತ್ತಾಳೆ. ಆರ್ಯರ ರಾಜವಂಶದ ಯುವಕರು ದಕ್ಷಿಣ ಹಿಂದುಸ್ಥಾನಕ್ಕೆ ಬಂದು, ದ್ರಾವಿಡ ನಾಗಕನ್ಯೆಯರನ್ನು ವರಿಸಿ, ಆರ್ಯದ್ರಾವಿಡ ರಕ್ತವನ್ನೂ ಸಂಸ್ಕೃತಿಯನ್ನೂ ಮಿಶ್ರಗೊಳಿಸುತ್ತಿದ್ದರು. ಈ ಮಿಶ್ರತೆಯಿಂದ ನೂತನ ಹಿಂದೂ ಧರ್ಮವೂ ಹಿಂದೂ ಸಮಾಜವೂ ತಲೆದೋರಿ, ಇಡೀ ಹಿಂದುಸ್ಥಾನದಲ್ಲಿ ಹಿಂದುಗಳು ತುಂಬಿದ್ದರು. ಆರ್ಯರು ತಮ್ಮ ಚತುರ್ವರ್ಣಗಳಲ್ಲಿಯೂ ದ್ರಾವಿಡ, ನಾಗ

ರಿಂದ ಜನರನ್ನು ಆಗ ಸೇರಿಸಿಕೊಳ್ಳುತ್ತಿದ್ದು–ಜಾತಿಭೇದಗಳ ಕಾಠಿಣ್ಯವಿನ್ನೂ ಹಿಂದುಗಳಲ್ಲಿ ತಲೆದೋರಿರಲಿಲ್ಲ.

ನರ್ಮದೆಯು ದಕ್ಷಿಣಕ್ಕಿರುವ ಹಿಂದುಸ್ಥಾನದ ಅಂಶವನ್ನು ದಕ್ಷಿಣಾಪಥ ವೆಂದು ಆಗ ಕರೆಯುತ್ತಿದ್ದರು. ದಕ್ಷಿಣಾಪಥದ ಅತ್ಯಂತ ದಕ್ಷಿಣಕ್ಕೆ ದ್ರಾವಿಡರ ತ್ರೈರಾಜ್ಯಗಳಿದ್ದವು. ಕನ್ಯಾಕುಮಾರಿಯ ಬಳಿ ಸುತ್ತಲೂ ಇರುವ ಪಾಂಡ್ಯ ರಾಜ್ಯ–ಅದರ ಉತ್ತರ ಪೂರ್ವಕ್ಕೆ ಚೋಳರಾಜ್ಯ,–ಉತ್ತರ ಪಶ್ಚಿಮಕ್ಕೆ ಚೇರ ಅಥವಾ ಕೇರಳರಾಜ್ಯ–ಹೀಗೆ ಮೂರು ದ್ರಾವಿಡರ ರಾಜ್ಯಗಳು ಹಿಂದುಸ್ಥಾನದ ಅತೀ ದಕ್ಷಿಣದಲ್ಲಿ ಪ್ರತ್ಯೇಕವಾಗಿ ಬೆಳೆದಿದ್ದವು. ಆ ದ್ರಾವಿಡರಲ್ಲಿ ಸಮಾಜ ಗಳು ಸ್ತ್ರೀ ಮೂಲವನ್ನು ಹೇಳಿಕೊಳ್ಳುವ ಕುಟುಂಬಗಳಿಂದ ತುಂಬಿದ್ದವು. ಸ್ತ್ರೀಯರಿಗೆ ಅವರಲ್ಲಿ ಉಚ್ಚಸ್ಥಾನವೂ ಸ್ವಾತಂತ್ರ್ಯವೂ ಇದ್ದು, ಪುರುಷನು ಮಕ್ಕಳನ್ನು ಪಡೆಯಲಿಕ್ಕೆ ಮಾತ್ರ ಬೇಕಾಗಿದ್ದನು. ಚೇರ ರಾಜ್ಯದಲ್ಲಿ ಈ ಸ್ತ್ರೀ ಸ್ವಾತಂತ್ರ್ಯವು ಆರ್ಯಸಂಸ್ಕೃತಿಗೇನೂ ಬಗ್ಗದೆ ಪ್ರಬಲವಾಗಿತ್ತು. ಚೇರ ರಾಜ್ಯವು ಕಾಲಹೋಗುತ್ತಾ ಕೇರಳಪುತ್ರ, ಸತಿಯಪುತ್ರರೆಂಬ ಎರಡು ಭಾಗಗಳಾಯಿತು.

ತುಳುಭಾಷೆಗೂ ಮಲಿಯಾಳಿ ಭಾಷೆಗೂ ಒಂದೇ ಅಕ್ಷರಮಾಲೆಯಾಗಿ ಬಹು ಪ್ರಾಚೀನ ಕಾಲದಲ್ಲಿ ಅವು ಒಂದೇ ಭಾಷೆಯಾಗಿದ್ದವು. ಕಾರಣಾಂತರ ಗಳಿಂದ ಚೇರ ರಾಜ್ಯದ ಉತ್ತರ ತಲೆಯಲ್ಲಿದ್ದವರು ಕೇರಳದ ಇತರರಿಂದ ಭಾಷಾನುಭೇದವನ್ನು ಬೆಳೆಸಿ, ರೂಢಿ ಆಚಾರಗಳಲ್ಲಿಯೂ ಅಲ್ಪ ಸ್ವಲ್ಪ ವ್ಯತ್ಯಾಸ ವನ್ನು ಹೊಂದಿ, ಬೇರೆಯಾದರು. ಆ ಬೇರೆಯಾದ ಜನರಿಗೆ ಆರ್ಯರು "ಸತಿಯಪುತ್ರ"ರೆಂದು ಕರೆಯುತ್ತಿದ್ದರು. "ಸತಿಯಪುತ್ರ" ನಾಡಿಗೆ ಮೊದಲು ಪ್ರತ್ಯೇಕ ಅರಸರಿರಲಿಲ್ಲ. ಜನನಿಬಿಡತೆಯೂ ಇಲ್ಲದೆ, ಆ ನಾಡೆಲ್ಲಾ ಕಾಡು ಗಳಿಂದ ತುಂಬಿತ್ತು. ಕಾಡುಗಳ ಹೊರಗೆ ಸಮುದ್ರತೀರದಲ್ಲಿ ಅಗಲಕಿರಿದಾದ ರೇವಿನ ಪ್ರದೇಶವೊಂದು ಮಾತ್ರ ಇದ್ದು, ಕಾಡುಗಳ ನಡುವೆ ಗುಡ್ಡಗಳೂ, ಗುಡ್ಡಗಳ ನಡುವೆ ನೀರಿನ ಸಮೃದ್ಧಿಯಿರುತ್ತಿದ್ದ ಬಯಲುಗಳೂ ಇದ್ದವು. ದ್ರಾವಿಡರು ತುಳುವಕ್ಕೆ ಒಂದೇ ಸಮನೆ ಬಂದದ್ದಲ್ಲ. ಶತಮಾನಗಳ ನಡುವೆ, ಒಂದೊಂದೇ ತಂಡಗಳಾಗಿ ಬಂದು ಅಲ್ಲಲ್ಲಿ ಕೃಷಿಯೋಗ್ಯವಾದ ಸ್ಥಳಗಳನ್ನು ಹುಡುಕಿ, ಗಿಡಗಳನ್ನು ಕಡಿದು ವಾಸ್ತವಿಸ ಪ್ರಾರಂಭಿಸಿದ್ದಾಗಿರುತ್ತದೆ. ಕಾಡು ಗಳಲ್ಲಿ ವಾಸಿಸಿಕೊಂಡಿದ್ದ ಮೂಲನಿವಾಸಿಗಳು ಭೂತಾರಾಧನೆಯನ್ನು ಮಾಡಿ ಕೊಂಡು, ಬೇಟೆಯಿಂದ ಜೀವಿಸಿ, ನಾಗರೀಕತೆಯಿಂದ ಹೊರಗಾಗಿದ್ದರು.

ದೃಢಕಾಯರೂ, ಸಾಹಸಿಗಳೂ, ನಾಗರೀಕರೂ ಆದ ದ್ರಾವಿಡರೊಡನೆ ಅವರು ಹೋರಾಡಲಾರದೆ, ಒಂದೊಂದೇ ಹೆಜ್ಜೆ ಹಿಂದಿಡುತ್ತಾ ಹೋಗಿ, ಇನ್ನೂ ಅಲ್ಲಲ್ಲಿ ಉಳಿದಿದ್ದ ಬೆಟ್ಟ ಕಾಡುಗಳಲ್ಲಿ ಸೇರಿ ವಾಸ್ತವಿಸಿಕೊಂಡಿದ್ದರು.

ಆ ಮೂಲನಿವಾಸಿಗಳು ಪಂಗಡಗಳಾಗಿ ತಮ್ಮ ತಮ್ಮ ನಾಯಕರ ಕೈ ಕೆಳಗೆ ಜೀವಿಸಿಕೊಂಡಿದ್ದರು. ಅವರು ಹಲವು ಸಲ ದ್ರಾವಿಡರ ವಸಾಹತುಗಳ ಮೇಲೆ ಬಿದ್ದು, ದ್ರಾವಿಡರಿಗೂ ಅವರಿಗೂ ಹೋರಾಟವಾಗುತ್ತಿತ್ತು. ದ್ರಾವಿಡರು ಮೊತ್ತಮೊದಲು ಒಂದೊಂದು ತಂಡದವರು ಒಂದೊಂದು ಬೈಲುಗಳಲ್ಲಿ ಸೇರಿ ಪ್ರತ್ಯೇಕ ಜೀವಿಸುತ್ತಿದ್ದರು. ಕಾಲಹೋಗುತ್ತಾ ಈ ಮೂಲನಿವಾಸಿಗಳ ತೊಂದರೆಗಳನ್ನು ನಿವಾರಿಸಲಿಕ್ಕಾಗಿ ಅಲ್ಲಲ್ಲಿ ನಾಲ್ಕೈದು ಗ್ರಾಮಗಳೊಂದಾಗಿ ನಾಡು ಯಾ ಸೀಮೆಗಳನ್ನು ರಚಿಸಿಕೊಂಡು ತಮ್ಮೊಳಗೆ ಬಲ್ಲಾಳರೆಂಬ ಪುಟ್ಟ ಅಧಿಪತಿಗಳನ್ನಾರಿಸಿಕೊಂಡು ಅವರ ಕೈಕೆಳಗೆ ಸಮಾಜರೀತಿಯಿಂದ ಜೀವಿಸ ಲಾರಂಭಿಸಿದ್ದರು. ಆ ದ್ರಾವಿಡರು ಆರ್ಯ ಸಂಸ್ಕೃತಿ ಮಿಶ್ರವಾದ ನೂತನ ಹಿಂದೂಧರ್ಮಕ್ಕೆ ಸೇರಿದವರಾಗಿದ್ದರು. ಅವರು ಶೈವರಾಗಿದ್ದರು; ಅವರ ಸೀಮೆಗಳಲ್ಲಿ ಕೆಲವು ಬ್ರಾಹ್ಮಣರು ಅವರ ಶಿವ ಆರಾಧನೆಗೆ ಅರ್ಚಕರಾಗಿ ಸೇರಿಕೊಂಡಿದ್ದರು.

## ೨. ಬುದ್ಧ, ಮಹಾವೀರರ ಕಾಲ

ಈ ಶತಮಾನಗಳ ನಡುವೆ, ಅತ್ತ ಉತ್ತರ ಹಿಂದುಸ್ಥಾನದಲ್ಲಿರುವ ಆರ್ಯರಲ್ಲಿ ಮಹತ್ವದ ಸಂಗತಿಗಳು ಸಂಭವಿಸಿದ್ದವು. ಕ್ರೈಸ್ತಪೂರ್ವ ಏಳನೇ ಶತಮಾನದ ಅಂತ್ಯದಲ್ಲಿ ಬೌದ್ಧ, ಜೈನ, ಮತಸ್ಥಾಪಕರಾದ ಬುದ್ಧ, ಮಹಾವೀರರು ಉತ್ತರ ಹಿಂದುಸ್ಥಾನದ ಕ್ಷತ್ರಿಯ ಕುಟುಂಬಗಳಲ್ಲಿ ಜನ್ಮವೆತ್ತಿ, ಆರನೇ ಶತಮಾನದಲ್ಲಿ ತಮ್ಮ ನೂತನ ಧರ್ಮವಿಚಾರಗಳನ್ನು ಪ್ರಚಾರಿಸತೊಡಗಿದ್ದರು. ವೈದಿಕ ಕಾಲದ ಆರ್ಯಮತವು ಬ್ರಾಹ್ಮಣರ ಕೈಯಲ್ಲಿ ಬಿದ್ದು ಯಜ್ಞ, ಹೋಮವಿಧಿಗಳ ನಿಸ್ಸಾರ ಸಾಂಪ್ರದಾಯವಾಗಿ ಉಳಿದಿತ್ತು. ಜನರಿಗೆ ವೈದಿಕ ದೇವರಾದ ಇಂದ್ರ, ಅಗ್ನಿ, ವರುಣರಲ್ಲಿಯೂ ಆ ದೇವರಿಗೆ ಅರ್ಪಿಸುವ ಯಜ್ಞ ಗಳಲ್ಲಿಯೂ ಸಂಪೂರ್ಣ ವಿಶ್ವಾಸ ತಪ್ಪಿತ್ತು. ಜಾತಿಭೇದಗಳನ್ನು ಬಿಗಿಗೊಳಿಸಿ, ತಮ್ಮ ಕೈಯಲ್ಲಿ ಅಧಿಕಾರಗಳನ್ನಿಟ್ಟುಕೊಳ್ಳ ಪ್ರಯತ್ನಿಸುತ್ತಿದ್ದ ಬ್ರಾಹ್ಮಣರ ಮೇಲೆ ಉಳಿದ ಎಲ್ಲಾ ಜನರಿಗೆ ಬೇಸರವುಂಟಾಗಿತ್ತು. ಬುದ್ಧನು ಎಲ್ಲಾ

ಜಾತಿಭೇದಗಳನ್ನು ತಿರಸ್ಕರಿಸಿ, ಸರ್ವರಿಗೂ ಮೋಕ್ಷಪ್ರಾಪ್ತಿಗೆ ಇರುವ ದಾರಿಯೊಂದೇ ಎಂಬುದನ್ನು ಬೋಧಿಸಿದನು. ವೈದಿಕವಿಧಿ, ಹೋಮ, ಯಜ್ಞಗಳಿಂದೇನೂ ಫಲವಿಲ್ಲ, – ಮನುಷ್ಯನು ಅಷ್ಟಾಂಗ ಧರ್ಮಪಥದಲ್ಲಿ ತನ್ನ ಕರ್ತವ್ಯಗಳನ್ನು ಮಾಡುತ್ತಾ ಜನ್ಮಗಳ ಕಷ್ಟಗಳಿಂದ ನಿರ್ವಾಣವನ್ನು ಹೊಂದಬಹುದೆಂದೂ ಮೋಕ್ಷಸಾಧನೆಗೆ ಬ್ರಾಹ್ಮಣರಾಗಲಿ ಇತರರಾಗಲಿ ಸಹಾಯಮಾಡಬೇಕೆಂದಿಲ್ಲವೆಂದೂ ಬುದ್ಧನು ಜನರಲ್ಲೆಲ್ಲಾ ಬೋಧಿಸಿದನು. ಅವನು ವೇದಗಳ ಮಹತ್ವಿಕೆಯನ್ನು ತಿರಸ್ಕರಿಸಿ, ಬ್ರಾಹ್ಮಣರ ಅಹಂಕಾರವನ್ನು ಮುರಿದು, ತನ್ನ ಜೀವಕಾಲವಲ್ಲಿಯೇ ತನ್ನ ನೂತನ ಧರ್ಮವನ್ನು ಉತ್ತರ ಹಿಂದುಸ್ಥಾನದಲ್ಲೆಲ್ಲಾ ಪ್ರಚಾರಕ್ಕೆ ತಂದನು.

ಜೈನ ಧರ್ಮಪ್ರಚಾರಕನಾದ ಮಹಾವೀರನು ಬುದ್ಧನ ಸಮಕಾಲೀನನಾಗಿದ್ದನು. ಬೌದ್ಧರಂತೆ ಜೈನರೂ ವೇದಗಳನ್ನು ತಿರಸ್ಕರಿಸುತ್ತಾರೆ. ಅಹಿಂಸಾ ಧರ್ಮವೇ ಶ್ರೇಷ್ಠವೆಂದು ಹೇಳುತ್ತಾರೆ. ಆದರೆ ಜೈನರು ಹಿಂದುಗಳಂತೆಯೇ ಮೋಕ್ಷಪ್ರಾಪ್ತಿಗೆ ಜ್ಞಾನ, ಭಕ್ತಿ, ತಪಶ್ಚರಣೆಗಳು ಅವಶ್ಯವೆಂದು ನಂಬುತ್ತಾರೆ; ಜಾತಿಭೇದಗಳನ್ನು ತಿರಸ್ಕರಿಸುವುದಿಲ್ಲ. ಆತ್ಮ ಮತ್ತು ಶರೀರ ಎರಡು ಬೇರೆ ಬೇರೆ ಎಂದು ಜೈನರು ಒಪ್ಪಿದರೂ ಆತ್ಮನು ಬ್ರಹ್ಮನ ಅಂಶವೆಂದು ಹಿಂದುಗಳಂತೆ ಅವರು ನಂಬುವುದಿಲ್ಲ; ಈ ಸೃಷ್ಟಿಯನ್ನು ಉಂಟುಮಾಡಿದ ದೇವರೊಬ್ಬರಿದ್ದಾರೆಂದೂ ಒಪ್ಪುವುದಿಲ್ಲ. ಸೃಷ್ಟಿಯು ಅನಾದಿ ಮತ್ತು ಅನಂತವಾಗಿದೆ; ಆತ್ಮರು ಅಸಂಖ್ಯರಾಗಿದ್ದಾರೆ; ಅವರು ಯಾವ ಪರಮಾತ್ಮನ ಅಂಶವೂ ಅಲ್ಲ. ಆತ್ಮನು ಸ್ವಯಂ ರಾಗಜನಿತ ಕರ್ಮಗಳಿಂದ ಬಿಡುಗಡೆಯನ್ನು ಹೊಂದಿ ಪರಮಾತ್ಮ ಪದವನ್ನು ಪಡೆಯುತ್ತಾನೆ ಮತ್ತು ಅನಾದಿ ಹಾಗೂ ಅಮರನಾಗಿದ್ದಾನೆಂದು ಜೈನರ ನಂಬುಗೆಯಾಗಿದೆ.

ಈ ನೂತನ ಧರ್ಮಗಳಲ್ಲಿ ಬೌದ್ಧಮತವೇ ಸರ್ವರನ್ನೂ ಆಕರ್ಷಿಸಿ ಬೇಗನೇ ಪ್ರಬಲವಾಯಿತು. ಬುದ್ಧನು ಕ್ರೈಸ್ತ ಪೂರ್ವ ೫೭೭ರಷ್ಟಕ್ಕೆ ಕಾಲವಾದನು. ಆತನು ಕಾಲವಾದ ಎರಡುವರೆ ಶತಮಾನಗಳಲ್ಲಿ ಹಿಂದುಸ್ಥಾನದ ಸ್ಥಿತಿಗತಿಗಳು ರಾಜಕೀಯ ಕಡೆಯಿಂದಲೂ ರೂಪಾಂತರ ಹೊಂದಿದವು. ಸಿಕಂದರನು ಹಿಂದುಸ್ಥಾನಕ್ಕೆ ಕ್ರೈಸ್ತ ಪೂರ್ವ ೩೨೭ರಲ್ಲಿ ಬಂದು ಪಂಜಾಬಿನಿಂದಲೇ ಮರಳಿದರೂ ಆತನಿಂದ ಪ್ರಾರಂಭವಾದ ಯವನರ ಸಂಪರ್ಕವು ಆತನ ಬಳಿಕವೂ ಉಳಿಯಿತು. ಹೊರಗಣ ಗಂಡಾಂತರಗಳು ಬರತೊಡಗುತ್ತಲೇ

ಬುದ್ಧನ ಕಾಲದಲ್ಲಿ ಉತ್ತರ ಹಿಂದುಸ್ಥಾನದಲ್ಲೆಲ್ಲಾ ತುಂಬಿದ್ದ ಪುಟ್ಟ ರಾಜ್ಯಗಳೊಂದಾಗಿ, ಮೌರ್ಯ ವಂಶದ ಚಂದ್ರಗುಪ್ತನ ಸಾಮ್ರಾಜ್ಯದೊಳಗೆ ಸೇರಿಕೊಂಡವು.

## ३. ಚಂದ್ರಗುಪ್ತ, ಅಶೋಕರ ಸಾಮ್ರಾಜ್ಯ

ಮೌರ್ಯ ವಂಶಸ್ಥಾಪಕನಾದ ಚಂದ್ರಗುಪ್ತನು ಕ್ರೈಸ್ತ ಪೂರ್ವ ೩೨೬ರಿಂದ ೨೯೭ರ ತನಕ ರಾಜ್ಯವಾಳಿ, ಕೊನೆಗೆ ಜೈನ ಧರ್ಮವನ್ನವಲಂಬಿಸಿ, ಜೈನ ಯತಿಗಳೊಡನೆ ಸೇರಿ, ದಕ್ಷಿಣ ಹಿಂದುಸ್ಥಾನಕ್ಕೆ ಬಂದು, ಶ್ರವಣಬೆಳ್ಗೊಳದಲ್ಲಿ ತಪಸ್ಸನ್ನು ಮಾಡುತ್ತಾ ಕಾಲಾಧೀನನಾದನೆಂದು ಹೇಳುತ್ತಾರೆ. ಚಂದ್ರಗುಪ್ತನ ಕಾಲದಲ್ಲಿಯೇ ಜೈನ ಯತಿಗಳು ಚೋಳ, ಪಾಂಡ್ಯ, ಚೇರ ದೇಶಗಳಿಗೆ ಹೋಗಿ ಜೈನ ಧರ್ಮಪ್ರಚಾರವನ್ನು ಪ್ರಾರಂಭಿಸಿದ್ದರು. ತುಳುವದಲ್ಲಿಯೂ ಆಗ ಜೈನ ಧರ್ಮಪ್ರಚಾರವಾಗಿರಬೇಕೆಂಬುದಕ್ಕೆ ಸಂಶಯವಿಲ್ಲ.

ಚಂದ್ರಗುಪ್ತನ ಮೊಮ್ಮಗನು ಜಗದ್ವಿಖ್ಯಾತನಾದ ಅಶೋಕ ಮಹಾ ಚಕ್ರವರ್ತಿಯು. ಆತನು ಕ್ರೈಸ್ತ ಪೂರ್ವ ೨೭೩ರಲ್ಲಿ ಮೌರ್ಯ ಸಿಂಹಾಸನವನ್ನೇರಿ, ಮೊದಲ ಹದಿಮೂರು ವರ್ಷಗಳಲ್ಲಿ ಇತರ ಸಾಮ್ರಾಟರಂತೆ ತನ್ನ ರಾಜ್ಯವನ್ನು ವಿಸ್ತರಿಸುವ ಚಿಂತೆಯಲ್ಲಿದ್ದನು. ಆತನ ಸಾಮ್ರಾಜ್ಯದ ದಕ್ಷಿಣ ಗಡಿಯು ಈಗಿನ ಮದ್ರಾಸಿನಿಂದ ಪಶ್ಚಿಮಕ್ಕೆ—ತುಳುನಾಡಿನ ಉತ್ತರ ಗಡಿಯ ತನಕ—ಹರಡಿಕೊಂಡಿತ್ತು. ಅಶೋಕನು ಕಳಿಂಗ ದೇಶವನ್ನು ಕ್ರಿ. ಪೂ. ೨೬೦ರಲ್ಲಿ ಜಯಿಸಿ ತನ್ನ ಸಾಮ್ರಾಜ್ಯಕ್ಕೆ ಸೇರಿಸಿದ್ದನು. ಕಳಿಂಗವಿಜಯವು ಬಹಳ ಹೋರಾಟದ ಬಳಿಕವೇ ಸಾಧ್ಯವಾಗಿತ್ತು. ಆ ಹೋರಾಟದಲ್ಲಿ ಸಂಭವಿಸಿದ ಮಾನವ ಹತ್ಯೆಯನ್ನು ಕಂಡು, ಅಶೋಕನು ದಿಗ್ವಿಜಯದ ಆಶೆಯನ್ನು ಬಿಟ್ಟು, ವಿರಕ್ತಿಯನ್ನು ತಾಳಿದನು. ಕೊನೆಗೆ ಬೌದ್ಧಧರ್ಮವನ್ನು ಸ್ವೀಕರಿಸಿ, ಅದನ್ನು ಭೂಲೋಕದ ನಾಲ್ಕು ದಿಕ್ಕುಗಳಿಗೂ ಪ್ರಚಾರಗೊಳಿಸ ಪ್ರಯತ್ನಿಸಿದನು. ಹಿಂದುಸ್ಥಾನದಲ್ಲಿ ಆತನ ಧರ್ಮೋಪದೇಶಕರು ಎಲ್ಲಾ ಕಡೆಗೂ ಸಂಚರಿಸಿ, ಬೌದ್ಧ ಧರ್ಮವನ್ನು ಬೋಧಿಸುತ್ತಿದ್ದರು. ಅವರಲ್ಲೊಬ್ಬನು ಬನವಾಸಿಗೂ ಬಂದು, ತುಳುವದಲ್ಲಿ ಪ್ರಚಾರಕ್ಕೆ ಕೈಹಾಕಿದ್ದನು.

ಅಶೋಕನ ಕಾಲದಲ್ಲಿ ಆತನ ಸಾಮ್ರಾಜ್ಯಕ್ಕೆ ಸೇರದ ರಾಷ್ಟ್ರಗಳನ್ನೆಲ್ಲಾ ಗಿರ್ನಾರಿನಲ್ಲಿರುವ ಅವನ ಶಿಲಾಲೇಖದಲ್ಲಿ ಕಾಣಿಸಿರುತ್ತದೆ. "ಚೋಡ ಪಂಡಿಯ

ಸತಿಯಪುತ್ರ ಕೇರಲಪುತ್ರ"ವೆಂದು ಆ ರಾಷ್ಟ್ರಗಳ ಹೆಸರು ಅಲ್ಲಿ ಕಾಣುತ್ತದೆ. ಸತಿಯಪುತ್ರವು ತುಳುವನಾಡಿನ ಆಗಿನ ಹೆಸರಿತ್ತೆಂದು ಈ ಮೊದಲೇ ಹೇಳಿದೆ.

ಹೀಗೆ ಜೈನ, ಬೌದ್ಧ ಧರ್ಮಗಳು ಕ್ರಿ. ಪೂ. ೨ನೇ ಶತಮಾನದ ಮೊದಲೇ ತುಳುವವನ್ನು ಪ್ರವೇಶಿಸಿದ್ದವು. ಆದರೆ ಆ ಧರ್ಮಗಳು ಆಗ ಇಲ್ಲಿಯ ಜನರಲ್ಲಿ ಪ್ರಬಲವಾದದ್ದೆಲ್ಲಿಯೂ ತೋರುವುದಿಲ್ಲ.

---

# ಅಧ್ಯಾಯ ೪

**೧. ಕ್ರೈಸ್ತ ಶಕ ಪ್ರಾರಂಭ—೨. ಗ್ರೀಕ್ ಪ್ರಹಸನ—೩. ಭೂತಾಳಪಾಂಡ್ಯನ ಕಥೆ ೪. ವಿದ್ಯುಮ್ನ ಪಾಂಡುರಾಯ ಮತ್ತು ಭೂತಪಾಂಡ್ಯರ ಕಥೆ— ೫. ಈ ಕಥೆಗಳ ಐತಿಹಾಸಿಕ ಬೆಲೆ—೬. ಅಳಿಯಕಟ್ಟು.**

## ೧. ಕ್ರೈಸ್ತ ಶಕ ಪ್ರಾರಂಭ

ಕ್ರೈಸ್ತ ಶಕ ಪ್ರಾರಂಭದ ಮೊದಲೇ ತುಳುನಾಡಿನಲ್ಲಿ ದ್ರಾವಿಡರು ಪ್ರಬಲರಾಗಿದ್ದರು. ಅವರು ಶಿವಭಕ್ತಿಯ ಹಿಂದುಗಳಾಗಿದ್ದರು. ಅವರಲ್ಲಿ ಸ್ತ್ರೀ ಮೂಲದ ಕುಟುಂಬಗಳೇ ಇದ್ದವು. ಅವರು ಬಲ್ಲಾಳರೆಂಬ ಪುಟ್ಟ ಅರಸರ ಕೈಕೆಳಗೆ ಅಲ್ಲಲ್ಲಿ ಪ್ರತ್ಯೇಕ, ಸ್ವತಂತ್ರ ಸೀಮೆಗಳನ್ನು ರಚಿಸಿಕೊಂಡು ಜೀವಿಸುತ್ತಿದ್ದರು.

ತುಳುವದ ಕರಾವಳಿ ಪ್ರದೇಶದಲ್ಲಿ ಪರದೇಶಗಳೊಡನೆ ಸಮುದ್ರದ್ವಾರಾ ವ್ಯಾಪಾರವು ನಡೆಯುತ್ತಿತ್ತು. ತುಳುನಾಡು ದಕ್ಷಿಣ ಹಿಂದೂದೇಶದ ಪಾಂಡ್ಯ ರಾಜ್ಯದೊಡನೆಯೂ ಈಜಿಪ್ಟು, ಗ್ರೀಸುಗಳೊಡನೆಯೂ ವ್ಯಾಪಾರ ಸಂಬಂಧಗಳನ್ನು ಬೆಳೆಸಿತ್ತು. ನಾಡಿಗೆ "ಸತಿಯಪುತ್ರ" ಎಂಬ ಹೆಸರು ಹೋಗಿ ತುಳುನಾಡೆಂಬ ಹೆಸರು ಬಂದಿತ್ತು.

ತುಳುವದೊಳಗೆ ಮೂಲನಿವಾಸಿಗಳಲ್ಲನೇಕರು ದ್ರಾವಿಡರಿಗೆ ಶರಣಾಗತರಾಗಿ ಅವರ ಸೇವೆಯ ಆಳಾಗಿ ಜೀವಿಸಿಕೊಂಡು ಬರುತ್ತಿದ್ದರು. ಆದರೆ ಅವರಲ್ಲಿ ಇನ್ನೂ ಅನೇಕರು ದ್ರಾವಿಡರಿಂದ ಪ್ರತ್ಯೇಕವಾಗಿ ಸ್ವಾತಂತ್ರ್ಯವನ್ನನುಭವಿಸಿಕೊಂಡಿರುತ್ತಿದ್ದರು.

ಕ್ರೈಸ್ತ ಶಕ ಪ್ರಾರಂಭದಲ್ಲಿಯೇ ತುಳುವದ ಕರಾವಳಿ ಪ್ರದೇಶದಲ್ಲಿ ದೇಶೀಯ ಪುಟ್ಟ ಅರಸುತನವೊಂದು ತಲೆದೋರಿತ್ತೆಂದು ಶ್ರೀ ಡಾಕ್ಟರ್ ಭಾಸ್ಕರ ಆನಂದ ಸಾಲೆತ್ತೂರರ ತುಳುವ ಚರಿತ್ರೆಯಿಂದ ಕಂಡುಬರುತ್ತದೆ.

## ೨. ಗ್ರೀಕ್ ಪ್ರಹಸನ

ಕ್ರೈಸ್ತ ಶಕ ೧೯೦೪ರಲ್ಲಿ ಈಜಿಪ್ಟಿನಲ್ಲಿ ಸಂಶೋಧಕರಿಗೆ ದೊರಕಿದ ಗ್ರೀಕ್ ಪ್ರಹಸನವೊಂದರಲ್ಲಿ ಹಲವು ಹಳೆಗನ್ನಡ ವಾಕ್ಯಗಳು ಕಾಣುತ್ತವೆ. ಆ ಪ್ರಹಸನವು ಕ್ರೈಸ್ತ ಶಕದ ೨ನೇ ಶತಮಾನಕ್ಕೆ ಸಂಬಂಧಿಸಿದ್ದೆಂದೂ ಅದರಲ್ಲಿ ವರ್ಣಿಸಿದ ಸಂಗತಿಗಳು ಮಲ್ಪೆಯ ಬಳಿ ಇರುವ ವಡಭಾಂಡೇಶ್ವರ ದೇವಸ್ಥಾನದ ಹತ್ತಿರ ನಡೆದವೆಂದೂ ಸಂಶೋಧಕರು ಕಂಡುಹಿಡಿದಿರುತ್ತಾರೆ. ಅದರ ಸಂಪೂರ್ಣ ವಿವರಗಳನ್ನು ಡಾಕ್ಟರ್ ಸಾಲೆತೊರರ ತುಳುವ ಚರಿತ್ರೆಯ ಪರಿಶಿಷ್ಟದಲ್ಲಿ ಓದ ಬಹುದು.

ಆ ಪ್ರಹಸನದ ಕಥೆಯಲ್ಲಿ ವಡಭಾಂಡೇಶ್ವರದ ಸಮೀಪ ಗ್ರೀಕರ ಒಂದು ಹಡಗು ಬಂದು, ಅದರಲ್ಲಿಯ ಜನರು ತೀರದಲ್ಲಿ ಇಳಿಯುತ್ತಾರೆ. ಅವರಲ್ಲಿ ಸ್ತ್ರೀಯೊಬ್ಬಳನ್ನು ಅಲ್ಲಿಯ ಅರಸನು ಹಿಡಿದು ಸೆರೆಯಲ್ಲಿಡುತ್ತಾನೆ. ಉಳಿದ ನಾವಿಕರು, ಸಮಯ ಸಾಧಿಸಿ,– ಅರಸನು ಬೇಟೆಯಾಡಿ ಮರಳುವಾಗ, ಅವನ ಉಪಚಾರವನ್ನು ಕೈಕೊಂಡು, ಅರಸನಿಗೂ ಆತನ ಪರಿವಾರಕ್ಕೂ ದ್ರಾಕ್ಷೆಯ ರಸವನ್ನು ಕುಡಿಸಿ, ಅವರು ಮತ್ತರಾಗಿ ಮಲಗಿದ ಬಳಿಕ, ತಮ್ಮ ಸ್ತ್ರೀಯನ್ನು ಬಿಡುಗಡೆ ಮಾಡಿಕೊಂಡು, ಹಡಗು ಹತ್ತಿ, ಪಲಾಯನರಾಗುತ್ತಾರೆ.

ಈ ಪ್ರಹಸನದ ಕಥೆಯಲ್ಲಿ ತುಳುವವ ಕುರಿತು ತಿಳಿಯುಬರುವ ಸಂಗತಿಗಳು ಕೆಲವಿವೆ. ಅರಸನೊಡನೆ ಕಾಡಿಗೆ ಬೇಟೆಯಾಡಲಿಕ್ಕೆ ಹೋದವರಲ್ಲಿ ಹೆಚ್ಚಿನವರು ಧನುರ್ಧಾರಿಗಳಾದ ಹೆಂಗಸರಾಗಿದ್ದರು. ಬೇಟೆಯಲ್ಲಿ ಸೇರಿದ ಗಂಡಸರಲ್ಲಿ ಒಬ್ಬನು ಮಲ್ಪೆಯ "ನಾಯಕ"ನಾಗಿದ್ದನು. ಸ್ತ್ರೀ ಪ್ರಾಮುಖ್ಯತೆಯು ತುಳುವದಲ್ಲಿ ಪ್ರಾಚೀನ ಕಾಲದಿಂದಲೂ ಇತ್ತೆಂಬುದಕ್ಕೆ ಸಂಶಯವಿಲ್ಲ. ಉದ್ಯಾವರವು ರಾಜಧಾನಿಯಾಗಿ, ತುಳುವವನ್ನು ಹಲವು ಶತಮಾನಗಳ ಕಾಲ ಆಳಿದ ಆಲೂಪರ ಆಳುವಿಕೆಯು ಕ್ರೈಸ್ತ ಶಕ ಎರಡನೇ ಶತಮಾನದಲ್ಲಿಯೇ ಉದ್ಯಾವರದ ಸುತ್ತಲಿರುವ ಪ್ರಾಂತ್ಯದಲ್ಲಿ ಪ್ರಾರಂಭವಾಗಿತ್ತೆಂದು ಈ ಪ್ರಹಸನ ಕಥೆಯಿಂದ ತೋರುತ್ತದೆ. ಪಾಶ್ಚಾತ್ಯ ದೇಶಗಳೊಡನೆ ವ್ಯಾಪಾರ ಸಂಬಂಧಗಳು ಮೊದಲೇ ಬೆಳೆದಿದ್ದವು. ನಗರಗಳಲ್ಲಿಯೂ ಬಂದರುಗಳಲ್ಲಿಯೂ "ನಾಯಕ"ರೆಂಬ ಅಧಿಕಾರಿಗಳು ಅರಸನ ಕೆಳಗೆ ಸ್ಥಳೀಯ ಸಂಗತಿಗಳ ಮೇಲ್ವಿಚಾರವನ್ನು ನೋಡುತ್ತಿದ್ದರು.

ಆದರೆ ಉದ್ಯಾವರ ಅರಸುತನವು ಆಗ ಹೆಚ್ಚು ವಿಸ್ತಾರವಾಗಿರಲಿಲ್ಲ. ತುಳುವಕ್ಕೆ ಗ್ರೀಕರು "ಆಳುವ ಖೇಡ"ವೆಂದು ಕರೆಯುತ್ತಿದ್ದರಾದ್ದರಿಂದ ಆಲೂಪರ (ಆಳುವರ) ರಾಜ್ಯವು ಕೆಲವೇ ನಗರ, ಹಳ್ಳಿಗಳನ್ನೊಳಗೊಂಡ ಸಣ್ಣ ಪ್ರಾಂತ್ಯವಾಗಿತ್ತೆಂದು ತೋರುತ್ತದೆ. ಆಳುವ ಖೇಡದ ಅರಸಿನ ಬಳಿಯಲ್ಲಿದ್ದವರು ಕನ್ನಡ ಭಾಷೆಯನ್ನಾಡುತ್ತಿದ್ದುದರಿಂದ ಅವರು ತುಳುವದ ದ್ರಾವಿಡ ಯಾ ಮೂಲನಿವಾಸಿಗಳ ವಂಶಗಳಿಗೆ ಸೇರಿದವರಲ್ಲವೆಂದೂ ಕರ್ಣಾಟಕದ ಸಂಬಂಧವು ತುಳುವಕ್ಕೆ ಆಗಲೇ ಪ್ರಾರಂಭಿಸಿತ್ತೆಂದೂ ಎಣಿಸಬೇಕಾಗಿದೆ. ಎರಡನೇ ಶತಮಾನದಲ್ಲಿ ತುಳುವದ ಬಸ್ರೂರು ಮತ್ತು ಮಂಗಳೂರು ಬಂದರುಗಳ ಪರಿಚಯವು ಈಜಿಪ್ಟಿನ ಜನರಿಗೂ ಗ್ರೀಕರಿಗೂ ಇತ್ತಾದ್ದರಿಂದ ತುಳುವಕ್ಕೂ ಪಾಶ್ಚಾತ್ಯ ದೇಶಗಳಿಗೂ ಆಗಲೇ ವ್ಯಾಪಾರ ಸಂಬಂಧವಿತ್ತೆಂದು ಎಣಿಸಲಿಕ್ಕೊಂದು ಕಾರಣವಾಗಿದೆ.

ಕರಾವಳಿಯನ್ನು ಬಿಟ್ಟು ಉಳಿದ ತುಳುವದ ಸಂಗತಿಗಳೇನೂ ಪಾಶ್ಚಾತ್ಯರಿಂದ ತಿಳಿದುಬರುವುದಿಲ್ಲ.

## ೩. ಭೂತಾಳಪಾಂಡ್ಯ

ತುಳುರಾಜ್ಯದಲ್ಲಿ ಅಳಿಯಸಂತಾನ ಕಟ್ಟನ್ನು ಸ್ಥಾಪಿಸಿದ ಭೂತಾಳಪಾಂಡ್ಯರಾಯನೆಂಬ ಅರಸನು ಕ್ರೈಸ್ತ ಶಕ ೭೮ರಲ್ಲಿ ಪಟ್ಟಕ್ಕೆ ಬಂದನೆಂದು "ಭೂತಾಳಪಾಂಡ್ಯರಾಯನ ಚರಿತ್ರೆ" ಎಂಬ ಸಂಸ್ಕೃತ ಗ್ರಂಥದಲ್ಲಿದೆಯಾಗಿ ಶ್ರೀ ಗಣಪತಿರಾವ್ ಐಗಳರು ಬರೆದ "ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ"ದಲ್ಲಿ ಕಾಣುತ್ತದೆ. ಕ್ರೈಸ್ತ ಶಕ ೧ನೇ ಶತಮಾನದಲ್ಲಿ ಭೂತಾಳಪಾಂಡ್ಯನು ಬಾರಕೂರಿನಲ್ಲಿ ಆಳುತ್ತಿದ್ದನೆಂಬುದರಲ್ಲಿ ಸಂಶಯವಿಲ್ಲವೆಂದು ಐಗಳರು ಬರೆಯುತ್ತಾರೆ. ಐಗಳರ ಪ್ರಾಚೀನ ಚರಿತ್ರೆಯಲ್ಲಿ ಭೂತಾಳಪಾಂಡ್ಯನ ವಂಶದವರಲ್ಲಿ ವಿದ್ಯುಮ್ನಪಾಂಡ್ಯನೆಂಬ ಭೂತಾಳಪಾಂಡ್ಯನ ಅಳಿಯನು ಕ್ರೈಸ್ತ ಶಕ ೧೪೮ರಿಂದ ೨೨೯ರ ತನಕವೂ ಆತನ ತರುವಾಯ ವೀರಪಾಂಡ್ಯ, ಚಿತ್ರವೀರ್ಯಪಾಂಡ್ಯ, ದೇವವೀರಪಾಂಡ್ಯ, ಬಲವೀರಪಾಂಡ್ಯ ಮತ್ತು ಜಯವೀರಪಾಂಡ್ಯರೆಂಬವರು ಕ್ರೈಸ್ತ ಶಕ ೩೪೩ರ ತನಕವೂ ಬಾರ್ಕೂರಿನಲ್ಲಿ ಆಳಿದರೆಂದು ಹೇಳಿದೆ. ಈ ಅರಸರ ಕೆಳಗೆ ಇದ್ದ ಹನ್ನೆರಡು ಬಲ್ಲಾಳರ ಮಾಗಣೆಗಳನ್ನು ನೋಡಿದರೆ ಈಗಿನ ಉಡುಪಿ, ಕಾರ್ಕಳ, ಮಂಗಳೂರು ತಾಲೂಕುಗಳು ಆ ಬಾರ್ಕೂರು ರಾಜ್ಯಕ್ಕೆ

ಸೇರಿದ್ದವೆಂದು ತೋರುತ್ತದೆ. ಜಯವೀರಪಾಂಡ್ಯನ ತರುವಾಯ ಭೂತಾಳ ಪಾಂಡ್ಯನ ವಂಶವು ನಾಶವಾಯಿತೆಂದು ಈ ವೃತ್ತಾಂತಗಳಿಂದ ತಿಳಿದು ಬರುತ್ತದೆ.

ಭೂತಾಳಪಾಂಡ್ಯನ ಹೆಸರು ತುಳುವರಲ್ಲಿ ಮೊದಲಿನಿಂದಲೂ ಜನಜನಿತ ವಾಗಿದೆ. ತುಳುವರಲ್ಲಿ ಹೆಚ್ಚಿನವರು ಆಚರಿಸಿ ಬರುವ ಅಳಿಯಸಂತಾನ ಕಟ್ಟನ್ನು ಭೂತಾಳಪಾಂಡ್ಯನು ನಿರ್ಮಿಸಿದ್ದೆಂದು ತುಳುವರ ನಂಬಿಕೆಯಾಗಿದೆ. ಆದರೆ ತುಳುವರೊಡನಿರುವ "ಗ್ರಾಮಪದ್ಧತಿ" ಗ್ರಂಥಗಳಲ್ಲಿ ಭೂತಾಳಪಾಂಡ್ಯನ ಚರಿತ್ರೆ ಯನ್ನು ಒಂದೇ ರೀತಿ ಹೇಳಿರುವುದಿಲ್ಲ. ಭೂತಾಳಪಾಂಡ್ಯನ ಕಥೆಯ ಸಾರಾಂಶ ವನ್ನು ಶ್ರೀ ಐಗಳರು ತಮ್ಮ "ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ" ದಲ್ಲಿಯೂ ಶ್ರೀ ಅಮ್ಮುಣಜೆ ಶ್ರೀನಿವಾಸ ಹೆಗ್ಡೆಯವರು ತಮ್ಮ "ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳಪಾಂಡ್ಯರಾಯನ ಕಟ್ಟು" ಎಂಬ ಗ್ರಂಥ ದಲ್ಲಿಯೂ ಕೊಟ್ಟಿರುತ್ತಾರೆ.

ಪ್ರಾಚೀನ ಕಾಲದಲ್ಲಿ ಬಾರಕೂರಿನಲ್ಲಿ "ಲೋಕಾದಿತ್ಯ ಮಯೂರವರ್ಮ" ನೆಂಬ ಅರಸನು ತನ್ನ ರಾಜ್ಯವನ್ನು ಸ್ಥಾಪಿಸಿದನು. ಆತನ ವಂಶದಲ್ಲಿ ಒಂಭತ್ತು ಅರಸರು ಆಳಿದ ಬಳಿಕ ವೀರವರ್ಮನು ಸಿಂಹಾಸನಾಧಿಕಾರಿಯಾದನು. ಆದರೆ ಆತನು ಸಿಂಹಾಸನವನ್ನೇರುವಾಗ, ಕುಟಶಾದ್ರಿ ಋಷಿಯ ಶಾಪದಿಂದ ತನ್ನ ಕುಟುಂಬ ಪರಿವಾರಗಳ ಸಹಿತ ಸುಟ್ಟು ಭಸ್ಮೀಭೂತನಾದನು. ಬಾರಕೂರಿನ ಸಿಂಹಾಸನವು ಆತನ ಬಳಿಕ ಕೆಲವು ಕಾಲ ಬರಿದಾಗಿ ಇತ್ತು.

ಅತ್ತ ಪಾಂಡ್ಯದೇಶದಲ್ಲಿ ಜಯಪಾಂಡ್ಯನೆಂಬ ಅರಸನು ಆಳುತ್ತಿದ್ದನು. ಆತನಿಗೆ ಅಗ್ನಿಕೇತು, ಶಿಖಿಕೇತು, ಶಿವರ್ಮ ಮತ್ತು ಭೂತಪಾಂಡ್ಯನೆಂಬ ನಾಲ್ಕು ಜನ ಮಕ್ಕಳಿದ್ದರು. ಭೂತಪಾಂಡ್ಯನು 'ಕುಂಡೋದರ'ನೆಂಬ ಪ್ರಮಥ ಗಣವನ್ನು ಆರಾಧಿಸುತ್ತಿದ್ದನು. ಜಯಪಾಂಡ್ಯನ ಬಳಿಕ ಆತನ ಹಿರಿಯ ಮಗನಾದ ಅಗ್ನಿಕೇತುವೂ, ಅಗ್ನಿಕೇತುವಿನ ಬಳಿಕ ಅವನ ಮಗನಾದ ಸೌಮ್ಯವೀರ ಪಾಂಡ್ಯನೆಂಬವನೂ ಸಿಂಹಾಸನವನ್ನೇರಿದರು. ಸೌಮ್ಯವೀರ ಪಾಂಡ್ಯನ ಕಾಲದಲ್ಲಿ ಬಾರಕೂರಿನಲ್ಲಿ ಮಯೂರವರ್ಮನ ವಂಶದ ಚಂದ್ರಾಂಗ ದನು ಆಳುತ್ತಿದ್ದನು. ಅವನು ಎರಡು ಸಲ ಪಾಂಡ್ಯದೇಶದ ಮೇಲೆ ದಂಡೆತ್ತಿ ಹೋಗಿ, ಸೌಮ್ಯವೀರ ಪಾಂಡ್ಯನನ್ನು ಜೈಸಿದನು. ಸೌಮ್ಯವೀರ ಪಾಂಡ್ಯನು ಅದರ ಬಳಿಕ, ತನ್ನ ಪತ್ನಿಯಾದ ಸತ್ಯವತಿಯನ್ನೂ ಐದು ವರ್ಷದ 'ಜಯ'ನೆಂಬ

ತನ್ನ ಬಾಲಕನನ್ನೂ ಕೂಡಿಕೊಂಡು ಪಾಂಡ್ಯರಾಜ್ಯದ ಹೊರಗಿದ್ದ 'ಸುಖ'ವೆಂಬ ಗ್ರಾಮಕ್ಕೆ ಹೋಗಿ ಅಲ್ಲಿ ಜೀವಿಸುತ್ತಿದ್ದನು.

ಪಾಂಡ್ಯದೇಶದಲ್ಲಿ ಸತ್ಯವತಿಯ ಅಣ್ಣನಾದ ದೇವಪಾಂಡ್ಯನೆಂಬ ಕೋಟ್ಯಾಧೀಶನಿದ್ದನು. ಅವನಿಗೆ ಹೊರಗಣ ದೇಶಗಳೊಡನೆ ಸಮುದ್ರದ್ವಾರಾ ವ್ಯಾಪಾರ ಸಂಬಂಧವಿತ್ತು. ಆತನು ತನ್ನ ವ್ಯಾಪಾರಕ್ಕಾಗಿ ದೊಡ್ಡದೊಂದು ಹಡಗನ್ನು ಕಟ್ಟಿಸಲಿಕ್ಕೆ ನಿಶ್ಚೈಸಿ, ಶಿಲ್ಪಿಗಳನ್ನು ತರಿಸಿ, ಹಡಗಿಗೆ ಬೇಕಾದ ಮರಗಳನ್ನು ಕಡಿಸಿದನು. ಆ ಮರಗಳ ಪೈಕಿ ಒಂದು ಮರದಲ್ಲಿ ಕುಂಡೋದರನು ವಾಸವಾಗಿದ್ದನು. ಹಡಗು ತಯಾರಾಗಿ, ಅದರಲ್ಲಿ ಲಕ್ಷಾಂತರ ರೂಪಾಯಿಗಳ ಸರಕುಗಳನ್ನು ತುಂಬಿಸಿ, ಅದನ್ನು ವಿಜೃಂಭಣೆಯಿಂದ ಸಮುದ್ರಕ್ಕೆ ಇಳಿಸುವಾಗ ಹಡಗಿನ ಒಳಗಿನಿಂದ ಕುಂಡೋದರನು ಭಯಂಕರವಾದ ಗರ್ಜನೆಯನ್ನು ಮಾಡಿ ತನಗೆ ನರಾಹುತಿಯನ್ನು ಕೊಡದೆ ಹಡಗವನ್ನು ಚಲಿಸಲಿಕ್ಕೆ ಬಿಡುವುದಿಲ್ಲವೆಂದು ಹೆದರಿಸಿದನು. ಆಗ ಕೂಡಿದ ಜನರೆಲ್ಲರೂ ದಿಕ್ಕುದಿಕ್ಕಿಗೆ ಓಡಿಹೋದರು. ದೇವಪಾಂಡ್ಯನು ಬೇರೆ ದಾರಿಯೇನೂ ತೋರದೆ, ತನ್ನ ಏಳು ಜನ ಮಕ್ಕಳಲ್ಲಿ ಒಬ್ಬನನ್ನು ಕುಂಡೋದರನಿಗೆ ಬಲಿಕೊಡುವುದೆಂತ ನಿಶ್ಚೈಸಿ, ತನ್ನ ಪತ್ನಿಯಾದ ಶಿವದೇವಿಯೊಡನೆ ಆ ಪ್ರಸ್ತಾಪವನ್ನೆತ್ತಿದನು. ಶಿವದೇವಿಯು ಅವನ ಮಾತಿಗೆ ಒಪ್ಪಲಿಲ್ಲ. ಗಂಡನ ಬದುಕು ಭಾಗ್ಯಗಳು ಇಲ್ಲದಿದ್ದರೂ ಚಿಂತೆಯಿಲ್ಲ; ಮಕ್ಕಳಿದ್ದರೆ ಎಲ್ಲಿಯಾದರೂ ಕೂಲಿಕೆಲಸಮಾಡಿಕೊಂಡಿರಬಹುದೆಂದು ಹೇಳಿ, ಮಕ್ಕಳ ಸಹಿತ ತನ್ನ ತಾಯಿಯ ಮನೆಗೆ ಹೊರಟುಹೋದಳು. ದೇವಪಾಂಡ್ಯನು ಖಿನ್ನನಾಗಿ ಬಿದ್ದಿರುವ ಸಮಯ, ಆ ಸಮಾಚಾರವನ್ನು ಆತನ ತಂಗಿಯಾದ ಸತ್ಯವತಿಯು ಕೇಳಿ, ಗಂಡನಾದ ಸೌಮ್ಯವೀರ ಪಾಂಡ್ಯನ ಅನುಮತಿಯನ್ನು ಪಡೆದು, ತನ್ನ ಮಗನಾದ 'ಜಯ'ನನ್ನು ಕೂಡಿಕೊಂಡು, ಅಣ್ಣನಿದ್ದಲ್ಲಿಗೆ ಬಂದಳು. ಅಣ್ಣನ ದುಃಖವನ್ನು ನೋಡಿ, ತನ್ನ ಮಗನಾದ ಜಯನನ್ನು ಬಲಿಕೊಡುವುದಕ್ಕೆ ಆತನಿಗೆ ಹೇಳಿದಳು. ದೇವಪಾಂಡ್ಯನು ಆ ಮಾತಿಗೆ ಮೊದಲು ಒಡಂಬಡದಿದ್ದರೂ, ಕೊನೆಗೆ ಒಪ್ಪಿ, ಜಯನನ್ನು ಬಲಿಕೊಡಲಿಕ್ಕಾಗಿ ಹಡಗಿಗೆ ಪ್ರದಕ್ಷಿಣೆ ಬರುವಾಗ, ಕುಂಡೋದರನು ಆ ಬಾಲಕನನ್ನು ಕಂಡು ಆತನು ತನ್ನ ಆರಾಧಕನಾದ ಭೂತ ಪಾಂಡ್ಯನ ವಂಶದವನೆಂದು ತಿಳಿದು, ದೇವಪಾಂಡ್ಯನಿಗೆ ಪ್ರತ್ಯಕ್ಷನಾಗಿ, ತನಗೆ ನರಬಲಿಯು ಅಗತ್ಯವಿಲ್ಲವೆಂದು ಹೇಳಿ ಅಂತರ್ಧಾನನಾದನು. ಹಡಗು ಅದರ ಬಳಿಕ ಸರಾಗವಾಗಿ ಸಮುದ್ರಕ್ಕಿಳಿಯಿತು. ಕುಂಡೋದರನು ಜಯನನ್ನು

ಬಾರ್ಕೂರಿಗೆ ಕೊಂಡುಹೋಗಿ, ಆತನಿಗೆ ಆ ರಾಜ್ಯದ ಪಟ್ಟಾಭಿಷೇಕವನ್ನು ಮಾಡಿಸಿದನು. ಜಯಪಾಂಡ್ಯನಿಗೆ ಸರಿಯಾದ ಸಿಂಹಾಸನವು ಬಾರಕೂರಿನಲ್ಲಿಲ್ಲದ್ದರಿಂದ ಕುಂಡೋದರನು ಉಜ್ಜಯಿನೀ ಪಟ್ಟಣಕ್ಕೆ ಹೋಗಿ, ಅಲ್ಲಿಂದ ವಿಕ್ರಮಾದಿತ್ಯನ ಸಿಂಹಾಸನವನ್ನು ತಂದುಕೊಟ್ಟನು. ಕುಂಡೋದರನ ಆಜ್ಞೆಯ ಪ್ರಕಾರ ಜಯಪಾಂಡ್ಯನು ಆ ಬಳಿಕ 'ಭೂತಾಳಪಾಂಡ್ಯ'ನೆಂಬ ಹೆಸರಿಟ್ಟು ಕೊಂಡು ತುಳು, ಮಲೆಯಾಳ, ಹೈಗ, ಕರ್ಣಾಟಕ ದೇಶಗಳಿಗೊಡೆಯನಾಗಿ ಶಾಲಿವಾಹನ ಶಕಾದಿ ವರ್ಷ (ಕ್ರೈಸ್ತ ಶಕ ೭೮) ದಿಂದ ವಾರಕೂಲ (ಬಾರ್ಕೂರು, ಜಯಂತಿಕಾ) ನಗರದಲ್ಲಿ ಆಳತೊಡಗಿದನು.

ಅವನು ಆಳತೊಡಗಿದ ಆರು ವರ್ಷಗಳಲ್ಲಿ ಆತನ ಮಾವನಾದ ದೇವಪಾಂಡ್ಯನ ಹಡಗುಗಳು ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಒಡವೆವಸ್ತುಗಳನ್ನು ತುಂಬಿಸಿಕೊಂಡು, ಪರದೇಶಗಳಿಂದ ಮರಳಿ ಬಾರಕೂರಿಗೆ ಮುಟ್ಟಿದವು. ಭೂತಾಳಪಾಂಡ್ಯನು ಪಾಂಡ್ಯದೇಶಕ್ಕೆ ಚಾರಕರನ್ನು ಕಳುಹಿಸಿ, ಆ ವರ್ತಮಾನವನ್ನು ದೇವಪಾಂಡ್ಯನಿಗೆ ತಿಳಿಸಿದ ಬಳಿಕ-ದೇವಪಾಂಡ್ಯನು ಅಲ್ಲಿಗೆ ಬಂದು, ಆ ಹಡಗು ಸಾಮಾನುಗಳನ್ನು ಒಯ್ಯಲಿಕ್ಕೆ ತೊಡಗುವಾಗ, ಕುಂಡೋದರನು ತನಗೆ ದೇವಪಾಂಡ್ಯನ ಮಕ್ಕಳಲ್ಲೊಬ್ಬನನ್ನು ಆಹುತಿಯಾಗಿ ಕೊಡದೆ, ಅವುಗಳನ್ನು ಬಿಟ್ಟುಕೊಡಲಾರೆನೆಂದು ಹೇಳಿದನು. ಆಗ ದೇವಪಾಂಡ್ಯನು ತೌರುಮನೆಯಲ್ಲಿದ್ದ ತನ್ನ ಹೆಂಡತಿಯಾದ ಶಿವದೇವಿಯನ್ನು ಅಲ್ಲಿ ಕರೆಸಿ, ಅವಳೊಡನೆ ಆ ಸಂಗತಿಗಳನ್ನೆಲ್ಲಾ ಹೇಳಿದನು. ಆಗ ಶಿವದೇವಿಯು ಸಕಲ ಜನರ ಮುಂದೆ ತನಗೆ ಗಂಡನ ಒಡವೆವಸ್ತುಗಳಲ್ಲಿ ಹಕ್ಕಿಲ್ಲವೆಂದೂ – ತನ್ನ ಮಕ್ಕಳನ್ನು ಎಷ್ಟು ಮಾತ್ರಕ್ಕೂ ಕೊಡಲಾರೆನೆಂದೂ ಹೇಳಿ, ರಾಜಸಭೆಯಿಂದ ಇಳಿದು ಹೋದಳು. ಅವಳು ಹೋದ ಬಳಿಕ, ಭೂತಾಳಪಾಂಡ್ಯರಾಯನು ತನ್ನ ಕೆಳಗಿರುವ ಸಮಸ್ತ ಸಾಮಂತರಾಜರು, ಸಾಹುಕಾರರು, ಬ್ರಾಹ್ಮಣಾದಿ ಚತುರ್ವರ್ಣದವರನ್ನೆಲ್ಲಾ ಆಮಂತ್ರಿಸಿ ದೊಡ್ಡ ಸಭೆಯನ್ನು ಕೂಡಿಸಿದನು. ಕೂಡಿದ ಸಭಿಕರಿಗೆ ಶಿವದೇವಿಯ ಹಿಂದಿನ ಮತ್ತು ಆಗಿನ ನಡತೆಯನ್ನೂ ತನ್ನ ಸ್ವಂತ ಚರಿತ್ರೆಯನ್ನೂ ವಿವರವಾಗಿ ತಿಳಿಸಿ, ದೇವಪಾಂಡ್ಯನ ಹಡಗುಗಳಲ್ಲಿರುವ ಒಡವೆವಸ್ತುಗಳಿಗೆ ಯಾರು ಬಾಧ್ಯರೆಂದು ನಿಶ್ಚೈಸಬೇಕಾಗಿ ಅವರೊಡನೆ ಬೇಡಿದನು. ಸಮಸ್ತರೂ ಅವುಗಳಿಗೆ ಭೂತಾಳಪಾಂಡ್ಯನೇ ಹಕ್ಕುದಾರನೆಂದು ನಿಶ್ಚೈಸಿದರು. ಭೂತಾಳಪಾಂಡ್ಯನು ಆ ಬಳಿಕ ಆ ಒಡವೆವಸ್ತುಗಳನ್ನು ಸ್ವೀಕರಿಸಿ, ಕುಂಡೋದರನಿಗೆ

ಬಗೆಬಗೆಯಿಂದ ಪೂಜಿಸಿದನು. ಕುಂಡೋದರನು ಪ್ರತ್ಯಕ್ಷನಾಗಿ ಅಲ್ಲಿ ಕೂಡಿದ ಎಲ್ಲಾ ಜನರಿಗೂ ಇನ್ನುಮುಂದೆ ಮಕ್ಕಳಸಂತಾನದ ಕಟ್ಟನ್ನು ಬಿಟ್ಟು, ಅಳಿಯ ಸಂತಾನದ ಕಟ್ಟಿನಲ್ಲಿ ನಡಿಯಬೇಕೆಂದು ಆಜ್ಞಾಪಿಸಿದನು. ಅವರು ಅದಕ್ಕೊಪ್ಪಿ, ಅಳಿಯಸಂತಾನಕ್ಕೆ ಸರಿಯಾಗಿ ಹದಿನಾಲ್ಕು ಕಟ್ಟು ಹದಿನಾರು ಕಟ್ಟಳೆಗಳನ್ನು ಬರೆಸಿ, ಆ ಕಟ್ಟು ಕಟ್ಟಳೆಗಳಿಗೆ ಮೀರಿ ನಡೆಯುವವನ ಭಾಗ್ಯಾರೋಗ್ಯಗಳು ಕೆಟ್ಟುಹೋಗಿ ನಿಸ್ಸಂತತಿಯಾಗಲೆಂದು ದೇವರೊಡನೆ ಪ್ರಾರ್ಥಿಸಿ ಆ ಕಟ್ಟು ಕಟ್ಟಳೆಗಳನ್ನು ಅನಂತೇಶ್ವರ ದೇವರ ಮಧ್ಯಮಂಟಪದಲ್ಲಿ ಸ್ಥಾಪನೆಮಾಡಿದರು.

ಭೂತಾಳಪಾಂಡ್ಯರಾಯನ ಕಟ್ಟು ಕಟ್ಟಳೆಗಳ ವಿವರಗಳನ್ನು ಶ್ರೀ ಅ. ಶ್ರೀನಿವಾಸ ಹೆಗ್ಡೆಯವರು ತಮ್ಮ ಗ್ರಂಥದಲ್ಲಿ ಕೊಟ್ಟಿದ್ದಾರೆ.

ಕಟ್ಟುಗಳು:— ೧ ಜಾತಿ, ೨ ನೀತಿ, ೩ ಮಾನ, ೪ ಮರ್ಯಾದೆ, ೫ ಹುಟ್ಟು, ೬ ಕಟ್ಟು, ೭ ಹಿಂದೆ, ೮ ಮುಂದೆ, ೯ ಹೆಚ್ಚು, ೧೦ ಕಮ್ಮಿ, ೧೧ ಬಳಿ, ೧೨ ಬಣ್ಣ, ೧೩ ಅಳಿ, ೧೪ ಉಳಿ – ಇವುಗಳಾಗಿವೆ.

೧ನೇ ಜಾತಿ. ಇದರಲ್ಲಿ ೪೨ ಜಾತಿಗಳ ವಿವರ ಕೊಟ್ಟಿದೆ.

| | | |
|---|---|---|
| ೧. ಬ್ರಾಹ್ಮಣರು | ೧೫. ನಾಲಗದವರು | ೨೯. ಕ್ಷೌರಿಕ |
| ೨. ಕ್ಷತ್ರಿಯರು | ೧೬. ಬೋವಿಯರು | ೩೦. ಹಳೇಪೈಕ (ಬಿಲ್ಲವ) |
| ೩. ಜೈನರು | ೧೭. ದೇವಡಿಗರು | ೩೧. ಹಳೇಪೈಕ ಹಜಾಮ |
| ೪. ಜೈನ ಬಲ್ಲಾಳರು | ೧೮. ಸಪಲ್ಯರು | ೩೨. ಕಲೆಮುಗರ |
| ೫. ಮಾಸಾದಿಕ ಜೈನರು | ೧೯. ಪದಾರ್ತಿ | ೩೩. ಫಲಮುಗರ |
| ೬. ಮಾಸಾದಿಕ ಹೆಗ್ಗಡೆರು | ೨೦. ಪೊದುವಾಳ | ೩೪. ಮುಗರ |
| ೭. ತುಳುವರು | ೨೧. ಪಾತ್ರಿಮೇಳ | ೩೫. ಪಂಬದ |
| ೮. ಹರಿಶೆಟ್ಟರು | ೨೨. ಕುಂಬಾರ | ೩೬. ಪರವ |
| ೯. ಮಲವರು | ೨೩. ಕನ್ನಡರು | ೩೭. ನಲ್ಕೆ |
| ೧೦. ನಾಯಿಮಾರರು | ೨೪. ಕಮ್ಮಾರ | ೩೮. ಮುಂಡಾಲ |
| ೧೧. ನಾಯರರು | ೨೫. ಕಂಚುಗಾರ | ೩೯. ಮಾರಿಹೊಲೆಯ |
| ೧೨. ಪರಿವಾರದವರು | ೨೬. ಸಾಲಿಯ | ೪೦. ಅಂಡೆಕೊರಗ |
| ೧೩. ನಾಡುಗೌಡರು | ೨೭. ಮಲೆಕುಡಿಯ | ೪೧. ತೊಂಡೆಕೊರಗ |
| ೧೪. ಮಲೆಯಾಳರು | ೨೮. ಅಗಸ | ೪೨. ಉಡಿಕೊರಗ |

೫ನೇ ಪುಟ್ಟಿನಲ್ಲಿ ಮೇಲೆ ಹೇಳಿದ ಜಾತಿಯವರು ಮಕ್ಕಳಕಟ್ಟು ಆಚರಿಸು ತ್ತಿದ್ದವರೆಂದೂ ೬ನೇ ಕಟ್ಟಿನಲ್ಲಿ ಅವರೆಲ್ಲರೂ ಇನ್ನುಮುಂದೆ ಆಚಂದ್ರಾರ್ಕ ಅಳಿಯಕಟ್ಟನ್ನು ಆಚರಿಸಬೇಕೆಂದೂ ಇದೆ. ಪಾಪಪುಣ್ಯ, ಕೀರ್ತಿಅಪಕೀರ್ತಿ, ಸೂತಕಪಾತಕಗಳು ಸತ್ತವನ ಹೆಂಡತಿಮಕ್ಕಳಿಗೂ – ಬದುಕು ಅವನ ಅಳಿಯ ಮೊದಲಾದ ಕುಟುಂಬದವರಿಗೂ ಸಲ್ಲತಕ್ಕದ್ದೆಂದು ಕಾಣಿಸಿಯದೆ.

ಜಾತಿ ನೀತಿಯೆಂದರೆ ಆಯಾಯ ಜಾತಿಯ ಕರ್ತವ್ಯಗಳು; ಮಾನ ಮರ್ಯಾದೆಯೆಂದರೆ ಆಯಾಯ ಜಾತಿಗೆ ಸಲ್ಲಬೇಕಾದ ಸಾಮಕೀರ್ತಿಗಳೂ ಮರ್ಯಾದೆಗಳು; ಹುಟ್ಟು ಕಟ್ಟು ಅಂದರೆ ಮೇಲೆ ಹೇಳಿದಂತೆ ಮಕ್ಕಳಕಟ್ಟನ್ನು ರದ್ದುಪಡಿಸಿ ಅಳಿಯಕಟ್ಟನ್ನು ವಿಧಿಸಿದ್ದು; ಹಿಂದೆ ಮುಂದೆ ಅಂದರೆ ವಿವಾಹ, ಹೆರಿಗೆ, ಮರಣದ ಸಂದರ್ಭಗಳಲ್ಲಿ ಮಾಡಬೇಕಾದ್ದು; ಹೆಚ್ಚು ಕಮ್ಮಿಯೆಂದರೆ ಮೇಲು ಹೀನ ಜಾತಿಯವರ ವಿಚಾರ; ಬಳಿ ಬಣ್ಣವೆಂದರೆ ಅಳಿಯಸಂತಾನಕ್ಕೆ ಸೇರಿದ ಗೋತ್ರದವರಿಗೆ ಬಳಿಯೆಂಬ ಗೋತ್ರವನ್ನು ನಿಶ್ಚೈಸಿದ್ದು; ಅಳಿ, ಉಳಿ ಯೆಂದರೆ ಕುಟುಂಬಗಳು ಅಳಿದರೆ ಉಳಿದವರಿಗೆ ಬದುಕಿನ ಕುರಿತು ಇರುವ ಹಕ್ಕು ಬಾಧ್ಯತೆಗಳು.

ಭೂತಾಳಪಾಂಡ್ಯನು ಅಳಿಯಕಟ್ಟಿನವರಿಗೆ ಬ್ರಾಹ್ಮಣರ ಮೂಲಕ ವಿವಾಹ ವಾಗಲಿ ಪುಣ್ಯಾರ್ಚನೆಗಳಾಗಲಿ ಕೂಡದೆಂದು ವಿಧಿಸಿರುತ್ತಾನೆ.

## ಹದಿನಾರು ಕಟ್ಟಳೆಗಳು

ಇವುಗಳಲ್ಲಿ ಯಾವ ಯಾವ ಜಾತಿಗಳಲ್ಲಿ ವಿವಾಹ ವಿಧಿಗಳು ಹೇಗೆ ನಡೆಯಬೇಕು, ವಿವಾಹವಿಲ್ಲದೆ ಗರ್ಭವತಿಯಾದ ಹೆಂಗಸರ ಕುರಿತು ಏನು ಮಾಡಬೇಕು, ಸಂತತಿಯಿಲ್ಲದೆ ಗಂಡಸತ್ತ ವಿಧವೆಗಳ ಗತಿಯೇನು–ಎಂಬ ಎಲ್ಲಾ ಕುರಿತು ವಿವರಗಳಿವೆ.

## ಭೂತಾಳಪಾಂಡ್ಯನ ವಿವಾಹ

ಈ ಕಟ್ಟು ಕಟ್ಟಳೆಗಳ ಕಾರ್ಯಗಳೆಲ್ಲಾ ತೀರಿದ ಬಳಿಕ, ಭೂತಾಳ ಪಾಂಡ್ಯನು ಘಟ್ಟದ ಮೇಲಿರುವ ಜೈನ ಮುಖಂಡರಾದ ಕೇಶವಣ್ಣನವರ ೬, ಬಸವಣ್ಣನವರ ೬ – ಹೀಗೆ ಒಟ್ಟಿಗೆ ಹನ್ನೆರಡು ಹೆಣ್ಣು ಮಕ್ಕಳನ್ನು ತರಿಸಿ ಅವರ ನ್ನೆಲ್ಲಾ ಒಂದೇ ಮುಹೂರ್ತದಲ್ಲಿ ಮದುವೆಯಾದನು. ಆ ಹನ್ನೆರಡು ಅರಸಿ ಗಳಲ್ಲಿಯೂ ಅವನಿಗೆ ಹೆಣ್ಣು, ಗಂಡು, ಮಕ್ಕಳು ಸರಿಯಾಗಿ ಹುಟ್ಟಿ, ಪ್ರಾಯ

ಭೀತರಾಗಲು, ಅವರಿಗೆ ಸಂಸ್ಥಾನಗಳನ್ನು ವಿಂಗಡಿಸಿಕೊಟ್ಟು, ೭೪ ವರ್ಷ ರಾಜ್ಯಭಾರ ಮಾಡಿ, ಆ ಮೇಲೆ ತನ್ನ ಅಳಿಯ ವಿದ್ಯುವನ್ನ ಪಾಂಡ್ಯನಿಗೆ ಪಟ್ಟಕಟ್ಟಿ ತಾನು ಜಿನಧರ್ಮಾನುಸಾರವಾಗಿ ಅರಣ್ಯಕ್ಕೆ ತಪಸ್ಸಿಗೆ ಹೋದನು.

## ೪. ವಿದ್ಯುವನ್ನ ಪಾಂಡುರಾಯ, ಭೂತಪಾಂಡ್ಯರ ಕಥೆ

ವಿದ್ಯುವನ್ನ ಪಾಂಡುರಾಯನು ಮಾವನಂತೆಯೇ ರಾಜ್ಯ ಪರಿಪಾಲಿಸಿಕೊಂಡು, ತನ್ನ ಮಾವನ ಮಕ್ಕಳ ಪೈಕಿ ಆರು ಕನ್ನಿಕೆಯರನ್ನೂ ಬೇರೆ ಆರು ಕನ್ನಿಕೆಯರನ್ನೂ ಏಕಕಾಲದಲ್ಲಿ ವಿವಾಹಮಾಡಿಕೊಂಡನು. ನಂತರ ಆ ವಾರಕೂಲವೆಂದು ಹೆಸರಿದ್ದ ನಗರಕ್ಕೆ ಬಾರಕನ್ಯಾಪುರವೆಂಬ ಹೆಸರನ್ನಿಟ್ಟನು. ತನ್ನ ಹನ್ನೆರಡು ಮಂದಿ ರಾಣಿಯರ ೧೨ ಮಕ್ಕಳಿಗೆ ತನ್ನ ರಾಜ್ಯದಲ್ಲಿ ಒಂದೊಂದು ಮಾಗಣೆಯನ್ನು ಬಿಟ್ಟುಕೊಟ್ಟು, ಅವರನ್ನು ೧೨ ಮಂದಿ ಬಲ್ಲಾಳರಾಗಿ ಮಾಡಿದನು.

ವಿದ್ಯುವನ್ನ ಪಾಂಡುರಾಯನು ಕ್ರಿ. ಶ. ೨೪೯ರಲ್ಲಿ ಕಾಲವಾದನು. ಆತನ ತರುವಾಯ ಐದು ಜನರು ಆಳಿದ ಮೇಲೆ ಆ ವಂಶವು ಕ್ರಿ. ಶ. ೩೪೩ರಲ್ಲಿ ನಾಶವಾಯಿತು. ಆ ಮೇಲೆ ಸಿದ್ಧಪಾಂಡ್ಯನೆಂಬ ಮಾಸಾದಿಕ ಜೈನ ಜಾತಿಯ(ಬಂಟ)ವನು ಕುಂಡೋದರನನ್ನು ಒಲಿಸಿ, ಭೂತಪಾಂಡ್ಯನೆಂಬ ಹೆಸರಿನಿಂದ ಪಟ್ಟವೇರಿದನು. ಅವನು ಭೂತಾಳಪಾಂಡ್ಯನು ನೇಮಿಸಿದ ಸಂಸ್ಥಾನಾಧಿಪತಿಗಳಿಗೆ ಅವರ ಗಡಿಗಳನ್ನು ವಿಂಗಡಿಸಿಕೊಟ್ಟನು. ಬಾರ್ಕೂರಾಧಿಪತಿಗಳಾದ ಪುತ್ತಿಗೆ ಚೌಟರ ಸಂಸ್ಥಾನಕ್ಕೆ ೭೪ ಮಾಗಣೆಗಳನ್ನೂ, ಮಂಗಳೂರಾಧಿಪತಿ ನಂದಾವರ ಬಂಗರಿಗೆ ೭೨ ಮಾಗಣೆಗಳನ್ನೂ ನಿಶ್ಚೈಸಿ, ಚೌಟರ ಸಂಸ್ಥಾನಕ್ಕೆ ೧೩, ಬಂಗರ ಸಂಸ್ಥಾನಕ್ಕೆ ೧೦ ಒಳ ಅರಸುಗಳನ್ನು ವಿಂಗಡಿಸಿದನು.

ಭೂತಪಾಂಡ್ಯನು ಸತ್ಯನೀತಿಯಿಂದ ರಾಜ್ಯವಾಳಿ, ಕ್ರಿ. ಶ. ೪೨೩ರಲ್ಲಿ ಕಾಲಾಧೀನನಾದನು. ಅವನ ಬಳಿಕ ಬದ್ದದಾಸಪಾಂಡ್ಯನೂ ಅವನ ಸೊಸೆಯಾದ 'ಹಳ್ಳಿ' ಎಂಬವಳೂ ೧೧೭ ವರ್ಷ ಆಳಿ ಕಾಲವಾದರು. ಅವರ ಬಳಿಕ ಆ ಸಂಸ್ಥಾನವು ನಿರ್ನಾಮವಾಗಿ ಹೋಯಿತು.

ಹೀಗೆ ಬಾರ್ಕೂರಿನಲ್ಲಿ ಕ್ರಿ. ಶ. ಸುಮಾರು ೭೮೦ರಿಂದ ೫೪೦ರ ತನಕ ಭೂತಾಳಪಾಂಡ್ಯ, ಭೂತಪಾಂಡ್ಯರ ವಂಶಗಳು ಆಳುತ್ತಿದ್ದವೆಂದು ಈ ವೃತ್ತಾಂತಗಳು ಹೇಳುತ್ತವೆ.

## ೫. ಭೂತಾಳಪಾಂಡ್ಯ, ಭೂತಪಾಂಡ್ಯರ ಕಥೆಗಳ ಐತಿಹಾಸಿಕ ಬೆಲೆ

ಆದರೆ ಈ ಕಥೆಗಳು ಪರಶುರಾಮನ ಕಥೆಯಂತೆ ಐತಿಹಾಸಿಕ ಸಂಗತಿಗಳನ್ನು ಸೂಚಿಸುವ ಪುರಾಣಕಥೆಗಳಲ್ಲದೆ, ನಿಜವಾಗಿ ನಡೆದ ವೃತ್ತಾಂತಗಳಲ್ಲವೆಂದು ಡಾಕ್ಟರ್ ಸಾಲೆತ್ತೂರರೂ ಇತರರೂ ಅಭಿಪ್ರಾಯಪಡುತ್ತಾರೆ.

ಭೂತಾಳಪಾಂಡ್ಯನ ಕಟ್ಟು ಕಟ್ಟಳೆಗಳ ಮತ್ತು ಭೂತಾಳಪಾಂಡ್ಯನ ಚರಿತ್ರೆಯನ್ನು ೧೮೪೫ರಲ್ಲಿ ಬಾಸೆಲ್ ಮಿಶ್ಯನ್ ಪ್ರೆಸ್ಸಿನವರು ಕನ್ನಡ ಭಾಷೆಯಲ್ಲಿ ಪ್ರಥಮ ಛಾಪಿಸಿದ್ದೆಂದೂ ಅದನ್ನು ಅದರ ಸ್ವಲ್ಪ ಕಾಲದ ಮೊದಲು ಯಾರೋ ಬರೆದಿರಬೇಕೆಂದೂ ಸಂಶೋಧಕರಿಂದ ತಿಳಿದುಬರುತ್ತದೆ.

ಅದರಲ್ಲಿ ಹೇಳಿದ ಶಕವರ್ಷಗಳೂ ತಾರೀಕು, ತಿಥಿಗಳೂ ಶೀರಾ ಬನಾವಣೆಯವುಗಳು. ಭೂತಾಳಪಾಂಡ್ಯನ ಕಥೆಗಳ ಪ್ರಕಾರ ತುಳುವ ನಾಡಿನಲ್ಲಿ ಕ್ರೈಸ್ತ ಶಕ ಮೊದಲಿಂದ ಆ ಶಕದ ಐದು ಶತಮಾನಗಳ ತನಕ, ಬಾರಕೂರಿನಲ್ಲಿ ರಾಜಧಾನಿಯಿರುತ್ತಿದ್ದ ರಾಜವಂಶವೊಂದು ಸ್ವತಂತ್ರವಾಗಿ ವಿಸ್ತಾರ ರಾಜ್ಯವನ್ನಾಳುತ್ತಿತ್ತೆಂದು ತೋರುತ್ತದೆ. ಆದರೆ ಅದು ಕದಂಬ, ಆಲೂಪರ ಚರಿತ್ರೆಗೆ ಸರಿಬೀಳುವುದಿಲ್ಲ. ಭೂತಾಳಪಾಂಡ್ಯನ ಕಥೆಗಳಲ್ಲಿ ತೋರುವ ಚೌಟರೂ, ಬಂಗರೂ ಕ್ರೈಸ್ತ ಶಕ ೧೨ನೇ ಶತಮಾನದ ಮೊದಲು ತುಳುವದಲ್ಲಿ ಆಳಿಕೊಂಡಿದ್ದರೆಂಬುದನ್ನು ಐತಿಹಾಸಿಕ ದೃಷ್ಟಿಯಿಂದ ಒಪ್ಪಲು ಸಾಧ್ಯವಿಲ್ಲ.

ಬಾರಕೂರಿಗೆ ವಿದ್ಯುಮ್ನ ಪಾಂಡ್ಯರಾಯನು 'ಬಾರಾಕನ್ಯಾಪುರ'ವೆಂಬ ಹೆಸರಿಟ್ಟನೆಂದು ಆ ಕಥೆಗಳಲ್ಲಿ ತೋರುತ್ತದೆ. ಆದರೆ ಬಾರ್ಕೂರಿಗೆ ಬಾರಾಕನ್ಯಾಪುರವೆಂಬ ಹೆಸರು ೧೪ನೇ ಶತಮಾನದ ಮೊದಲು ರೂಢಿಯಲ್ಲಿತ್ತೆಂದು ತೋರುವುದಿಲ್ಲ. ತುಳುವದಲ್ಲಿ ಅಳಿಯಕಟ್ಟನ್ನು ಬ್ರಾಹ್ಮಣರೆಂದೂ ಆಚರಿಸಿದ್ದಿಲ್ಲ. ಭೂತಾಳಪಾಂಡ್ಯನ ಕಥೆಯಲ್ಲಿ ಹೇಳಿದ ಉಳಿದ ಜಾತಿಗಳಲ್ಲಿಯೂ ಹಲವರು ಅಳಿಯಕಟ್ಟನ್ನು ಆಚರಿಸುವುದಿಲ್ಲ. ಬಂಟರಲ್ಲಿಯೇ ಪರಿವಾರ ಬಂಟರು ಮಕ್ಕಳಕಟ್ಟನ್ನು ಆಚರಿಸುತ್ತಾರೆ; ಜೈನರಲ್ಲಿ ಇಂದ್ರರಿಗೆ ಮಕ್ಕಳ ಕಟ್ಟಿದೆ. ಹೀಗಾಗಿ ಎಲ್ಲಾ ಜಾತಿಗಳಿಗೂ ಭೂತಾಳಪಾಂಡ್ಯನು ಅಳಿಯ ಕಟ್ಟನ್ನು ವಿಧಿಸಿದನೆಂಬುದು ಸರಿಯಲ್ಲ.

ತುಳುವದಲ್ಲಿ ಕ್ರೈಸ್ತ ಶಕದ ಮೊದಲೇ ಜೈನಮತವು ಪ್ರಬಲವಾಗಿತ್ತೆಂದು ತೋರಿಸಲಿಕ್ಕಾಗಿಯೂ ಅಳಿಯಕಟ್ಟಿಗೆ ಮಹತ್ವಿಕೆಯ ಆಧಾರವನ್ನು ಕೊಡಲಿಕ್ಕಾಗಿಯೂ ಈ ಕುಂಡೋದರ ಭೂತಾಳಪಾಂಡ್ಯರ ಕಥೆಯನ್ನು ಸೃಷ್ಟಿಸಿರಬೇಕು. ಭೂತಾಳಪಾಂಡ್ಯನೆಂಬ ಹೆಸರಿನ ಅರಸನು ಕ್ರೈಸ್ತ ಶಕದ ಸುಮಾರು ಹದಿಮೂರನೇ ಶತಮಾನದಲ್ಲಿ ತುಳುವದಲ್ಲಿ ಆಳಿಕೊಂಡಿದ್ದನೆಂದೂ ಈ ಕಟ್ಟು ಕಟ್ಟಳೆಗಳ ಗ್ರಂಥವನ್ನು ಈಗ ನಾಲ್ಕೈದು ಶತಮಾನಗಳ ಹಿಂದೆ ಯಾರೋ ಆತನ ಹೆಸರನ್ನು ಕೂಡಿಸಿಕೊಂಡು ಬರೆದಿರಬಹುದೆಂದೂ ಶ್ರೀ ಬಂಟ್ವಾಳ ಸೀತಾರಾಮರಾಯರು ತಮ್ಮ "ಮಲಬಾರು ಮತ್ತು ಅಳಿಯಸಂತಾನದ ಕಾನೂನು" ಎಂಬ ಗ್ರಂಥದಲ್ಲಿ ಬರೆಯುತ್ತಾರೆ. ಅವರು ಹೇಳುವ ಹದಿಮೂರನೇ ಶತಮಾನದ ಅರಸು ಯಾರೆಂದು ತಿಳಿಯುವುದಿಲ್ಲ. ತುಳುಭಾಷೆಯಲ್ಲಿ (ತುಳುವ ಸಾಹಿತ್ಯಮಾಲೆ ಪೂ ೩) "ಅಳಿಯಸಂತಾನಕಟ್ಟ್‌ದ ಗುಟ್ಟು" ಎಂದು ಶ್ರೀ ಸತ್ಯಮಿತ್ರ ಬಂಗೇರರು ಬರೆದ ಗ್ರಂಥದಲ್ಲಿ ಅವರು ಈ ಕುರಿತು ಸಂಪೂರ್ಣ ವಿಮರ್ಶೆ ಮಾಡಿರುತ್ತಾರೆ.

## ೬. ಅಳಿಯಕಟ್ಟು

ಮಲೆಯಾಳಿ ಭಾಷೆಯಲ್ಲಿ 'ಮರುಮಕ್ಕತ್ತಾಯಂ' ಎಂದು ಹೇಳುವ ಶಬ್ದದ ಕನ್ನಡ ಭಾಷಾಂತರವು 'ಅಳಿಯಕಟ್ಟು' ಎಂದಾಗುತ್ತದೆ. ಈ ಕಟ್ಟಿಗೆ ತುಳು ಹೆಸರಿಲ್ಲ. ಆಸ್ತಿಯ ಅನುಭೋಗವು ಸ್ತ್ರೀಯರ ಮೂಲಕ ಸಂತಾನ ಪರಂಪರೆಯಾಗಿ ಬರತಕ್ಕದ್ದೆಂಬುದೇ ಈ ಎರಡೂ ಕಟ್ಟುಗಳ ಸಾರಾಂಶ. ಅಳಿಯಕಟ್ಟಿನಲ್ಲಾಗಲಿ ಮರುಮಕ್ಕತ್ತಾಯದಲ್ಲಾಗಲಿ ಮದುವೆಯೆಂಬುದು ಶಾಸನ ಪ್ರಕಾರದ ವಿಧಿಯಲ್ಲ; ಆಸ್ತಿ ಅನುಭೋಗಕ್ಕೆ ಹೆಣ್ಣುಗಳಿಗೆ ಮದುವೆಯ ಅವಶ್ಯಕತೆ ಇಲ್ಲ; ಮಕ್ಕಳಿದ್ದರೆ ಸಾಕು.

ಮಲಬಾರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಾತ್ರ ಊರ್ಜಿತದಲ್ಲಿರುವ ಈ ಅಳಿಯಂದಿರ ಹಕ್ಕಿನ ನಿಬಂಧನೆಯು ಹಿಂದೂ ಶಾಸ್ತ್ರಗಳಲ್ಲಿ ಹೇಳುವ ಯಾವ ನಿಯಮಗಳಿಗೂ ಸೇರಿದ್ದಲ್ಲ.

ಮಹಾಭಾರತ ಕಾಲದಲ್ಲಿಯೇ ದಕ್ಷಿಣ ಹಿಂದುಸ್ಥಾನದಲ್ಲಿ ಸ್ತ್ರೀ ಪ್ರಾಮುಖ್ಯತೆಯೂ, ಸ್ತ್ರೀಯರ ಆಳಿಕೆಯೂ ಇದ್ದವೆಂಬುದು ಪ್ರಮೀಳೆಯ ಕಥೆಯಿಂದ ನಮಗೆ ತಿಳಿದುಬರುತ್ತದೆ. ದಕ್ಷಿಣಾಪಥದಲ್ಲಿದ್ದ ದ್ರಾವಿಡರಲ್ಲಿ ಸ್ತ್ರೀಯರು ವೀರಕನ್ಯೆಯರಾಗಿದ್ದು ರಾಜ್ಯಪರಿಪಾಲನೆಯನ್ನು ಕೂಡ ಮಾಡಿಕೊಂಡಿದ್ದರು.

ಆರ್ಯರಲ್ಲಿಯ ಸ್ತ್ರೀಯರು ತಮ್ಮ ದೇಶ ಮನೆಗಳನ್ನು ಬಿಟ್ಟು ಗಂಡನ ಮನೆಯನ್ನೇ ತಮ್ಮದೆಂದು ಮಾಡಿಕೊಂಡು, ಗಂಡನ ಸೇವೆಯಲ್ಲಿಯೇ ಸಂತೋಷಪಟ್ಟು, ತಮ್ಮ ಆಯುಷ್ಯಕಾಲವನ್ನೆಲ್ಲಾ ಪತಿಸೇವೆಯಲ್ಲಿ ಕಳೆಯುತ್ತಿದ್ದರು. ದ್ರಾವಿಡ ಸ್ತ್ರೀಯರು ತಮ್ಮ ದೇಶ, ಮನೆಗಳಲ್ಲಿಯೇ ನಿಂತು, ಅಲ್ಲಿ ಗಂಡನನ್ನು ಉಪಚರಿಸಿಕೊಂಡು, ತಮ್ಮ ಕುಟುಂಬವನ್ನು ಬಿಡದೆ ಅದನ್ನು ಪಾಲಿಸಿಕೊಂಡು ಬರುತ್ತಿದ್ದರು. ಶ್ರೀರಾಮನೊಂದಿಗೆ ದಂಡಕಾರಣ್ಯಕ್ಕೆ ಹೊರಟ ಸೀತಾದೇವಿಯು ಆರ್ಯಕನ್ಯೆ; ಅರ್ಜುನನನ್ನು ಉಪಚರಿಸಿಕೊಂಡು, ಆತನಿಂದ ಗರ್ಭವನ್ನು ಧರಿಸಿ, ಆತನು ತನ್ನ ದೇಶಕ್ಕೆ ಹಿಂತಿರುಗುವಾಗ ಕಣ್ಣೀರನ್ನು ಬಿಟ್ಟರೂ ತನ್ನ ದೇಶ ರಾಜ್ಯಗಳನ್ನು ಬಿಡದೆ ನಿಂತ ಚಿತ್ರಾಂಗದೆಯು ದ್ರಾವಿಡ ಕನ್ಯೆ; ಅರ್ಜುನನನ್ನು ಮೋಹಿಸಿ, ಆತನೊಡನೆ ಬೆರೆತು, ಆತನನ್ನು ತನ್ನೊಡನೆಯೇ ನಿಲ್ಲಿಸಿಕೊಳ್ಳಬೇಕೆಂದು ಹವಣಿಸಿದ ಉಲೂಪಿಯು ನಾಗ ಕನ್ಯೆ. ದಕ್ಷಿಣಾಪಥದಲ್ಲಿ ತುಂಬಾ ದ್ರಾವಿಡ, ನಾಗ ಕನ್ಯೆಯರೇ ಇದ್ದರು.

ಈ ಸ್ತ್ರೀ ಯಜಮಾನಿಕೆಯು ಮುಖ್ಯವಾಗಿ ಚೇರದೇಶದ ಸರ್ವ ಜನರಲ್ಲಿಯೂ ಪ್ರಾಚೀನ ಕಾಲದಿಂದ ನಡೆದು ಬರುತ್ತಿತ್ತು. ತುಳುವಕ್ಕೆ ಬಂದ ದ್ರಾವಿಡರು ಆ ಪದ್ಧತಿಯನ್ನು ಅಲ್ಲಿಯೂ ಅನುಸರಿಸಿಕೊಂಡು ಬಂದರು. ದ್ರಾವಿಡರು ತುಳುವಕ್ಕೆ ಬರುವ ಮೊದಲಿದ್ದ ಮೂಲನಿವಾಸಿಗಳಿಗೆ ಆಸ್ತಿ, ಕೃಷಿಭೂಮಿಗಳಿರಲಿಲ್ಲ. ಅವರಲ್ಲಿ ಕುಟುಂಬ ನಿಶ್ಚಯಕ್ಕೆ ಮಕ್ಕಳಕಟ್ಟೇ ಇದ್ದಂತೆ ತೋರುತ್ತದೆ. ಅವರನ್ನು ದ್ರಾವಿಡರು ಜೈಸಿದ ಬಳಿಕ ಅವರಲ್ಲಿ ಹೆಚ್ಚಿನವರು ಅಳಿಯಕಟ್ಟನ್ನು ಆಚರಿಸಿಕೊಂಡು ಬಂದರು. ಆದರೆ ಈಗಲೂ ಅವರಲ್ಲಿ ಹಿಂದಿನ ಮಕ್ಕಳಕಟ್ಟನ್ನೇ ಆಚರಿಸುವವರೂ ಇದ್ದಾರೆ. ದ್ರಾವಿಡರ ಬಳಿಕ ತುಳುವಕ್ಕೆ ಬಂದ ಬ್ರಾಹ್ಮಣರು ತಮ್ಮ ಮಕ್ಕಳಕಟ್ಟನ್ನೇ ಮೊದಲಿನಿಂದಲೂ ಆಚರಿಸುತ್ತಾ ಬಂದಿರುತ್ತಾರೆ. ತುಳುವದಲ್ಲಿ ಅಳಿಯಕಟ್ಟನ್ನು ಈಗ ಆಚರಿಸುವ ಜಾತಿಯವರೆಲ್ಲಾ ಬ್ರಾಹ್ಮಣರು ಇಲ್ಲಿಗೆ ಬರುವ ಮೊದಲೇ ಬಂದವರೆಂದು ನಿಶ್ಚೈಸಬಹುದು.

ಅಳಿಯಕಟ್ಟು ಮಕ್ಕಳುಕಟ್ಟುಗಳ ಯೋಗ್ಯತಾಯೋಗ್ಯತೆಗಳ ಸಮತುಲನವನ್ನು ಮಾಡುವದು ಈ ಇತಿಹಾಸದ ಉದ್ದಿಶ್ಯಕ್ಕೆ ಸೇರಿದ್ದಲ್ಲ. ಆರ್ಯರಲ್ಲಿ ವಿಚಾರಿಗಳಾದ ಋಷಿಗಳು ತಾಯಿಗೆ ಮಕ್ಕಳ ಮೇಲೆ ಮಮತೆಯು ನಿಜವಾದರೂ ಅವರ ಶ್ರೇಯಸ್ಸಿಗೆ ಆ ಮಮತೆಯೇ ಆತಂಕವಾಗಬಹುದೆಂದು ಚಿಂತಿಸಿ, ಮಕ್ಕಳ ರಕ್ಷಕನು ತಂದೆಯಲ್ಲದೆ ತಾಯಿಯಲ್ಲವೆಂದು ನಿಶ್ಚೈಸಿದ್ದರು.

ಹಿಂದುಗಳಲ್ಲಿ ಋಷಿಗಳು ಬರೆದ ಸ್ಮೃತಿಗಳ ಆಧಾರದ ಮೇಲೆ ಹಕ್ಕುಬಾಧ್ಯತೆಗಳನ್ನು ನಿಶ್ಚೈಸುವುದರಿಂದ ತಂದೆಯ ಸರ್ವ ಆಸ್ತಿಗೂ ಗಂಡುಮಕ್ಕಳೇ ಹಕ್ಕುದಾರರಾಗುತ್ತಾರೆ; ಹಿಂದೂ ಸ್ತ್ರೀಯು ಗಂಡುಮಕ್ಕಳನ್ನು ಪಡೆಯುವುದೇ ತನ್ನ ಭಾಗ್ಯವೆಂದೆಣಿಸುತ್ತಾಳೆ; ಹಿಂದೂ ಸ್ತ್ರೀಗೆ ತವರುಮನೆಯಲ್ಲಿ ಯಾವ ಹಕ್ಕು ಬಾಧ್ಯತೆಗಳೂ ಇಲ್ಲ; ಮದುವೆಯಾಗುವುದೇ ಹಿಂದೂ ಬಾಲಿಕೆಯರ ಆಶೆ, ಅವರ ಕರ್ತವ್ಯ ಮತ್ತು ಅವರ ಧ್ಯೇಯವಾಗಿದೆ. ಮದುವೆಯಾದೊಡನೆ ಗಂಡನ ಕುಲ, ಗಂಡನ ಕುಟುಂಬಗಳೇ ಆಕೆಯ ಕುಲ, ಕುಟುಂಬಗಳಾಗಿ ಅವಳು ಗಂಡನ ಯಜಮಾನಿಕೆಯಲ್ಲಿ ಮಕ್ಕಳನ್ನು ಪಡೆದು ಅವರನ್ನು ಬೆಳೆಸಿ, ಗಂಡನ ಜೀವಕಾಲದ ಬಳಿಕ ಅವನಿಗೆ ತನ್ನಲ್ಲಿ ಜನಿಸಿದ ಗಂಡುಮಕ್ಕಳ ಆಶ್ರಯದಲ್ಲಿ ಕಾಲವನ್ನು ಕಳೆಯುವುದೇ ಆಕೆಯ ಧರ್ಮವಾಗಿದೆ.

ಅಳಿಯಕಟ್ಟಿನ ವಿಚಾರವು ಬೇರೆ ರೀತಿಯಿದೆ. ಇದರಲ್ಲಿ ಸ್ತ್ರೀಯು ಮದುವೆಯಾದೊಡನೆ ತನ್ನ ಕುಲ ಕುಟುಂಬಗಳನ್ನು ಬಿಡುವುದಿಲ್ಲ. ಆಕೆಗೆ ಗಂಡನೆಂದರೆ ತನ್ನಲ್ಲಿ ಬಂದುಹೋಗುವ ಪುರುಷನಲ್ಲದೆ, ಅವನನ್ನು ವಿಧೇಯತೆಯಿಂದ ಹಿಂಬಾಲಿಸಿ, ಅವನ ಸೇವೆಯನ್ನು ಮಾಡುವ ಕರ್ತವ್ಯವು ಅವಳಿಗಿಲ್ಲ. ಕುಟುಂಬದ ಆಸ್ತಿಯ ಹಕ್ಕು ಅವಳಿಗೂ ಅವಳ ಮಕ್ಕಳಿಗೂ ಅಲ್ಲದೆ ಅವಳ ತಮ್ಮಂದಿರಿಗಾಗಲಿ ತಮ್ಮಂದಿರ ಮಕ್ಕಳಿಗಿಲ್ಲ.. ಅವಳ ಮಕ್ಕಳ ಮೇಲೆ ಗಂಡನಿಗೆ ಹಕ್ಕಿಲ್ಲ. ಅವರನ್ನು ಅವನು ಸಾಕಬೇಕೆಂತಿಲ್ಲ.

ಈ ಪರಸ್ಪರ ವಿರೋಧದ ವಿಚಾರಗಳು ಮೇಲೆ ಹೇಳಿದ ಚಿತ್ರಾಂಗದೆ, ಸೀತಾದೇವಿಯರ ಕಥೆಗಳಲ್ಲಿ ತೋರುವಂತೆ ತುಳುವ ಚರಿತ್ರೆಯ ಪರಶುರಾಮ ಭೂತಾಳಪಾಂಡ್ಯರ ಕಥೆಗಳಲ್ಲಿಯೂ ತೋರುತ್ತವೆ. ತಂದೆಯ ಮಾತಿಗೆ ವಿಧೇಯನಾಗಿ ಪರಶುರಾಮನು ತನ್ನ ತಾಯಿಯ ಶಿರಸ್ಸನ್ನು ಕಡಿಯುತ್ತಾನೆ. ಅವನಿಗೆ ತಂದೆಯೇ ನ್ಯಾಯಪರಿಪಾಲಕನು, ಮಾರ್ಗದರ್ಶಕನು. ಅಳಿಯಕಟ್ಟಿನಲ್ಲಿ ತಾಯಿಗೆ ವಿರೋಧವಾಗಿ ತಂದೆಯ ಮಾತನ್ನು ಲಕ್ಷಿಸುವವನು ಸಿಕ್ಕಲಾರನು. ದೇವಪಾಂಡ್ಯನು ತನ್ನ ಮಗನನ್ನು ಬಲಿಕೊಡಲಿಕ್ಕೆ ಸಮರ್ಥನಾಗಿರಲಿಲ್ಲ. ಆ ಮಗನ ಮೇಲಣ ಹಕ್ಕು ಆತನ ಹೆಂಡತಿಯಾದ ಶಿವದೇವಿಗೆ ಒಪ್ಪಿದ್ದಾಗಿತ್ತು. ಜಯಪಾಂಡ್ಯನನ್ನು ಬಲಿಗಾಗಿ ಅಣ್ಣನಿಗೆ ಅರ್ಪಿಸುವಾಗ ಸತ್ಯವತಿಯು ತನ್ನ ಗಂಡನ ಅನುಮತಿಯನ್ನು ಪಡೆಯುವುದಿಲ್ಲ. ಆಕೆಗೆ ತನ್ನ ಗಂಡ, ತನ್ನ ಮಗನಿಗಿಂತಲೂ ಹೆಚ್ಚು ತನ್ನ ಅಣ್ಣನ ಮೇಲೆ ಪ್ರೀತಿಯಿತ್ತೆಂದು ತೋರುತ್ತದೆ.

ತುಳುವರಿಗೆ ಅಳಿಯಕಟ್ಟೇ ಸರಿಯಾದ್ದು, ಸಹಜವಾದದ್ದು ಎಂದು, ಮೊದಲಿಂದಲೂ ತೋರಿ,—ಆರ್ಯರ ಮಕ್ಕಳ ಕಟ್ಟಿನ ಪದ್ಧತಿಯು ಇತರ ಆರ್ಯ ಸಂಸ್ಕೃತಿಯೊಂದಿಗೆ ದಕ್ಷಿಣ ಹಿಂದುಸ್ಥಾನದ ಇತರ ಕಡೆಗಳಲ್ಲೆಲ್ಲಾ ರೂಢಿಗೆ ಬಂದಿರುವುದನ್ನು ಅವರು ನೋಡಿ,—ತಮ್ಮ ಅಳಿಯಕಟ್ಟೇ ತಮಗೆ ಶಾಶ್ವತ ಸಿಲ್ಲಬೇಕೆಂದು, ಅವರು ಭೂತಾಳಪಾಂಡ್ಯನ ಮತ್ತು ಕುಂಡೋದರನ ಕಥೆಯನ್ನು ಸೃಷ್ಟಿಸಿರಬಹುದು. ಹೀಗೆ ಅವರು ಶ್ರಮಪಟ್ಟರೂ ಆರ್ಯ ಸಂಸ್ಕೃತಿಯ ವರ್ಚಸ್ಸು ಅಳಿಯಕಟ್ಟಿನ ಮೇಲೂ ಈಗ ಬಿದ್ದಿರುವುದು ನಮಗೆ ಕಾಣುತ್ತದೆ. ಈಗ ಅಳಿಯಸಂತಾನ ಕುಟುಂಬದ ಯುವತಿಯರು ಮದುವೆಯಾದೊಡನೆ ತಮ್ಮ ಕುಟುಂಬದ ಮನೆಯನ್ನು ಬಿಟ್ಟು, ಇತರ ಹಿಂದೂ ಸ್ತ್ರೀಯರಂತೆ ತಮ್ಮ ಗಂಡಂದಿರ ಮನೆಗಳಿಗೆ ಹೋಗಿ ಸೇರಿಕೊಳ್ಳುವದು ರೂಢಿಯಾಗಿದೆ. ಅಳಿಯ ಸಂತಾನದ ಪುರುಷರಿಗೆ ಈಗ ಕುಟುಂಬದ ಮೇಲಣ ಭಕ್ತಿಯು ಕಡಿಮೆಯಾಗಿ ತಮ್ಮ, ತಮ್ಮ ವೈಯಕ್ತಿಕ ಸ್ವಾತಂತ್ರ್ಯದ ಆಶೆಯೂ ತಮ್ಮ, ತಮ್ಮ ಮಕ್ಕಳ ಮೇಲಣ ಪ್ರೀತಿಯೂ ಹೆಚ್ಚುತ್ತಿರುವುದು ಎಲ್ಲಾ ಕಡೆಗಳಲ್ಲಿಯೂ ಕಾಣುತ್ತದೆ. ಪುರುಷನು ಹಿರಿಯರ ಆಸ್ತಿಮೂಲಕವಲ್ಲದೆ ತಾನೇ ಸಂಪಾದಿಸಿದ್ದನ್ನು ತನ್ನ ಮಕ್ಕಳಿಗೆ ಕೊಡಬಹುದೆಂದು ಭೂತಾಳಪಾಂಡ್ಯನೇ ತನ್ನ ಕಟ್ಟನ್ನು ತನ್ನ ಮದುವೆಯ ಬಳಿಕ ತಿದ್ದಿದನೆಂದು ಆತನ ಚರಿತ್ರೆಯಲ್ಲಿ ಕಾಣುತ್ತದೆ. ಅಳಿಯ ಕಟ್ಟಿನ ಅವಿಭಕ್ತ ಕುಟುಂಬಗಳಲ್ಲಿ ಪರಸ್ಪರ ಮತ್ಸರ, ದ್ವೇಷಗಳು ಬೆಳೆದು, ಅವುಗಳ ಶಾಖೆಗಳು ಪ್ರತ್ಯೇಕವಾಗಿ ಕುಟುಂಬದ ಆಸ್ತಿಗಳನ್ನು ತಮ್ಮೊಳಗೆ ಪಾಲುಮಾಡಿಕೊಂಡು, ಪ್ರತ್ಯೇಕ ಜೀವಿಸಿಕೊಂಡು ಬರುವದು ಅನೇಕ ಕಡೆಗಳಲ್ಲಿ ನಮಗೆ ಕಾಣುತ್ತದೆ.

ಆದರೆ ಅಳಿಯಕಟ್ಟಿನ ದೋಷಗಳೆಷ್ಟಿದ್ದರೂ ಅದರಲ್ಲಿ ಸ್ತ್ರೀಯರ ಮೇಲೆ ಪುರುಷನು ತನ್ನ ಅತ್ಯಾಚಾರ ಬಲೋದ್ಧಂದಿಗಳನ್ನು ನಡೆಸಲಿಕ್ಕೆ ಎಡೆಯಿಲ್ಲ. ಬಾಲವಿಧವೆಯರ ಗೋಳೂ ಸತಿ ಸಹಗಮನದಂಥಾ ದ್ರೋಹವೂ ಅಳಿಯ ಕಟ್ಟಿನ ಕುಟುಂಬಗಳಲ್ಲಿ ಸಂಭವಿಸಲಾರವು. ಗಂಡನ ಪೀಡೆಯಿಂದ ತಪ್ಪಿಸಿಕೊಂಡು, ಸ್ವಾಭಿಮಾನದಿಂದ ಜೀವಿಸಿಕೊಂಡಿರಲಿಕ್ಕೆ ಪ್ರತಿಯೊಂದು ಹೆಣ್ಣಿಗೆ ಅಳಿಯಕಟ್ಟಿನಲ್ಲಿ ದಾರಿಯಿದೆ. ಅವಳಿಗೆ ತಾನು ಹುಟ್ಟಿದ ಕುಟುಂಬದಲ್ಲಿ ಸ್ಥಾನವೆಂದೂ ತಪ್ಪುವುದಿಲ್ಲ. ಅಳಿಯಕಟ್ಟನ್ನು ಬಿಟ್ಟು, ಮಕ್ಕಳ ಕಟ್ಟನ್ನು ಸ್ಥಾಪಿಸಬೇಕೆಂದು ಆಶಿಸುವವರು ಇದನ್ನು ಮರೆಯಲಾಗದು.

---

# ಅಧ್ಯಾಯ ೫

೧. ಮಯೂರವರ್ಮನ ಕಥೆಗಳು—೨. ಅವುಗಳ ಐತಿಹಾಸಿಕ ಬೆಲೆ
೩. ಬನವಾಸಿಯ ಕದಂಬರು.

## ೧. ಮಯೂರವರ್ಮನ ಕಥೆ

ತುಳುಬ್ರಾಹ್ಮಣರು - ಅಂದರೆ ಈಗ ಶಿವಳ್ಳಿ, ಕೋಟ, ಕೋಟೇಶ್ವರ, ಬ್ರಾಹ್ಮಣರೆಂದು ಕರೆಯುವ ಬ್ರಾಹ್ಮಣರು - ತಮ್ಮನ್ನು ಕದಂಬ ವಂಶದ ಮಯೂರವರ್ಮನು ಅಹಿಕ್ಷೇತ್ರದಿಂದ ತುಳುವಕ್ಕೆ ತಂದು ಸ್ಥಾಪಿಸಿದನೆಂದು ಹೇಳುತ್ತಾರೆ. ಅವರ "ಗ್ರಾಮಪದ್ಧತಿ"ಯೆಂಬ ಹೆಸರಿನ ಚರಿತ್ರೆಗಳೆಲ್ಲಾ ಆ ರೀತಿ ಹೇಳುತ್ತವೆ. ಆದರೆ ಮಯೂರವರ್ಮನು ಯಾರು? ಕದಂಬ ಅರಸರು ತುಳುವವನ್ನು ಯಾವ ಕಾಲದಲ್ಲಿ ಆಳುತ್ತಿದ್ದರು? ಈ ವಿಷಯ ಭಿನ್ನಾಭಿಪ್ರಾಯಗಳಿವೆ.

ಪರಶುರಾಮನು ಸಮುದ್ರರಾಜನಿಂದ ತಾನು ಸಂಪಾದಿಸಿದ ಸಯ್ಯಾದ್ರಿ ಖಂಡದಲ್ಲಿ ಕೆಲವು ಬೆಸ್ತರನ್ನು ಬ್ರಾಹ್ಮಣರಾಗಿ ಮಾಡಿ ನೆಲೆಸಿದನೆಂದೂ, ಬಳಿಕ ಅವರ ಮೇಲೆ ಸಿಟ್ಟಾಗಿ ಅವರನ್ನು ಪುನಃ ಬೆಸ್ತರನ್ನಾಗಿಯೇ ಮಾಡಿದ್ದರಿಂದ ಈ ನಾಡಿನಲ್ಲಿ ಕೆಲವು ಕಾಲ ಬ್ರಾಹ್ಮಣರೇ ಇಲ್ಲದಂತಾಯಿತೆಂದೂ, ಕದಂಬ ವಂಶದ ಮಯೂರವರ್ಮನು ತುಳುವವನ್ನು ಜೈಸಿ ಇಲ್ಲಿ ಬ್ರಾಹ್ಮಣರಿಲ್ಲದ್ದನ್ನು ನೋಡಿ ಅಹಿಕ್ಷೇತ್ರದಿಂದ ಈಗಿನ ತುಳುಬ್ರಾಹ್ಮಣರ ಹಿರಿಯರನ್ನು ತಂದು ನೆಲಸಿದ ನೆಂತಲೂ, ತುಳುಬ್ರಾಹ್ಮಣರು ಹೇಳುತ್ತಾರೆ. ಆದರೆ ಮಯೂರ ವರ್ಮನ ಕಥೆಯನ್ನು ಅವರು ನಾನಾ ರೀತಿ ಹೇಳುತ್ತಾರೆ. ಶ್ರೀ ಗಣಪತಿ ಐಗಳರು ತಮ್ಮ ಗ್ರಂಥದಲ್ಲಿ, ತುಳುಬ್ರಾಹ್ಮಣರ ಹತ್ತಿರವಿರುವ ಮಯೂರವರ್ಮ ಚರಿತ್ರೆಯಿಂದ ಈ ಕೆಳಗಿನ ವೃತ್ತಾಂತವನ್ನು ಕೊಟ್ಟಿರುತ್ತಾರೆ:-

ಪರಶುರಾಮ ಸೃಷ್ಟಿಯ ಬಳಿಕ, ಒಂದಾನೊಂದು ದಿನ, ಈಶ್ವರನೂ ಪಾರ್ವತಿಯೂ ಆಕಾಶದಲ್ಲಿ ಸಂಚರಿಸುತ್ತಾ ಸಹ್ಯಾದ್ರಿಯ ಬಳಿ ಬಂದರು. ಅಲ್ಲಿ ಅವರು ಪರಶುರಾಮ ಸೃಷ್ಟಿಯನ್ನು ನೋಡಿ, ಸಂತೋಷದಿಂದ ಇರುವ ಸಮಯ,

ಪಾರ್ವತಿಗೆ ಅಲ್ಲಿದ್ದ ಕದಂಬ ವೃಕ್ಷದ ಬುಡದಲ್ಲಿ ಒಂದು ಮಗುವು ಹುಟ್ಟಿತು. ಈಶ್ವರನು ಆ ಮಗುವಿಗೆ ಕದಂಬನೆಂಬ ಹೆಸರಿಟ್ಟು ಅವನಿಗೆ ಪಶ್ಚಿಮ ಕರಾವಳಿಯ ರಾಜ್ಯವನ್ನು ಕೊಟ್ಟನು. ಆ ಕದಂಬನಿಗೆ ವಸು ಎಂಬ ಮಗನು ಹುಟ್ಟಿದನು. ಅವನಿಗೆ ಸುಶೀಲೆ ಎಂಬ ಮಗಳು ಹುಟ್ಟಿದಳು. ಅವಳನ್ನು ಸೂರ್ಯವಂಶದ ಹೇಮಾಂಗದನೆಂಬ ಅರಸನಿಗೆ ಮದುವೆ ಮಾಡಿಕೊಟ್ಟರು. ಅವಳಿಗೆ ಒಂದು ಗಂಡು ಮಗುವು ಹುಟ್ಟಿ, ದೊಡ್ಡದಾಗುವಷ್ಟರಲ್ಲಿ ಹೇಮಾಂಗದನ ರಾಜ್ಯವು ಪರಾಧೀನವಾಯಿತು. ಹೇಮಾಂಗದನು ಯುದ್ಧದಲ್ಲಿ ಮಡಿದು ಹೋದನು. ಸುಶೀಲೆಯು ಕೂಡಲೇ ಕೆಲವು ಮಂದಿ ಸೇವಕರೊಡನೆ ಹೊರಟು ಸಹ್ಯಪರ್ವತದ ಪಶ್ಚಿಮಕ್ಕೆ ಹರಿಯುವ ಶುಕ್ತಿಮತಿ ನದಿಯ ತೀರಕ್ಕೆ ಬಂದಳು. ಅಲ್ಲಿ ಅವಳು ಈಶ್ವರ ಧ್ಯಾನದಲ್ಲಿರುವಾಗ ವಸಿಷ್ಠ ಋಷಿಯು ಆ ದಾರಿಯಾಗಿ ಹೋಗುತ್ತಾ ಅವಳನ್ನು ಕಂಡು, ಅವಳ ಸಂಗತಿಯನ್ನೆಲ್ಲಾ ವಿಚಾರಿಸಿ, ಅವಳ ಮಗನು ದೊಡ್ಡವನಾದ ಮೇಲೆ ಮಯೂರವರ್ಮನೆಂಬ ಹೆಸರಿನಿಂದ ರಾಜ್ಯವನ್ನಾಳುವನೆಂದು ಅವಳನ್ನು ಸಮಾಧಾನ ಪಡಿಸಿದನು. ಆ ಪ್ರಕಾರ ಮಯೂರವರ್ಮನು ದೊಡ್ಡವನಾಗಿ, ಬನವಾಸಿಯನ್ನು ರಾಜಧಾನಿಯಾಗಿ ಮಾಡಿ, ಪಶ್ಚಿಮ ಕರಾವಳಿಯನ್ನು ಆಳಿಕೊಂಡಿದ್ದನು. ಒಂದು ದಿನ ಕಶ್ಯಪನೆಂಬ ಋಷಿಯು ಬನವಾಸಿಗೆ ಬರಲು, ಮಯೂರವರ್ಮನು ಆತನನ್ನು ಯೋಗ್ಯ ರೀತಿಯಿಂದ ಸತ್ಕರಿಸಿದನು. ಆಗ ಆ ದೇಶದಲ್ಲಿ ವಿದ್ಯಾವಂತರೂ ಷಟ್ಕರ್ಮಿಗಳೂ ಆದ ಬ್ರಾಹ್ಮಣರಿಲ್ಲದ್ದನ್ನು ನೋಡಿ, ಕಶ್ಯಪನು ಆತನಿಗೆ ಅಹಿಕ್ಷೇತ್ರಕ್ಕೆ ಹೋಗಿ ಯೋಗ್ಯ ಬ್ರಾಹ್ಮಣರನ್ನು ಕರೆದು ತರಬೇಕೆಂದು ಸೂಚಿಸಿದನು. ಮಯೂರವರ್ಮನು ಆ ಪ್ರಕಾರ ಅಹಿಕ್ಷೇತ್ರಕ್ಕೆ ಹೋಗಿ, ೩೨ ಬ್ರಾಹ್ಮಣರ ಕುಟುಂಬಗಳನ್ನು (ಹೆಂಡಿರು ಮಕ್ಕಳ ಸಹಿತ) ಕರತಂದು, ತನ್ನ ರಾಜ್ಯದಲ್ಲಿ ಗೋಕರ್ಣದಿಂದ ನೇತ್ರಾವತಿಯ ನಡುವೆ ಅವರನ್ನು ಅಲ್ಲಲ್ಲಿ ಸ್ಥಾಪಿಸಿದನು. ಕೆಲವು ಕಾಲದ ನಂತರ ಮಯೂರವರ್ಮನು ತಪಸ್ಸಿಗೆ ಹೋದನು. ಆತನ ಮಗನಾದ ಚಂದ್ರಾಂಗದನು ಆಗ ಪ್ರಾಯಭರಿತನಾಗಿರಲಿಲ್ಲ. ಮಯೂರವರ್ಮನು ತಂದ ಬ್ರಾಹ್ಮಣರು ರಾಜಾಶ್ರಯ ತಪ್ಪಿದ್ದರಿಂದ ಅವನ ದೇಶದಿಂದ ಹೊರಟು ಹೋದರು. ಚಂದ್ರಾಂಗದನು ರಾಜ್ಯಭಾರವನ್ನು ವಹಿಸಿಕೊಂಡಾಗ ಬ್ರಾಹ್ಮಣರನ್ನು ತಿರಿಗಿ ಕರತರಿಸಿ, ಅವರಿಗೆ ಭೂಮಿ ಉಂಬಳಿ ಬಿಟ್ಟು, ಬೇಸಾಯ ಮಾಡುವದಕ್ಕೆ ಜನರನ್ನು ಕೊಟ್ಟು, ಅವರನ್ನು ಈ ಕೆಳಗಿನ ೩೨ ಗ್ರಾಮಗಳಲ್ಲಿ ನಿಲ್ಲಿಸಿದನು:–

| ಪೂರ್ವದಿಕ್ಕಿನ ೧೬ ಗ್ರಾಮಗಳಲ್ಲಿ. | | | ಪಶ್ಚಿಮದಿಕ್ಕಿನ ೧೬ ಗ್ರಾಮಗಳಲ್ಲಿ. | | |
|---|---|---|---|---|---|
| ೧. ಶ್ರೀ ಪಾಡಿ | ೫ | ಮನೆಗಳು. | ೧. ಕರವೂರು | ೮ | ಮನೆಗಳು. |
| ೨. ಬಡಿಲು | ೨ | ,, | ೨. ಪರ್ಕಾಡಿ | ೮ | ,, |
| ೩. ಕರಂಬಾರು | ೨ | ,, | ೩. ಮರಣೆ | ೨ | ,, |
| ೪. ನಾಳ | ೨ | ,, | ೪. ಕೊಳವಿನಾಡು | ೨ | ,, |
| ೫. ಉಜರೆ | ೮ | ,, | ೫. ಪಾಡಿ | ೪ | ,, |
| ೬. ಕುಂಬ್ಳಾಮಾರ್ಗ | ೮ | ,, | ೬. ಕೊಡ್ಲು | ೪ | ,, |
| ೭. ಕೊಕ್ಕಡ | ೪ | ,, | ೭. ಮೊಗೆಬೈಲು | ೪ | ,, |
| ೮. ರಾಮಕುಂಜ | ೭ | ,, | ೮. ನೀರುಮಾರ್ಗ | ೮ | ,, |
| ೯. ಪುದುಗ್ರಾಮ | ೪ | ,, | ೯. ಶೀಮಂತೂರು | ೮ | ,, |
| ೧೦. ಬಳಂಜ | ೩ | ,, | ೧೦. ಮಿತ್ತನಾಡು | ೪ | ,, |
| ೧೧. ಐವರ್ನಾಡು | ೪ | ,, | ೧೧. ತೆನಕಳ | ೮ | ,, |
| ೧೨. ಇಡಿಕಿದು | ೬ | ,, | ೧೨. ಶಿವಳ್ಳಿ | ೬ | ,, |
| ೧೩. ಕೆಮ್ಮಿಂಜೆ | ೧ | ,, | ೧೩. ಬ್ರಹ್ಮಾವರ | ೪ | ,, |
| ೧೪. ಪಾವಂಜೆ | ೨ | ,, | ೧೪. ನೀಲಾವರ | ೪ | ,, |
| ೧೫. ಸಿರಿಯಾಡಿ | ೫ | ,, | ೧೫. ಕೋಟ | ೮ | ,, |
| ೧೬. ಕೋಡಿಪಾಡಿ | ೫ | ,, | ೧೬. ಕಂದಾವರ | ೨ | ,, |
| | ೬೮ | | | ೮೪ | |

ತುಳು ಜನರು ಆ ಬ್ರಾಹ್ಮಣರಿಗೆ ಮಾನಮರ್ಯಾದೆ ಕೊಟ್ಟು ನಡಿಸಬೇಕೆಂದೂ ಅವನು ವಿಧಿಸಿದನು.

ಮಯೂರವರ್ಮನ ವೃತ್ತಾಂತವು ಒಂದು 'ಗ್ರಾಮಪದ್ಧತಿ'ಯಲ್ಲಿ ಮೇಲೆ ಹೇಳಿದ ಮೇರೆಗಿದೆ. ಅವನ ವೃತ್ತಾಂತವನ್ನು ಇತರ "ಗ್ರಾಮಪದ್ಧತಿ"ಗಳಲ್ಲಿ ಬೇರೆ ರೀತಿ ಹೇಳಿದೆ. ಶ್ರೀ ಅ. ಶ್ರೀನಿವಾಸ ಹೆಗ್ಡೆಯರ ಗ್ರಂಥದ, ಆರರಿಂದ ಒಂಭತ್ತರ ತನಕದ ಅಧ್ಯಾಯಗಳಲ್ಲಿ, ಅದನ್ನು ಕೆಳಗೆ ಬರೆದಂತೆ ಹೇಳಿಯದೆ:–

ಮಣಿವರ್ಮನೆಂಬ ಅರಸನು ಬನವಾಸಿಯ ರಾಜ್ಯವನ್ನು ಬಹುಕಾಲ ಆಳಿದನು. ಅವನಿಗೆ ವೃದ್ಧಾಪ್ಯ ಸಮೀಪಿಸುವ ತನಕ ಮಕ್ಕಳಿರಲಿಲ್ಲ. ಬಳಿಕ ಕನಕವರ್ಮ, ವೀರವರ್ಮರೆಂಬ ಎರಡು ಗಂಡುಮಕ್ಕಳು ಹುಟ್ಟಿದರು. ಅವರು

ಹುಟ್ಟಿದ ಸ್ವಲ್ಪ ಕಾಲವಲ್ಲಿ, ಪಾಂಡ್ಯದೇಶದ ಅರಸನಾದ ಶಿಖಿಪಾಂಡ್ಯನು ಬನವಾಸಿಗೆ ಮುತ್ತಿಗೆ ಹಾಕಿ, ಮಣಿವರ್ಮನನ್ನು ಸೆರೆಯಲ್ಲಿಟ್ಟು, ಆತನ ರಾಜ್ಯವನ್ನಾಳಿದನು. ಮಣಿವರ್ಮನ ಗುರುವು ಆತನ ಮಕ್ಕಳೊಡನೆ ತಪ್ಪಿಸಿಕೊಂಡು "ವಾರಕೂಲ" (ಬಾರ್ಕೂರು)ವೆಂಬ ರಾಜ್ಯವನ್ನು ಸೇರಿದನು. ಅಲ್ಲಿ ಹೇಮಾಂಗದನೆಂಬ ಅರಸನು ನಿಸ್ಸಂತತಿಯಾಗಿ ಕಾಲವಾಗಿದ್ದು, ಆ ಪಟ್ಟಣದವರು ಹೊಸ ಅರಸನನ್ನು ಆರಿಸಲಿಕ್ಕಾಗಿ ಆನೆಯ ಕೈಯಲ್ಲಿ ಹೂಮಾಲೆ ಕೊಟ್ಟು ಮೆರವಣಿಗೆ ಮಾಡಿಸುತ್ತಿದ್ದರು. ಆದರೆ ಅದು ಹೂಮಾಲೆಯನ್ನು ಯಾರ ಕೊರಳಿಗೂ ಹಾಕಲಿಕ್ಕೆ ಒಪ್ಪುತ್ತಿದ್ದಿಲ್ಲ.

ಆಗ ಆ ಬಾಲಕರು ಅಲ್ಲೇ ಸೀತಾನದಿಯ ಬಳಿ ಇರುವ ಮಾರ್ಕಂಡೇಯ ಋಷಿಯ ಆಶ್ರಮಕ್ಕೆ ಹೋಗಿ, ಅವನಿಗೆ ತಮ್ಮ ವೃತ್ತಾಂತವನ್ನು ತಿಳಿಸಿ ಆ ರಾಜ್ಯದ ಪಟ್ಟವು ತಮಗೆ ದೊರಕುವಂತೆ ಅವನ ಪ್ರಸಾದವನ್ನು ಬೇಡಲು, ಆ ಋಷಿಯು ಅವರಿಗೆ "ಆನೆಯು ಜಿನಮತದವರ ಕೊರಳಿಗೆ ಮಾಲೆಯನ್ನು ಹಾಕದು; ಚತುರ್ವರ್ಣಾಶ್ರಮದವರಲ್ಲೊಬ್ಬನಿಗೆ ಮಾತ್ರ ಅದು ಹಾಕಬಹುದು; ಬಾರಕೂರಿನ ಈಶಾನ್ಯಕ್ಕೆ ಸರ್ಪ ರಕ್ಷಿತವಾದ ಒಂದು ಮಯೂರವು ಮಾವಿನ ಮರದಲ್ಲಿ ವಾಸಿಸಿಕೊಂಡಿದೆ. ಆ ಮಯೂರವನ್ನು ಕೊಂದು ಅದರ ರಕ್ತವನ್ನು ಯಾರು ಕುಡಿಯುತ್ತಾರೋ ಅವರಿಗೆ ಆ ಆನೆ ಮಾಲೆ ಹಾಕುವದು" ಎಂದು ತಿಳಿಸಿದನು. ಇದನ್ನು ಕೇಳಿ ವೀರವರ್ಮನು ಹೋಗಿ ಆ ಮಯೂರವನ್ನು ಕೊಂದನು; ಅದರ ಬಳಿಕ ಆನೆಯು ಅವನ ಕೊರಳಿಗೆ ಹೂಮಾಲೆಯನ್ನು ಹಾಕಿ ಅವನು ಆ ರಾಜ್ಯಕ್ಕೆ ಅರಸನಾದನು. ಅವನಿಗೆ ಆ ಪುರಜನರು "ಲೋಕಾದಿತ್ಯ ಮಯೂರವರ್ಮ"ನೆಂಬ ಹೆಸರಿನಿಂದ ಸುಮುಹೂರ್ತವಲ್ಲಿ ಪಟ್ಟಾಭಿಷೇಕ ಮಾಡಿದರು. ಆ ರಾಜ್ಯದಲ್ಲಿ ಆಗ ಜಿನಮತವೇ ಪ್ರಬಲವಾಗಿತ್ತು. ಮಾರ್ಕಂಡೇಯ ಋಷಿಯು ಲೋಕಾದಿತ್ಯನಿಗೆ ರಾಜ್ಯಪರಿಪಾಲನೆಯ ನೀತಿ, ಕ್ರಮಗಳನ್ನೆಲ್ಲಾ ಕಲಿಸಿ, ಅಹೀಕ್ಷೇತ್ರದಿಂದ ಉತ್ತಮ ಕುಲದ ಬ್ರಾಹ್ಮಣರನ್ನು ಕರಸಿಕೊಂಡು ಅವರು ಹೇಳುವ ನೀತಿ, ಧರ್ಮಶಾಸ್ತ್ರಗಳಿಗೆ ಸರಿಯಾಗಿ ನಡಕೊಳ್ಳಬೇಕೆಂದು ಅವನಿಗೆ ಬೋಧಿಸಿದನು. ಕನಕವರ್ಮನು ಲೋಕಾದಿತ್ಯನು ಹಿಂಸೆ ಮಾಡಿದ ಕಾರಣ ಜಿನಮತಕ್ಕೆ ಯೋಗ್ಯನಲ್ಲವೆಂದು ಹೇಳಿ, ಅವನೊಡನೆ ಇರದೆ, ಬನವಾಸಿಗೆ ಹೋಗಿ, ತನ್ನ ತಂದೆಯ ರಾಜ್ಯವನ್ನು ಪುನಃ ಸ್ವಾಧೀನ ಮಾಡಿಕೊಂಡು, ಜಿನಧರ್ಮಕ್ಕೆ ಸರಿಯಾಗಿ ಆ ರಾಜ್ಯವನ್ನು ಪಾಲಿಸುತ್ತಾ ಇದ್ದನು.

ಇತ್ತ ಲೋಕಾದಿತ್ಯನ ಜಿನಮತದ ಪ್ರಜೆಗಳೂ ಆತನು ತಮ್ಮ ರಾಜಸ್ಥಾನಕ್ಕೆ ಅಯೋಗ್ಯನೆಂದು ಗುಣುಗುಟ್ಟುತ್ತಿದ್ದುದರಿಂದ ಆತನು ದೊಡ್ಡ ಸಭೆಯನ್ನು ಕೂಡಿಸಿ, ತಾನು ಹಿಂಸೆಮಾಡಿದ್ದು ಜಿನಧರ್ಮಕ್ಕೆ ವಿರೋಧವಾದರೂ ರಾಜಧರ್ಮಕ್ಕೆ ವಿರೋಧವಲ್ಲ–ತನ್ನ ನವೀನ ಮತದಲ್ಲಿ ಯಾರು ಸೇರಲುಮನಸ್ಸುಳ್ಳವರೆಂದು ತಿಳಿಸಬೇಕಾಗಿ ಹೇಳಿದನು. ಆ ಊರಿನ ಕೆಲವು ಮಾನ್ಯ ಜಿನಗೃಹಸ್ಥರು ರಾಜಮತವನ್ನು ಸಂತೋಷದಿಂದ ಸ್ವೀಕರಿಸಿದರು. ರಾಜನು ಆ ಜನರಿಗೆ "ನವ ಒಡಸಾಡಿಗಳು" ಅಂದರೆ ಹೊಸತಾದ ಸ್ನೇಹಿತರೆಂತಲೂ, ಆ ನಾಡಿನವರೇ ಮುಂದೆ ಬಂದು ರಾಜಮತವನ್ನು ಸೇರಿದ ಕಾರಣ ಆ ಜಾತಿಗೆ "ನಾಡವ"ರೆಂತಲೂ ಹೆಸರಿಟ್ಟನು. ಆ ಮೇಲೆ ಆ ಹೊಸ ಮತದವರು ರಾಜಪ್ರಿಯರಾಗಿಯೂ ವೀರರಾಗಿಯೂ ಇರುವದನ್ನು ನೋಡಿ, ಅವರನ್ನು ರಾಜಪ್ರತಿನಿಧಿಗಳಾಗಿ ದಕ್ಷಿಣದೇಶಕ್ಕೆ ಕಳುಹಿಸಿ, ಅಲ್ಲಿ ಅವರಿಗೆ ವಿಶೇಷ ತರದ ಕಾರ್ಯಗಳನ್ನು ಕೊಟ್ಟು, ಸೇನೆಗೆ ಮುಂದಾಳುಗಳಾಗಿ ನೇಮಿಸಿದ್ದರಿಂದ, ಅವರಿಗೆ ಭಟರು (ಅಂದರೆ ಪರಾಕ್ರಮಿಗಳು), ಬಂಟರು (ಅಂದರೆ ಸಹಾಯಕರು) ಎಂದು ಜನರು ಕರೆಯ ತೊಡಗಿದರು.

ಆ ಮೇಲೆ ಜೈನರು ನವಮತಸ್ಥರನ್ನು ಹೀನೈಸಿದ ಕಾರಣ, ಲೋಕಾದಿತ್ಯ ಮಯೂರವರ್ಮನು ಅಹೀಕ್ಷೇತ್ರದಿಂದ ಉತ್ತಮ ಕುಲದ ಬ್ರಾಹ್ಮಣರನ್ನು ತರಿಸಿ, ಅಲ್ಲಲ್ಲಿ ದೇವಾಲಯುಗಳನ್ನು ನಿರ್ಮಿಸಿ, ಅಲ್ಲಿಯ ಪೂಜಾವಿಸಿಯೋಗಗಳನ್ನು ಆ ಬ್ರಾಹ್ಮಣರಿಗೆ ಕೊಟ್ಟು, ಅವರನ್ನು ಎಲ್ಲರೂ ಗುರುಮರ್ಯಾದೆಯಿಂದ ಕಾಣುವಂತೆ ಆಜ್ಞೆಯಿತ್ತನು. ಲೋಕಾದಿತ್ಯನು ಹೊಸತಾಗಿ ಬಂದ ಬ್ರಾಹ್ಮಣರಿಗೆ ೩೨ ಗ್ರಾಮುಗಳನ್ನು ವಿಭಾಗಿಸಿ ಕೊಟ್ಟನು. ಆ ಬ್ರಾಹ್ಮಣರಿಗೆ ಹೊಸ ಮತದವರ ಕನ್ನಿಕೆಗಳನ್ನು ಕನ್ಯಾದಾನ ಮಾಡಿದನು. ಆಗ್ಯೆ ಬ್ರಾಹ್ಮಣರು ಆ ಮತದವರನ್ನು ಭಾವನೆಂಟರೆಂದೂ ಕಡೆಗೆ ಬಂಟರೆಂದೂ ಕರೆದರು.

ಲೋಕಾದಿತ್ಯ ಮಯೂರವರ್ಮನು ೩೬ ವರ್ಷ ರಾಜ್ಯವಾಳಿ ಕಾಲವಶನಾದನು. ಅವನ ಮಗ ಚಂದ್ರಾಂಗದನು ಕೂಡ ೯ ಜನರು ಆ ಬಳಿಕ ಆಳಿದರು. ಕೊನೆಯ ಅರಸನಾದ ವೀರವರ್ಮನ ಕಾಲದಲ್ಲಿ ಕುಟಶಾದ್ರಿ ಮುನಿಯ ಶಾಪದಿಂದ ಆ ಕುಟುಂಬವು ನಿರ್ಮೂಲವಾಗಿ ಹೋಯಿತು. ಆ ಬಳಿಕ, ಬೇರೆ ವಂಶದ ಏಳು ಜನರು ಆಳಿದ ಬಳಿಕ, ಆ ವಂಶವನ್ನು "ಕುಂಡೋದರ"ನು ನಾಶಮಾಡಿ, ಭೂತಾಳಪಾಂಡ್ಯನಿಗೆ ಸಿಂಹಾಸನವನ್ನು ಕೊಟ್ಟನು. ಈ

ವೃತ್ತಾಂತದ ಮೇರೆಗೆ (ಶ್ರೀ ಹೆಗ್ಡೆಯ ಗ್ರಂಥದ ೫ನೇ ಅಧ್ಯಾಯ), ಭೂತಾಳ ಪಾಂಡ್ಯನು ಕ್ರೈ. ಶಕ ೭೭ಲ್ಲಿ ಸಿಂಹಾಸನವನ್ನೇರಿದ್ದಾಗಿದ್ದು, ಅದರ ಮೊದಲು ತುಳುವವನ್ನಾಳಿದ ಅರಸರ ವಿವರವು ಈ ಕೆಳಗೆ ಕಾಣಿಸಿದಂತಿದೆ.

| | | |
|---|---|---|
| ೧. ನಂದನಂದನ ರಾಯನ ವಂಶದ ಐದು ಜನರು | ವರ್ಷ | ೩೩೧ |
| ೨. ಅಹಿತರಾಯನ ವಂಶದ ಮೂರು ಜನರು | ,, | ೧೬೭ |
| ೩. ವೀರಕಾಂತಿ ತೋಳಾರರ ವಂಶದ ಒಂಭತ್ತು ಜನರು | ,, | ೨೧೭ |
| ೪. ಕದಂಬರಾಜನಾದ ಜಯಂತಿ ಕದಂಬ | ,, | ೪೫ |
| ೫. ಹೇಮಾಂಗದ | ,, | ೪೦ |
| ೬. ಲೋಕಾದಿತ್ಯ ಮಯೂರವರ್ಮನ ವಂಶದ ೧೦ ಜನರು | ,, | ೪೯೬ |
| ೭. ವೀರವರ್ಮ ಮೊದಲಾದ ೭ ಜನರು | ,, | ೩೧೯ |
| | | ೧೬೧೫ |

ಹೀಗೆ ಈ ವೃತ್ತಾಂತದ ಪ್ರಕಾರ ಮಯೂರವರ್ಮನು ಆಳತೊಡಗಿದ್ದು ಕ್ರೈಸ್ತ ಪೂರ್ವ ೭೩೪ರಲ್ಲಾಗುತ್ತದೆ. ಬಾರಕೂರಿನಲ್ಲಿ ರಾಜಸ್ಥಾನವು ಕ್ರೈಸ್ತ ಪೂರ್ವ ೧೫೩೭ರಿಂದಲೇ ಇತ್ತೆಂದೂ ಕಾಣುತ್ತದೆ.

## ೨. ಮಯೂರವರ್ಮ—ಕಥೆಗಳ ಐತಿಹಾಸಿಕ ಬೆಲೆ

ಮಯೂರವರ್ಮ, ಭೂತಾಳಪಾಂಡ್ಯರ ಕಥೆಗಳ ಐತಿಹಾಸಿಕ ಬೆಲೆಯನ್ನು ನಿಶ್ಚೈಸುವದು ಸುಲಭವಲ್ಲ. ತುಳುಬ್ರಾಹ್ಮಣರ 'ಗ್ರಾಮಪದ್ಧತಿ'ಗಳಲ್ಲಿ ಅಡಗಿರುವ ಐತಿಹಾಸಿಕ ಸಂಗತಿಗಳನ್ನು ಕಂಡುಹಿಡಿಯುವದು ಅಸಾಧ್ಯವೆಂದು ೧೮೦೧ಲ್ಲಿ ಕನ್ನಡಜಿಲ್ಲೆ ಮೈಸೂರುಗಳ ಸಂಗತಿಗಳನ್ನು ಶೋಧಿಸಲಿಕ್ಕೆ ಬ್ರಿಟಿಷ್ ಸರಕಾರದವರು ನೇಮಿಸಿದ ಡಾಕ್ಟರ್ ಬುಕಾನನರು ತಾವು ಬರೆದ ತಮ್ಮ ಪ್ರವಾಸದ ವೃತ್ತಾಂತದಲ್ಲಿ ತುಂಬಾ ಕಾರಣಗಳನ್ನು ಕೊಟ್ಟಿರುತ್ತಾರೆ. ಶ್ರೀ ಡಾಕ್ಟರ್ ಸಾಲೆತ್ತೂರರೂ ಈಗ ಅದೇ ರೀತಿ ಅಭಿಪ್ರಾಯ ಪಡುತ್ತಾರೆ. ಬನವಾಸಿಯ ಕದಂಬರಿಗೂ ತುಳುವಕ್ಕೂ ಸಂಬಂಧವಿತ್ತು,—ಆ ಕದಂಬರಲ್ಲೊಬ್ಬನ ಕಾಲದಲ್ಲಿ ತುಳುವಕ್ಕೆ ಹೊರಗಿನಿಂದ ಕೆಲವು ಬ್ರಾಹ್ಮಣ ಕುಟುಂಬಗಳು ಬಂದು ಸೇರಿಕೊಂಡವು - ಆಗ ಇಲ್ಲಿ ಜೈನಮತವು ಪ್ರಬಲವಾಗಿತ್ತು - ಬಂದ ಬ್ರಾಹ್ಮಣ

ಕುಟುಂಬಗಳು ತುಳುವದ ೩೨ ಗ್ರಾಮಗಳಲ್ಲಿ ಸೇರಿ, ಅಲ್ಲಿ ನೆಲೆಸಿದವು – ಇಲ್ಲಿಯ ದ್ರಾವಿಡರಲ್ಲಿ ಪ್ರಾಚೀನ ಕಾಲದಿಂದಲೇ ಅಳಿಯಕಟ್ಟು ಆಚರಣೆಯಲ್ಲಿತ್ತು–ಬಂದ ಬ್ರಾಹ್ಮಣರಿಗೆ ಆ ದ್ರಾವಿಡರಲ್ಲಿ ಮಾನಮರ್ಯಾದೆಗಳು ದೊರಕಿದರೂ ಅವರ ಮಕ್ಕಳಕಟ್ಟನ್ನಾಗಲಿ ಅವರ ವಿವಾಹದ ಸಾಂಪ್ರದಾಯಗಳನ್ನಾಗಲಿ ದ್ರಾವಿಡರು ಅಂಗೀಕರಿಸದೆ ತಮ್ಮ ಸಾಮಾಜಿಕ ವ್ಯವಹಾರವನ್ನು ತಮ್ಮ ಪ್ರಾಚೀನ ಕಾಲದಿಂದ ನಡೆದು ಬಂದ ರೀತಿಯಿಂದಲೇ ನಡೆಸುತ್ತಿದ್ದರು. ನಾವು ಮಯೂರವರ್ಮ, ಭೂತಾಳಪಾಂಡ್ಯರ ಕಥೆಗಳಿಂದ ಅಷ್ಟು ನಿಶ್ಚಯವೆಂದು ತಿಳಕೊಳ್ಳಬಹುದು.

ತುಳು ಗ್ರಾಮಪದ್ಧತಿಗಳಲ್ಲಿ, ಮಯೂರವರ್ಮನು ಒಂದು ಕಡೆ ಹೇಮಾಂಗದ ಸುಶೀಲೆಯರ ಮಗನೆಂದೂ, ಇನ್ನೊಂದು ಕಡೆ ಬನವಾಸಿಯ ಅರಸನಾದ ಮಣಿವರ್ಮನ ಮಗನೆಂದೂ ಹೇಳುತ್ತದೆ. ಆದರೆ ಬನವಾಸಿಗೂ ಮಯೂರವರ್ಮನಿಗೂ ಸಂಬಂಧವಿದೆಯೆಂದು ಎರಡು ವೃತ್ತಾಂತಗಳಲ್ಲಿಯೂ ತೋರುತ್ತದೆ. ಹಾಗೆಯೇ ಈ ವೃತ್ತಾಂತಗಳಿಂದ ಪಾಂಡ್ಯದೇಶದ ಯಾವದೋ ಸಂಬಂಧವಿದ್ದ ಬಲಿಷ್ಠ ಅರಸನೊಬ್ಬನು ತುಳುವದಲ್ಲಿ ಮಯೂರವರ್ಮನ ವಂಶದವರ ಬಳಿಕ ಆಳುತ್ತಿದ್ದನೆಂದೂ ಆತನ ಕಾಲವು ತುಳುವರ ಜ್ಞಾಪಕದಲ್ಲಿ ಎಂದೂ ಅಳಿಸಿಹೋಗದಷ್ಟು ಪ್ರಭಾವದ್ದಾಗಿತ್ತೆಂದೂ ತೋರುತ್ತದೆ. ಕಾಲ ಹೋಗುತ್ತಾ ಅಳಿಯಕಟ್ಟಿನ ನಿಯಮಗಳನ್ನು ಶಾಸನರೂಪವಾಗಿ ಬರೆಯಲಿಚ್ಛಿಸಿದ ಯಾರೋ ಅರಸನು ಆ ನಿಯಮಗಳನ್ನು ಆ ಪಾಂಡ್ಯದೇಶದ ಸಂಬಂಧವಿದ್ದ 'ಭೂತಾಳಪಾಂಡ್ಯನು' ಕುಂಡೋದರನ ಪ್ರೇರೇಪಣೆಯಿಂದ ರಚಿಸಿದ್ದನೆಂದು ಹೇಳಿ ಆ ನಿಯಮಗಳಲ್ಲಿ ತುಳುವದ ಜನರು ಶಾಶ್ವತ ಭಕ್ತಿಯನ್ನಿಡುವಂತೆ ಸಾಧಿಸಿರಬೇಕು.

## ೩. ಬನವಾಸಿಯ ಕದಂಬರು

ಈ ಕಥೆಗಳನ್ನು ಬಿಟ್ಟು–ಇತಿಹಾಸವನ್ನು ತೆಗೆದು ನೋಡಿದ್ದಲ್ಲಿ, ಬನವಾಸಿಯ ಕದಂಬರು ಯಾರೆಂಬದನ್ನು ನಾವು ತಿಳಕೊಳ್ಳಬಹುದು. ಆರ್ಯಾವರ್ತದಲ್ಲಿ ಕ್ರೈಸ್ತಪೂರ್ವ ಎರಡನೇ ಶತಮಾನದಲ್ಲಿ ಸಂಪೂರ್ಣ ಪರಿವರ್ತನೆ ಯಾಯಿತು. ಅಶೋಕನ ಕಾಲದಲ್ಲಿ ಭೂಲೋಕಕ್ಕೆಲ್ಲಾ ಪ್ರಭೆಯನ್ನು ಬೀರಿದ ಮೌರ್ಯ ಸಾಮ್ರಾಜ್ಯವು ಅಶೋಕನು ಕಾಲವಾದ (೨೩೨) ನಾಲ್ವತ್ತೆಂಟು

ವರ್ಷಗಳಲ್ಲಿ ನಿರ್ನಾಮವಾಗಿ ಹೋಗಿ, ಉತ್ತರ ಹಿಂದುಸ್ಥಾನದಲ್ಲಿ ಮೌರ್ಯರ ಮಗಧಾದೇಶದ ಸಿಂಹಾಸನವನ್ನು ಶುಂಗರು ಅಪಹರಿಸಿದರು. ದಕ್ಷಿಣ ಹಿಂದುಸ್ಥಾನದಲ್ಲಿ, ಮೌರ್ಯ ಸಾಮ್ರಾಜ್ಯದೊಳಗೆ ಸೇರಿದ್ದ ಆಂಧ್ರಪ್ರಾಂತ್ಯದ ಸಾತವಾಹನರು ಸ್ವತಂತ್ರರಾಗಿ ಬಲಿಷ್ಠ ರಾಜ್ಯವೊಂದನ್ನು ಸ್ಥಾಪಿಸಿದರು. ಆ ಸಾತವಾಹನರ ರಾಜ್ಯವು ಮೂರು ಶತಮಾನಗಳ ತನಕ ಪ್ರಬಲವಾಗಿ ಮೆರೆಯಿತು. ಕ್ರಿ. ಶಕ ಪ್ರಾರಂಭದಲ್ಲಿ ತುಳುವದ ಉತ್ತರ ಅರ್ಧಭಾಗವು ಸಾತವಾಹನರ ರಾಜ್ಯದೊಳಗೆ ಸೇರಿಕೊಂಡಿತ್ತು. ಕ್ರಿ. ಶ. ೭೮ಲ್ಲಿ ಗೌತಮೀಪುತ್ರ ಸಾತಕರ್ಣಿಯೆಂಬ ಸಾತವಾಹನ ಅರಸನು ಸ್ಥಾಪಿಸಿದ ಶಾಲಿವಾಹನ ಶಕವು ತುಳುವದಲ್ಲಿಯೂ ರೂಢಿಗೆ ಬಂತು. ತುಳುವವು ಆಗ ಬನವಾಸಿಯ ರಾಜ್ಯದಲ್ಲಿ ಸೇರಿತ್ತು; ಸಾತವಾಹನರ ಉಪರಾಜರಾದ ಚುಟುಕುಲದವರು ಬನವಾಸಿಯಲ್ಲಿ ಆಳುತ್ತಿದ್ದರು. ಕ್ರಿ. ಶಕ ೧೮೪ರಷ್ಟಕ್ಕೆ, ಕದಂಬ ವಂಶದ ಮೊತ್ತಮೊದಲನೇ ಅರಸನಾದ ಮಯೂರಶರ್ಮನು ಆ ಚುಟುಕುಲದ ಅರಸನನ್ನು ಸೋಲಿಸಿ, ಬನವಾಸಿಯ ರಾಜ್ಯವನ್ನು ಸ್ವಾಧೀನ ಪಡಿಸಿಕೊಂಡನು. ಕದಂಬರು ಬ್ರಾಹ್ಮಣರಾಗಿದ್ದರು. ಆದರೆ ಮಯೂರಶರ್ಮನು ಪಟ್ಟಕ್ಕೆ ಬಂದ ಮೇಲೆ, ಶರ್ಮವೆಂಬ ಬ್ರಾಹ್ಮಣ ಸಂಜ್ಞವನ್ನು ಬಿಟ್ಟು, ವರ್ಮ ಯೆಂಬ ಕ್ಷಾತ್ರಸಂಜ್ಞವನ್ನು ಇಟ್ಟುಕೊಂಡನು. ಮಯೂರವರ್ಮನು ಸುಮಾರು ಕ್ರಿ. ಶಕ ೨೧೦ರ ವರೆಗೆ ಆಳಿದನು. ಅವನ ಬಳಿಕ ಸ್ಕಂದವರ್ಮ, ಭಗೀರಥ, ರಘು, ಕಾಕುತ್ಸ್ಥ, ಶಾಂತಿವರ್ಮ ಮೊದಲಾದ ಅವನ ವಂಶದವರು ನಾಲ್ಕು ಶತಮಾನಗಳ ತನಕ ಬನವಾಸಿಯ ರಾಜ್ಯವನ್ನಾಳಿದರು. ಕೊನೆಗೆ ಕ್ರಿ. ಶಕ ಆರನೇ ಶತಮಾನದಲ್ಲಿ ಚಾಲುಕ್ಯ ರಾಜನಾದ ೧ನೇ ಕೀರ್ತಿವರ್ಮನು ಆಗಿನ ಕದಂಬ ರಾಜನನ್ನು ಸೋಲಿಸಿ, ಬನವಾಸಿಯನ್ನು ಸ್ವಾಧೀನ ಪಡಿಸಿಕೊಂಡನು.

ಚುಟುಕುಲದ ಅರಸರು ಬನವಾಸಿಯನ್ನು ಕದಂಬರಿಗೆ ಬಿಟ್ಟುಕೊಟ್ಟ ಬಳಿಕ, ಅವರ ಉಪರಾಜರಾಗಿ ತುಳುವದ ಒಂದು ಅಂಶದಲ್ಲಿದ್ದರು. ಅವರು ಚಂದ್ರವಂಶದವರು—ಅವರಿಗೆ ನಾಗವಂಶದ ಸಂಬಂಧವಿತ್ತು. ಅವರೇ ಬಳಿಕ ಆಲೂಪರೆಂಬ ಹೆಸರಿನಿಂದ ಪ್ರಖ್ಯಾತರಾದವರೆಂದು ತೋರುತ್ತದೆ. ಮಯೂರವರ್ಮನು ತನ್ನ ರಾಜ್ಯವನ್ನು ಪಯಸ್ವನಿಯ ತನಕ ವಿಸ್ತರಿಸಿದ್ದನೆಂದೂ ಅವನು ಕುಂಬಳೆಯಲ್ಲಿ ಒಬ್ಬ ಉಪರಾಜನನ್ನೂ ಬಾರಕೂರಿನಲ್ಲಿ ಒಬ್ಬ ಉಪರಾಜನನ್ನೂ ನೇಮಿಸಿದ್ದನೆಂದೂ ತೋರುತ್ತದೆ. ಕುಂಬಳೆ ಅರಸರೊಡನಿರುವ ಮೇಲಾಪುರ

ಮಹಾತ್ಮ್ಯದಲ್ಲಿರುವ ಸಂಗತಿಗಳನ್ನು ಇತರ ವೃತ್ತಾಂತಗಳೊಡನೆ ಜೋಡಿಸಿದರೆ ಈ ರೀತಿಯ ಅಭಿಪ್ರಾಯವಾಗುತ್ತದೆ.

ಮಯೂರವರ್ಮನು ತುಳುವದಲ್ಲಿ ಉತ್ತಮ ತರದ ವಿದ್ಯಾವಂತ ಬ್ರಾಹ್ಮಣರಿಲ್ಲದಿರುವವನ್ನು ನೋಡಿ, ಅಹಿಕ್ಷೇತ್ರದಿಂದ ಪಂಚದ್ರಾವಿಡ ಬ್ರಾಹ್ಮಣ ರನ್ನು ಕರೆತರಿಸಿ ಅವರನ್ನು ಮೂವತ್ತೆರಡು ಗ್ರಾಮಗಳಲ್ಲಿ ನೆಲೆಗೊಳಿಸಿದನು. ಮಯೂರವರ್ಮನ ನಂತರ, ತುಳುವದಲ್ಲಿ ಕೆಲವು ಕಾಲ ಕೊರಗರ ಮತ್ತು ಹೊಲೆಯರ ಉಪಟಳವು ಪ್ರಬಲವಾಯಿತು. ಹುಬಾಸಿಕನೆಂಬ ಕೊರಗ ರಾಜನು ತುಳುವವನ್ನು ಉತ್ತರ ದಿಕ್ಕಿನಿಂದ ಹಿಡಿದು ಮಂಜೇಶ್ವರ ತನಕ ಆಕ್ರಮಿಸಿದನು. ಕದಂಬ ವಂಶದ ರಾಜಕುಮಾರಿಯನ್ನು ಮದುವೆಯಾದ ಲೋಕಾದಿತ್ಯನೆಂಬವನು ಕೊನೆಗೆ ಹುಬಾಸಿಕನನ್ನು ಸಂಹರಿಸಿ, ಪುನಃ ಕದಂಬ ರಾಜ್ಯವನ್ನು ಸ್ಥಾಪಿಸಿದನು. ಅವರ ಬಳಿಕ ಬಾಹುದಂಡನೆಂಬ ಹೊಲೆಯ ರಾಜನೂ, ನಂದನೆಂಬ ಇನ್ನೊಬ್ಬ ಹೊಲೆಯ ಅರಸನೂ ತುಳುನಾಡನ್ನು ಸ್ವಾಧೀನ ಪಡಿಸಿಕೊಂಡು ಅವರ ಉಪದ್ರವನ್ನು ಸಹಿಸಲಾರದೆ ಮಯೂರ ವರ್ಮನು ಕರೆತಂದ ಬ್ರಾಹ್ಮಣರೆಲ್ಲರೂ ತಮ್ಮ ಸ್ವಸ್ಥಾನಕ್ಕೆ ಓಡಿಹೋದರು. ಮಯೂರವರ್ಮನ ಮಗನಾದ ಚಂದ್ರಾಂಗದನೆಂಬವನು ಆ ಹೊಲೆಯರನ್ನು ಸೋಲಿಸಿ, ಅಹಿಕ್ಷೇತ್ರದ ಬ್ರಾಹ್ಮಣರನ್ನು ಪುನಃ ಕರೆತರಿಸಿ ಅವರ ಮೂವ ತ್ತೆರಡು ಗ್ರಾಮಗಳಲ್ಲಿ ನೆಲೆಗೊಳಿಸಿದನು. ನಂದರಾಯನು ಬ್ರಾಹ್ಮಣನಿಗೆ ವೇಶ್ಯೆಯಲ್ಲಿ ಹುಟ್ಟಿದ ಒಬ್ಬ ಸ್ತ್ರೀಯನ್ನು ಮದುವೆ ಮಾಡಿಕೊಂಡು ಆಕೆಯ ಬೋಧನೆಯಂತೆ ರಾಜ್ಯವಾಳುತ್ತಿದ್ದನೆಂದು ಹೇಳುತ್ತಾರೆ. ಅವನ ಕಾಲದಲ್ಲಿ ಅವನು ಚರ್ಮದ ನಾಣ್ಯಗಳನ್ನು ರೂಢಿಗೆ ತಂದಿದ್ದನು. ಅವನ ಕಾಲದ ಬಳಿಕ ಆ ಚರ್ಮದ ನಾಣ್ಯಗಳಿಗೇನೂ ಬೆಲೆಯಿಲ್ಲದ್ದರಿಂದ "ನಂದರಾಯನ ಬದುಕು ನರಿನಾಯಿ ತಿಂದು ಹೋಯಿತು" ಎಂಬ ಗಾದೆಯು ಬಳಕೆಗೆ ಬಂತು. ಹುಬಾಸಿಕ, ನಂದರಾಯರ ವೃತ್ತಾಂತಗಳಿಗೆ ಖಂಡಿತವಾದ ಆಧಾರವಿಲ್ಲ; ಅವು ಗಳು ಯಾವ ಕಾಲಕ್ಕೆ ಸಂಬಂಧಪಟ್ಟವೆಂದು ನಿಶ್ಚಯಿಸಲಿಕ್ಕೆ ಸಾಧ್ಯವಿಲ್ಲ, ಆದರೆ ತುಳು ಜನರಲ್ಲಿ ನಡೆದು ಬಂದ ನಂಬಿಕೆಗಳ ಮೇರೆಗೆ, ಮಯೂರವರ್ಮನ ಮತ್ತು ಆತನ ವಂಶದವರ ಆ ಸಂಗತಿಗಳು ಕಾಲದಲ್ಲಿ ನಡೆದವಾಗಿವೆ. ಕ್ರಿ. ಶಕ ೫೭೪ರಷ್ಟಕ್ಕೆ ಬನವಾಸಿಯ ಕದಂಬರನ್ನು ಪಶ್ಚಿಮ ಚಾಲುಕ್ಯ ಅರಸನಾದ ೧ನೇ ಕೀರ್ತಿವರ್ಮನು ಜೈಸಿ, ತುಳುವವನ್ನು ಸ್ವಾಧೀನ ಪಡಿಸಿಕೊಂಡನು.

ಆ ಬಳಿಕ ಕದಂಬರಿಗೂ ತುಳುವಕ್ಕೂ ಇರುವ ಸಂಬಂಧವು ಸಂಪೂರ್ಣ ತಪ್ಪಿ, ಆಲೂಪ ವಂಶದ ಅರಸರು ಇಲ್ಲಿ ಪ್ರಮುಖರಾದರು.

ಕದಂಬರು ಜೈನರಲ್ಲ, ಬ್ರಾಹ್ಮಣರಾಗಿದ್ದರು. ಭೂತಾಳಪಾಂಡ್ಯನ ಕಥೆಯಲ್ಲಿ ಅವರು ಜೈನರೆಂದು ಕಾಣಿಸಿದ್ದೂ-ಅವರು ಕ್ರೈಸ್ತನ ಮೊದಲು ಎಷ್ಟೋ ವರ್ಷಗಳ ಹಿಂದೆ ಆಳಿಕೊಂಡಿದ್ದರೆಂದು ಕಾಣಿಸಿದ್ದೂ ತೀರ ತಪ್ಪಾಗಿದೆ.

---

# ಅಧ್ಯಾಯ ೬

**೧. ತುಳುವ ಇತಿಹಾಸದ ಇರುಳು—೨. ಆಲೂಪ ಅರಸರು—೩. ಜೈನ, ಬೌದ್ಧ ಮತಗಳು—೪. ಬಾದಾಮಿಯ ಪಶ್ಚಿಮ ಚಾಲುಕ್ಯರು—೫. ಕ್ರೈಸ್ತಶಕ ೫೭೫ರಿಂದ ೭೭೦ರ ತನಕದ ತುಳುವ ಚರಿತ್ರೆ**

## ೧. ತುಳುವ ಇತಿಹಾಸದ ಇರುಳು

ಬನವಾಸಿಯ ಕದಂಬರನ್ನು ಕ್ರಿ. ಶಕ ೫೭೫ರಲ್ಲಿ ಪಶ್ಚಿಮ ಚಾಲುಕ್ಯ ಅರಸನಾದ ರಣಪರಾಕ್ರಮ ೧ನೇ ಕೀರ್ತಿವರ್ಮನು ಜೈಸಿ, ಕದಂಬರ ರಾಜ್ಯವನ್ನು ತಾನು ಸ್ವಾಧೀನಪಡಿಸಿಕೊಂಡನೆಂದು ನಾವು ಹಿಂದೆ ಓದಿರುತ್ತೇವೆ. ತುಳುವ ನಾಡು ಅದರ ಬಳಿಕ ಕದಂಬರ ಅಧಿಕಾರದಿಂದ ತಪ್ಪಿ, ಚಾಲುಕ್ಯರ ವಶವಾಯಿತು. ಆದರೆ ಕದಂಬರು ಬನವಾಸಿಯಲ್ಲಿ ಅದರ ಬಳಿಕವೂ ಚಾಲುಕ್ಯರ ಮಹಾಮಂಡಲೇಶ್ವರರಾಗಿ ಕೆಲವು ಕಾಲ ಆಳುತ್ತಿದ್ದರು. ಚಾಲುಕ್ಯರು ಅಧಿರಾಜರಾದೊಡನೆ, ಆಲೂಪ ಅರಸರು ತುಳುನಾಡನ್ನು ಅವರ ಉಪರಾಜರಾಗಿ ಆಳತೊಡಗಿದರು. ಆಲೂಪ ಅರಸರ ಆಳುವಿಕೆಯ ಕುರಿತು ಅನೇಕ ಶಾಸನಗಳೂ ತಾಮ್ರಪಟ್ಟಗಳೂ ದೊರಕಿವೆಯಾದ್ದರಿಂದ, ಕ್ರಿ. ಶಕ ೫೭೫ರಿಂದ ನಾವು ತುಳುವ ಇತಿಹಾಸದಲ್ಲಿ ಇರುಳನ್ನು ದಾಟಿ ಬೆಳಕಿಗೆ ಬಂದು ಸೇರುತ್ತೇವೆ. ಕರ್ಣಾಟಕ ಸಾಮ್ರಾಟರ ಕೆಳಗೆ ತುಳುವವು ಬನವಾಸಿಯ ಕದಂಬರ ಕಾಲದಿಂದಲೇ ಬಂದಿತ್ತೆಂದು ಎಣಿಸಬೇಕಾದರೂ, ಆ ಕದಂಬರು ಚಾಲುಕ್ಯರಷ್ಟು ಬಲಿಷ್ಠ ಸಾಮ್ರಾಟರಾಗಿರಲಿಲ್ಲ. ಅವರ ರಾಜ್ಯವು ಚಾಲುಕ್ಯರ ಸಾಮ್ರಾಜ್ಯದಷ್ಟು ವಿಸ್ತಾರದ್ದೂ ಆಗಿರಲಿಲ್ಲ. ಅವರು ಕ್ಷಾತ್ರಸಂಜ್ಞೆಯಾದ 'ವರ್ಮ'ವನ್ನು ಇಟ್ಟುಕೊಂಡಿದ್ದರೂ ನಿಜವಾಗಿ ಬ್ರಾಹ್ಮಣರಾಗಿದ್ದರು. ದಕ್ಷಿಣಾಪಥದ ತೆಂಕಣ

ದಿಕ್ಕಿನಲ್ಲಿ ಆಗ ಪ್ರಬಲರಾಗಿದ್ದ ಪಲ್ಲವರ ಸಹಾಯವನ್ನು ಪಡೆದು, ಅವರು ಸಾತವಾಹನರ ಕಿರಿಯ ಶಾಖೆಯಾದ ಚುಟು ಕುಲದವರಿಂದ ಬನವಾಸಿಯ ರಾಜ್ಯವನ್ನು ಕಿತ್ತು, ಅಲ್ಲಿ ತಮ್ಮ ಆಳುವಿಕೆಯನ್ನು ಸ್ಥಾಪಿಸಿದ್ದರು. ಆದುದರಿಂದ ಕರ್ಣಾಟಕದ ದ್ರಾವಿಡ ಜನರು ಅವರಲ್ಲಿ ಭಕ್ತಿಯಿಂದ ಇರಲಿಲ್ಲ. ತುಳುವಕ್ಕೆ ಅವರು ಹೊರಗಿನಿಂದ ಬ್ರಾಹ್ಮಣರನ್ನು ತಂದು, ಅವರಿಗೆ ಗ್ರಾಮಗಳನ್ನು ಕೊಟ್ಟು, ಆರ್ಯ ಸಂಸ್ಕೃತಿಯನ್ನು ತುಳುವದಲ್ಲಿ ಪ್ರಸಾರಣೆ ಮಾಡುವ ಕಾರ್ಯಕ್ಕೆ ಹೊರಟದ್ದರಿಂದ ಅವರ ಕಾಲದಲ್ಲಿ ದ್ರಾವಿಡರು ತಮ್ಮ ಅಳಿಯ ಕಟ್ಟಿನ ಆಚರಣೆಗೆ ಕುಂಡೋದರನ ಬಲವನ್ನು ಹೊಗಳಿಕೊಂಡು, ಅವರಿಗೆ ತಡೆಗಟ್ಟಿರಬೇಕು. ಭೂತಾಳ ಪಾಂಡ್ಯನ ಕಟ್ಟು, ಕಟ್ಟಳೆಗಳನ್ನು ಚೆನ್ನಾಗಿ ಪರೀಕ್ಷಿಸಿದಲ್ಲಿ, ಅಳಿಯ ಕಟ್ಟಿನವರು ಯಾವ ತರದಿಂದಾದರೂ ಬ್ರಾಹ್ಮಣರ ವರ್ಚಸ್ಸಿನೊಳಗೆ ಬೀಳಬಾರದೆಂಬ ಜಾಗ್ರತೆಯು ಅವುಗಳಲ್ಲಿ ಕಾಣಬರುತ್ತದೆ. ಕೇರಳದಲ್ಲಿ ನಂಬೂದಿರಿ ಬ್ರಾಹ್ಮಣರು ಅಲ್ಲಿಯ ದ್ರಾವಿಡರನ್ನು ತಮ್ಮ ವೈದಿಕ ಜ್ಞಾನದಿಂದ ಮರುಳುಗೊಳಿಸಿದಂತೆ, ತುಳುವದಲ್ಲಿ ಕದಂಬರು ನೆಲೆಗೊಳಿಸಿದ ಬ್ರಾಹ್ಮಣರಿಂದ ಇಲ್ಲಿಯ ದ್ರಾವಿಡರನ್ನು ಮಂಕುಗೊಳಿಸಲಿಕ್ಕಾಗಲಿಲ್ಲ. ತುಳುವದ ದ್ರಾವಿಡ ಸ್ತ್ರೀಯರು ಕೇರಳ ಸ್ತ್ರೀಯರಂತೆ ಬ್ರಾಹ್ಮಣರ 'ಸಂಬಂಧ'ವನ್ನು ಬೆಳೆಸಲಿಕ್ಕೆ ಆತುರಪಡಲಿಲ್ಲ. ತುಳುವದ ರಾಜಸ್ಥಾನಗಳಲ್ಲಿ ಬ್ರಾಹ್ಮಣರ ವರ್ಚಸ್ಸು ಹೆಚ್ಚಿರಲಿಲ್ಲ.

ಪಶ್ಚಿಮ ಚಾಲುಕ್ಯರು ಕ್ಷತ್ರಿಯರಾಗಿದ್ದರು. ಸಾತವಾಹನರು ಅಳಿದ ಮೇಲೆ ದಕ್ಷಿಣಾ ಪಥದಲ್ಲಿ ಬಲಿಷ್ಠ ಸಾಮ್ರಾಜ್ಯವನ್ನು ಸ್ಥಾಪಿಸಿದವರು ಚಾಲುಕ್ಯ ವಂಶದ ಕರ್ಣಾಟಕ ಸಾಮ್ರಾಟರು. ಅವರ ಕಾಲದಲ್ಲಿ ಆಲೂಪರು ತುಳುವದಲ್ಲಿ ತಲೆಯೆತ್ತಿ, ತುಳುವ ಇತಿಹಾಸದ ಮೇಲೆ ಸರಿಯಾದ ಬೆಳಕನ್ನು ಬೀರತೊಡಗಿದರು.

## ೨. ಆಲೂಪ ಅರಸರು

ಆಲೂಪರು ಯಾರು, ಯಾವ ವಂಶದವರು – ಎಂಬ ಕುರಿತು ಇನ್ನೂ ಭಿನ್ನಾಭಿಪ್ರಾಯಗಳಿವೆ. ತುಳುವವನ್ನು ಅವರು ಕ್ರಿ. ಶಕದ ೭ನೇ ಶತಮಾನದ ಮೊದಲಿಂದಲೇ ೧೪ನೇ ಶತಮಾನದ ತನಕ ಆಳುತ್ತಿದ್ದರೆಂದು ಡಾ. ಸಾಲೆತ್ತೊರರು ಎಣಿಸುತ್ತಾರೆ. ಎರಡನೇ ಶತಮಾನಕ್ಕೆ ಸಂಬಂಧಪಟ್ಟ ಗ್ರೀಕ್ ಪ್ರಹಸನದ

ವಿವರವನ್ನು ನಾವು ೪ನೇ ಅಧ್ಯಾಯದಲ್ಲಿ ಓದಿರುತ್ತೇವೆ. ಅದರಲ್ಲಿ ಕಾಣುವ ಅರಸನು ಆಲೂಪ ವಂಶದ ಅರಸನೆಂದೂ, ಅವನು ಉದ್ಯಾವರದಿಂದ ತುಳು ನಾಡಿನ ಅಂಶವೊಂದನ್ನು ಆಳಿಕೊಂಡಿದ್ದನೆಂದೂ ಅವನ ಕೆಳಗೆ ಮಲ್ಪೆಯ 'ನಾಯಕ'ನೊಬ್ಬನಿದ್ದನೆಂದೂ ನಾವು ಆ ಅಧ್ಯಾಯದಲ್ಲಿ ಕಂಡಿರುತ್ತೇವೆ. ಆದರೆ ಆಲೂಪರು ತುಳುನಾಡಿನವರೇ,-ಕ್ರಿ. ಶಕ ಪ್ರಾರಂಭದಿಂದಲೇ ತುಳುವವನ್ನು ಅವರು ಆಳುತ್ತಿದ್ದರೆಂದು ಡಾಕ್ಟರ್ ಸಾಲೆತೂರರು ಪಡುವ ಅಭಿಪ್ರಾಯಕ್ಕೆ ಆಧಾರಗಳೇನೂ ಕಾಣುವುದಿಲ್ಲ.

ಆಲೂಪವೆಂಬ ಶಬ್ದವನ್ನು 'ಆಳುಪ'ವೆಂದು ಬರೆಯುವುದೂ ಉಂಟು. ಅದು ಮೊದಲು 'ಆಳುಕ'ವೆಂದಿತ್ತೆಂದೂ ತೋರುತ್ತದೆ. ಆಲೂಪರು ತಾವು ಸೋಮಕುಲ (ಚಂದ್ರವಂಶ)ಕ್ಕೆ ಸೇರಿದವರೆಂದು ಹೇಳುತ್ತಿದ್ದರೆಂದು ಅವರ ಶಾಸನಗಳಿಂದ ತೋರುತ್ತದೆ. "ಸೋಮಕುಲತಿಲಕ"ವೆಂಬ ಬಿರುದು ಆ ಶಾಸನಗಳಲ್ಲಿ ಕಾಣುತ್ತದೆ. ಅವರ ಶಿಲಾಶಾಸನವೊಂದರಲ್ಲಿ ಮೇಲ್ಗಡೆ ಸುರುಳಿ ಹಾಕಿ ಕೂತು ಹೆಡೆಯನ್ನು ಬಿಚ್ಚಿದ ಹಾವಿನ ನಕ್ಷೆಯಿದೆ. ಇದರಿಂದ ಅವರು ನಿಜವಾಗಿ ನಾಗವಂಶದವರಾಗಿರಬೇಕೆಂದು ಎಣಿಸಬಹುದು. ಮೌರ್ಯಸಿಂಹಾ ಸನವು ಬಿದ್ದುಹೋದ ಬಳಿಕ, ದಕ್ಷಿಣಾಪಥದಲ್ಲಿ ಪ್ರಬಲರಾಗಿ ಶಾಲಿವಾಹನ ಶಕವನ್ನು ಸ್ಥಾಪಿಸಿದ ಸಾತವಾಹನರೂ ನಾಗವಂಶದವರಾಗಿದ್ದರು. ಸಾತ ವಾಹನರ ಉಪರಾಜರಾಗಿ ಬನವಾಸಿಯಲ್ಲಿ ಆಳುತ್ತಿದ್ದ ಅವರ ಕಿರಿಶಾಖೆಯಾದ ಚುಟುಕುಲದ ಅರಸನನ್ನು ಕದಂಬರ ಮೊದಲಿನ ಅರಸನಾದ ಮಯೂರ ಶರ್ಮನು ಜೈಸಿ, ಬನವಾಸಿಯ ರಾಜ್ಯವನ್ನು ತನ್ನ ಕೈವಶ ಮಾಡಿಕೊಂಡ ಬಳಿಕ, ಚುಟುಕುಲದವರು ತುಳುವಕ್ಕೆ ಬಂದು ಸೇರಿಕೊಂಡು, ಅಲ್ಲಿ ಚಿಕ್ಕ ಸಂಸ್ಥಾನ ವೊಂದರಲ್ಲಿ ಆಳತೊಡಗಿ, ಆಳುಪ (ಆಲೂಪ)ರೆಂಬ ಹೆಸರು ಅವರಿಗೆ ತುಳುವ ರಲ್ಲಿ ಬಂದಿರಬೇಕು. ಡಾಕ್ಟರ್ ಸಾಲೆತ್ತೂರರು ಎಣಿಸುವಂತೆ ಅವರು ತುಳುವ ದಲ್ಲಿಯೇ ಮೊದಲಿಂದ ಇದ್ದ ಯಾವದಾದರೊಂದು ಕುಟುಂಬದವರೆಂದು ಹೇಳುವದು ತೀರಾ ಅಸಂಭವವಾಗಿದೆ. ತುಳುವದ ಅಪರಿಚಿತ ಕುಟುಂಬದಿಂದ ಬಲಿಷ್ಠ ಚಾಲುಕ್ಯ ಸಾಮ್ರಾಟರು ಬನವಾಸಿ, ತುಳುವದ ಉಪರಾಜರಾಗಿ ಯಾರನ್ನು ನೇಮಿಸುತ್ತಿರಲಿಲ್ಲ. ಆಲೂಪರು ಬನವಾಸಿ, ತುಳುವ ಅಂಶಗಳನ್ನು ಹಿಂದೆ ಆಳಿಕೊಂಡಿದ್ದ ಕುಟುಂಬದವರಾದ್ದರಿಂದಲೇ, ೧ನೇ ಕೀರ್ತಿವರ್ಮನು ಕದಂಬರ ರಾಜ್ಯವನ್ನು ಜೈಸಿದ ಬಳಿಕ ಅವರನ್ನು ತುಳುವದ ಉಪರಾಜ

ರಾಗಿಯೂ - ೨ನೇ ಪುಲಿಕೇಶಿಯು ಕದಂಬರನ್ನು ಎರಡನೇ ಜೈಸಿದ ಬಳಿಕ ಅವರನ್ನು ತುಳುವ ಬನವಾಸಿಯ ಉಪರಾಜರಾಗಿಯೂ ನೇಮಿಸಿರಬೇಕು.

ಸಾತವಾಹನರು ತಮ್ಮ ವೈಭವ ಕಾಲದಲ್ಲಿ ತಮ್ಮ ವಿಸ್ತಾರ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ ತುಳುವದ ಅಂಶವು ಚುಟುಕುಲದವರ ಬನವಾಸಿಯ ಮಂಡಲದೊಳಗೆ ಸೇರಿತ್ತು. ಅದು ಸಾತವಾಹನ ಸಾಮ್ರಾಜ್ಯದ ಮೂಲೆಯಲ್ಲಿತ್ತು.

ಸಾತವಾಹನರ ಕಾಲದ ಬಳಿಕ, ಅವರ ಕಿರಿಶಾಖೆಯ ಚುಟುಕುಲದವರನ್ನು ತಳ್ಳಿ, ಬನವಾಸಿಯಲ್ಲಿ ಕದಂಬರು ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದೊಡನೆ, ಆ ಚುಟುಕುಲದವರು ಅವರ ಕೆಳಗೆ ಉಪರಾಜರಾಗಿ ತುಳುವದ ಅಂಶವೊಂದನ್ನು ಆಳತೊಡಗಿರಬೇಕು. ಆಗಿನ ಅರಸರು ಅನುಸರಿಸುತ್ತಿದ್ದ ಸಾಂಪ್ರದಾಯವು ಹಾಗಿತ್ತೆಂಬುದಕ್ಕೆ ಅನೇಕ ದೃಷ್ಟಾಂತಗಳಿವೆ. ಚಾಲುಕ್ಯರು ಕದಂಬರನ್ನು ಜೈಸಿದ ಬಳಿಕ, ಕದಂಬರು ಕೆಲವು ಕಾಲ ಬನವಾಸಿಯನ್ನು ಅವರ ಉಪರಾಜರಾಗಿ ಆಳುತ್ತಿದ್ದದ್ದು ಅದೇ ಸಾಂಪ್ರದಾಯಕ್ಕನುಸಾರವಾಗಿದೆ.

ತುಳುವದಲ್ಲಿ ಸಾತವಾಹನರ ಅಧಿಕಾರವು ಹೆಚ್ಚು ವಿಸ್ತಾರವಾಗಿರಲಿಲ್ಲ. ಅವರ ರಾಜಧಾನಿಯು ಬಹಳ ದೂರವಿದ್ದು, ತುಳುವವು ಅದರ ಅತ್ಯಂತ ದಕ್ಷಿಣದ ಮೂಲೆಗಿದ್ದುದರಿಂದ, ಸಾತವಾಹನ ಸಾಮ್ರಾಟರ ದೃಷ್ಟಿಯು ತುಳುವದ ಕಡೆ ಬೀಳಲಿಲ್ಲ. ಕದಂಬರು ಬನವಾಸಿಯಲ್ಲಿ ಆಳತೊಡಗಿದೊಡನೆ, ರಾಜಧಾನಿಯು ತುಳುವದ ಉತ್ತರ ಭಾಗದಲ್ಲಿಯೇ ಇದ್ದುದರಿಂದ, ಅವರು ತಮ್ಮ ಸಾಮ್ರಾಜ್ಯವನ್ನು ಪಯಸ್ವನಿಯ ತನಕ ವಿಸ್ತರಿಸಿ, ಅವರ ವರ್ಚಸ್ಸು ಕೇರಳಕ್ಕೂ ಮುಟ್ಟಿತ್ತು. ಅವರು ತಮ್ಮ ಸಂಬಂಧಿಕರನ್ನು ಪಯಸ್ವನೀ, ನೇತ್ರಾವತೀ ನದಿಗಳ ನಡುವಿನ ದೇಶಕ್ಕೆ ಉಪರಾಜರಾಗಿ ನೇಮಿಸಿ,- ಬ್ರಾಹ್ಮಣರನ್ನು ಮೂವತ್ತೆರಡು ಗ್ರಾಮಗಳಲ್ಲಿ, ಅಲ್ಲಲ್ಲಿ ನಡುವೆ, ತಮ್ಮ ಹಿತಚಿಂತಕರಾಗಿ ಸ್ಥಾಪಿಸಿ,- ಬಾರಕೂರಿನಲ್ಲಿ ಇನ್ನೊಬ್ಬ ಉಪರಾಜರನ್ನಿಟ್ಟು, ಸುವರ್ಣ ನದಿಯಿಂದ ಉತ್ತರಕ್ಕಿರುವ ಉದಯಪುರಿ (ಉದ್ಯಾವರ)ಯ ಸುತ್ತಲಿನ ಪ್ರದೇಶವೊಂದನ್ನು ಚುಟುಕುಲದವರಿಗೆ ಆಳಿಕೊಂಡಿರಲಿಕ್ಕೆ ಬಿಟ್ಟಿರಬೇಕು. ಈ ಪ್ರದೇಶವು ಉದ್ಯಾವರ ಹೊಳೆಯಿಂದ ಸುವರ್ಣ ನದಿ (ಕಲ್ಯಾಣಪುರ)ಯ ತನಕವಿರುವ ಪ್ರದೇಶವಾಗಿರಬೇಕು. ಖೇಡವೆಂದರೆ ಸಣ್ಣ ಪ್ರದೇಶದ ಹೆಸರು. 'ನಗರ' 'ಗ್ರಾಮ'ಗಳಿಂದ ದೊಡ್ಡದಾಗಿ 'ವಿಷಯ'ಕ್ಕಿಂತಲೂ ಸಣ್ಣ ಪ್ರದೇಶವಾದರೆ ಖೇಡವೆಂದು ಕರೆಯು

ತ್ತಿದ್ದರು. ಈಗಿನ ಒಂದು ತಾಲೂಕಿನಿಂದಲೂ ಸಣ್ಣದಾದ ಆ ಪ್ರದೇಶವನ್ನು ಚುಟುಕುಲದವರು ಹೀಗೆ ಆಳುತ್ತಿದ್ದು,–ಅವರು ಆಳುವ ಖೇಡಿಗೆ "ಆಳ್ವಖೇಡು" ಎಂಬ ಹೆಸರೂ, ಅವರಿಗೆ ಮೊದಲು 'ಆಳುವ'ರೆಂಬ ಹೆಸರೂ ಬಳಿಕ ಆಳುಕ, ಆಳುಪ, ಆಲೂಪವೆಂಬ, ಕ್ರಮದಿಂದ ರೂಪಾಂತರ ಹೊಂದಿದ ಹೆಸರುಗಳೂ ತುಳುವದ ಜನರಿಂದ ಬಂದಿರಬೇಕು.

## ೩. ಜೈನ, ಬೌದ್ಧ ಮತಗಳು

ಮೌರ್ಯ ವಂಶಸ್ಥಾಪಕನಾದ ಚಂದ್ರಗುಪ್ತ ಸಾಮ್ರಾಟನು ತನ್ನ ಕೊನೆಯ ಕಾಲದಲ್ಲಿ ಜೈನಯತಿಯರೊಂದಿಗೆ ಶ್ರವಣ ಬೆಳ್ಗೊಳಕ್ಕೆ ಬಂದು ಅಲ್ಲಿಯೇ ಕಾಲಾಧೀನನಾದನೆಂದು ನಾವು ಹಿಂದೆ ೩ನೇ ಅಧ್ಯಾಯದಲ್ಲಿ ಓದಿರುತ್ತೇವೆ. ಶ್ರವಣ ಬೆಳ್ಗೊಳದಲ್ಲಿ ಕ್ರಿ. ಪೂರ್ವ ಮೂರನೇ ಶತಮಾನದಲ್ಲಿಯೇ ಜಿನಮತ ಪ್ರಚಾರದ ಪ್ರಬಲ ಕೇಂದ್ರವಿತ್ತೆಂದು ಇದರಿಂದ ವ್ಯಕ್ತವಾಗುತ್ತದೆ. ಜೈನಯತಿಗಳು ಆ ಕೇಂದ್ರದಿಂದ ಪಾಂಡ್ಯ, ಚೋಳ, ತುಳುದೇಶಗಳಿಗೆ ಹೋಗಿ ಜಿನಮತವನ್ನು ಪ್ರಚಾರ ಮಾಡುತ್ತಿದ್ದರು. ಹೋದ ನಾಡಿನಲ್ಲೆಲ್ಲಾ ಅವರು ಆಯಾಯ ನಾಡಿನ ಜನರಾಡುವ ಭಾಷೆಯನ್ನು ಕಲಿತು ಆ ಭಾಷೆಯಲ್ಲಿಯೇ ತಮ್ಮ ಮತವನ್ನು ಪ್ರಚಾರ ಮಾಡುತ್ತಿದ್ದರಾದ್ದರಿಂದ ಅವರು ಜೈನ ಮತವನ್ನು ಜನಸಾಮಾನ್ಯರಲ್ಲಿ ತುಂಬಾ ಸ್ಥಾಪಿಸಿದ್ದರು. ಬಾರಕೂರು ರಾಜ್ಯದಲ್ಲಿ ಅನೇಕರು ಜೈನರಾಗಿದ್ದರು. ಆದರೆ ಜಿನಮತ ಸ್ವೀಕಾರದಿಂದ ತುಳುವದ ಜನರಲ್ಲಿದ್ದ ಹಿಂದಿನ ವಿಶ್ವಾಸಗಳೇನೂ ಕಡಿಮೆಯಾಗಿರಲಿಲ್ಲ. ಒಂದು ಬದಿ ಶಿವಾರಾಧನೆ–ಇನ್ನೊಂದು ಬದಿ ಭೂತಗಳ ಆರಾಧನೆ – ಇವುಗಳೊಂದಿಗೆ ಜೈನ ಧರ್ಮವೂ ಸೇರಿ, ಅವರ ಧರ್ಮವು ನೂತನ ರೂಪವೊಂದನ್ನು ತಾಳಿತ್ತು. ಇದನ್ನು ತುಳುವದ ಇಂದಿನ ಜೈನರಲ್ಲಿಯೂ ನಾವು ಕಾಣುತ್ತೇವೆ. ಶುದ್ಧ ಅಹಿಂಸಾಚರಣೆಯಿಂದ ರಾಜ್ಯ ಪರಿಪಾಲನೆಯು ಸಾಗದೆಂದು ತಿಳಿದ ತುಳುವದ ಅರಸರು ಹಿಂಸಾಕ್ರಮವನ್ನು ಧಿಕ್ಕರಿಸದ ಜನರನ್ನು ಮಾಸಾದಿಕ ಜೈನರೆಂದು ಕರೆದು, ಅವರನ್ನು ತಮ್ಮ ಆಪ್ತ ಭೃತ್ಯರಾಗಿಟ್ಟುಕೊಂಡಿದ್ದರು. ಆ ಮಾಸಾದಿಕ ಜೈನರಿಗೆ ಬಂಟರು, ನಾಡವರೆಂಬ ಹೆಸರು ಕಾಲಹೋಗುತ್ತಾ ಬಂತು. ಜಿನಮತವು ಈ ರೀತಿ ಅತ್ತ ಬ್ರಾಹ್ಮಣರಿಂದಲೂ ಇತ್ತ ರಾಜ, ರಾಜ ಭೃತ್ಯರಿಂದಲೂ ದೂರವಾಗಿ, ಇತರ ಜನಸಾಮಾನ್ಯರಲ್ಲಿ ಮಾತ್ರ ಕೆಲವು ಕಾಲ ಉಳಿಯಿತು.

ಬೌದ್ಧಮತವು ಜೈನ ಮತದಂತೆ ತುಳುವದ ಜನಸಾಮಾನ್ಯರಲ್ಲಿ ಬೇರೂರಿದ್ದು ತೋರಿ ಬರುವುದಿಲ್ಲ. ಬೌದ್ಧಮತ ಪ್ರಚಾರಕ್ಕಾಗಿ ಅಶೋಕ ಮಹಾರಾಜನ ಕಾಲದಲ್ಲಿ ಬನವಾಸಿಗೆ ಉಪದೇಶಕರು ಬಂದಿದ್ದರೂ, ಅವರು ಜೈನ ಪ್ರಚಾರಕರಂತೆ ತುಳುವದಲ್ಲಿ ಜಯಶೀಲರಾಗಲಿಲ್ಲವೆಂದು ತೋರುತ್ತದೆ. ತುಳುವದಲ್ಲೀಗ ಜೈನರ ಬಸದಿ, ಪ್ರತಿಮೆಗಳು ಎಲ್ಲೆಲ್ಲಿಯೂ ಕಾಣುತ್ತಿವೆ; ಆದರೆ ಬೌದ್ಧಮತದ ಕುರುಹುಗಳೆಲ್ಲಿಯೂ ಕಾಣುವುದಿಲ್ಲ; ತುಳುವದಲ್ಲಿ ಈಗಲೂ ಅನೇಕ ಜೈನರಿರುತ್ತಾರೆ, ಆದರೆ ಬೌದ್ಧರ್‍ಯಾರೂ ಇರುವುದಿಲ್ಲ. ತುಳುವದಲ್ಲಿರುವ ದುರ್ಗಾಪರಮೇಶ್ವರೀ ದೇವಾಲಯಗಳೂ ಶಾಸ್ತಾವು ಕಲ್ಲುಗಳೂ ಒಂದಾನೊಂದು ಕಾಲದಲ್ಲಿ ಬೌದ್ಧಮತದ ಪೂಜಾಸ್ಥಳಗಳಾಗಿರಬೇಕೆಂದು ಡಾಕ್ಟರ್ ಸಾಲೆತ್ತೂರರು ಬರೆಯುತ್ತಾರೆ. ದುರ್ಗಾಪರಮೇಶ್ವರಿಯೂ ಮಂಗಳೂರಿನ ಮಂಗಳಾದೇವಿಯೂ ಬೌದ್ಧಮತದ ತಾರಾಭಗವತಿಯೇ ಆಗಿರಬೇಕು – ತುಳುವದಲ್ಲಿ ಬೌದ್ಧಮತವು ಎಲ್ಲಾ ಕಡೆಗಳಲ್ಲಿಯೂ ಹಿಂದೆ ಪ್ರಬಲವಾಗಿರಬೇಕು – ಎಂದು ಅವರು ಸೂಚಿಸುತ್ತಾರೆ. ಆದರೆ ಹೀಗೆ ನಂಬಲಿಕ್ಕೆ ಅವರೇನೂ ಸಮಂಜಸವಾದ ಕಾರಣಗಳನ್ನು ಕೊಟ್ಟಿರುವುದಿಲ್ಲ.

ಅಶೋಕನ ಕಾಲದ ಬಳಿಕ ಬೌದ್ಧ ಧರ್ಮದಲ್ಲಿ ಮಹಾಯಾನ ಮತ್ತು ಹೀನಯಾನ ಎಂಬ ಎರಡು ಶಾಖೆಗಳೆದ್ದವು. ಮಹಾಯಾನವು ಹಿಂದುಸ್ಥಾನದಲ್ಲಿ ಕೆಲವು ಕಾಲ ಉಳಿದು, ಹೀನಯಾನವನ್ನು ಇಲ್ಲಿಂದ ಹೊರ ಅಟ್ಟಿತು. ಮಹಾಯಾನವು ಬುದ್ಧನು ಪ್ರಚಾರ ಮಾಡಿದ ಧರ್ಮವಲ್ಲ. ಹಿಂದೂಮತದ ವರ್ಚಸ್ಸಿನಲ್ಲಿ ಬೆಳೆದ ಬುದ್ಧ ಆರಾಧನೆಯಾಗಿದೆ; ಬುದ್ಧನು ಉಪದೇಶಿಸಿದ ಅಷ್ಟಪಥ ಧರ್ಮವನ್ನು ಬಿಟ್ಟು, ಬುದ್ಧನನ್ನು ದೇವರ ಅವತಾರನೆಂದು ಹೇಳಿ, ಆದಿ ಬುದ್ಧನೊಂದಿಗೆ ಇನ್ನು ಬುದ್ಧರಾಗಲಿಕ್ಕಿರುವ ಬೋಧಿಸತ್ತ್ವರೆಂಬ ದೇವತಾ ಸಮಾನರಾದ ಕಾಲ್ಪನಿಕ ಮಹಾ ವ್ಯಕ್ತಿಗಳನ್ನು ಪೂಜಿಸಿ, ಅವರ ಪ್ರಸಾದದಿಂದ ಮೋಕ್ಷವನ್ನು ಸಂಪಾದಿಸಲೆಳಸುವದೇ ಆ ಮಹಾಯಾನ ಮತ. ಮಹಾಯಾನ ದೇವತಾಮಂದಿರಗಳಲ್ಲೆಲ್ಲಾ ಕೆಲವು ಕಾಲದ ಬಳಿಕ ಬೋಧಿಸತ್ವರಾದ ಅವಲೋಕಿತೇಶ್ವರ ಅಥವಾ ಲೋಕೇಶ್ವರ ಮತ್ತು ತಾರಾ ಭಗವತಿಯನ್ನು ಪೂಜಿಸುವದು ರೂಢಿಯಾಯಿತು. ಈ ಮಹಾಯಾನ ಮತದ ಕೇಂದ್ರವೊಂದು ಮಂಗಳೂರಿನ ಸಮೀಪ ಕದಿರೆಯಲ್ಲಿತ್ತು; ಈಗ ಕದಿರೆಯಲ್ಲಿರುವ ಮಂಜುನಾಥ ದೇವಾಲಯವು ಹಿಂದೆ ಮಹಾಯಾನದ ಬೌದ್ಧವಿಹಾರವಾಗಿತ್ತೆಂಬುದಕ್ಕೆ ಸಂಶಯವಿಲ್ಲ. ಆ

'ಕದಿರಿಕಾ ವಿಹಾರವು' ಸುಮಾರು ಕ್ರಿ. ಶಕ ಎರಡನೇ ಶತಮಾನದಿಂದ ೮ನೇ ಶತಮಾನದ ತನಕ ಬೌದ್ಧ ದೇವತಾಮಂದಿರವಾಗಿದ್ದು, ಶಂಕರಾಚಾರ್ಯರ ಕಾಲದ ಬಳಿಕವೋ, ಸ್ವಲ್ಪ ಮೊದಲೋ, ಹೀನಾವಸ್ಥೆಗೆ ಬಂದು ಹಾಳುಬಿತ್ತು. ತುಳುವದ ಇತರ ಯಾವ ಕಡೆಯಲ್ಲಿಯೂ ಈಗ ಬೌದ್ಧಮತದ್ದೇ ಎಂದು ಖಂಡಿತ ಹೇಳಬಹುದಾದ ಕುರುಹುಗಳಿಲ್ಲ. ಕದಿರಿಕಾ ವಿಹಾರವು ಕ್ರಿ. ಶಕ ೨ರಿಂದ ೮ನೇ ಶತಮಾನಗಳ ನಡುವೆ ತುಳುವಕ್ಕೆ ಉತ್ತರ ದೇಶದಿಂದ ಬರುತ್ತಿದ್ದ ಬೌದ್ಧ ಮತ ಪ್ರಚಾರಕರು ಉಳಕೊಳ್ಳುವ ಸ್ಥಳವಾಗಿತ್ತೆಂದು ಮಾತ್ರ ತೋರುತ್ತದೆ; ತುಳುವದ ಜನರು ಬೌದ್ಧಮತವನ್ನು ಸ್ವೀಕರಿಸಿದ್ದರೆಂದು ಹೇಳ ಸಾಧ್ಯವಿಲ್ಲ. ೯ನೇ ಶತಮಾನದಲ್ಲಿ, ಆಗ ಹಾಳುಬಿದ್ದ ಆ ಕದಿರಿಕಾ ವಿಹಾರದಲ್ಲಿ, ನಾಥಪಂಥದ ಮತ್ಸ್ಯೇಂದ್ರನಾಥನು ನಾಥಪಂಥದ ಮತವನ್ನು ಸ್ಥಾಪಿಸಿದ ಬಳಿಕ, ಬೌದ್ಧಮತದ ಕುರುಹುಗಳೆಲ್ಲವೂ ತುಳುವದಲ್ಲಿ ಅಳಿಸಿ ಹೋದವು. ನಡುವೆ ಉಂಟಾದ ಶೈವಮತದ ಪುನರುತ್ಥಾನದಿಂದ ಬೌದ್ಧಮತವು ತುಳುವದಿಂದ ಸಂಪೂರ್ಣ ಅದೃಶ್ಯವಾದರೂ, ಜೈನಮತವು ಇಲ್ಲಿ ಬಳಿಕವೂ ಉಳಿಯಲಿಕ್ಕೆ ಇತರ ಕಾರಣ ಗಳಿವೆ. ಬಾರ್ಕೂರಿನ ಸಂಸ್ಥಾನವು ಕದಂಬರ ಕಾಲದಲ್ಲಿಯೇ ಅಳಿದುಹೋಗಿ, ಚಾಲುಕ್ಯರ ಕಾಲದಲ್ಲಿ ಆಲೂಪರು ತಮ್ಮ ಅಧಿಕಾರವನ್ನು ಅಲ್ಲಿ ಸ್ಥಾಪಿಸಿದರು.

ಆಲೂಪರು ಕಡು ಶೈವರಾಗಿದ್ದರು. ಜೈನಮತವು ಉತ್ತರ ತುಳುವದಲ್ಲಿ ಅವರ ಕಾಲದಲ್ಲಿ ಮೆಲ್ಲನೆ ಅಳಿದು ಹೋಗುತ್ತಿರುವಾಗ, ಹುಂಬಚ್ಚದ ಜೈನ ಅರಸರು ಕಾರ್ಕಳದಲ್ಲಿಯೂ, ತುಳುವದ ಜೈನ ಅರಸರಾದ ಬಂಗರು ಈಗಿನ ಪುತ್ತೂರು ತಾಲೂಕಿನಲ್ಲಿಯೂ, ಚೌಟರು ಉಳ್ಳಾಲ, ಮೂಡಬಿದ್ರೆಗಳಲ್ಲಿಯೂ ಪ್ರಬಲರಾದ್ದರಿಂದ ಜೈನ ಮತಕ್ಕೆ ಪುನಃ ಹೊಸ ಬಲವು ಸಿಕ್ಕಿ, ಅದು ತುಳುವ ದಲ್ಲಿ ಉಳಿಯಿತು. ಈಗ ಕಾರ್ಕಳ, ಮಂಗಳೂರು, ಪುತ್ತೂರು ತಾಲೂಕುಗಳ ಲ್ಲಿಯೇ ಜೈನರ ಪ್ರಾಬಲ್ಯವಲ್ಲದೆ-ಉತ್ತರ ತುಳುವದಲ್ಲಿಯಾಗಲಿ ಕಾಸರಗೋಡು ತಾಲೂಕಿನಲ್ಲಿಯಾಗಲಿ ಅವರ ಸಂಖ್ಯೆಯು ತೀರಾ ಕಡಿಮೆಯಾಗಿದೆ.

## ೪. ಬಾದಾಮಿಯ ಪಶ್ಚಿಮ ಚಾಲುಕ್ಯರು

(ಕ್ರಿ. ಶ. ೫೭೫ – ೭೫೭.)

ಕಿ. ಶ. ೫೭೫ರಿಂದ ತುಳುವಕ್ಕೆ ಅಧಿರಾಜರಾದ ಪಶ್ಚಿಮ ಚಾಲುಕ್ಯರ ಕಾಲವು ಕರ್ಣಾಟಕದ ಇತಿಹಾಸದಲ್ಲಿ ಮಹತ್ವದ ಕಾಲವಾಗಿತ್ತು. ಆಧುನಿಕ

ಸಂಶೋಧಕರ ಅಭಿಪ್ರಾಯದ ಮೇರೆಗೆ ಚಾಲುಕ್ಯರು ಮೂಲ ಕರ್ಣಾಟಕದವರೆಂದು ಗೊತ್ತಾಗಿರುತ್ತದೆ. ಚಾಲುಕ್ಯ ವಂಶದಲ್ಲಿ ನಾಲ್ಕು ಶಾಖೆಗಳಿವೆ. (೧) ಬಾದಾಮಿಯ ಚಾಲುಕ್ಯರು, (೨) ಕಲ್ಯಾಣದ ಚಾಲುಕ್ಯರು, (೩) ಗುಜರಾಥದ ಚಾಲುಕ್ಯರು, (೪) ವೆಂಗಿಯ ಚಾಲುಕ್ಯರು. ಇವುಗಳಲ್ಲಿ ೧, ೨ನೇ ಶಾಖೆಗಳೇ ಮುಖ್ಯವಾದವುಗಳು. ೧ನೇ ಶಾಖೆಯೇ ತುಳುವವನ್ನು ಆಳಿದ್ದಾಗಿದೆ. ಪಶ್ಚಿಮ ಚಾಲುಕ್ಯರೆಂದರೆ ಆ ೧ನೇ ಶಾಖೆಯವರೇ. ಅವರು ಮೊದಲು ಕದಂಬರ ಕೆಳಗೆ ಸಣ್ಣ ರಾಜ್ಯವನ್ನು ಆಳಿಕೊಂಡಿದ್ದರು. ಕ್ರಿ. ಶ. ೫೫೦ರಲ್ಲಿ ಆಳಲಾರಂಭಿಸಿದ ಸತ್ಯಾಶ್ರಯ ಪುಲಿಕೇಶಿಯು ಬಾದಾಮಿಯಲ್ಲಿ ತನ್ನ ರಾಜಧಾನಿಯನ್ನು ಮಾಡಿಕೊಂಡು, ಅಲ್ಲಿ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿ ಅಶ್ವಮೇಧ ಯಾಗವನ್ನು ಮಾಡಿದನು. ಬಾದಾಮಿಯ ಚಾಲುಕ್ಯರ ವಂಶವನ್ನು ಸ್ಥಾಪಿಸಿದವನು ಅವನೇ. ಅವನ ಬಳಿಕ ಕ್ರಿ. ಶ. ೫೬೭ರಿಂದ ೫೯೭ರ ತನಕ ಅವನ ಮಗನಾದ ರಣಪರಾಕ್ರಮ ೧ನೇ ಕೀರ್ತಿವರ್ಮನು ಆಳಿದನು. ಅವನು ಸುಮಾರು ೫೭೫ರಲ್ಲಿ, ಬನವಾಸಿಯ ಕದಂಬ ರಾಜನನ್ನು ಜೈಸಿ, ಅವನ ರಾಜ್ಯವನ್ನು ತನ್ನ ಸ್ವಾಧೀನಪಡಿಸಿಕೊಂಡನು. ಅದರ ಬಳಿಕ ತುಳುವದಲ್ಲಿ ಕದಂಬರ ಅಧಿಕಾರವು ಮುಗಿದು, ಆಲೂಪರು ಚಾಲುಕ್ಯರ ಉಪರಾಜರಾಗಿ ತುಳುವವನ್ನು ಆಳಪ್ರಾರಂಭಿಸಿದರು. ಆದರೆ ಕದಂಬರು ಬನವಾಸಿಯಲ್ಲಿ ಅದರ ಬಳಿಕವೂ ಚಾಲುಕ್ಯರ ಮಂಡಲೇಶ್ವರರಾಗಿ ಕೆಲವು ಕಾಲ ಬಾಳಿದರು. ಕೀರ್ತಿವರ್ಮನ ಬಳಿಕ ಅವನ ತಮ್ಮನಾದ ಮಂಗಳೇಶನು ೧೧ ವರ್ಷ ಆಳಿದನು.

## ೨ನೇ ಪುಲಿಕೇಶಿ (ಕ್ರಿ ಶ. ೬೦೯-೬೪೨.)

ಮಂಗಳೇಶನ ಕಾಲದಲ್ಲಿ ಆಲೂಪ ಅರಸರು ತುಳುವದಲ್ಲಿ ಸ್ವತಂತ್ರರಾಗ ಪ್ರಯತ್ನಿಸಿದರು. ಕ್ರಿ. ಶ. ೬೦೯ರಲ್ಲಿ, ೧ನೇ ಕೀರ್ತಿವರ್ಮನ ಮಗನಾದ ಸತ್ಯಾಶ್ರಯ ಎರಡನೇ ಪುಲಿಕೇಶಿಯು, ಮಂಗಳೇಶನಿಂದ ರಾಜ್ಯವನ್ನು ತನ್ನ ಕೈವಶ ಮಾಡಿಕೊಂಡು ಕರ್ಣಾಟಕವನ್ನು ಆಳತೊಡಗಿದನು. ಚಾಲುಕ್ಯ ಅರಸರಲ್ಲೆಲ್ಲಾ ಪ್ರಖ್ಯಾತಿಯನ್ನು ಹೊಂದಿದ ಆ ೨ನೇ ಪುಲಿಕೇಶಿಯು ಮಹಾ ಪರಾಕ್ರಮಿಯಾಗಿದ್ದನು. ಅವನು ಆಲೂಪರನ್ನು ಜೈಸಿ ಅವರನ್ನು ತನ್ನ ಕಡೆ ಒಲಿಸಿಕೊಂಡನು. ಆಲೂಪರು ಅದರ ಬಳಿಕ ಚಾಲುಕ್ಯರೊಡನೆ ಭಕ್ತಿಯಿಂದ ನಡೆಯುತ್ತಿದ್ದರು. ೨ನೇ ಸತ್ಯಾಶ್ರಯ ಪುಲಿಕೇಶಿಯ ಕಾಲವು ಕರ್ಣಾಟಕದ

ಇತಿಹಾಸದಲ್ಲಿ ಮಾತ್ರವಲ್ಲ–ಸಮಗ್ರ ಹಿಂದುಸ್ಥಾನದ ಇತಿಹಾಸದಲ್ಲೇ ಒಳ್ಳೇ ಮಹತ್ವದ ಕಾಲವಾಗಿತ್ತು. ಆಗ ಇಡೀ ಉತ್ತರ ಹಿಂದು ಸ್ಥಾನವನ್ನು ಹರ್ಷ ವರ್ಧನನು ಆಳುತ್ತಿದ್ದನು. ನರ್ಮದೆಯಿಂದ ಕೆಳಗಿರುವ ದಕ್ಷಿಣಾಪಥದ ಉತ್ತರ ಭಾಗವನ್ನು ಈ ಪುಲಿಕೇಶಿಯು ಆಳುತ್ತಿದ್ದನು. ಪುಲಿಕೇಶಿಯ ಕರ್ನಾಟಕ ಸಾಮ್ರಾಜ್ಯದ ದಕ್ಷಿಣಕ್ಕೆ, ಪಲ್ಲವರ ಅತ್ಯಂತ ಪ್ರಬಲ ಅರಸನಾದ ನರಸಿಂಹ ವರ್ಮನು ಆಳುತ್ತಿದನು. ಮೂವರೂ ಬಲಾಢ್ಯ ಚಕ್ರವರ್ತಿಗಳಾಗಿದ್ದರು. ಪಟ್ಟಕ್ಕೆ ಬಂದೊಡನೆ, ಪುಲಿಕೇಶಿಗೆ ಉಳಿದ ಇಬ್ಬರೊಡನೆಯೂ ಕಾದಾಡಬೇಕಾಯಿತು. ಉತ್ತರದಲ್ಲಿ ಪುಲಿಕೇಶಿಯು ಹರ್ಷವರ್ಧನನ್ನು ಸೋಲಿಸಿ, ಆತನು ದಕ್ಷಿಣಕ್ಕೆ ಮುಂದರಿಯದಂತೆ ತಡೆಗಟ್ಟಿ, ದಕ್ಷಿಣದಲ್ಲಿ ಪಲ್ಲವರನ್ನು ಸೋಲಿಸಿ, ಕರ್ನಾಟಕದ ಮೇರೆಯನ್ನು ಭದ್ರಪಡಿಸಿದನು.

ಮೊದಲಿಂದಲೂ ಪಲ್ಲವರಿಗೂ ಚಾಲುಕ್ಯರಿಗೂ ತೀಕ್ಷ್ಣವಾದ ಹಗೆತನವಿತ್ತು. ಪಲ್ಲವರು ಕದಂಬರ ಮಿತ್ರರಾಗಿದ್ದದ್ದನ್ನು ನಾವು ಹಿಂದೆ ಓದಿರುತ್ತೇವೆ. ಚಾಲುಕ್ಯ–ಪಲ್ಲವರ ಹೋರಾಟಗಳು ಈ ಪುಲಿಕೇಶಿಯ ಕಾಲದಲ್ಲಿ ನಿರಂತರ ನಡೆಯುತ್ತಾ ಇದ್ದವು. ೨ನೇ ಪುಲಿಕೇಶಿಯು ಕರ್ನಾಟಕದ ಸಿಂಹಾಸನವನ್ನೇರಿದ ಬಳಿಕ, ಅವನ ಪ್ರಚಂಡ ವಿಜಯವನ್ನು ಸಹಿಸಲಾರದೆ ಪಲ್ಲವರೊಡನೆ ಚೋಳ, ಕೇರಳ, ಪಾಂಡ್ಯ ದೇಶದ ಅರಸರೆಲ್ಲಾ ಸೇರಿ, ಪುಲಿಕೇಶಿಯನ್ನು ಎದುರಿಸಿದರು. ಕದಂಬರು ಆಗ ಚಾಲುಕ್ಯರ ಉಪರಾಜರಾಗಿದ್ದರೂ ಪೂರ್ವ ಸ್ನೇಹದ ದೆಸೆಯಿಂದ, ಪಲ್ಲವರಿಗೆ ಸಹಾಯಕರಾದರು. ಅವರೆಲ್ಲರೂ ಒಮ್ಮೆ ಜಯಶೀಲರಾಗಿ, ಬಾದಾಮಿಯೊಳಗೆ ನುಗ್ಗಿ, ಅದನ್ನು ಕೊಳ್ಳೆ ಹೊಡೆದರು. ಆದರೆ ಕೊನೆಗೆ ಪುಲಿಕೇಶಿಯು ಚೋಳ, ಕೇರಳ, ಪಾಂಡ್ಯ ಅರಸರನ್ನೆಲ್ಲಾ ಸೋಲಿಸಿ, ಪಲ್ಲವರನ್ನು ಬಗ್ಗಿಸಿದನು. ಇದಾದ ಬಳಿಕ, ಪುಲಿಕೇಶಿಯು ಪಲ್ಲವರಿಂದ ಇನ್ನು ತನಗೆ ಗಂಡಾಂತರಗಳೊದಗದಂತೆ, ಕದಂಬರನ್ನು ಬನವಾಸಿಯ ಅಧಿಕಾರದಿಂದ ತಪ್ಪಿಸಿ, ಅವರ ವೈರಿಗಳಾದ ಆಲೂಪರನ್ನು ಕದಂಬ ಮಂಡಲಕ್ಕೆಲ್ಲಾ ಮೇಲ್ವಿಚಾರಕ್ಕೆ ನೇಮಿಸಿದನು. ಹೀಗಾಗಿ ಆಲೂಪರು ಕೆಲವು ಕಾಲ ಹುಂಬಚ್ಚದಲ್ಲಿ ರಾಜಧಾನಿ ಮಾಡಿಕೊಂಡಿದ್ದು, ಈ ಎರಡನೇ ಪುಲಿಕೇಶಿಯ ಕಾಲದಿಂದ ಪಶ್ಚಿಮ ಚಾಲುಕ್ಯರ ವಿಶ್ವಾಸದ ಉಪರಾಜರಾಗಿದ್ದರು. ಕ್ರಿ. ಶಕ ೬೪೨ರಲ್ಲಿ ಪಲ್ಲವ ರಾಜನಾದ ನರಸಿಂಹ ವರ್ಮನು ಪುನಃ ದೊಡ್ಡ ಸೈನ್ಯವನ್ನು ಸಂಗ್ರಹಿಸಿ, ಪುಲಿಕೇಶಿಯೊಡನೆ ಹೋರಾಡಿ, ಆತನನ್ನು ಕೊಂದು, ಕರ್ನಾಟಕ

ದೇಶವನ್ನು ಹಾಳು ಮಾಡಿದನು. ಕ್ರಿ. ಶಕ. ೬೪೨ರಿಂದ ೬೫೫ರ ತನಕ ಪಲ್ಲವರೇ ಕರ್ಣಾಟಕವನ್ನು ಆಳಿದರು. ಆ ನಡುವೆ ಆಲೂಪರ ಅಧಿಕಾರಕ್ಕೆ ಪಲ್ಲವರಿಂದ ಕೇಡು ಒದಗಲಿಲ್ಲವೆಂದು ತೋರುತ್ತದೆ.

**ಸತ್ಯಾಶ್ರಯ ೧ನೇ ವಿಕ್ರಮಾದಿತ್ಯ. (ಕ್ರಿ. ಶಕ. ೬೫೫ರಿಂದ ೬೮೦.)**

ಬಲಿಷ್ಠ ಪಲ್ಲವ ರಾಜನಾದ ನರಸಿಂಹ ವರ್ಮನು ಕಾಲಾಧೀನನಾದ ಬಳಿಕ,-ಕ್ರಿ. ಶಕ ೬೫೫ರಲ್ಲಿ ಪುಲಿಕೇಶಿಯ ಮಗನಾದ ವಿಕ್ರಮಾದಿತ್ಯನು ಕರ್ಣಾಟಕ ರಾಜ್ಯವನ್ನು ಸ್ವಾಧೀನ ಪಡಿಸಿಕೊಂಡು, ಚೋಳ, ಪಾಂಡ್ಯ, ಕೇರಳ ವನ್ನು ಪುನಃ ಜೈಸಿದನು. ಆತನು ತನ್ನ ತಮ್ಮನಾದ ಜಯಸಿಂಹ ವರ್ಮನನ್ನು ಗುಜರಾಥಿನ ಅರಸನಾಗಿ ಪಟ್ಟಕ್ಕೇರಿಸಿದರಿಂದ, ಚಾಲುಕ್ಯರ ೩ನೇ ಶಾಖೆಯು ಅಲ್ಲಿ ಸ್ಥಾಪಿತವಾಯಿತು.



**೬೮೦-೬೯೬. ವಿನಯಾದಿತ್ಯ.**

ಆಲೂಪರ ಮೇಲೆ ವಿಕ್ರಮಾದಿತ್ಯನಿಗೂ ಆತನ ನಂತರ ಆಳಿದ ಆತನ ಮಗನಾದ ವಿನಯಾದಿತ್ಯನಿಗೂ ತುಂಬಾ ಪ್ರೀತಿ ಇತ್ತು. ಇವರ ಆಳಿಕೆಯಲ್ಲಿ ಆಲೂಪ ಅರಸರು ಕರ್ಣಾಟಕ ಸಾರ್ವಭೌಮರೊಡನೆಯೇ ಕೆಲವು ಕಾಲ ಕರ್ಣಾಟಕ ರಾಜ್ಯವನ್ನು ಸುತ್ತುತ್ತಿದ್ದರೆಂದು ತೋರುತ್ತದೆ. ವಿನಯಾದಿತ್ಯನ ಬಳಿಕ ಸತ್ಯಾಶ್ರಯ ವಿಜಯಾದಿತ್ಯನೂ (ಕ್ರಿ. ಶಕ ೬೯೬-೭೩೩.) ೨ನೇ ವಿಕ್ರ ಮಾದಿತ್ಯನೂ (ಕ್ರಿ. ಶಕ ೭೩೩-೭೪೬) ಚಾಲುಕ್ಯ ಅರಸರಾಗಿ, ಕುಂದಿಲ್ಲದೆ ಕರ್ಣಾಟಕ ರಾಜ್ಯವನ್ನಾಳಿದರು. ಕ್ರಿ. ಶಕ ೭೩೯ರಷ್ಟಕ್ಕೆ, ಸಿಂಧೂ ದೇಶದಲ್ಲಿ ಅಷ್ಟರಲ್ಲಿ ಸೇರಿಕೊಂಡ ಮುಸ್ಲಿಮ ಅರಬರು ದಕ್ಷಿಣಾಪಥ (ದಖ್ಖಣ)ಕ್ಕೆ ದಂಡೆತ್ತಿ ಬಂದಾಗ, ೨ನೇ ವಿಕ್ರಮಾದಿತ್ಯನು ಅವರನ್ನು ಸೋಲಿಸಿ, ಓಡಿಸಿದನು.

**೨ನೇ ಕೀರ್ತಿವರ್ಮ(೭೪೬-ರಿಂದ ೭೫೭.)**

ಇವನ ಕಾಲದಲ್ಲಿ ಇವನ ರಾಜ್ಯದ ಉತ್ತರ ಭಾಗದಲ್ಲಿ ರಾಷ್ಟ್ರಕೂಟ ರಾಜ್ಯವು ಪ್ರಬಲವಾಯಿತು. ೨ನೇ ಕೀರ್ತಿವರ್ಮನು ತನ್ನ ಆಳಿಕೆಯ ಕೊನೆ ಯಲ್ಲಿ ಪಲ್ಲವರೊಡನೆ ಹೋರಾಡುತ್ತಾ ಅವರ ರಾಜಧಾನಿಯಾದ ಕಂಚಿಗೆ ಹೋದಾಗ, ರಾಷ್ಟ್ರಕೂಟ ಅರಸನಾದ ದಂತಿದುರ್ಗನು ಬಾದಾಮಿಯನ್ನು ಹಿಡಿದು, ಕರ್ಣಾಟಕ ಸಿಂಹಾಸನವನ್ನೇರಿದನು. ಕೀರ್ತಿವರ್ಮನು ಅವನಿಂದ

ಪರಾಜಿತನಾಗಿ, ಯುದ್ಧದಲ್ಲಿ ಮಡಿದನು. ಬಾದಾಮಿಯ ಚಾಲುಕ್ಯ ವಂಶವು ಅಲ್ಲಿಗೆ ನಾಶ ಹೊಂದಿತು.

ಪಶ್ಚಿಮ ಚಾಲುಕ್ಯರ ಕೊನೆಯ ಅರಸನಾದ ೨ನೇ ಕೀರ್ತಿವರ್ಮನ ಕಾಲದ, ಸಂಸ್ಕೃತ ಮತ್ತು ಕನ್ನಡ ಬರಹದಲ್ಲಿರುವ, ಒಂದು ಶಾಸನವು ಕಾಸರಗೋಡು ತಾಲೂಕಿನ ಅಡೂರಿನಲ್ಲಿ ದೊರಕಿದೆಯಾದ್ದರಿಂದ ಪಶ್ಚಿಮ ಚಾಲುಕ್ಯರ ಅಧಿಕಾರವು ಇಡೀ ತುಳುವನ್ನಾವರಿಸಿತ್ತೆಂದು ನಿಶ್ಚೈಸಬಹುದು. ಆಲೂಪ ಅರಸರು ಅವರ ಕೆಳಗೆ ತುಳುವದ ಉಪರಾಜರಾಗಿದ್ದರಿಂದ, ಆಳ್ವಖೇಡದ ಚಿಕ್ಕ ಅರಸುತನದಿಂದ ಅವರು ಇಡೀ ತುಳುವದ ಅರಸುತನಕ್ಕೆ ಚಾಲುಕ್ಯರ ಕಾಲದಲ್ಲಿ ಮುಟ್ಟಿದ್ದರೆಂಬದು ನಿಶ್ಚಯವಾಗುತ್ತದೆ.

ಪಶ್ಚಿಮ ಚಾಲುಕ್ಯರ ಕಾಲದಲ್ಲಿ, ಹಿಂದುಸ್ಥಾನದ ಪಶ್ಚಿಮಕ್ಕೆ, ಇಡೀ ಜಗತ್ತಿನ ಸ್ಥಿತಿಗತಿಗಳನ್ನೇ ಮಾರ್ಪಡಿಸಿರುವ ಮಹತ್ವದ ಸಂಗತಿಯು ಸಂಭವಿಸಿತು. ಕ್ರಿ. ಶಕ ೫೭೦ಲ್ಲಿ ಅರೇಬಿಯದಲ್ಲಿ ಇಸ್ಲಾಮು ಮತಸ್ಥಾಪಕನಾದ ಮುಹಮ್ಮದನು ಜನ್ಮವೆತ್ತಿ, ತನ್ನ ೪೦ನೇ ವಯಸ್ಸಿನಲ್ಲಿ ತನ್ನ ಹೊಸ ಧರ್ಮವನ್ನು ಪ್ರಚಾರಗೊಳಿಸತೊಡಗಿದನು. ಕ್ರಿ. ಶಕ ೬೨೨ಲ್ಲಿ, ತನ್ನ ವೈರಿಗಳ ಬಾಧೆಯಿಂದ, ಮುಹಮ್ಮದನು ಮಕ್ಕವನ್ನು ಬಿಟ್ಟು ಮೆಡಿನಕ್ಕೆ ಓಡಿಹೋಗಬೇಕಾಯಿತು. ಮುಸ್ಲಿಮರು ಆ ವರ್ಷವೇ ಇಸ್ಲಾಮಿನ ಸ್ಥಾಪನೆಯ ವರ್ಷವೆಂದು ಎಣಿಸಿ, ಹಿಜರೀ ಶಕವನ್ನು ಅಲ್ಲಿಂದ ಪ್ರಾರಂಭಿಸುತ್ತಾರೆ. ಹಿಜರೀಶಕ ಪ್ರಾರಂಭದಲ್ಲಿ, ತುಳುವವನ್ನು ಬಲಿಷ್ಠ ಕರ್ಣಾಟಕ ಸಾರ್ವಭೌಮನಾದ ೨ನೇ ಪುಲಿಕೇಶಿಯ ಕೆಳಗೆ, ಆಲೂಪ ಅರಸನಾದ ಕುಂದವರ್ಮನು ಆಳುತ್ತಿದ್ದನು. ಚಾಲುಕ್ಯರ ಕೆಳಗೆ ಹೊರ ವೈರಿಗಳ ಭೀತಿಯಿಲ್ಲದೆ, ಕರ್ಣಾಟಕವೂ ಕರ್ಣಾಟಕದ ಅಂಶವಾದ ತುಳುವವೂ ಸುಖದಿಂದ ಬಾಳಿಕೊಂಡಿರುವಾಗ,–ಇಸ್ಲಾಮಿನ ಸೈನ್ಯಗಳು ಇರಾಕ್, ಇರಾಣ, ಮಧ್ಯ ಆಸ್ಯಗಳನ್ನೆಲ್ಲಾ ಜೈಸಿ, ಇಸ್ಲಾಮು ಮತವನ್ನು ಅವರು ಜೈಸಿದ ದೇಶಗಳಲ್ಲೆಲ್ಲಾ ಸ್ಥಾಪಿಸಿ, ಕ್ರಿ. ಶಕ ೭೧೨ಲ್ಲಿ ಹಿಂದುಸ್ಥಾನದ (ಈಗಿನ ಪಾಕಿಸ್ತಾನದೊಳಗಿರುವ) ಸಿಂಧೂಪ್ರಾಂತ್ಯಕ್ಕೆ ಮುಟ್ಟಿದ್ದವು. ಕರ್ಣಾಟಕದ ಅರಸರಿಗಾಗಲೀ ಜನರಿಗಾಗಲೀ ಇಸ್ಲಾಮಿನ ಪ್ರಚಂಡ ಶಕ್ತಿಯ ತಿಳುವಳಿಕೆಯು ಆಗ ಇದ್ದಂತೆ ತೋರುವುದಿಲ್ಲ. ಆದರೆ ಕರ್ಣಾಟಕದ ಸಾರ್ವಭೌಮರು ರಣಪರಾಕ್ರಮಿಗಳಾದ್ದರಿಂದ, ಅರಬರು ದಕ್ಷಿಣಾಪಥಕ್ಕೆ ಇಳಿಯ ಧೈರ್ಯಪಡದೆ, ಕರ್ಣಾಟಕವೂ ತುಳುವವೂ ಮುಸ್ಲಿಮರ ಪಾದಸ್ಪರ್ಶದಿಂದ ಉಳಿದವು.

# ೪. ಕ್ರಿ. ಶಕ ೫೭೫ರಿಂದ ೭೭೦ರ ತನಕದ ತುಳುವ ಚರಿತ್ರೆ

ಈ ಎರಡು ಶತಮಾನಗಳ ನಡುವಣ ತುಳುವ ಚರಿತ್ರೆಯನ್ನು ನಾವು ಮೇಲೆ ಅಲ್ಲಲ್ಲಿ ತಿಳಕೊಂಡಿರುತ್ತೇವೆ. ಬಾರಕೂರಿನಲ್ಲಿದ್ದ ಜೈನ ಅರಸರ ಆಳಿಕೆಯು ಕ್ರಿ. ಶಕ ೫೭೫ರ ಮೊದಲೇ ಅಂತ್ಯವಾಗಿತ್ತು. ಜೈನ ಮತದ ಪ್ರಾಬಲ್ಯವು ತುಳುವದಲ್ಲಿ ಕಡಿಮೆಯಾಗಿ, ಹಿಂದೂ ಮತವನ್ನೇ ಪುನಃ ಸ್ವೀಕರಿಸಿದ ಬಂಟರೂ ನಾಡವರೂ ಅಲ್ಲಲ್ಲಿ ಪ್ರಬಲರಾಗಿದ್ದರು. ಬ್ರಾಹ್ಮಣರ ಕೈವಶ ಕದಂಬರು ಬಿಟ್ಟ ೩೨ ಗ್ರಾಮಗಳಲ್ಲಿ, ಅವರು ಪ್ರಬಲರಾಗಿ ಅರಸನು ಅವರ ಸಹಾಯದಿಂದ ಅಲ್ಲಿ ರಾಜ್ಯಪರಿಪಾಲನೆ ಮಾಡುತ್ತಿದ್ದನು. ಅವರ ಗ್ರಾಮಗಳ ಪ್ರತಿನಿಧಿಗಳು ಕೂಡಿದ ಸಭೆಗಳು ಕೋಟ, ಅನಂತೇಶ್ವರಗಳಲ್ಲಿ ಆಗಾಗ ಜರಗಿ, ನ್ಯಾಯಪರಿಪಾಲನೆ, ಸಾಮಾಜಿಕ ವ್ಯವಸ್ಥೆಗಳ ಕುರಿತು ತೀರ್ಮಾನಿಸುತ್ತಿದ್ದವು. ತುಳುವದಲ್ಲೆಲ್ಲಾ ಜಾತಿಕಟ್ಟಿನ ಬಿಗಿತನವು ತಲೆದೋರಿತ್ತು. ಕದಂಬರು ಹೊರಗಿನಿಂದ ತಂದ ಬ್ರಾಹ್ಮಣರು ಇಲ್ಲಿ ಮೊದಲೇ ಇದ್ದ ಶಿವಬ್ರಾಹ್ಮಣರನ್ನು, ಅವರು ಬ್ರಾಹ್ಮಣ ವಿಧಿಗಳ ಪೌರೋಹಿತ್ಯಕ್ಕೆ ಅಯೋಗ್ಯರೆಂದು ಹೇಳಿ, ತಮ್ಮ ಕೆಳಗಿನ ಸ್ಥಾನಕ್ಕೆ ನೂಕಿದ್ದರು. ವೃತ್ತಿಗಳ ಪ್ರಕಾರದ ಜಾತಿಗಳು ದ್ರಾವಿಡರಲ್ಲಿಯೂ ತಲೆದೋರಿದ್ದವು.

ಬೌದ್ಧಮತದ ಮಹಾಯಾನ ಶಾಖೆಯು ತುಳುವದಲ್ಲಿ ಕೆಲವು ಕಾಲ ಚಟುವಟಿಕೆಗಳನ್ನು ನಡಿಸಿ ಹೀನಾವಸ್ಥೆಗೆ ಬಂದಿತ್ತು. ಮಹಾಯಾನ ಮತದ ಸಂಪರ್ಕದಿಂದ ಹಿಂದುಗಳಲ್ಲಿಯೂ ದೇವಾಲಯ, ಮಠಗಳು ತಲೆದೋರಿದ್ದವು. ಶಿವಭಕ್ತಿಯು ದ್ರಾವಿಡರಲ್ಲೆಲ್ಲಾ ಬೌದ್ಧ, ಜೈನ ಧರ್ಮಗಳ ಮೊದಲೇ ಇದ್ದರೂ ಆಗ ಲಿಂಗಾರಾಧನೆಯಲ್ಲದೆ ದೇವಾಲಯಗಳಿರಲಿಲ್ಲ. ಬೌದ್ಧ, ಜೈನ ಧರ್ಮಗಳು ತುಳುವದ ದ್ರಾವಿಡರಲ್ಲಿ ಕೆಲವು ಕಾಲ ಪ್ರಬಲವಾಗಿ, ಅವರ ಶಿವಭಕ್ತಿಯು ಮುಸಕಾಗಿದ್ದರೂ, ಅದು ಕೊನೆಗೆ ಪುನಃ ಪ್ರಜ್ವಲವಾಗಿ ಬೆಳಗತೊಡಗಿತ್ತು. ಹಿಂದುಸ್ಥಾನದಲ್ಲೆಲ್ಲಾ ಆರ್ಯರ ವೈದಿಕ ಕಾಲದ ಇಂದ್ರ, ವರುಣ, ಅಗ್ನಿ ದೇವತೆಗಳು ಹೀನಾವಸ್ಥೆಯನ್ನು ಹೊಂದಿ, ಅವರ ಸ್ಥಾನಗಳಿಗೆ ದ್ರಾವಿಡರ ಬ್ರಹ್ಮ, ವಿಷ್ಣು ಶಿವರು ಏರಿದ್ದರು. ಆದರೆ ಆರ್ಯರ ಕೈಯಲ್ಲಿ ಆ ದ್ರಾವಿಡ ಬ್ರಹ್ಮ, ವಿಷ್ಣು ಶಿವರು ನೂತನ ರೂಪವನ್ನು ತಾಳಿ, ಆರ್ಯ

ದ್ರಾವಿಡ ಕಲ್ಪನೆಗಳ ಮಿಶ್ರದಿಂದ ಈಗಿನ ತ್ರಿಮೂರ್ತಿಗಳಾಗಿ, ಹಿಂದುಗಳ ಆರಾಧನೆಯನ್ನು ಪಡೆಯತೊಡಗಿದ್ದರು. ಹಿಂದೂ ಮತವು ಆರ್ಯರ ಯಜ್ಞ, ಹೋಮ ವಿಧಿಗಳನ್ನು ಬಿಟ್ಟು, ಭಕ್ತಿಮಾರ್ಗವನ್ನನುಸರಿಸಿ, ಮುಂದರಿಯ ತೊಡಗಿ, ದೇವರೆಂದರೆ ಮನುಷ್ಯನು ಫಲಾಪೇಕ್ಷೆ ಇಲ್ಲದೇನೇ ತನ್ನ ಭಕ್ತಿಯನ್ನರ್ಪಿಸಬೇಕಾದ ಮಹಾ ಮಹಿಮನೆಂಬ ಕಲ್ಪನೆಯು ಎಲ್ಲಾ ಜನರಲ್ಲಿ ಬಂದಿತ್ತು. ಬೌದ್ಧಮತದ ಮಹಾಯಾನ ಶಾಖೆಯ ಸಂಪರ್ಕದಿಂದ, ಹಿಂದುಗಳಲ್ಲಿ ದೇವಿ ಆರಾಧನೆಯೂ ಪ್ರಾರಂಭವಾಗಿತ್ತು.

ತುಳುವದಲ್ಲಿ ಈ ನೂತನ ಶಿವಭಕ್ತಿಯ ರಭಸದ ಪರಿಣಾಮವಾಗಿ ದುರ್ಗಾಪರಮೇಶ್ವರೀ ದೇವಾಲಯಗಳೂ, ಮಹಾಲಿಂಗೇಶ್ವರ ದೇವಾಲಯಗಳೂ ಶಿವಾಲಯಗಳೂ ಅಲ್ಲಲ್ಲಿ ತಲೆದೋರಿದ್ದವು.

ಆಲೂಪ ಅರಸರು ಕಡು ಶಿವಭಕ್ತರಾಗಿದ್ದರು. ಅವರು ತಮ್ಮ ರಾಜಧಾನಿಯಾದ (ಉದಯಪುರಿ) ಉದ್ಯಾವರದಲ್ಲಿರುವ ಶಂಭುಕಲ್ಲು ದೇವಾಲಯದಲ್ಲಿ ಶಿವನನ್ನು ಆರಾಧಿಸುತ್ತಿದ್ದರು. ಆಗ ಶೈವರಿಗೆಲ್ಲಾ ಉದಯಪುರಿಯ ಬಳಿಯಿದ್ದ ಶಿವಬೆಳ್ಳಿ, (ಈಗಿನ ಶಿವಳ್ಳಿ)ಯು, ಈಗ ಹಿಂದುಗಳಿಗೆಲ್ಲಾ ವಾರಣಾಸಿ (ಕಾಶಿ)ಯು ಎಷ್ಟು ಪವಿತ್ರ ಕ್ಷೇತ್ರವಾಗಿದೆಯೋ ಅಷ್ಟೇ ಪವಿತ್ರ ಕ್ಷೇತ್ರವಾಗಿತ್ತು.

**ಆಲೂಪ ವಂಶದ ಮೊದಲನೆಯ ೯ ಅರಸರು.** ಆಲೂಪ ವಂಶದ ೯ ಅರಸರ ಹೆಸರನ್ನು ಶಾಸನಗಳ ಆಧಾರದಿಂದ ಡಾ. ಸಾಲೆತ್ತೂರರು ಈ ಕೆಳಗಿನಂತೆ ನಿಶ್ಚೈಸಿದ್ದಾರೆ.

| | | |
|---|---|---|
| ೧. | ಶ್ರೀ ಮಾರಮ್ಮ ಆಳ್ವರಸು | ಕ್ರಿ. ಶಕ ೫೭೫ರಿಂದ ೬೦೦. |
| ೨. | ಶ್ರೀ ಸಕಲ ಶ್ರೀಮತ್ ಆಳ್ವರಸು | ಕ್ರಿ. ಶಕ ೬೦೦ರಿಂದ ೬೨೫. |
| ೩. | ಶ್ರೀ ಕುಂದವರ್ಮರಸು | ಕ್ರಿ. ಶಕ ೬೨೫ರಿಂದ ೬೫೦. |
| ೪. | ಶ್ರೀ ಆಳ್ವರಸ ಗುಣಸಾಗರ | ಕ್ರಿ. ಶಕ ೬೫೦ರಿಂದ ೬೭೫. |
| ೫. | ೧ನೇ ಚಿತ್ರವಾಹನ | ಕ್ರಿ. ಶಕ ೬೭೫ರಿಂದ ೭೧೦. |
| ೬. | ರಣಸಾಗರ | ಕ್ರಿ. ಶಕ ೭೧೦ರಿಂದ ೭೨೦. |
| ೭. | ಶ್ವೇತವಾಹನ | ಕ್ರಿ. ಶಕ ೭೨೦ರಿಂದ ೭೩೦. |
| ೮. | ಪೃಥ್ವೀಸಾಗರ ಆಲುಪೇಂದ್ರ | ಕ್ರಿ. ಶಕ ೭೩೦ರಿಂದ ೭೫೦. |
| ೯. | ವಿಜಯಾದಿತ್ಯ ಆಲುಪೇಂದ್ರ | ಕ್ರಿ. ಶಕ ೭೫೧ರಿಂದ ೭೭೦. |

ಮೇಲೆ ತೋರುವ ೧ನೇ ಶ್ರೀ ಮಾರಮ್ಮ ಆಳ್ವರಸನ ಕಾಲದಿಂದ ಆಲೂಪರ ಆಳಿಕೆಯ ಶಿಲಾ ಲೇಖಗಳು ದೊರೆತಿವೆ. ಅವರ ಆಳಿಕೆಯ ಕುರುಹುಗಳೇನೂ ಅವರ ಮೊದಲಿನವು ದೊರತಿರುವುದಿಲ್ಲ. ಮಾರಮ್ಮ ಆಳ್ವರಸನ ಕಾಲದಲ್ಲಿ ಒದೆವೂರು (ಉದಯಪುರಿ, ಉದ್ಯಾವರ) ರಾಜಧಾನಿಯಾಗಿ, (ಉಪ್ಪೂರಿನ ಬಳಿ) ಕೋಳಾಲವೂ ಒಂದು ನಗರವಾಗಿತ್ತು. ೩ನೇ ಕುಂದವರ್ಮರಸನ ಕಾಲದಲ್ಲಿ, ಕದಂಬ ಮಂಡಲವು ಆಲೂಪ ಅರಸರ ಕೆಳಗಿತ್ತೆಂದು ತೋರುತ್ತದೆ. ೪ನೇ ಗುಣಸಾಗರನು, ಕುಂದವರ್ಮನ ಮರಣಾನಂತರ, ತನ್ನ ರಾಣಿ ಮತ್ತು ತನ್ನ ಮಗನಾದ ಚಿತ್ರವಾಹನನೊಂದಿಗೆ ಸೇರಿ, ದೇವರಿಗೆ ಏನೋ ಸ್ವಾಸ್ತಿಯನ್ನು ಬಿಟ್ಟದ್ದು–ಕೊಪ್ಪ ತಾಲೂಕಿನಲ್ಲಿ ದೊರಕಿದ ಶಿಲಾ ಲೇಖದಿಂದ ತಿಳಿದುಬರುತ್ತದೆ. ಆ ಶಿಲಾ ಲೇಖದಲ್ಲಿ "ಸ್ವಸ್ತಿ ಶ್ರೀಮತ್ ಆಳ್ವರಸರ್ ಗುಣಸಾಗರ ದ್ವಿತೀಯ ನಾಮಧೇಯನ್ ಕದಂಬ ಮಂಡಲಮಂ ಆಳುತ್ತಂ" ಎಂದಿದೆ. ೨ನೇ ಪುಲಿಕೇಶಿ (ಕ್ರಿ. ಶಕ ೬೦೯ರಿಂದ ೬೪೨) ಯು ಕದಂಬರನ್ನು ಜೈಸಿ, ಅವರ ರಾಜ್ಯವನ್ನು ಆಲೂಪರ ವಶಕೊಟ್ಟ ಬಳಿಕ, ಆಲೂಪರು ಕೆಲವು ಕಾಲ ಆಗ ಕದಂಬ ಮಂಡಲಕ್ಕೆ ಸೇರಿದ ಹುಂಬಚ್ಚದಲ್ಲಿ ತಮ್ಮ ರಾಜಧಾನಿಯನ್ನು ಮಾಡಿಕೊಂಡಿದ್ದರು. ಆಗ ಉದ್ಯಾವರದಲ್ಲಿ ಆಲೂಪ ಅರಸರ ಕುಟುಂಬದವರು ರಾಜ್ಯಭಾರವನ್ನು ನೋಡುತ್ತಿದ್ದರು. ಚಾಲುಕ್ಯ ವಿನಯಾದಿತ್ಯನ ಕಾಲದಲ್ಲಿ ಚಿತ್ರವಾಹನನ ದೃಷ್ಟಿಯು ತುಳುವದ ಕಡೆ ಕಡಿಮೆಯಾಗುತ್ತಾ ಬಂದಾಗ, ಉದ್ಯಾವರದಲ್ಲಿ ಆಳುತ್ತಿದ್ದ ಆತನ ಕುಟುಂಬದ ರಣಸಾಗರನು ಅವನ ಅಧಿಕಾರವನ್ನು ಧಿಕ್ಕರಿಸಿ ಸ್ವತಂತ್ರನಾದನು. ಆದರೆ ಚಿತ್ರವಾಹನನ ಕಡೆಯಿಂದ ಶ್ವೇತವಾಹನನೆಂಬವನು ಸೈನ್ಯವನ್ನು ಒಟ್ಟುಮಾಡಿ, ರಣಸಾಗರನನ್ನು ಸೋಲಿಸಿ, ತಾನು ಕೆಲವು ಕಾಲ ಉದ್ಯಾವರದಲ್ಲಿ ಆಳಿದನು. ಶ್ವೇತವಾಹನನು ಚಿತ್ರವಾಹನನಿಗೇನಾಗಬೇಕೆಂದು ತಿಳಿದುಬಂದಿಲ್ಲ. ಕೆಲವು ಕಾಲದ ಬಳಿಕ, ಶ್ವೇತವಾಹನನನ್ನು ಪೃಥ್ವೀಸಾಗರನು ಜೈಸಿ, ಉದ್ಯಾವರವನ್ನು ತನ್ನ ಸ್ವಾಧೀನ ಮಾಡಿಕೊಂಡನು. ಈ ಪೃಥ್ವೀಸಾಗರನೂ ಯಾರೆಂದು ತಿಳಿದುಬರುವುದಿಲ್ಲ. ಆದರೆ ಆತನು ರಣಸಾಗರನ ಮಗನೋ ಸಂಬಂಧಿಕನೋ ಆಗಿರಬೇಕೆಂದೆಣಿಸಬಹುದು. ಆತನ ಬಳಿಕ, ಆಲೂಪ ಅರಸು ಕುಟುಂಬದೊಳಗಣ ಅಂತರ್ಯುದ್ಧವು ಮುಗಿದು, ಪೃಥ್ವೀಸಾಗರನು ಹುಂಬಚ್ಚ ಮತ್ತು ಉದಯಪುರಿ (ಉದ್ಯಾವರ) ಗಳಲ್ಲಿ ಪುನಃ ನಿರಾತಂಕವಾಗಿ ರಾಜಧಾನಿ ಮಾಡಿಕೊಂಡು,

ಆಳುತ್ತಿದ್ದನು. ಪೃಥ್ವೀಸಾಗರನು ತಾನು ಸೋಮ ವಂಶದವನೆಂದೂ 'ಉಪ ಯಾದಿತ್ಯ ಉತ್ತಮ ಪಾಂಡ್ಯ'ನೆಂದೂ ಹೇಳಿಕೊಂಡ ಶಾಸನವು ದೊರಕಿದೆ.

ವಿಜಯಾದಿತ್ಯನು ಪೃಥ್ವೀಸಾಗರನ ಮಗನೆಂದು ತೋರುತ್ತದೆ. ಅವನೂ 'ಆಲುಪೇಂದ್ರ,' 'ಉತ್ತಮ ಪಾಂಡ್ಯ,' 'ಸೋಮ ವಂಶದವನು' ಎಂದು ಹೇಳಿಕೊಂಡ ಶಾಸನಗಳು ದೊರಕಿವೆ. ಉದ್ಯಾವರ, ಹುಂಬಚ್ಚಗಳೆರಡರಲ್ಲಿಯೂ ಆತನ ರಾಜ್ಯವು ಭದ್ರವಾಗಿತ್ತು.

ಕ್ರಿ. ಶಕ ೭೫೭ರಲ್ಲಿ ಪಶ್ಚಿಮ ಚಾಲುಕ್ಯರಿಂದ ರಾಷ್ಟ್ರಕೂಟರು ಕರ್ಣಾಟಕ ಸಿಂಹಾಸನವನ್ನು ಕಿತ್ತು, ತಾವು ತುಳುವದ ಅಧಿರಾಜರಾಗುವಾಗ ತುಳುವ ಹುಂಬಚ್ಚಗಳೆರಡರಲ್ಲಿಯೂ ಹೀಗೆ ಆಲೂಪರು ಉಪರಾಜರಾಗಿ ಆಳುತ್ತಿದ್ದರು.

---

# ಅಧ್ಯಾಯ ೭

**೧. ದಕ್ಷಿಣಾಪಥದ ತೆಂಕಣ ರಾಜ್ಯಗಳು—೨. ರಾಷ್ಟ್ರಕೂಟರು, ಕಲ್ಯಾಣಿಯ ಚಾಲುಕ್ಯರು—೩. ಶಾಂತಾರರೂ ಆಲೂಪರೂ—೪. ಶ್ರೀ ಶಂಕರಾಚಾರ್ಯರು, ನಾಥಸಾಂಪ್ರದಾಯ, ಕದಿರಿಯ ಲೋಕೇಶ್ವರ ಪ್ರತಿಷ್ಠೆ.**

## ೧. ದಕ್ಷಿಣಾಪಥದ ತೆಂಕಣ ರಾಜ್ಯಗಳು.

ಅಶೋಕನ ಕಾಲದಲ್ಲಿ ಮೌರ್ಯ ಚಕ್ರಾಧಿಪತ್ಯದ ಹೊರಗೆ ಸ್ವತಂತ್ರವಾಗಿದ್ದ ದಕ್ಷಿಣಾಪಥದ ತೆಂಕಣ ರಾಷ್ಟ್ರಗಳಲ್ಲಿ ಈ ಶತಮಾನಗಳ ನಡುವೆ ಹಲವು ಉತ್ಥಾನ ಪತನಗಳಾದವು. ಕ್ರಿ. ಶಕದ ಎರಡು ಶತಮಾನಗಳು ದಾಟುವಾಗ-ಚೋಳ, ಪಾಂಡ್ಯ ರಾಜ್ಯಗಳ ನಡುವೆ ಪಲ್ಲವರು ಪ್ರಬಲರಾಗಿ, ೮ನೇ ಶತಮಾನದ ತನಕ ಅವರು ಚೋಳ, ಪಾಂಡ್ಯರನ್ನು ತಮ್ಮ ಮಾಂಡಲಿಕರಾಗಿ ಮಾಡಿಕೊಂಡಿದ್ದರು. ೮ನೇ ಶತಮಾನದಲ್ಲಿ ಪಶ್ಚಿಮ ಚಾಲುಕ್ಯರಿಗೂ ಪಲ್ಲವರಿಗೂ ನಿರಂತರ ಯುದ್ಧಗಳು ನಡೆದು, ಪಲ್ಲವರ ಬಲವು ಕ್ಷೀಣಿಸಿತು. ೮ನೇ ಶತಮಾನದಿಂದ ೧೦ನೇ ಶತಮಾನದ ತನಕ ಪಾಂಡ್ಯರಾಜರು ತಮ್ಮ ಸ್ವಾತಂತ್ರ್ಯವನ್ನು ಸ್ಥಾಪಿಸಿ, ಸ್ವಲ್ಪಕಾಲ ಬಲಿಷ್ಠರಾಗಿ ಮೆರೆದರು. ೧೦ನೇ ಶತಮಾನದ ಅಂತ್ಯಕ್ಕೆ ಚೋಳ ರಾಜನಾದ ಮಹಾ ರಾಜರಾಜನು ಪಾಂಡ್ಯರಾಜನನ್ನು ಜೈಸಿದ್ದರಿಂದ ಅವನು ಚೋಳರಾಜನ ಮಾಂಡಲಿಕನಾದನು. ರಾಜರಾಜನು ಕ್ರಿ. ಶಕ ೯೮೫

ರಿಂದ ೨೮ ವರ್ಷ ಚೋಳ ರಾಜ್ಯವನ್ನಾಳಿ, ಅದನ್ನು ಸರ್ವ ದಿಕ್ಕುಗಳಲ್ಲಿಯೂ ವಿಸ್ತರಿಸಿ, ದಕ್ಷಿಣ ಹಿಂದುಸ್ಥಾನದಲ್ಲೆಲ್ಲಾ ಅದಕ್ಕೆ ಅಗ್ರಸ್ಥಾನವನ್ನು ಪಡೆದನು. ಅವನ ಬಳಿಕ ಆಳಿದ ೧ನೇ ರಾಜೇಂದ್ರ ಚೋಳದೇವನ ಕಾಲದಲ್ಲಿ ಚೋಳ ರಾಜ್ಯವು ಇನ್ನೂ ಪ್ರಬಲವಾಯಿತು.

ಕ್ರಿ. ಶಕ ೧೦೭೦ ರಿಂದ ೧೧೧೮ ರ ತನಕ ಆಳಿದ ೧ನೇ ಕುಲೋತ್ತುಂಗನ ಕಾಲದಲ್ಲಿ, ವೈಷ್ಣವ ಮತಪ್ರಚಾರಕರಾದ ಶ್ರೀ ರಾಮಾನುಜಾಚಾರ್ಯರು ಚೋಳ ರಾಜ್ಯದ ಶ್ರೀರಂಗ ಪಟ್ಟಣದಲ್ಲಿ ತಮ್ಮ ಧರ್ಮವನ್ನು ಪ್ರಚಾರ ಮಾಡತೊಡಗಿ, ಬಳಿಕ ಶೈವನಾದ ಚೋಳರಾಜನ ಭೀತಿಯಿಂದ ಹೊಯ್ಸಳ ಬಲ್ಲಾಳರ ರಾಜ್ಯಕ್ಕೆ ಹೋಗಿ, ಕೆಲವು ಕಾಲ ಅಲ್ಲಿದ್ದರು. ಚೋಳ ರಾಜ್ಯವು ೧೪ನೇ ಶತಮಾನದ ತನಕ ತನ್ನ ಸ್ವಾತಂತ್ರ್ಯವನ್ನಿಟ್ಟುಕೊಂಡು ಕೊನೆಗೆ ಪಾಂಡ್ಯ ರಾಜ್ಯದೊಂದಿಗೆ ಅಲ್ಲಾವುದ್ದೀನನ ಸೇನಾಧಿಪತಿಯಾದ ಮಲ್ಲಿ ಕಾಫರನಿಂದ ನಾಶಹೊಂದಿತು.

ಪ್ರಾಚೀನ ಚೇರ ರಾಜ್ಯವೆಂದರೆ ಅಶೋಕನ ಕಾಲದ ಕೇರಳಪುತ್ರವೇ; ಅದು ಈಗಿನ ತಿರುವಾಂಕೂರಿನ ಉತ್ತರ ಭಾಗವನ್ನೂ ಮಲಬಾರನ್ನೂ ಒಳಕೊಂಡಿತ್ತು. ಚೇರ ರಾಜ್ಯದಲ್ಲಿ ಕೆಲವು ಶತಮಾನಗಳ ಬಳಿಕ ಈಗಿನ ಕೊಯಂಬತ್ತೂರು ಮತ್ತು ದಕ್ಷಿಣ ಸೇಲಂ ಜಿಲ್ಲೆಗಳೂ ಸೇರಿದವು. ಅದರ ಕೆಲವು ಕಾಲದ ಬಳಿಕ, ಚೇರವೆಂಬ ಹೆಸರು ಆ ಕೊಯಂಬತ್ತೂರು ಸೇಲಂ ಜಿಲ್ಲೆಗಳಿಗೆ ಮಾತ್ರ ಉಳಿದು, ಮಲಬಾರು, ಉತ್ತರ ತಿರುವಾಂಕೂರುಗಳಿಗೆ ಮಾತ್ರ ಕೇರಳವೆಂಬ ಹೆಸರಾಯಿತು. ಕೇರಳದ ದಕ್ಷಿಣ ಭಾಗವಾದ ಉತ್ತರ ತಿರುವಾಂಕೂರು ೧೨ನೇ ಶತಮಾನದಲ್ಲಿ ಚೋಳ ಚಕ್ರಾಧಿಪತ್ಯಕ್ಕೆ ಸೇರಿತ್ತು. ೧೩ನೇ ಶತಮಾನದಲ್ಲಿ ಅದು ಪಾಂಡ್ಯ, ಚೋಳ ರಾಜ್ಯಗಳೆರಡನ್ನೂ ಜೈಸಿ, ಕೆಲವು ಕಾಲ ಮೆರೆದು, ಕೊನೆಗೆ ಮಲ್ಲಿ ಕಾಫರನ ಧಾಳಿಯ ಸಮಯ ಕ್ಷೀಣವಾಯಿತು.

## ೨. ರಾಷ್ಟ್ರಕೂಟರು

(೭೫೨ರಿಂದ ೯೭೩)

ಬಾದಾಮಿಯ ಪಶ್ಚಿಮ ಚಾಲುಕ್ಯರ ಕೊನೆಯ ಅರಸನಾದ ೨ನೇ ಕೀರ್ತಿವರ್ಮನನ್ನು ಸೋಲಿಸಿ, ಕರ್ಣಾಟಕ ಸಿಂಹಾಸನವನ್ನೇರಿದವನು ರಾಷ್ಟ್ರಕೂಟರ ೨ನೇ ಅರಸನಾದ ದಂತಿದುರ್ಗನು. ರಾಷ್ಟ್ರಕೂಟರು ಅದರ ಮೊದಲು ಚಾಲುಕ್ಯರ ಕೆಳಗೆ ಅಲ್ಲಲ್ಲಿ ಪುಟ್ಟ ರಾಜ್ಯಗಳನ್ನು ಆಳಿಕೊಂಡಿದ್ದರು. ರಾಷ್ಟ್ರಕೂಟರು

ತಮ್ಮ ರಾಜಧಾನಿಯನ್ನು ಈಗಿನ ನಿಜಾಮು ಸಂಸ್ಥಾನದ ಮಲೆಖೆಡದಲ್ಲಿ ಮಾಡಿದ್ದರಿಂದ ಅವರಿಗೆ ಮಲೆಖೆಡದ ರಾಷ್ಟ್ರಕೂಟರೆಂಬ ಹೆಸರು ಚರಿತ್ರೆಯಲ್ಲಿ ಬಂದಿದೆ.

ರಾಷ್ಟ್ರಕೂಟರು ತುಳುವದ ಅಧಿರಾಜರಾದೊಡನೆ ಆಲೂಪರನ್ನು ತಗ್ಗಿಸಿ, ಅವರ ಕೈಯಲ್ಲಿದ್ದ ಬನವಾಸಿಯನ್ನು ತಪ್ಪಿಸಿ, ಅಲ್ಲಿ ತಮ್ಮ ಪ್ರತಿನಿಧಿಯನ್ನು ಇಟ್ಟರು. ಆಲೂಪರ ವಶವಿದ್ದ ಹುಂಬಚ್ಚವನ್ನೂ ರಾಷ್ಟ್ರಕೂಟರ ಮಂಡಲೇಶ್ವರರಾದ ಶಾಂತಾರರು ಸ್ವಾಧೀನಪಡಿಸಿಕೊಂಡರು. ಆಲೂಪರು ತುಳುವವನ್ನು ಮಾತ್ರ ರಾಷ್ಟ್ರಕೂಟದ ಮಂಡಲೇಶ್ವರರಾಗಿ ಆಳ ತೊಡಗಿದರು. ಕ್ರಿ. ಶಕ ೮ನೇ ಶತಮಾನದ ಅಂತ್ಯದಲ್ಲಿ, ರಾಷ್ಟ್ರಕೂಟ ಅರಸನಾದ ಪ್ರಭೂತ ವರ್ಷ ೩ನೇ ಗೋವಿಂದನ ಆಳಿಕೆಯಲ್ಲಿ, ಪಾಂಡ್ಯ ಅರಸನು ತುಳುವದ ಮೇಲೆ ದಾಳಿ ನಡೆಸಿ, ಮಂಗಳಪುರ (ಮಂಗಳೂರು) ದಲ್ಲಿ ರಾಷ್ಟ್ರಕೂಟರ ಸೈನ್ಯವನ್ನು ಸೋಲಿಸಿದನು. ಆಲೂಪ ಅರಸನಾದ ೨ನೇ ಚಿತ್ರವಾಹನನು ಸಾಮ್ರಾಟನ ಸಹಾಯಕ್ಕೆ ಆಗ ಹೋಗದೆ ಇದ್ದುದರಿಂದ ಆ ಅಪಜಯಕ್ಕೆ ಕಾರಣವಾಯಿತು. ಇದಕ್ಕಾಗಿ ಸಾಮ್ರಾಟನು ಪಾಂಡ್ಯರನ್ನು ತನ್ನ ರಾಜ್ಯದಿಂದ ಹೊರ ಅಟ್ಟಿದ ಬಳಿಕ, ಚಿತ್ರವಾಹನನಿಂದ ತುಳುವದ ಅಧಿಕಾಂಶವನ್ನು ತೆಗೆದು, ಅವನನ್ನು ಖೇಡಾಧಿಪತಿಯಾಗಿಟ್ಟನು.

ಪ್ರಭೂತವರ್ಷ ೩ನೇ ಗೋವಿಂದನ ಬಳಿಕ ೧ನೇ ಅಮೋಘವರ್ಷನು ಕ್ರಿ. ಶಕ ೮೧೫ರಿಂದ ೮೭೮ ರ ತನಕ ೬೪ ವರ್ಷ ರಾಜ್ಯವಾಳಿದನು. ಅವನು ತನ್ನ ರಾಜ್ಯದಲ್ಲೆಲ್ಲಾ ದಿಗಂಬರ ಜೈನರನ್ನು ಪ್ರೋತ್ಸಾಹಿಸಿದನು. ಆತನ ಬಳಿಕ ಒಂದು ಶತಮಾನ ರಾಷ್ಟ್ರಕೂಟರು ಕನ್ನಡ ಸಾಮ್ರಾಜ್ಯವನ್ನಾಳಿದರು. ಕ್ರಿ. ಶಕ ೯೭೩ ಲ್ಲಿ, ಪಶ್ಚಿಮ ಚಾಲುಕ್ಯ ವಂಶದ ೨ನೇ ತೈಲನು ರಾಷ್ಟ್ರಕೂಟರ ಕೊನೆಯ ಅರಸನಾದ ೨ನೇ ಕಕ್ಕನಿಂದ ಕನ್ನಡ ಸಾಮ್ರಾಜ್ಯವನ್ನು ಪುನಃ ಸ್ವಾಧೀನಪಡಿಸಿಕೊಂಡನು. ರಾಷ್ಟ್ರಕೂಟರ ಕಾಲದಲ್ಲಿ ಸಿಂಧೂ ದೇಶವನ್ನಾಳುತ್ತಿದ್ದ ಅರಬ್ಬರಿಗೂ ರಾಷ್ಟ್ರಕೂಟರಿಗೂ ಸ್ನೇಹವಿತ್ತು. ಅರಬ್ಬರು ಕನ್ನಡ ರಾಜ್ಯದೊಡನೆ ವ್ಯಾಪಾರ ಬೆಳೆಸಿದ್ದರು. ರಾಷ್ಟ್ರಕೂಟರ ಕಾಲದ ತಾಮ್ರಶಾಸನವೊಂದು ಪುತ್ತೂರು ತಾಲೂಕಿನ ಕಡಬದಲ್ಲಿ ಸಿಕ್ಕಿಯದೆಂದು ಶ್ರೀ ಐಗಳ ಚರಿತ್ರೆಯಲ್ಲಿ ಕಾಣುತ್ತದೆ.

ರಾಷ್ಟ್ರಕೂಟರ ಕಾಲದಲ್ಲಿ, ಬೌದ್ಧಮತವು ದಕ್ಷಿಣ ಹಿಂದುಸ್ಥಾನದಲ್ಲಿ ಸಂಪೂರ್ಣ ಅಳಿದುಹೋಗಿ, ಶ್ರೀ ಶಂಕರಾಚಾರ್ಯರಿಂದ ನೂತನ ಹಿಂದೂ ಧರ್ಮವು ಸ್ಥಾಪಿತವಾಗಿ, ಅದು ಸರ್ವ ಕಡೆಗಳಲ್ಲಿಯೂ ಪ್ರಬಲವಾಯಿತು.

## ಕಲ್ಯಾಣಿಯ ಚಾಲುಕ್ಯರು ಕ್ರಿ. ಶಕ ೯೭೩ ರಿಂದ ೧೧೯೦

ರಾಷ್ಟ್ರಕೂಟರಿಂದ ತನ್ನ ಹಿರಿಯರ ಸಿಂಹಾಸನವನ್ನು ಪುನಃ ಸ್ವಾಧೀನ ಪಡಿಸಿಕೊಂಡ ೨ನೇ ತೈಲನು ೨೪ ವರ್ಷ ಆಳಿದನು. ಅವನ ರಾಜಧಾನಿಯು ನಿಜಾಮು ಸಂಸ್ಥಾನದ ಕಲ್ಯಾಣಿಯಲ್ಲಿತ್ತು. ಹೀಗಾಗಿ ಅವನಿಂದ ಹಿಡಿದು, ಪಶ್ಚಿಮ ಚಾಲುಕ್ಯರಿಗೆ ಕಲ್ಯಾಣಿಯ ಚಾಲುಕ್ಯರೆಂಬ ಹೆಸರು ಬಂದಿರುತ್ತದೆ. ಅವನ ಬಳಿಕ ೧೨ ಜನ ಅರಸರು ಆಳಿದರು. ತೈಲನ ಬಳಿಕ ಪಟ್ಟಕ್ಕೆ ಬಂದ ಆತನ ಮಗ ಸತ್ಯಾಶ್ರಯನ ಆಳಿಕೆಯಲ್ಲಿ (ಕ್ರಿ. ಶಕ ೯೯೭ರಿಂದ ೧೦೦೮), ಚೋಳ ಅರಸನಾದ ರಾಜರಾಜನು ಕನ್ನಡ ರಾಜ್ಯದ ಮೇಲೆ ದಾಳಿ ಬೆಳೆಸಿ, ತುಂಬಾ ಹಾವಳಿಯನ್ನುಂಟುಮಾಡಿದನು. ತುಳುನಾಡಲ್ಲಿ, ಚೋಳರು ಕೆಲವು ಕಾಲ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು. ಬಾರಕೂರಿನಲ್ಲಿ ಚೋಳಕೇರಿ ಯೆಂಬ ಹೆಸರು ಈಗಲೂ ಇದೆ; ಅದು ಆ ಕಾಲದ್ದಾಗಿರಬೇಕು. ಚೋಳರು ಚಾಲುಕ್ಯ ರಾಜ್ಯದಲ್ಲಿ ಹೆಚ್ಚು ಕಾಲ ನಿಲ್ಲಲಿಲ್ಲವಾದರೂ, ಅವರ ಹಾವಳಿಯ ನೆನಪು ತುಳುವ ದಲ್ಲಿ ಬಹಳ ವರ್ಷಗಳ ತನಕ ಉಳಿದಿತ್ತು. ಕಲ್ಯಾಣಿಯ ಚಾಲುಕ್ಯರ ೮ನೇ ಅರಸನಾದ ವಿಕ್ರಮಾಂಕ (೬ನೇ ವಿಕ್ರಮಾದಿತ್ಯ) ನ ಕಾಲದಲ್ಲಿ (ಕ್ರಿ. ಶಕ ೧೦೭೬ ರಿಂದ ೧೧೨೬), ಮೈಸೂರಿನ ಮಲೆನಾಡಿನಲ್ಲಿ ಚಾಲುಕ್ಯರ ಮಂಡಲೇಶ್ವರರಾಗಿದ್ದ ಹೊಯ್ಸಳ ಬಲ್ಲಾಳರು ಪ್ರಬಲರಾಗಿ, ಸಾಮ್ರಾಟನಿಗೂ ಹೊಯ್ಸಳ ಬಲ್ಲಾಳ ಅರಸನಿಗೂ ಅನೇಕ ವರ್ಷಗಳ ತನಕ ಹೋರಾಟ ನಡೆಯಿತು. ತುಳುವವು ವಿಕ್ರಮಾಂಕನ ಕಾಲದಲ್ಲಿ ಹೊಯ್ಸಳ ಬಲ್ಲಾಳರ ಕೆಳಗಾಯಿತು. ವಿಕ್ರಮಾಂಕನ ಬಳಿಕ ಚಾಲುಕ್ಯರ ಬಲವು ಕ್ಷೀಣಿಸಿತು. ೩ನೇ ತೈಲನ ಕಾಲದಲ್ಲಿ, ಸೇನಾಧಿಪತಿ ಯಾದ ಬಿಜ್ಜಳನು ರಾಜ್ಯವನ್ನು ಅಪಹರಿಸಿ, ೧೧೫೬ ರಿಂದ ೧೧೬೭ರ ತನಕ ಆಳಿದನು. ಚಾಲುಕ್ಯ ಅರಸನಾದ **೪ನೇ ಸೋಮೇಶ್ವರನು** ಬಿಜ್ಜಳನ ವಂಶ ದವರಿಂದ ಕರ್ಣಾಟಕ ಸಿಂಹಾಸನವನ್ನು ಬಿಡಿಸಿಕೊಂಡರೂ ಚಾಲುಕ್ಯರ ಬಲವು ಅವನ ಕಾಲದಲ್ಲಿ ತೀರಾ ಕ್ಷೀಣಿಸಿ, ಉತ್ತರ ಭಾಗವನ್ನು ದೇವಗಿರಿಯ ಯಾದ ವರೂ ದಕ್ಷಿಣ ಭಾಗವನ್ನು ಹೊಯ್ಸಳ ಅರಸರೂ ಸ್ವಾಧೀನಪಡಿಸಿಕೊಂಡರು.

ಬಿಜ್ಜಳನ ಆಳಿಕೆಯಲ್ಲಿ, ಅವನ ಬ್ರಾಹ್ಮಣ ಮಂತ್ರಿಯಾದ ಬಸವನು ವೀರಶೈವ ಮತವನ್ನು ಸ್ಥಾಪಿಸಿದನು. ಆ ವೀರಶೈವ ಮತವು ಪ್ರಬಲವಾಗಿ, ಕನ್ನಡ ರಾಜ್ಯದಲ್ಲಿ ಜೈನಮತದ ಬೆಳವಣಿಗೆಯನ್ನು ತಡೆಗಟ್ಟಿತು.

## ೩. ಶಾಂತಾರರು

ತುಳುವದಲ್ಲಿ ಅನೇಕ ವಂಶಗಳ ಅರಸರು ಆಳಿದರೂ, ಅವರ ಕಾಲದ ನೆನಪನ್ನು ಮಾಡುವ ಸ್ಮಾರಕಗಳಿರುವ ರಾಜ ವಂಶದವರು ಬರೇ ವಿರಳರಾಗಿದ್ದಾರೆ. ತುಳುವದಲ್ಲಿ ಹೆಚ್ಚು ಪ್ರಸಿದ್ಧಿಯನ್ನು ಹೊಂದಿದ ಸ್ಮಾರಕಗಳು ಕಾರ್ಕಳದಲ್ಲಿವೆ. ಅವುಗಳನ್ನು ಸ್ಥಾಪಿಸಿದವರು ಶಾಂತಾರ ವಂಶದ, ಕಾರ್ಕಳದ ಭೈರರಸರಾಗಿರುತ್ತಾರೆ.

ಶಾಂತಾರರು ಉತ್ತರ ದೇಶದಿಂದ ಬಂದದ್ದಾಗಿ ಜೈನರು ಹೇಳುತ್ತಾರೆ. ಅವರ ಮೂಲವನ್ನು ಅವರು ಹೀಗೆ ವಿವರಿಸುತ್ತಾರೆ:– ಉತ್ತರ ಮಥುರೆಯಲ್ಲಿ ಉಗ್ರವಂಶದ ಸಾಕಾರನೆಂಬ ಅರಸನು ಆಳುತ್ತಿದ್ದನು. ಆತನಿಗೆ ಪಟ್ಟದ ರಾಣಿಯಲ್ಲಿ ಹುಟ್ಟಿದ ಜಿನದತ್ತನೆಂಬ ಮಗನಿದ್ದನು. ಆ ಮಗನನ್ನು ಅವನ ೨ನೇ ಹೆಂಡತಿಯಾದ ಪದ್ಮಿನಿಯು ಕೊಲ್ಲಬೇಕೆಂದೆಣಿಸಿ, ಅದಕ್ಕೆ ಉಪಾಯವನ್ನು ಹುಡುಕುತ್ತಿರುವಾಗ, ಆ ವಾರ್ತೆಯು ಜಿನದತ್ತನಿಗೆ ಮುಟ್ಟಿ, ಜಿನದತ್ತನು ತಾನು ಆರಾಧಿಸುತ್ತಿದ್ದ ತನ್ನ ಕುಲದೇವಿಯಾದ ಪದ್ಮಾವತಿಯ ವಿಗ್ರಹವನ್ನು ಹಿಡಕೊಂಡು, ಅಶ್ವಾರೂಢನಾಗಿ, ದಕ್ಷಿಣಕ್ಕೆ ಪಲಾಯನ ಬೆಳೆಸಿದನು. ಅನೇಕ ದಿನಗಳ ಪ್ರಯಾಣದ ಬಳಿಕ, ಅವನು ಮೈಸೂರಿನ ಮಲೆನಾಡಿಗೆ ಬಂದು ಮುಟ್ಟಿ, ಅಲ್ಲಿ ವಿಶ್ರಮಿಸುತ್ತಿದ್ದಾಗ, ಆತನಿಗೆ ಆತನು ವಿಶ್ರಮಿಸಿಕೊಂಡಲ್ಲಿಯೇ ರಾಜಧಾನಿಯನ್ನು ಕಟ್ಟಿ ರಾಜ್ಯವನ್ನಾಳಬೇಕೆಂದು, ಪದ್ಮಾವತಿ ದೇವಿಯು ಸ್ವಪ್ನದಲ್ಲಿ ಕಾಣಿಸಿಕೊಂಡು ಹೇಳಿದಳು. ಜಿನದತ್ತನು ಆ ಪ್ರಕಾರ ಅಲ್ಲಿ ಬಸದಿ, ಅರಮನೆ, ರಾಜಧಾನಿಗಳನ್ನು ಕಟ್ಟಿಸಿ, ತನ್ನ ತಾಯಿಯನ್ನೂ ಬಂಧುಗಳನ್ನೂ ಕರೆಯಿಸಿಕೊಂಡು, ಅಲ್ಲಿ ರಾಜನಾಗಿ ಆಳತೊಡಗಿದನು. ಆ ರಾಜಧಾನಿಗೆ ಅವನು ಪಟ್ಟಪೊಂಬಚ್ಚಪುರ ಎಂಬ ಹೆಸರನ್ನಿಟ್ಟನು. ಜಿನದತ್ತರಾಯನು ದಕ್ಷಿಣ ಮಥುರೆಯ ಪಾಂಡ್ಯ ಅರಸನ ಇಬ್ಬರು ಪುತ್ರಿಯರನ್ನು ಮದುವೆ ಮಾಡಿಕೊಂಡನು. ಜಿನದತ್ತರಾಯನ ಮಕ್ಕಳು ತಮ್ಮ ತಂದೆಯನ್ನು ಭೈರವಿಯಾದ ಪದ್ಮಾವತಿಯೇ ರಕ್ಷಿಸಿದ್ದರಿಂದ ತಮ್ಮ ಹೆಸರಿಗೆ ಭೈರವ ಎಂಬದನ್ನೂ – ತಮ್ಮ ತಾಯಂದಿರು ಪಾಂಡ್ಯರಾಜನ ಪುತ್ರಿಯರಾದ್ದರಿಂದ ಪಾಂಡ್ಯ ಎಂಬದನ್ನೂ-ಕೂಡಿಸಿಕೊಂಡರು. ಈ 'ಭೈರವ,' 'ಪಾಂಡ್ಯರಾಜ'ವೆಂಬವನ್ನು ನಂತರದ ಶಾಂತಾರ ಅರಸರೆಲ್ಲಾ ತಮ್ಮ ಹೆಸರಿಗೆ ಕೂಡಿಸಿಕೊಳ್ಳುತ್ತಿದ್ದರು.

ಶಾಂತಾರರ ಮೂಲವನ್ನು ಆ ರೀತಿ ಜೈನರು ಹೇಳುತ್ತಾರೆ. ಕ್ರಿ. ಶಕ ೯ನೇ ಶತಮಾನದ ಪ್ರಾರಂಭದಲ್ಲಿ ರಾಷ್ಟ್ರಕೂಟರ ಆಳಿಕೆಯ ಸಮಯ, ಉಗ್ರ ವಂಶದವನೆಂದು ಹೇಳಿಕೊಳ್ಳುವ ಶಾಂತಾರ ವಂಶದ ಜಿನದತ್ತರಾಯನು ಹುಂಬಚ್ಚವನ್ನು ಆಲೂಪರಿಂದ ತಪ್ಪಿಸಿ, ತನ್ನ ಸ್ವಾಧೀನಪಡಿಸಿಕೊಂಡನೆಂಬದು ಐತಿಹಾಸಿಕ ಸಂಗತಿಯಾಗಿದೆ. ಅದರ ಬಳಿಕ, ಅವನ ವಂಶದವರು ಹುಂಬಚ್ಚ (ಹುಣಚಾ, ಹೊಂಬಚ್ಚಪುರ) ದಲ್ಲಿ ರಾಜಧಾನಿಯನ್ನು ಮಾಡಿಕೊಂಡು, ರಾಷ್ಟ್ರಕೂಟರ ಮಾಂಡಳಿಕರಾಗಿ ಆಳುತ್ತಿದ್ದರು. ೯ನೇ ಶತಮಾನದಲ್ಲಿ ಆಲೂಪರ ಬಲವು ತುಳುವದಲ್ಲಿ ಕ್ಷೀಣಿಸಿದ ಸಮಯ, ಹುಂಬಚ್ಚದ ಶಾಂತಾರರು ತುಳುವ ಕ್ಕಿಳಿದು, ಅಲ್ಲಿ ಹಾವಳಿ ಮಾಡುತ್ತಿದ್ದರು. ಅವರ ಹಾವಳಿಯ ದೆಸೆಯಿಂದ ಆಲೂಪರು ಉದ್ಯಾವರ, ಬಾರ್ಕೂರುಗಳನ್ನು ಬಿಟ್ಟು, ಕೆಲವು ಕಾಲ ಮಂಗಳೂರಿನ ಬಳಿ ವಾಸ್ತವಿಸಿಕೊಂಡಿದ್ದರು. ರಾಷ್ಟ್ರಕೂಟರ ಬಲವು ಕುಂದಿಬರುವಾಗ ಆಲೂಪರು ತುಳುವದಲ್ಲಿ ಪುನಃ ತಲೆಯೆತ್ತಿ, ಶಾಂತಾರರ ಬಾಧೆಯನ್ನು ನಿವಾರಿಸಿದರು. ಶಾಂತಾರರಿಗೆ ರಾಷ್ಟ್ರಕೂಟರ ಕಾಲದಲ್ಲಾಗಲಿ, ಕಲ್ಯಾಣಿಯ ಚಾಲುಕ್ಯರ ಕಾಲದಲ್ಲಾಗಲಿ, ತುಳುವದಲ್ಲಿ ಸ್ಥಿರವಾದ ಸ್ಥಾನವು ದೊರಕಲಿಲ್ಲ.

## ಆಲೂಪರು (ಕ್ರಿ. ಶಕ ೭೭೦ ರಿಂದ ೧೧೧೭ರ ತನಕ)

ಕ್ರಿ. ಶಕ ೭೫೧ ರಿಂದ ೭೭೦ ರ ತನಕ ವಿಜಯಾದಿತ್ಯ ಆಲುಪೇಂದ್ರನು ತುಳುವವನ್ನೂ ಹುಂಬಚ್ಚ ಸೇರಿದ ಬನವಾಸಿಯ ರಾಜ್ಯವನ್ನೂ ಕರ್ಣಾಟಕ ಸಾಮ್ರಾಟರ ಮಂಡಲೇಶ್ವರನಾಗಿ ಆಳಿದನು. ಅವನ ಬಳಿಕ ಆಲೂಪರ ಬಲವು ಕ್ಷೀಣಿಸಿತು. ಬನವಾಸಿಯಲ್ಲಿ ರಾಷ್ಟ್ರಕೂಟರು ತಮ್ಮ ಪ್ರತಿನಿಧಿಯನ್ನಿಟ್ಟು, ಹುಂಬಚ್ಚದಲ್ಲಿ ಶಾಂತಾರರು ಮಂಡಲೇಶ್ವರರಾಗಿ, ತುಳುವವೊಂದೇ ಆಲೂಪರಿಗೆ ಉಳಿಯಿತು.

ವಿಜಯಾದಿತ್ಯನ ಬಳಿಕ, ತುಳುವದ ಮಂಡಲೇಶ್ವರನಾದ ೨ನೇ ಚಿತ್ರವಾಹನನ ಕಾಲದಲ್ಲಿ ಪಾಂಡ್ಯ ಅರಸನು ತುಳುವದ ಮೇಲೆ ದಾಳಿ ನಡೆಸಿ ಮಂಗಳಪುರದಲ್ಲಿ ರಾಷ್ಟ್ರಕೂಟರಿಟ್ಟಿದ್ದ ಸೈನ್ಯವನ್ನು ಸೋಲಿಸಿದನು. ಚಿತ್ರವಾಹನನು ಆ ಸಂದರ್ಭದಲ್ಲಿ ರಾಷ್ಟ್ರಕೂಟರಿಗೇನೂ ಸಹಾಯ ಮಾಡದದ್ದರಿಂದ ಅವನನ್ನು ರಾಷ್ಟ್ರಕೂಟ ಸಾಮ್ರಾಟನು ತುಳುವದ ಮಂಡಲೇಶ್ವರತನದಿಂದ ಖೇಡಾಧಿಪತಿಯಾಗಿ ತಗ್ಗಿಸಿದನು.

ಕ್ರಿ. ಶಕ ೮೦೦ ರಿಂದ ಸುಮಾರು ೯೨೦ ರ ತನಕ ಆಲೂಪರು ತುಳುವದಲ್ಲಿ ಅಜ್ಞಾತವಾಸದಲ್ಲಿದ್ದು, ಅವರ ಸಂಗತಿಗಳೇನೂ ತಿಳಿದುಬರುವುದಿಲ್ಲ. ಸಾಮ್ರಾಟರ ತುಚ್ಛೀಕಾರದಿಂದಲೂ, ಶಾಂತಾರರ ಹಾವಳಿಯಿಂದಲೂ, ಅವರು ನೊಂದಿ, ಒಂದು ಶತಮಾನ ಕಾಲ ತಮ್ಮ ಹಿಂದಿನ ರಾಜಧಾನಿಗಳಾಗಿದ್ದ ಉದ್ಯಾವರ, ಬಾರ್ಕೂರುಗಳನ್ನು ಬಿಟ್ಟು, ಮಂಗಳೂರಿನ ಬಳಿ ವಾಸ್ತವಿಸಿಕೊಂಡಿದ್ದರು.

ಕ್ರಿ. ಶಕ ೯೨೦ ರಷ್ಟಕ್ಕೆ ಆಲೂಪ ವಂಶದ ರಣಂಜಯನ ಮಗಳಾದ ಎಂಜಲದೇವಿಯನ್ನು ಶಾಂತಾರ ವಂಶದ ಚಾಗಿ ಶಾಂತಾರನು ಲಗ್ನವಾದನು. ಆ ಬಳಿಕ ಆಲೂಪ ಶಾಂತಾರರೊಳಗೆ ಸ್ನೇಹ ಬೆಳೆದು, ಆಲೂಪರು ಪುನಃ ಸಾಮ್ರಾಟರ ಪ್ರೀತಿಯನ್ನು ಸಂಪಾದಿಸಿಕೊಂಡಿರಬೇಕು. ರಣಂಜಯನ ಬಳಿಕ, ೨ನೇ ಕುಂದವರ್ಮ ಆಲೂಪೇಂದ್ರನ ಕಾಲದಲ್ಲಿ, ತುಳುವದಲ್ಲಿ ಆಲೂಪರು ತಮ್ಮ ಶತ್ರುಗಳನ್ನೆಲ್ಲಾ ನಿಗ್ರಹಿಸಿ ಪುನಃ ಪ್ರಬಲರಾದರು. ೨ನೇ ಕುಂದವರ್ಮನು ನಾಥಸಾಂಪ್ರದಾಯಕ್ಕೆ ಸೇರಿ, ಕ್ರಿ. ಶಕ ೯೬೮ ಲ್ಲಿ ಕದಿರಿಕಾವಿಹಾರದಲ್ಲಿ ಲೋಕೇಶ್ವರನನ್ನು ಪ್ರತಿಷ್ಠಿಸಿದನು. ಅವನು ಪ್ರತಿಷ್ಠಿಸಿದ ಲೋಕೇಶ್ವರ ಪ್ರತಿಮೆಯೂ ಜೋಗಿಯರ ಮಠವೂ ಇನ್ನೂ ಕದಿರಿಯಲ್ಲಿವೆ. ಮಂಗಳಪುರವು ೨ನೇ ಕುಂದವರ್ಮನ ಕಾಲದಲ್ಲಿಯೇ ದೊಡ್ಡ ನಗರವಾಗಿತ್ತು. ಲೋಕೇಶ್ವರ ಪ್ರತಿಮೆಯ ಪೀಠದಲ್ಲಿರುವ ಶಾಸನದಲ್ಲಿ, ಕುಂದವರ್ಮನು ತಾನು ತನ್ನ ಭುಜಬಲದಿಂದ ಶತ್ರುಗಳನ್ನು ಜೈಸಿ, ತುಳುವದ ರಾಜ್ಯವನ್ನು ಪುನಃ ಸ್ವಾಧೀನಪಡಿಸಿಕೊಂಡೆನೆಂದು ಹೇಳಿಕೊಂಡಿದ್ದಾನೆ.

ಕುಂದವರ್ಮನ ಬಳಿಕ ಆಳಿದ ಆಲೂಪರ ವಿವರವನ್ನು ಶ್ರೀ ಸಾಲೆತ್ತೂರರು ಈ ಕೆಳಗಿನಂತೆ ಕೊಟ್ಟಿರುವರು.

ಸುಮಾರು ಸುಮಾರು

೧. ೧೦೫೦ ರಿಂದ ೧೦೭೦ ರ ತನಕ ೧ನೇ ಬಂಕಿದೇವ.

೨. ೧೧೧೩ ರಿಂದ ೧೧೫೫ ರ ತನಕ ಭುಜಬಲಕವಿ ಆಲೂಪೇಂದ್ರ.

೩. ೧೧೫೫ ರಿಂದ ೧೧೭೦ ರ ತನಕ ಜಗದೇವ.

೪. ೧೧೭೦ ರಿಂದ ೧೨೧೫ ರ ತನಕ ೧ನೇ ಭುಜಬಲ ಕುಲಶೇಖರ ಆಲುಪೇಂದ್ರ.

೫. ೧೨೧೫ ರಿಂದ ೧೨೩೬ ರ ತನಕ ನೂರ್ಮಡಿ ಚಕ್ರವರ್ತಿ.

೬. ೧೨೩೬ ರಿಂದ ೧೨೫೪ರ ತನಕ ವಿಬುಧವಸು.
೭. ೧೨೫೫ ರಿಂದ ೧೨೭೭ರ ತನಕ ಪಾಂಡ್ಯ ಚಕ್ರವರ್ತಿ ವೀರಪಾಂಡ್ಯ ಆಲುಪೇಂದ್ರದೇವ.
೮. ೧೨೭೭ ರಿಂದ ೧೩೦೦ರ ತನಕ ನಾಗದೇವರಸು (ತಾಯಿ ಬಲ್ಲಮಹಾದೇವಿ).
೯. ೧೩೦೦ ರಿಂದ ೧೩೧೫ರ ತನಕ ೨ನೇ ಬಂಕಿದೇವ ಆಲುಪೇಂದ್ರ.
೧೦. ೧೩೧೫ ರಿಂದ ೧೩೨೫ರ ತನಕ ಸೊಯಿ ದೇವ ಆಲುಪೇಂದ್ರ.
೧೧. ೧೩೨೬ ರಿಂದ ೧೩೪೫ರ ತನಕ ವೀರ ಕುಲಶೇಖರ ದೇವ.
೧೨. ೧೩೪೬ ೨ನೇ ವೀರಪಾಂಡ್ಯದೇವ ಆಲೂಪೇಂದ್ರ.

ಮೇಲೆ ಹೇಳಿದ ಭುಜಬಲ ಕವಿ ಆಲೂಪೇಂದ್ರನ ಕಾಲದಲ್ಲಿ, ಮೈಸೂರಿನ ಮಲೆನಾಡಿನಲ್ಲಿ, ಚಾಲುಕ್ಯರ ಮಹಾ ಮಂಡಲೇಶ್ವರರಾದ ಹೊಯ್ಸಳರು ಪ್ರಬಲರಾಗಿ, ಅವರಿಗೂ ಶಾಂತಾರರಿಗೂ ವಿವಾದಗಳೂ ಹೋರಾಟಗಳೂ ತೊಡಗಿದವು. ಭುಜಬಲಕವಿಯ ಪಟ್ಟದ ರಾಣಿಯು ಶಾಂತಾರ ಕುಲದ ಪಾಂಡ್ಯ ಮಹಾದೇವಿಯಾಗಿದ್ದು, ಶಾಂತಾರರು ಆಲೂಪರ ಸಂಬಂಧಿಕರಾಗಿದ್ದರು. ಕ್ರಿ. ಶಕ ೧೧೦೪ರಲ್ಲಿ ಶಾಂತಾರ ಅರಸನಾದ ವೀರ ಜಗದೇವನು ಹೊಯ್ಸಳ ಬಲ್ಲಾಳರ ರಾಜಧಾನಿಗಳಲ್ಲೊಂದಾದ ದ್ವಾರ ಸಮುದ್ರದ ಮೇಲೆ ದಾಳಿ ಹೋಗಿ, ಹೊಯ್ಸಳರಿಂದ ಪರಾಜಿತನಾಗಿ, ತನ್ನ ರಾಜ್ಯವನ್ನು ಬಿಟ್ಟು, ತುಳುವದಲ್ಲಿ ಸೇರಿಕೊಂಡಿದ್ದನು. ಕ್ರಿ. ಶಕ ೧೧೧೪ರಲ್ಲಿ ಅವನು ಬಾರಕೂರಿಗೆ ಬಂದು, ಹೊಯ್ಸಳರ ವಿರೋಧವಾಗಿ ಆಲೂಪ ಅರಸನಾದ ಭುಜಬಲ ಕವಿ ಆಲೂಪೇಂದ್ರನ ಸಹಾಯುವನ್ನು ಪಡೆದು, ಪುನಃ ಹೊಯ್ಸಳ ರಾಜ್ಯದಲ್ಲಿ ಹಾವಳಿ ಮಾಡತೊಡಗಿದನು. ಕ್ರಿ. ಶಕ ೧೧೧೭ರಷ್ಟಕ್ಕೆ ಹೊಯ್ಸಳ ಸಿಂಹಾಸನವನ್ನೇರಿದ ಬಿಟ್ಟಿದೇವ (ವಿಷ್ಣುವರ್ಧನ)ನು ಶಾಂತಾರ, ಆಲೂಪರಿಬ್ಬರನ್ನೂ ಸೋಲಿಸಿ, ಶಾಂತಾರ ರಾಜ್ಯವನ್ನು ತನ್ನ ರಾಜ್ಯದೊಳಗೆ ಸೇರಿಸಿಕೊಂಡು, ತುಳುವದಲ್ಲಿ ಆಲೂಪ ಅರಸನನ್ನು ತನ್ನ ಕೆಳಗೆ ಮಂಡಲೇಶ್ವರನಾಗಿ ಆಳಬಿಟ್ಟನು. ಶಾಂತಾರ ಅರಸನಾದ ಜಗದೇವನು ಹೀಗೆ ತನ್ನ ಹುಂಬಚ್ಚದ ರಾಜ್ಯವನ್ನು ಕಳಕೊಂಡು, ಆ ಮೇಲೆ ತುಳುವದ ಘಟ್ಟದ ಬುಡದ ಪ್ರದೇಶದಲ್ಲಿ ಚಿಕ್ಕದೊಂದು ರಾಜ್ಯವನ್ನು ಸ್ಥಾಪಿಸಿ, ಅಲ್ಲಿ ಕೆಲವು ಕಾಲ ವಾಸ್ತವಿಸಿಕೊಂಡಿದ್ದನು.

ಕ್ರಿ. ಶಕ ೧೧೫೦ಲ್ಲಿ ವಿಷ್ಣುವರ್ಧನನು ಕಾಲಾಧೀನನಾದ ಬಳಿಕ,

ಆಲೂಪ ಅರಸನು ಹೊಯ್ಸಳರ ಅಧಿಕಾರವನ್ನು ಧಿಕ್ಕರಿಸಿ ೧೧೫೫ರ ತನಕ ಸ್ವತಂತ್ರನಾಗಿ ಆಳಿದನು. ಕಲ್ಯಾಣಿಯ ಚಾಲುಕ್ಯರ ಸಾಮ್ರಾಜ್ಯವನ್ನು ಕ್ರಿ. ಶಕ ೧೧೫೬ಲ್ಲಿ ಬಿಜ್ಜಳ ದೇವನು ಅಪಹರಿಸಿದಾಗ ತುಳುವದಲ್ಲಿ ಜಗದೇವನು ಆಳುತ್ತಿದ್ದನು – ಶಾಂತಾರ ಅರಸನಾದ ವೀರ ಶಾಂತಾರನು ಪುನಃ ಹುಂಬಚ್ಚ ರಾಜ್ಯದಲ್ಲಿ ಆಳುತ್ತಿದ್ದನು. ಜಗದೇವನ ಕಾಲದಲ್ಲಿಯೂ ಆತನ ಬಳಿಕ ಆಳಿದ ೧ನೇ ಭುಜಬಲ ಕುಲಶೇಖರ ಆಲೂಪೇಂದ್ರನ ಕಾಲದಲ್ಲಿಯೂ ಹೊಯ್ಸಳರು ಆಲೂಪರನ್ನು ಪುನಃ ಸೋಲಿಸಿ, ಅವರನ್ನು ತಮ್ಮ ಮಂಡಳೇಶ್ವರ ರಾಗಿ ಮಾಡಿಕೊಂಡರು. ತುಳುವದಲ್ಲಿ ಆ ಬಳಿಕ ಆಲೂಪರ ಅಧಿಕಾರವು ಬಾರಕೂರಿನಾಚೆಗೆ ಮಾತ್ರ ಖೇಡಾಧಿಪತಿಗಳಾಗಿ ಉಳಿಯಿತು. ಹೊಯ್ಸಳರು ತಮ್ಮ ಪ್ರತಿನಿಧಿಯನ್ನು ಮೂಡಬಿದ್ರೆಯಲ್ಲಿಟ್ಟು, ತುಳುವವನ್ನಾಳತೊಡಗಿದರು. ಹೊಯ್ಸಳರ ಕೊನೆಯ ಅರಸನಾದ ೩ನೇ ವೀರ ಬಲ್ಲಾಳ (ಕ್ರಿ. ಶಕ ೧೨೯೨ ರಿಂದ ೧೩೩೬)ನ ಕಾಲದಲ್ಲಿ ಹೊಯ್ಸಳರ ಅಧಿಕಾರವು ತುಳುವದಲ್ಲಿ ಪ್ರಬಲ ವಾಗಿತ್ತು. ಅವನ ಪಟ್ಟದ ರಾಣಿಯು ಆಲೂಪ ವಂಶದವಳೆಂದು ತಿಳಿದು ಬರುತ್ತದೆ. ಆದ್ದರಿಂದ ೩ನೇ ವೀರ ಬಲ್ಲಾಳನು ತುಳುವದ ಆಡಳಿತೆಯ ಕುರಿತು ಬಹಳ ಉತ್ಸಾಹವನ್ನು ತೋರಿಸುತ್ತಿದ್ದನು. ಅವನ ಕಾಲದಲ್ಲಿ– ಅಲ್ಲಾವುದ್ದೀನ ಖಿಲ್ಜಿಯ ಸೇನಾಧಿಪತಿಯಾದ ಮಲ್ಲಿಕಾಫರನು ಕ್ರಿ. ಶಕ ೧೩೧೦ಲ್ಲಿ ಹೊಯ್ಸಳ ರಾಜ್ಯವನ್ನು ಸುಲಿಗೆ ಮಾಡಿ, ಕೆಲವು ಕಾಲ ವೀರ ಬಲ್ಲಾಳನನ್ನು ಸೆರೆಯಲ್ಲಿಟ್ಟದ್ದರಿಂದಲೂ ೧೩೨೭ಲ್ಲಿ ಪುನಃ ಮುಸ್ಲಿಮರು ಹೊಯ್ಸಳ ರಾಜ್ಯದ ಮೇಲೆ ಬಿದ್ದು ದ್ವಾರ ಸಮುದ್ರವನ್ನು ನಾಶ ಮಾಡಿದ್ದರಿಂದಲೂ ಹೊಯ್ಸಳರ ಅಧಿಕಾರವು ಸಂಪೂರ್ಣ ಕ್ಷೀಣಿಸಿತು.

ಹೊಯ್ಸಳರ ಸ್ಥಾನದಲ್ಲಿ ವಿಜಯನಗರದ ಅರಸರು ಕರ್ಣಾಟಕ ಸಾಮ್ರಾಟ ರಾದ ಬಳಿಕ, ಆಲೂಪರು ವಿಜಯನಗರದ ಮಾಂಡಲಿಕರಾದರು. ಅದರ ಬಳಿಕ, ತುಳುವ ಇತಿಹಾಸದಲ್ಲಿ ಆಲೂಪರು ಅರಸರಾಗಿ ಆಳಲಿಲ್ಲ; ಅವರ ವಂಶದವರು ಅಲ್ಲಲ್ಲಿ ಕೆಲವು ಕಾಲ ವಿಜಯನಗರದ ಅರಸರ ಪ್ರತಿನಿಧಿಗಳಾಗಿಯೂ ಇಲ್ಲವೆ ಪಾಳ್ಯಗಾರರಾಗಿಯೂ ಆಳುತ್ತಿದ್ದರೆಂದು ತೋರುತ್ತದೆ. ವಿಜಯನಗರ ಸ್ಥಾಪನೆಯಾದೊಡನೆ ಬಾರಕೂರಿನಲ್ಲಿ ವಿಜಯನಗರದ ಪ್ರತಿನಿಧಿಯರು ಆಳತೊಡಗಿದ್ದರಿಂದ ಆಲೂಪರು ತಮ್ಮ ಅರಮನೆಯನ್ನು ಬಾರಕೂರಿನಿಂದ ಮಂಗಳೂರಿಗೆ ಕೊಂಡು ಹೋಗಿ ಅಲ್ಲಿ ವಾಸ್ತವಿಸಿಕೊಂಡಿದ್ದರು.

ಆಲೂಪರ ಆಳಿಕೆಯ ಶಾಸನಗಳು ತುಳುವದಲ್ಲಿ ತುಂಬಾ ಇವೆ. ಆಲೂಪರ ಹೆಸರು ಬಂಟರಲ್ಲಿ 'ಆಳ್ವ'ರೆಂಬ ರೂಪಾಂತರ ಹೊಂದಿ ಈಗಲೂ ಉಳಿದಿದೆ.

## ೪. ಶ್ರೀ ಶಂಕರಾಚಾರ್ಯರು

ಕ್ರಿ. ಶಕ ೮ನೇ ಶತಮಾನದ ಅಂತ್ಯಕ್ಕೆ ರಾಷ್ಟ್ರಕೂಟರು ಕರ್ಣಾಟಕ ಸಾರ್ವಭೌಮರಾಗಿ ಆಳುತ್ತಿದ್ದಾಗ ಶ್ರೀ ಶಂಕರಾಚಾರ್ಯರು ಕೇರಳ ನಾಡಿನಲ್ಲಿ ಜನ್ಮವೆತ್ತಿದರು. ಶ್ರೀ ಶಂಕರಾಚಾರ್ಯರ ಕಾಲನಿರ್ಣಯವಿನ್ನೂ ವಿವಾದಗಳ ಹೊರಗಾಗಿರುವುದಿಲ್ಲ. ಆದರೆ ಅವರು ಸುಮಾರು ಕ್ರಿ. ಶಕ ೭೮೮ಲ್ಲಿ ಜನಿಸಿದ ರೆಂದು ಈಗ ಹೆಚ್ಚಿನ ವಿದ್ವಾಂಸರು ಒಪ್ಪುತ್ತಾರೆ.

ಶ್ರೀ ಶಂಕರಾಚಾರ್ಯರು ಜನ್ಮವೆತ್ತುವಾಗ ಹಿಂದುಸ್ಥಾನದಲ್ಲಿ ಬೌದ್ಧ ಮತವು ಅಸ್ತಂಗತವಾಗುತ್ತಿತ್ತು. ವೈದಿಕ ಮತವು ಹೊಸ ಬಲವನ್ನು ಧರಿಸಿ ಪುನಃ ಪ್ರಬಲವಾಗಹತ್ತಿತ್ತು. ಒಂದು ಸಾವಿರ ವರ್ಷಗಳ ತನಕ ಹಿಂದುಸ್ಥಾನ ದಲ್ಲಿ ಮೆರೆದು, ಇತರ ದೇಶಗಳಲ್ಲಿ ಹಿಂದುಸ್ಥಾನದ ಕುರಿತು ಪೂಜ್ಯತೆಯನ್ನುಂಟು ಮಾಡಿದ ಆ ಬೌದ್ಧ ಧರ್ಮವು ವೈದಿಕ ಧರ್ಮವನ್ನು ನಾಶಮಾಡದಿದ್ದರೂ, ಅದರಲ್ಲಿ ಅನೇಕ ಹೊಸ ಕಲ್ಪನೆಗಳನ್ನುಂಟುಮಾಡಿತ್ತು. ಅರಣ್ಯದೊಳಗೆ ಹೋಗಿ, ತಪಶ್ಚರಣೆಯನ್ನು ಮಾಡಿ, ಮುಕ್ತಿಯನ್ನು ಸಂಪಾದಿಸುವ ಧ್ಯೇಯ ಗಳು ಬೌದ್ಧಮತದ ವರ್ಚಸ್ಸಿನಿಂದ ಹಿಂದೂಧರ್ಮದಿಂದಲೂ ಲೋಪವಾಗಿ, ಬೌದ್ಧಮತದ ಮಹಾಯಾನ ಶಾಖೆಯ 'ವಿಹಾರ'ಗಳನ್ನು ಹೋಲುವ ಮಠ, ದೇವಾಲಯಗಳು ಹಿಂದುಗಳಲ್ಲಿಯೂ ಸ್ಥಾಪಿತವಾಗಿದ್ದವು. ಮತಧರ್ಮ ವಿಚಾರಗಳು ಬ್ರಾಹ್ಮಣರೊಬ್ಬರಿಗೆ ಮಾತ್ರ ಸಲ್ಲುವಂಥಾದ್ದೆಂಬ ಮೂಢತೆಯು ಹಿಂದೂಧರ್ಮದಿಂದ ದೂರವಾಗಿತ್ತು. ನಿತ್ಯದ ನಡತೆಯು ಶುದ್ಧವಾಗಿರ ಬೇಕು, ಕರ್ತವ್ಯಪಾಲನೆಯೇ ಧರ್ಮಮಾರ್ಗವಲ್ಲದೆ ಯಜ್ಞ, ಹೋಮಾದಿ ಗಳಿಂದ ಫಲವಿಲ್ಲವೆಂಬ ಬುದ್ಧನ ವಿಚಾರವು ಹಿಂದೂಧರ್ಮದಲ್ಲಿಯೂ ಅಂಕುರಿ ಸಿತ್ತು. ಆದರೆ ಶ್ರೀ ಶಂಕರಾಚಾರ್ಯರ ಮೊದಲು ಈ ಹೊಸ ವಿಚಾರಗಳು ನಿಶ್ಚಿತ ರೂಪವನ್ನು ತಾಳದೆ, ಹಿಂದೂಮತವು ಪುನಃ ಹಿಂದಿನ ವೈದಿಕ ವಿಧಿಗಳ ಕಡೆ ಜೋಲಾಡುತ್ತಿತ್ತು. ಆ ಕಾಲದಲ್ಲಿ, ಹಿಂದೂ ಉಪನಿಷದುಗಳಲ್ಲಿ ಹೇಳಿದ ಅದ್ವೈತ ವಿಚಾರವನ್ನು ಹಿಂದೂ ವೇದಾಂತ ವಿಚಾರದೊಂದಿಗೆ ಜೋಡಿಸಿ,

ಇಂದಿನ ಹಿಂದೂಮತವನ್ನು ಸ್ಥಾಪಿಸಿದವರು ಶ್ರೀಶಂಕರಾಚಾರ್ಯರಾಗಿರುತ್ತಾರೆ.

ಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆಯನ್ನು ಬರೆಯುವದು ಈ ಇತಿಹಾಸಕ್ಕೆ ಒಪ್ಪಿದ ಕಾರ್ಯವಲ್ಲ. ಆದರೆ ಅವರು ತನ್ನ ಬರೇ ಅಲ್ಪವಾದ ಮೂವತ್ತೆರಡು ವರ್ಷ ಜೀವಕಾಲದಲ್ಲಿ, ಯಾವ ವಾಹನಗಳೂ ಇಲ್ಲದೆ, ಇಡೀ ಹಿಂದುಸ್ಥಾನವನ್ನು ಬರಿಗಾಲಿನಿಂದ ಸಂಚರಿಸಿ, ತಮ್ಮ ಅದ್ವೈತ ಸಿದ್ಧಾಂತವನ್ನು ಹಿಂದುಸ್ಥಾನದಲ್ಲೆಲ್ಲಾ ಸ್ಥಿರವಾಗಿ ಸ್ಥಾಪಿಸಿ,– ಶೃಂಗೇರಿ, ದ್ವಾರಕಾ, ಬದರಿಕಾಶ್ರಮ, ಜಗನ್ನಾಥಪುರಿಗಳಲ್ಲಿ ಮಠಗಳನ್ನು ಸ್ಥಾಪಿಸಿದ ಮಹತ್ಕಾರ್ಯದ ಪರಿಣಾಮದ ಸತ್ಫಲವನ್ನು ಹಿಂದೀಯರಾದ ನಾವು ಇಂದೂ ಉಣ್ಣುತ್ತಿದ್ದೇವೆ. ಹೊರ ರೂಪದಲ್ಲೆಷ್ಟು ನಮ್ಮಲ್ಲಿ ಭೇದಗಳು ತೋರುತ್ತಿದ್ದರೂ ಈ ಹಿಂದುಸ್ಥಾನ ವಿಡೀ ಸಂಸ್ಕೃತಿ, ಅಧ್ಯಾತ್ಮಿಕ ವಿಚಾರಗಳಲ್ಲಿ ಒಂದೇ ಒಂದಾಗಿರುತ್ತದೆಂಬುದನ್ನು ಶ್ರೀ ಶಂಕರಾಚಾರ್ಯರು ಶಾಶ್ವತವಾಗಿ ನಮ್ಮ ಮನಸ್ಸಿನಲ್ಲಿ ಸ್ಥಾಪಿಸಿದ್ದಾರೆ. ಇಂದು ನಾವು ಹಿಂದುಸ್ಥಾನದ ಐಕ್ಯತೆಗಾಗಿ ಹೋರಾಡುವದು ಶ್ರೀ ಶಂಕರಾಚಾರ್ಯರ ದಿವ್ಯ ಚಟುವಟಿಕೆಗಳ ಫಲವಾಗಿದೆಯೆಂದರೆ ಅತಿಶಯೋಕ್ತಿಯಾಗದು. ಚಂದ್ರಗುಪ್ತ, ಅಶೋಕರ ಬಳಿಕ ಅಳಿದು ಹೋದ ಹಿಂದುಸ್ಥಾನದ ಐಕ್ಯತೆಯ ಜ್ಞಾನವನ್ನು ಇನ್ನೆಂದಿಗೂ ಅಳಿಯದಂತೆ ಮಾಡಿದವರು ಆ ಮಹಾ ಪುರುಷರೇ. ಭಾರತಮಾತೆಯ ಅಂಗಾಂಗ ಸೌಂದರ್ಯವನ್ನು ಭಕ್ತಿಯಿಂದ ಪೂಜಿಸಿ,– ಆ ಮಾತೆಯ ಅಸದೃಶ ಕೀರ್ತಿಯನ್ನು ಪಾಮರರಾದ ಪಾಶ್ಚಾತ್ಯರಲ್ಲಿ ಪುನಃ ಸ್ಥಾಪಿಸಲೆಳಸಿ,– ವಿಚಾರ ರಂಗದಿಂದ ಕರ್ಮರಂಗಕ್ಕಿಳಿದು– ಇಂದು ನಮ್ಮ ಈ ಹಿಂದುಸ್ಥಾನದ ಮಹಾ ಪ್ರಧಾನತೆಯ ಭಾರವನ್ನು ತನ್ನ ವಿಶಾಲ ಭುಜಗಳ ಮೇಲೆ ವಹಿಸಿಕೊಂಡಿರುವ ಶ್ರೀ ಜವಾಹರಲಾಲರು ತಮ್ಮ 'ಡಿಸ್ಕವರಿ ಆಫ್ ಇಂಡಿಯ'ದ ಐದನೇ ಅಧ್ಯಾಯದ ೧೪ನೇ ಪ್ರಕರಣದಲ್ಲಿ ಶ್ರೀ ಶಂಕರಾಚಾರ್ಯರ ಅದ್ಭುತಕಾರ್ಯದ ಫಲವನ್ನು ತಮ್ಮ ಅನುಪಮ ಶೈಲಿಯಲ್ಲಿ ವರ್ಣಿಸಿರುವರು. ಜಾತಿಭೇದ, ಪ್ರಾಂತಿಕ ಭೇದಗಳ ವಿಷಕ್ರಿಮಿಗಳು ಯಾವಾಗಲೂ ಸಜೀವವಾಗಿಯೇ ಇರುವ ಹಿಂದುಗಳಾದ ನಮ್ಮಲ್ಲಿ ಈ ದಿವ್ಯ ಪುರುಷಪ್ರಯರ ಬೋಧನಾಮೃತದಿಂದಲಾದರೂ ಆ ಕ್ರಿಮಿಗಳು ಇನ್ನು ನಿರ್ಮೂಲವಾಗಲಿ! ಈ ಭಾರತಮಾತೆಯ ತ್ರಿವರ್ಣಧ್ವಜವನ್ನು, ನಾವು ಶ್ರೀ ಶಂಕರಾಚಾರ್ಯರ ಅವಿಶ್ರಾಂತ ರೀತಿಯಿಂದ ಹೆಣಗಾಡಿ, ಹಿಂದುಸ್ಥಾನದ ನಾಲ್ಕು ಮೂಲೆಗಳಲ್ಲಿಯೂ ಪುನಃ ಸ್ಥಾಪಿಸುವಂತಾಗಲಿ!

ಶ್ರೀ ಶಂಕರಾಚಾರ್ಯರ ಕಾಲದ ಮೊದಲೇ ಕರ್ಣಾಟಕ ಸಾಮ್ರಾಟರಲ್ಲಿ ಬ್ರಹ್ಮ, ವಿಷ್ಣು, ಶಿವ ಭೇದಗಳು ಅಳಿದು, ಅದ್ವೈತ ವಿಚಾರಗಳು ಅಂಕುರಿಸಿದ್ದವು. ಚಾಲುಕ್ಯ ವಿಜಯಾದಿತ್ಯನು (ಕ್ರಿ. ಶಕ ೬೯೬-೭೩೩) ತನ್ನ ರಾಜಧಾನಿಯಾದ ಬಾದಾಮಿಯಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರ ತ್ರಿಮೂರ್ತಿಗಳನ್ನು ಪ್ರತಿಷ್ಠಿಸುವಾಗ ತೋರುತ್ತಿದ್ದ ಭಾವನೆಗಳು ಅವನ ಮಗನಾದ ೨ನೇ ವಿಕ್ರಮಾದಿತ್ಯನ ಕಾಲದಲ್ಲಿ (೭೩೩-೭೪೬) ಲೋಪವಾಗಿದ್ದವು. ಅವನ ಪಟ್ಟದರಸಿಯರಾದ ಲೋಕಮಹಾದೇವಿ, ತ್ರೈಲೋಕಮಹಾದೇವಿಯರು ಕಟ್ಟಿಸಿದ ಲೋಕೇಶ್ವರ, ತ್ರೈಲೋಕೇಶ್ವರ, ದೇವಾಲಯಗಳಲ್ಲಿ ಅದ್ವೈತ ವಿಚಾರಗಳೇ ತೋರಿಬರುತ್ತಿವೆ. ೧ನೇ ಪುಲಿಕೇಶಿಯು ಜರಗಿಸಿದ ಅಶ್ವಮೇಧ ಯಾಗದ ಕಾಲದಲ್ಲಿ ಯಜ್ಞಗಳ ಮೇಲೆ ಕರ್ಣಾಟಕದ ಜನರಿಗಿನ್ನೂ ಉಳಿದಿದ್ದ ಭಕ್ತಿಯು ೨ನೇ ಪುಲಿಕೇಶಿಯ ಮೊದಲೇ ತೀರಾ ಲೋಪವಾಗಿ, ಅಹಿಂಸಾತತ್ವವೂ ಜನರಲ್ಲಿ ತುಂಬಿತ್ತು. ಕರ್ಣಾಟಕದಲ್ಲಿ ಬೌದ್ಧಮತ ಪ್ರಚಾರವು ಎಂದೂ ಬಲವಾಗಿರಲಿಲ್ಲ. ಜೈನಧರ್ಮ ಪ್ರಚಾರವೇ ಬಲವಾಗಿತ್ತು. ಜೈನರ ಎಡೆಬಿಡದ ಉಪದೇಶದಿಂದಲೂ – ಅವರಿಗೆ ಕರ್ಣಾಟಕ ಸಾಮ್ರಾಟರಲ್ಲಿ ದೊರೆತ ಆಶ್ರಯದ ಪರಿಣಾಮವಾಗಿಯೂ – ಸನಾತನ ಹಿಂದೂ ಧರ್ಮದಲ್ಲಿ ಮೊದಲೇ ಸೂಚಿಸಿದ್ದ ಅಹಿಂಸಾಧರ್ಮವು ಕರ್ಣಾಟಕದಲ್ಲಿ ಸ್ಥಿರವಾಗಿ ಬೇರೂರಿತ್ತು.

ಶ್ರೀ ಶಂಕರಾಚಾರ್ಯರು ಕರ್ಮಮಾರ್ಗಕ್ಕಿಂತ ಭಕ್ತಿಜ್ಞಾನ ಮಾರ್ಗಗಳೇ ಶ್ರೇಯಸ್ಕರವೆಂದು ಬೋಧಿಸಿ, ಹಿಂದೂ ಮತದಲ್ಲಿ ಸನ್ಯಾಸವನ್ನು ಪುನಃ ಸಂಸ್ಥಾಪಿಸಿದರು. ತುಳುವದಲ್ಲಿ, ಕ್ರೈಸ್ತ ಶಕದ ಮೊದಲಿನ ಮತ್ತು ಆರಂಭದ ಶತಮಾನಗಳಲ್ಲಿ, ಬಾರಕೂರು ಪ್ರಾಂತ್ಯದಲ್ಲಿ ಜೈನರು ಪ್ರಬಲರಾಗಿದ್ದರೆಂದು ನಾವು ಓದಿರುತ್ತೇವೆ. ಚಾಲುಕ್ಯರು ಕರ್ಣಾಟಕದ ಸಾಮ್ರಾಟರಾದ ಬಳಿಕ, ಶೈವರಾದ ಆಲೂಪರು ತುಳುವದ ಮಂಡಲೇಶ್ವರರಾಗಿ, - ಬಾರಕೂರಿನಲ್ಲಿ ಜೈನರಿಗೆ ರಾಜಾಶ್ರಯವು ತಪ್ಪಿ, ತುಳುವದ ಉತ್ತರ ಭಾಗದಲ್ಲಿ ಜೈನಮತವು ಕ್ಷೀಣಿಸಹತ್ತಿತು. ಈಗಿನ ಉಡುಪಿಯಲ್ಲಿ ಶೈವರ ಮುಖ್ಯ ಕೇಂದ್ರವಾದ ಶಿವಬೆಳ್ಳಿ (ಶಿವಳ್ಳಿ) ಇದ್ದುದರಿಂದ ಅಲ್ಲಿದ್ದ ಜೈನರ ಚಂದ್ರನಾಥ (೮ನೇ ತೀರ್ಥಂಕರರಾದ ಚಂದ್ರಪ್ರಭಾ), ಅನಂತನಾಥರ (೧೪ನೇ ತೀರ್ಥಂಕರರು) ಬಸದಿಗಳಲ್ಲಿ ಉಪಾಸಕರು ವಿರಳರಾಗಿದ್ದರು. ಈ ಹಾಳು ಬೀಳಹತ್ತಿದ್ದ ಬಸದಿಗಳಲ್ಲಿ ಶ್ರೀ ಶಂಕರಾಚಾರ್ಯರ ಕಾಲದಲ್ಲಿ ಅನಂತೇಶ್ವರ ಮತ್ತು ಚಂದ್ರಮೌಳೀಶ್ವರ ದೇವಾಲಯಗಳು ಸ್ಥಾಪಿತ

ವಾದವು. ಶಂಕರಾಚಾರ್ಯರು ತುಳುವದಲ್ಲಿ ತಮ್ಮ ಮತವನ್ನು ಬೋಧಿಸಿ, ತುಳುಜನರನ್ನು ತಮ್ಮ ಮತಾನುಯಾಯಿಗಳಾಗಿ ಮಾಡಿ, ಅವರಿಗೋಸ್ಕರವಾಗಿ ಒಂದು ಮಠವನ್ನೂ ಶಿವಳ್ಳಿಯಲ್ಲಿ ಸ್ಥಾಪಿಸಿದರು.

ಶ್ರೀ ಶಂಕರಾಚಾರ್ಯರ ಕಾಲದಲ್ಲಿ ಜಾತಿ, ಮತ ಭೇದಗಳು ಈಗಿನ ಶಿಲಾ ಕಾಠಿಣ್ಯವನ್ನು ಹೊಂದಿರಲಿಲ್ಲ. ಹಿಂದುಗಳು ಜೈನರಾಗುತ್ತಿದ್ದರು; ಜೈನರು ಹಿಂದುಗಳಾಗುತ್ತಿದ್ದರು. ಅದ್ವೈತರು ಜೈನ ಕನ್ಯೆಯರನ್ನು ವರಿಸುತ್ತಿದ್ದರು; ಜೈನರು ಅದ್ವೈತ ಕನ್ಯೆಯರನ್ನು ಮದುವೆ ಮಾಡಿಕೊಳ್ಳುತ್ತಿದ್ದರು. ಶೈವ ಆಲೂಪರು ಜೈನ ಶಾಂತಾರರೊಡನೆ ಮದುವೆ ಸಂಬಂಧಗಳನ್ನು ಬೆಳೆಸಿದ್ದನ್ನು ನಾವು ಹಿಂದೆ ಕಂಡಿರುತ್ತೇವೆ. ಶಂಕರಾಚಾರ್ಯರ ಕಾಲದಲ್ಲಿ ತುಳುವದ ಬಾರಕೂರಿನ ಸುತ್ತಲೂ ಜೈನರು ಹಿಂದೂ ಧರ್ಮವನ್ನು ಸ್ವೀಕರಿಸಿ, ಮಾಸಾದಿಕ ಜೈನರೆಂಬ ಹೆಸರಿನಿಂದ, ಅರಸನಿಗೆ ಹತ್ತಿರದ ಭೃತ್ಯರಾಗಿಯೂ - ನಾಡಿನ ಮುಂದಾಳುಗಳಾಗಿಯೂ ಬಂಟ, ನಾಡವರೆಂಬ ಹೆಸರನ್ನು ಪಡೆದರು. ಶ್ರೀ ಶಂಕರಾಚಾರ್ಯರ ತುಳುವ ಪ್ರವಾಸದ ಫಲವು ತುಳುವದಲ್ಲಿ ಶಾಶ್ವತಬೇರನ್ನೂರಿಕೊಂಡಿದೆ. ತುಳುವದಲ್ಲಿರುವ ದ್ರಾವಿಡ ಬ್ರಾಹ್ಮಣರಲ್ಲಿ ಹೆಚ್ಚಿನವರೂ, ಬಂಟರೂ, ನಾಡವರೂ, ಉಳಿದ "ಶೂದ್ರರೂ" ಶಂಕರಾಚಾರ್ಯರ ಶಿಷ್ಯವರ್ಗದವರಾಗಿ, ಇಂದಿಗೂ ಶೃಂಗೇರಿ ಮಠದ ಶಿಷ್ಯವರ್ಗಕ್ಕೆ ಸೇರಿಕೊಂಡಿರುತ್ತಾರೆ.

ಪರಶುರಾಮನ ಸಪ್ತ ಕ್ಷೇತ್ರಗಳಲ್ಲಿ ಒಂದಾದ ಕೊಲ್ಲೂರು ಮಲೆಯಾಳಿಗಳಿಗೆ ಮಹಾ ಪವಿತ್ರವಾದ ಸ್ಥಳವಾಗಿರುವದು - ಶ್ರೀ ಶಂಕರಾಚಾರ್ಯರು ಕೊಲ್ಲೂರು ದೇವಸ್ಥಾನದಲ್ಲಿರುವ ದೇವಿಯ ಮೂರ್ತಿಯನ್ನು ಆ ಕಾಲದಲ್ಲಿ ಪ್ರತಿಷ್ಠಿಸಿದ್ದರಿಂದಾಗಿರುತ್ತದೆ. ಕೊಲ್ಲೂರು ಈಗ ಮಲೆಜ್ವರದ ಬೀಡಾಗಿಯೂ ಅಡವಿಯ ನಡುವಣ ಹಳ್ಳಿಯಾಗಿಯೂ ಜಿಲ್ಲೆಯ ಒಂದು ಮೂಲೆಗೆ ಬಿದ್ದುಕೊಂಡಿರುವದಾದರೂ ಅಲ್ಲಿ ಯಾವಾಗಲೂ ಮಲೆಯಾಳಿಗಳ ಸಂಖ್ಯೆಯು ಕಡಿಮೆಯಾಗುವಂತಿಲ್ಲ. ಕೊಲ್ಲೂರು ದೇವಸ್ಥಾನದ ಅರ್ಚಕರು ಮಲೆಯಾಳಿ ಯಾತ್ರಿಕರ ಉದಾರತೆಯಿಂದಲೇ ಈಗಲೂ ಜೀವಿಸಿಕೊಂಡಿದ್ದಾರೆ. ಶ್ರೀ ಶಂಕರಾಚಾರ್ಯರ ಮೊದಲೇ ಆ ದೇವಾಲಯದಲ್ಲಿ ಶೈವಲಿಂಗ ಪೂಜೆಯಿತ್ತಾದರೂ, ಅವರು ಆ ಲಿಂಗದ ಬಳಿ ದೇವಿಯ ಮೂರ್ತಿಯನ್ನು ಪ್ರತಿಷ್ಠಿಸಿದ ಬಳಿಕವೇ ಆ ಯಾತ್ರಿಕರ ತಂಡಗಳು ಅಲ್ಲಿಗೆ ಬರ ಪ್ರಾರಂಭವಾದವು. ಕೊಲ್ಲೂರಿನಿಂದ ಸುಮಾರು ೧೦ ಮೈಲು ದೂರವಿರುವ ಕುಟಜಾದ್ರಿಯ ಶಿಖರದಲ್ಲಿ

ಶ್ರೀ ಶಂಕರಾಚಾರ್ಯರು ಕೆಲವು ಕಾಲ ತಪಸ್ಸನ್ನು ಮಾಡಿದ "ಚಿತ್ರಮೂಲ" ವೆಂಬ ಹೆಸರಿನ ಸ್ಥಳವಿದೆ.

## ನಾಥಸಾಂಪ್ರದಾಯ

ನಾಥಸಾಂಪ್ರದಾಯದ ಹುಟ್ಟನ್ನೂ ವಿವರವನ್ನೂ ತಿಳಿಯಲಿಚ್ಛಿಸುವವರು ಶ್ರೀ ಮ. ಗೋವಿಂದ ಪೈಗಳು ೧೯೪೭ನೇ ವರ್ಷದ 'ಪ್ರಭಾತ' ವಿಶೇಷಾಂಕದಲ್ಲಿ ಬರೆದಿರುವ "ಕದಿರೆಯ ಮಂಜುನಾಥ" ವೆಂಬ ಲೇಖವನ್ನು ಓದಬಹುದು. ಲೋಕೇಶ್ವರ ದೇವನ ಮೂರ್ತಿಯನ್ನು ಆಲೂಪ ಕುಂದವರ್ಮನು ಪ್ರತಿಷ್ಠಿಸಿದ ವರ್ಷವು ಕ್ರಿ. ಶಕ ೯೬೮ **ಅಲ್ಲ** ೧೦೬೮ಲ್ಲಿ ಎಂದು ಶ್ರೀ ಗೋವಿಂದ ಪೈಗಳು ಆ ಲೇಖದಲ್ಲಿ ಬರೆದದ್ದನ್ನು ನಾವು ಈ ಇತಿಹಾಸದಲ್ಲಿ ಅಂಗೀಕರಿಸಲಿಕ್ಕೆ ದಾರಿ ಕಾಣ ದಿದ್ದರೂ-ಕದಂಬ ಮಯೂರವರ್ಮನ ಕಾಲವನ್ನು ಶ್ರೀ ಗೋವಿಂದ ಪೈಗಳು "ಮಳವಳ್ಳಿಯ ಎರಡು ಸ್ತಂಭಲೇಖಗಳು" ಎಂದು ೧೯೩೬ನೇ ಇಸವಿಯ "ಕಂಠೀರವ"ದ ದಸರಾ ಸಂಚಿಕೆಯಲ್ಲಿ ಬರೆದ ಅಮೌಲ್ಯ ಲೇಖದ ಆಧಾರ ದಿಂದಲೇ ಈ ಇತಿಹಾಸದಲ್ಲಿ ಹಿಂದೆ ನಿಶ್ಚೈಸಿದ್ದಾಗಿರುತ್ತದೆ.

ನಾಥಪಂಥವು ಬೌದ್ಧಧರ್ಮದ ಮಹಾಯಾನ ಶಾಖೆಯಿಂದ ಸಿದ್ಧವಾದ ತಾಂತ್ರಿಕ ಶೈವ ಮಾರ್ಗವಾಗಿದೆ. ಮಹಾಯಾನ ಬೌದ್ಧಮತವು ಕ್ರಿ. ಶಕ ೮ನೇ ಶತಮಾನದಲ್ಲಿ ಹಿಂದುಸ್ಥಾನದಲ್ಲೆಲ್ಲಾ ಕ್ಷೀಣಿಸಿದೊಡನೆ, ಅದರಿಂದ ಹುಟ್ಟಿಬೆಳೆದ ನಾಥಪಂಥವು ಬಲವಾಗಿ, ಮಹಾಯಾನವು ಹಿಂದೆ ಎಲ್ಲಿ ನೆಲಸಿತ್ತೋ ಅಲ್ಲಿ ತಾನು ನೆಲೆಗೊಂಡಿತು. ನಾಥಸಾಂಪ್ರದಾಯವನ್ನು ಸ್ಥಾಪಿಸಿದವನು ಉತ್ತರ ಹಿಂದುಸ್ಥಾನದ ಪಾರ್ಶ್ವನಾಥನೆಂಬ ರಾಜಕುಮಾರನು. ಅದನ್ನು ಮತ್ಸ್ಯೇಂದ್ರ ನಾಥನೂ ಅವನ ಶಿಷ್ಯನಾದ ಶ್ರೀ ಗೋರಕನಾಥನೂ ಹಿಂದುಸ್ಥಾನದ ಎಲ್ಲಾ ಕಡೆಗಳಿಗೂ ಪಸರಿಸಿದರು. ನಾಥಪಂಥದಲ್ಲಿ ಮನುಷ್ಯನಿಗೆ ಮುಕ್ತಿಸಾಧನೆಯ ಬಗ್ಗೆ ಎಲ್ಲಾ ಲೌಕಿಕ ಸುಖಗಳನ್ನು ಬಿಟ್ಟು, ಸನ್ಯಾಸವನ್ನು ಧರಿಸಿ, ಯೋಗ ಸಾಧನೆಯನ್ನು ಮಾಡುವುದೇ ದಾರಿಯಾಗಿ ಹೇಳಿದೆ. ಆದರೆ ಮತ್ಸ್ಯೇಂದ್ರ ನಾಥನು ದೇವಾಂಶನೆಂದೂ, ಅವನ ಮರಣಾ ನಂತರ ಅವನು ಲೋಕೇಶ್ವರನಲ್ಲಿ ಐಕ್ಯನಾದನೆಂದೂ, ಆತನ ಅನುಯಾಯಿಗಳಾದ "ಜೋಗಿ"ಯರು ನಂಬುವುದ ರಿಂದ ಅವರು ಲೋಕೇಶ್ವರನ ಪೂಜೆಯನ್ನು ಮಾಡುವುದಾಗಿದೆ.

ಮತ್ಸ್ಯೇಂದ್ರನಾಥನು ಗೋರಕನೊಂದಿಗೆ ಕೇರಳದಲ್ಲಿ ಅನೇಕ ವರ್ಷ

ಗಳಿದ್ದು, ಅಲ್ಲಿ ಪ್ರೇಮಳಾ ಎಂಬ ರಾಜಕುವರಿಯನ್ನು ತನ್ನ ಪಂಥಕ್ಕೆ ಸೇರಿಸಿ ಕೊಂಡು, ಅವಳಿಗೆ ಮಂಗಳೆ ಯೆಂಬ ಹೆಸರಿಟ್ಟನು. ಬಳಿಕ ಗೋರಕ, ಮಂಗಳೆಯುರೊಂದಿಗೆ ಆತನು ತುಳುವಕ್ಕೆ ಬಂದು ನೇತ್ರಾವತಿಯನ್ನು ದಾಟಿ, ಈಗ ಬೋಳಾರವೆಂದಿರುವಲ್ಲಿ ಉಳಕೊಂಡನು. ಅಲ್ಲಿ ಮಂಗಳೆಯನ್ನು ನಿಲ್ಲಿಸಿ, ತಾನು ಗೋರಕನೊಂದಿಗೆ ಕದಿರಿಯ ಗುಡ್ಡಕ್ಕೆ ತಪಸ್ಸಿಗಾಗಿ ಮುಂದರಿದನು. ಅಲ್ಲಿ ಅವನು ಕೆಲವು ಕಾಲವಿದ್ದು – ಬಳಿಕ ಉತ್ತರ ಹಿಂದುಸ್ಥಾನಕ್ಕೆ ಮರಳಿದನು. ಮಂಗಳೆಯು ಮತ್ಸ್ಯೇಂದ್ರನಾಥನು ನಿಲ್ಲಿಸಿದಲ್ಲೇ ಹಲವು ವರ್ಷ ನೆಲೆಯಾಗಿ ಅಲ್ಲಿಯೇ ಮೃತಳಾದಳು. ಇದು ೮ನೇ ಶತಮಾನದಲ್ಲಾಗಿರ ಬಹುದು. ಕ್ರಿ. ಶಕ ೯೬೮ಲ್ಲಿ ತುಳುವದ ಆಲೂಪ ಅರಸನಾಗಿದ್ದ ೨ನೇ ಕುಂದ ವರ್ಮನು ಬಾಲಚಂದ್ರ ಶಿಖಾಮಣಿ ಯೆಂಬ ಶೈವ ಗುರುಗಳ ಶಿಷ್ಯನಾಗಿದ್ದನು. ಅವನು ಶೈವ ಧರ್ಮಕ್ಕೇ ಸೇರಿದ ಮತ್ಸ್ಯೇಂದ್ರನಾಥನ ನಾಥಸಾಂಪ್ರದಾಯವನ್ನು ಸ್ವೀಕರಿಸಿ, ಲೋಕೇಶ್ವರ ಮೂರ್ತಿಯನ್ನು ಕದಿರಿಯಲ್ಲಿ ಪ್ರತಿಷ್ಠಿಸಿ, ಮಂಗಳೆಯು ಮೃತಳಾದಲ್ಲಿ ಮಂಗಳಾವತಿಯ (ಶಕ್ತಿದೇವಿಯ) ಪ್ರತಿಮೆಯನ್ನು ಪ್ರತಿಷ್ಠಿಸಿದನು. ಮಂಗಳಾವತಿ ಅಥವಾ ಮಂಗಳಾದೇವಿಯ ದೇವಸ್ಥಾನವು ಕುಂದ ವರ್ಮನು ಆ ಪ್ರತಿಮೆಯನ್ನು ಪ್ರತಿಷ್ಠಿಸಿದ್ದಲ್ಲೇ ಇದೆ. ತುಳುವದ ರಾಜಧಾನಿಗೆ ಮಂಗಳಪುರ ಅಥವಾ ಮಂಗಳೂರು ಎಂಬ ಹೆಸರು ಮಂಗಳೆಯಿಂದ ಬಂತೆಂದು ಹೇಳುತ್ತಾರೆ. ಕದಿರಿಯಲ್ಲಿ ಮತ್ಸ್ಯೇಂದ್ರನಾಥನು ಶಿಷ್ಯರೊಂದಿಗೆ ಉಳಕೊಂಡಲ್ಲಿ ಈಗ ಜೋಗಿಯರ ಮಠವಿದೆ.

ಕ್ರಿ. ಶಕದ ಆರಂಭದ ಶತಮಾನಗಳಲ್ಲಿ ಕದಿರಿಯಲ್ಲಿ ಮಹಾಯಾನ ಬೌದ್ಧರ ವಿಹಾರವೊಂದಿತ್ತೆಂದು ನಾವು ಹಿಂದೆ ಓದಿರುತ್ತೇವೆ. ಆ ವಿಹಾರದಲ್ಲಿ ಮಹಾಯಾನದ ಪ್ರಮುಖ ಬೋಧಿಸತ್ವರಲ್ಲೊಬ್ಬನಾದ ಮಂಜುಶ್ರೀಯ (ಯಾ ಮಂಜುಘೋಷನ) ವಿಗ್ರಹವಿತ್ತು. ಅದಕ್ಕೆ 'ಮಂಜುನಾಥ'ವೆಂಬ ಹೆಸರೂ ಇತ್ತು. ಬೌದ್ಧ ವಿಹಾರವು ಕ್ರಿ. ಶಕ ೮ನೇ ಶತಮಾನದಲ್ಲಿ ಹಾಳು ಬಿದ್ದು ಕೊಂಡಿತ್ತು. ಮತ್ಸ್ಯೇಂದ್ರನಾಥನು ಕದಿರಿಗೆ ಬಂದು, ಹಾಳು ಬಿದ್ದ ಆ ವಿಹಾರ ದಲ್ಲಿದ್ದ ಮಂಜುನಾಥ ಬೋಧಿಸತ್ವನ ಮೂರ್ತಿಯನ್ನು ತೆಗೆದು, ಅಲ್ಲಿ ಶಿವ ಲಿಂಗವನ್ನು ಸ್ಥಾಪಿಸಿದನು. ಆ ಶಿವಲಿಂಗವನ್ನು ಮೊದಲಿನ ಮಂಜುನಾಥ ಎಂಬ ಹೆಸರಿಂದಲೇ ಅವನು ಕರೆದಿದ್ದರಿಂದ, ಆ ವಿಹಾರವು ಆದರ ಬಳಿಕ 'ಮಂಜುನಾಥ ದೇವಾಲಯ'ವಾಯಿತು.

ನಾಥಪಂಥಕ್ಕೆ ಸೇರಿದ ಜೋಗಿ (ಯೋಗಿ) ಯರಿಗೆ ಮೊದಲು ಮದುವೆ ಇರಲಿಲ್ಲ; ಪ್ರತಿಯೊಬ್ಬನೂ ಸನ್ಯಾಸಿಯಾಗಬೇಕಿತ್ತು. ಆಲೂಪ ಕುಂದ ವರ್ಮನು ಆ ಪಂಥಕ್ಕೆ ಸೇರಿದ ಬಳಿಕ ಮದುವೆಯ ಕುರಿತಿದ್ದ ನಿಷೇಧವು ಹೋಗಿ ಅನೇಕರು ಆ ಪಂಥಕ್ಕೆ ಸೇರಿದರು. ಆದರೆ ಈಗಲೂ ಇತರ ಹಿಂದು ಗಳಂತೆ ಜೋಗಿಯರನ್ನು ಮರಣಾನಂತರ ಸುಡುವುದಿಲ್ಲ. ಹಿಂದಿನ ಸನ್ಯಾಸಕ್ಕೆ



ಕದಿರಿ ದೇವಸ್ಥಾನ


ಒಪ್ಪಿದ ಹೂಳಿಡುವ ಕ್ರಮವು ಅವರಲ್ಲಿ ಈಗಲೂ ನಡೆದುಬರುತ್ತದೆ. ಮೃತರಲ್ಲಿ ಗುರುಪದೇಶ ಪಡೆದವರನ್ನು ಸನ್ಯಾಸಿಗಳಂತೆ ಕೂತುಕೊಳ್ಳಿಸಿ, ಅವರ ಮೇಲೆ ಮೃತ್ತಿಕೆಯನ್ನು ಹಾಕಿ, ಹೂಳಿಡುವದು ಸಾಂಪ್ರದಾಯವಾಗಿದೆ.

ಜೋಗಿಯರು ಶಿವನೊಂದಿಗೆ ಭೈರವನನ್ನೂ ಶಕ್ತಿದೇವಿಯನ್ನೂ ಪೂಜಿಸು ತ್ತಾರೆ. ಅವರ ಮಠವು ಪುತ್ತೂರು ತಾಲೂಕಿನ ವಿಟ್ಲದಲ್ಲಿಯೂ ಒಂದಿದೆ. ಕದಿರಿಯ ಮಠಾಧಿಪತಿಗೂ ವಿಟ್ಲದ ಮಠಾಧಿಪತಿಗೂ ಕದಿರಿಯ ಮಠದಲ್ಲೇ ಪಟ್ಟವಾಗಬೇಕು.

ತುಳುವದಲ್ಲಿ ಹಿಂದೆ ೧೨ ಜೋಗಿಯರ ಮಠಗಳಿದ್ದವೆಂದೂ ಈಗ ಅವುಗಳಲ್ಲಿ ಹೆಚ್ಚಿನವು ಬಿದ್ದುಹೋಗಿವೆಯೆಂದೂ ತಿಳಿದುಬರುತ್ತದೆ.

## ಲೋಕೇಶ್ವರ ಪ್ರತಿಷ್ಠೆ

ಕದಿರಿಯ ದೇವಾಲಯದಲ್ಲಿ ಆಲೂಪ ಕುಂದವರ್ಮನು ಪ್ರತಿಷ್ಠಿಸಿದ ಲೋಕೇಶ್ವರ ದೇವರ ಪ್ರತಿಮೆಯನ್ನು ನಾಥಸಾಂಪ್ರದಾಯದವರು ಈಗಲೂ



ಲೋಕೇಶ್ವರ

ಪೂಜಿಸುತ್ತಾರೆ. ಅದಕ್ಕೆ ಮೂರು ಮುಖಗಳೂ ಆರು ಕೈಗಳೂ ಇವೆ. ಅದಕ್ಕೆ ಕೊರಳಿಗೆ ಯಜ್ಞೋಪವೀತವಿದ್ದು, ಮೈತುಂಬಾ ಆಭರಣಗಳಿವೆ. ತಲೆಯಲ್ಲಿ ಜಟೆ ಇದೆ. ಜಟೆಗೆ ತಾಗಿ ಹಿಂಬದಿ ಪ್ರಭಾವಳಿ ಇದೆ. ಪ್ರಭಾವಳಿಯ ಎರಡೂ ಪಕ್ಕಗಳಲ್ಲಿ ೨ ಮೂರ್ತಿಗಳು ನಿಂತಿವೆ; ಜಟಾಮುಕುಟದಲ್ಲಿಯೂ ಪ್ರಭಾವಳಿಯಲ್ಲಿಯೂ ಮತ್ಸ್ಯೇಂದ್ರನಾಥನ ೨ ಚಿಕ್ಕ ಮೂರ್ತಿಗಳಿವೆ. ಪ್ರತಿಮೆಯ ಪೀಠದಲ್ಲಿ ಆಲೂಪ ಕುಂದವರ್ಮನ ಶಾಸನವಿದೆ. ಅದರ

೯ ಶ್ಲೋಕಗಳನ್ನು ಶ್ರೀ ಡಾಕ್ಟರ್ ಸಾಲೆತ್ತೂರರು ಅವರ ಚರಿತ್ರೆಯಲ್ಲಿ ಕೊಟ್ಟಿರುತ್ತಾರೆ. ಅದರ ೬ರಿಂದ ೯ನೇ ಶ್ಲೋಕಗಳು ಈ ಕೆಳಗೆ ಕಾಣಿಸಿದಂತಿವೆ:–

ಶ್ರೀ ಕುಂದವರ್ಮ ಗುಣವಾನಾಳುವೇಂದ್ರೋ ಮಹೀಪತಿಃ ।
ಪಾದಾರವಿಂದ ಭ್ರಮರೋ ಬಾಲಚಂದ್ರ ಶಿಖಾಮಣೇ ॥ ೬ ॥

ಕಲೌವರ್ಷ ಸಹಸ್ರಾಣಾಮತಿಕ್ರಾಂತೇ ಚತುಷ್ಟಯೇ ।
ಪುನರಬ್ದಗತೇ ಚೈವಾಷ್ಟ ಷಷ್ಟ್ಯಾ ಸಮನ್ವಿತೇ ॥ ೭ ॥

ಗತೇಷು ನವಮಾಸೇಷು ಕನ್ಯಾಯಾಂ ಸಂಸ್ಥಿತೇ ಗುರೌ ।
ಪಶ್ಚಿಮೇಽಹನಿ ರೋಹಿಣ್ಯಾಂ ಮುಹೂರ್ತೇ ಶುಭಲಕ್ಷಣೇ ॥ ೮ ॥

ಲೋಕೇಶ್ವರಸ್ಯ ದೇವಸ್ಯ ಪ್ರತಿಷ್ಠಾ ಮಕರೋತ್ಪ್ರಭುಃ ।
ಶ್ರೀಮತ್ ಕದಿರಿಕಾನಾಮ್ನಿವಿಹಾರೇ ಸುಮನೋಹರೇ ॥ ೯ ॥

ಈ ಸಂಸ್ಕೃತ ಶಾಸನದ ೭-೮ನೇ ಶ್ಲೋಕಗಳ ಅರ್ಥವನ್ನು ಶ್ರೀ ಗೋವಿಂದ ಪೈಗಳು ಕೊಟ್ಟಿರುತ್ತಾರೆ. ಅದರಿಂದ

"ಕಲಿಯುಗದ ೪೦೬೮ ವರ್ಷಗಳು ಕಳೆದು ೪೦೬೯ನೇ ವರ್ಷವು ನಡೆಯುತ್ತಿರುವಾಗ,– ಗುರು ಕನ್ಯಾ ರಾಶಿಯಲ್ಲಿದ್ದಾಗ,– ೯ ತಿಂಗಳು ದಾಟಿ ೧೦ನೇ ತಿಂಗಳು ಸಲ್ಲುತ್ತಿರುವಾಗ – ರೋಹಿಣೀ ನಕ್ಷತ್ರದಂದಿನ ಸಾಯಂಕಾಲದ ಹೊತ್ತಿನಲ್ಲಿ" ಪ್ರತಿಷ್ಠೆಯಾದ್ದೆಂದು ಕಾಣುತ್ತದೆ.

ಕಲಿಯುಗದ ೪೦೬೯ನೇ ವರ್ಷವು ಕ್ರಿ. ಶಕ ೯೬೭–೯೬೮ ಎಂಬದು ನಿರ್ವಿವಾದವಾಗಿದೆ. ಪ್ರತಿಷ್ಠೆಯ ತಾರೀಕು ಕ್ರಿ. ಶಕ ೯೬೮ನೇ ಜನವರಿ ೧೩ ಎಂದು ಶ್ರೀ ಸಾಲೆತ್ತೂರರು ನಿಶ್ಚೈಸಿರುತ್ತಾರೆ. ಶ್ರೀ ಪೈಗಳು ೭ನೇ ಶ್ಲೋಕದಲ್ಲಿರುವ "ಪುನರಬ್ದಗತೇ ಚೈವಾಷ್ಟ" ಎಂಬದು ಪುನರಬ್ದ ಶತೇ ಚೈವಾಷ್ಟವಾಗಿರಬೇಕಿತ್ತೆಂದೂ ಪ್ರತಿಷ್ಠೆಯ ವರ್ಷವು ಕ್ರಿ. ಶಕ ೧೦೬೮ ಎಂದೂ ಹೇಳುತ್ತಾರೆ.

# ಅಧ್ಯಾಯ ೮

### ೧. ಹೊಯ್ಸಳ ಬಲ್ಲಾಳರೂ, ಶ್ರೀ ರಾಮಾನುಜಾಚಾರ್ಯರು. ೨. ಶ್ರೀ ಮಧ್ವಾಚಾರ್ಯರು. ೩. ಮಹಮ್ಮದೀಯರ ದಕ್ಷಿಣ ವಿಜಯ, ವಿಜಯನಗರ ಸ್ಥಾಪನೆ.

## ೧. ಹೊಯ್ಸಳಬಲ್ಲಾಳರೂ, ಶ್ರೀರಾಮಾನುಜಾಚಾರ್ಯರೂ

ಕಲ್ಯಾಣಿಯ ಚಾಲುಕ್ಯರು ಕರ್ಣಾಟಕ ಸಾಮ್ರಾಜ್ಯವನ್ನು ಆಳಿಕೊಂಡಿರುವಾಗ, ಚೋಳರಾಜನ ಮಹಾಮಂಡಲೇಶ್ವರನಾಗಿದ್ದ ಹೊಯ್ಸಳ ವಂಶದ ವಿನಯಾದಿತ್ಯನು ಆ ರಾಜನ ಆಗ್ರಹಕ್ಕೆ ಪಾತ್ರನಾಗಿ, ತುಳುವದಲ್ಲಿ ಬಂದು ಸೇರಿಕೊಂಡು ಅಜ್ಞಾತ ವಾಸಿಯಾಗಿದ್ದನು. ಈ ವಿನಯಾದಿತ್ಯನು ಅದರ ಬಳಿಕ ಮೈಸೂರಿನ ಮಲೆನಾಡಿನಲ್ಲಿ ಕಲ್ಯಾಣಿಯ ಚಾಲುಕ್ಯರ ಮಹಾಮಂಡಲೇಶ್ವರನಾದನು. ಅವನೇ ಹೊಯ್ಸಳ ಬಲ್ಲಾಳರ ಪ್ರಥಮ ಅರಸನು. ಅವನ ರಾಜಧಾನಿಯು ಮೈಸೂರಿನ ಹಾಸನ ಜಿಲ್ಲೆಯಲ್ಲಿರುವ ಬೇಲೂರು (ವೇಲಾಪುರ) ಆಗಿತ್ತು.

ಹೊಯ್ಸಳರು ತಾವು ಚಂದ್ರ ವಂಶಕ್ಕೆ ಸೇರಿದ ಯದುಕುಲದವರೆಂದು ಹೇಳಿಕೊಳ್ಳುತ್ತಿದ್ದರು. ಆದರೆ ಇವರ ಮೂಲ ಸ್ಥಳವು ಮೈಸೂರಿನ ಮಲೆನಾಡಿನಲ್ಲಿರುವ ಶಶಕಪುರ ಅಥವಾ ಸಸರೂರ ಎಂದು ತಿಳಿದುಬರುತ್ತದೆ. ಇವರ ಹಿರಿಯರಲ್ಲಿ ಸಳನೆಂಬವನು ಒಬ್ಬ ಜೈನ ಸನ್ಯಾಸಿಯೊಡನೆ ಶಶಕಪುರದಲ್ಲಿ ದೇವರ ಪೂಜೆಯಲ್ಲಿರುವಾಗ ಒಂದು ಹುಲಿಯು ಫಕ್ಕನೆ ಹಾರಿ ಅಲ್ಲಿ ಬಂತು. ಆಗ ಸನ್ಯಾಸಿಯು "ಹೊಯ್, ಸಳ" ಅಂದರೆ ಸಳನೇ ಹೊಡಿ ಎಂದು ಕರೆದು ಹೇಳಿದನು. ಸಳನು ಆ ಹುಲಿಯನ್ನು ಕೊಂದನು. ಅಂದಿನಿಂದ ಅವರ ಕುಟುಂಬಕ್ಕೆ ಹೊಯ್ಸಳರೆಂಬ ಹೆಸರು ಬಂತೆಂದು ಹೇಳುತ್ತಾರೆ. ಹೊಯ್ಸಳರ ವಂಶದ ಅರಸರಲ್ಲಿ ವಿನಯಾದಿತ್ಯನ ಬಳಿಕ ಆತನ ಮಗನಾದ ಎಲಿಯಂಗನು (ಕ್ರಿ. ಶ. ೧೧೦೦ರಿಂದ ೧೧೦೩) ಆಳಿದನು. ಎಲಿಯಂಗನಿಗೆ ೧ನೇ ಬಲ್ಲಾಳದೇವ, ಬಿಟ್ಟಿದೇವ (ವಿಷ್ಣುವರ್ಧನ) ಮತ್ತು ಉದಯಾದಿತ್ಯರಸರೆಂಬ ಮೂರು ಮಕ್ಕಳಿದ್ದರು. ೧ನೇ ಬಲ್ಲಾಳದೇವನು ಕ್ರಿ. ಶಕ **೧೧೦೩ರಿಂದ ೧೧೦೬ರ** ತನಕ, ಬೇಲೂರಿನಲ್ಲಿ ರಾಜಧಾನಿಯನ್ನಿಟ್ಟುಕೊಂಡು, ಹೊಯ್ಸಳ

ರಾಜ್ಯವನ್ನಾಳಿದನು. ಇವನ ಕಾಲದಲ್ಲಿ ಶಾಂತಾರ ಅರಸನು ಇವನ ಕೆಳಗೆ ಮಂಡಲೇಶ್ವರನಾಗಿದ್ದನು. ಕ್ರಿ. ಶಕ ೧೧೦೪ರಷ್ಟಕ್ಕೆ ಶಾಂತಾರ ಅರಸನಾದ ವೀರ ಜಗದೇವನು ಹೊಯ್ಸಳರ ಅಧಿಕಾರ್ರದಿಂದ ಸ್ವತಂತ್ರನಾಗ ಪ್ರಯತ್ನಿಸಿ, ಹೊಯ್ಸಳರೊಡನೆ ಕಾದಾಡಿ, ಸೋತು, ತನ್ನ ರಾಜ್ಯವನ್ನು ಬಿಡಬೇಕಾಯಿತು.

## ಬಿಟ್ಟಿಗ, ಬಿಟ್ಟಿದೇವ (ವಿಷ್ಣುವರ್ಧನ) ಕ್ರಿ. ಶ. ೧೧೦೬ರಿಂದ ೧೧೪೦.

ಹೊಯ್ಸಳರು ಬಿಟ್ಟಿಗನ ಕಾಲದ ತನಕ ಜೈನರಾಗಿದ್ದರು. ಚೋಳ ರಾಜ್ಯದಲ್ಲಿ ೧ನೇ ಕುಲೋತ್ತುಂಗನ ಕಾಲದಲ್ಲಿ ಶ್ರೀ ರಾಮಾನುಜಾಚಾರ್ಯರು ತಮ್ಮ ವೈಷ್ಣವ ಮತವನ್ನು ಸ್ಥಾಪಿಸಿ, ಅದರಿಂದಾಗಿ ಕಡು ಶೈವನಾದ ಚೋಳ ರಾಜನ ಆಗ್ರಹಕ್ಕೆ ಪಾತ್ರರಾಗಿ, ಆತನ ರಾಜ್ಯವನ್ನು ಬಿಟ್ಟು ಕನ್ನಡ ನಾಡಿಗೆ ಆಶ್ರಯುವನ್ನು ಹುಡುಕಿ ಬಂದರು. ಅಲ್ಲಿ ಅವರು ಹೊಯ್ಸಳ ರಾಜ್ಯವನ್ನಾಳುತ್ತಿದ್ದ ಬಿಟ್ಟಿದೇವನನ್ನು ತಮ್ಮ ವೈಷ್ಣವ ಮತಕ್ಕೆ ಸೇರಿಸಿ ಕೊಂಡರು. ಬಿಟ್ಟಿದೇವನು ಅದರ ಬಳಿಕ ವಿಷ್ಣುವರ್ಧನನೆಂಬ ಹೆಸರನ್ನಿಟ್ಟುಕೊಂಡು, ಬೇಲೂರಿನಲ್ಲಿ ಪ್ರಸಿದ್ಧವಾದ ಚೆನ್ನಕೇಶವ ದೇವಸ್ಥಾನವನ್ನು ಕಟ್ಟಿಸಿದನು.

ವೈಷ್ಣವ ಮತವನ್ನು ಸುಮಾರು ಕ್ರಿ. ಶ. ೧೧೧೬ಲ್ಲಿ ಸ್ವೀಕರಿಸಿದ (ಬಿಟ್ಟಿದೇವ) ವಿಷ್ಣುವರ್ಧನನು ಅದರ ಬಳಿಕ ದಿಗ್ವಿಜಯಕ್ಕೆ ಹೊರಟು ತಲೆಕಾಡು, ನೊಳಂಬವಾಡಿ, ಬನವಾಸಿ, ಚೇರ, ತುಳುವ ಮೊದಲಾದ ರಾಜ್ಯಗಳನ್ನು ಜೈಸಿ, ಹೊಯ್ಸಳರ ಬಲವನ್ನು ವಿಸ್ತರಿಸಿ, ಪಶ್ಚಿಮ ಚಾಲುಕ್ಯರ ಅಧಿರಾಜತ್ವವನ್ನು ಧಿಕ್ಕರಿಸಿ ಸ್ವತಂತ್ರನಾದನು. ಅವನು ದ್ವಾರ ಸಮುದ್ರದಲ್ಲಿ ತನ್ನ ರಾಜಧಾನಿ ಮಾಡಿ ಕೊಂಡನು.

೧ನೇ ಬಲ್ಲಾಳದೇವನ ಕಾಲದಲ್ಲಿ ಶಾಂತಾರ ರಾಜ್ಯವನ್ನು ಬಿಟ್ಟು ಹೋದ ವೀರ ಜಗದೇವನು ತನ್ನ ಸಂಬಂಧಿಕನಾದ ಆಲೂಪ ಅರಸನ ಸಹಾಯುವನ್ನು ಪಡೆದು, ಹೊಯ್ಸಳ ರಾಜ್ಯದಲ್ಲಿ ಹಾವಳಿ ಮಾಡ ತೊಡಗಿದ್ದನು. ವಿಷ್ಣುವರ್ಧನನು ಕ್ರಿ. ಶ. ೧೧೧೭ಲ್ಲಿ ಜಗದೇವನನ್ನು ಸದೆಬಡಿದು, ಶಾಂತಾರ ರಾಜ್ಯವನ್ನು ಹೊಯ್ಸಳ ಚಕ್ರಾಧಿಪತ್ಯಕ್ಕೆ ಸೇರಿಸಿದನು. ಆ ಬಳಿಕ ತುಳುವವನ್ನೂ ಜೈಸಿ, ಆಲೂಪ ರಾಜನ ಅಧಿಕಾರವನ್ನು ತಗ್ಗಿಸಿ, ಆತನನ್ನು ಹೊಯ್ಸಳ ಸಾಮ್ರಾಜ್ಯದೊಳಗಣ ಖೇಡಾಧಿಪತಿಯನ್ನಾಗಿ ಮಾಡಿದನು. ಆದರ ಬಳಿಕ ವಿಷ್ಣುವರ್ಧನನ ತಮ್ಮನಾದ ಉದಯಾದಿತ್ಯನು ಉದ್ಯಾವರವನ್ನು ರಾಜಧಾನಿ

ಯಾಗಿ ಮಾಡಿಕೊಂಡು, ತುಳುವವನ್ನು ಮಹಾಮಂಡಲೇಶ್ವರನಾಗಿ ಆಳುತ್ತಿದ್ದನು. ಆಲೂಪ ಅರಸನು ಅವನ ಕೈಕೆಳಗಿದ್ದನು.

### ೧ನೇ ನರಸಿಂಹ ಕ್ರಿ. ಶಕ ೧೧೪೦ – ೧೧೭೨

ವಿಷ್ಣುವರ್ಧನನ ಬಳಿಕ, ಅವನ ಮಗನಾದ ೧ನೇ ನರಸಿಂಹನು ಹೊಯ್ಸಳ ರಾಜನಾದನು. ಅವನು ಕಲ್ಯಾಣಿಯ ಚಾಲುಕ್ಯರ ಮಹಾಮಂಡಲೇಶ್ವರನಾಗಿ ಆಳತೊಡಗಿದರೂ ಕ್ರಿ. ಶ. ೧೧೫೬ರಲ್ಲಿ ಬಿಜ್ಜಳನು ಚಾಲುಕ್ಯ ಸಾಮ್ರಾಜ್ಯವನ್ನು ಅಪಹರಿಸಿದೊಡನೆ, ಸ್ವತಂತ್ರನಾದನು.

ಆಲೂಪ ಅರಸನಾದ ಭುಜಬಲ ಕವಿ ಆಲುಪೇಂದ್ರನು ವಿಷ್ಣುವರ್ಧನನ ಬಳಿಕ ಹೊಯ್ಸಳರ ಅಧಿಕಾರವನ್ನು ಧಿಕ್ಕರಿಸಿ, ತುಳುವದಲ್ಲಿ ಸ್ವತಂತ್ರ ಅರಸನಾಗಿ ಆಳತೊಡಗಿದ್ದನು. ಕ್ರಿ. ಶ. ೧೧೫೫ರಲ್ಲಿ ನರಸಿಂಹದೇವನ ಮಹಾ ಪ್ರಧಾನನೂ ಸೇನಾಪತಿಯೂ ಆದ ಚೊಕಿಮಯ್ಯ (ಲಕ್ಷ್ಮಯ್ಯ)ನು ಆಲೂಪ ಅರಸನನ್ನು ಪುನಃ ಜೈಸಿ, ತುಳುವದಲ್ಲಿ ಹೊಯ್ಸಳರ ಅಧಿಕಾರವನ್ನು ಸ್ಥಿರಗೊಳಿಸಿದನು.

೧ನೇ ನರಸಿಂಹದೇವನು ಬೆಳ್ತಂಗಡಿಯ ಹತ್ತಿರವಿರುವ ಜಮಾಲಾಬಾದ ಎಂಬ ಬೆಟ್ಟದಲ್ಲಿ ಒಂದು ಕೋಟೆಯನ್ನು ಕಟ್ಟಿಸಿ ಅದರ ಸುತ್ತಲೂ ನರಸಿಂಹಗಡವೆಂಬ ಪಟ್ಟಣವನ್ನು ಸ್ಥಾಪಿಸಿದನು. (ಟಿಪ್ಪುವಿನ ಮರಣದ ತನಕ ಆ ಪಟ್ಟಣವು ಒಳ್ಳೇ ರೀತಿಯಲ್ಲಿದ್ದು ಅಲ್ಲಿ ನೂರಾರು ಮನೆಗಳಿದ್ದವು.)

ವಿಷ್ಣುವರ್ಧನ ಮತ್ತು ೧ನೇ ನರಸಿಂಹನ ಕಾಲದಲ್ಲಿ, ತುಳುವದಲ್ಲಿ ಅನೇಕ ವರ್ಷ ಮಾಂಡಳಿಕರಾಗಿ ಆಳಿದ ಬಂಗ, ಚೌಟ, ಭೈರರಸ ಮೊದಲಾದ ಜೈನ ಪಾಳ್ಯಗಾರರು ತುಳುವದಲ್ಲಿ ಪ್ರಥಮ ತಲೆಯೆತ್ತಿದರು. ಅವರ ಮೂಲದ ವಿಷಯ ಇನ್ನೂ ವಿವಾದವಿದ್ದರೂ ವಿಷ್ಣುವರ್ಧನನ ಕಾಲದಿಂದ ಮೈಸೂರು ಮಲೆನಾಡಿನಲ್ಲಿಯೂ ಹೊಯ್ಸಳ ರಾಜ್ಯದಲ್ಲಿಯೂ ಜೈನರಿಗೆ ಆಶ್ರಯ ತಪ್ಪಿ, ಅವರ ಮುಖಂಡರು ತುಳುವಕ್ಕಿಳಿದು ಅಲ್ಲಿ ಸಣ್ಣ ಸಣ್ಣ ರಾಜ್ಯಗಳನ್ನು ಸ್ಥಾಪಿಸಿಕೊಂಡು, ಹೊಯ್ಸಳರ ಮಂಡಲೇಶ್ವರರಾಗಿ ಆಳತೊಡಗಿದರೆಂದು ತೋರುತ್ತದೆ. ಆಲೂಪರ ಅಧಿಕಾರವು ಹೊಯ್ಸಳ ವಿಷ್ಣುವರ್ಧನನ ಬಳಿಕ ಎಂದೂ ಇಡೀ ತುಳುವವನ್ನಾವರಿಸಿ ಕೊಂಡಿರಲಿಲ್ಲ.

### ೧ನೇ ನರಸಿಂಹದೇವನ ಬಳಿಕ

**೨ನೇ ವೀರ ಬಲ್ಲಾಳನು** ಕ್ರಿ. ಶ. ೧೧೭೨ರಿಂದ ೧೨೨೦ರ ತನಕ ಆಳಿದನು. ಆತನ ಕಾಲದಲ್ಲಿ ಕಲ್ಯಾಣಿಯ ಚಾಲುಕ್ಯರ ಸಾಮ್ರಾಜ್ಯವು

ನಾಶವಾಗಿ ಅದರ ಉತ್ತರ ಭಾಗವನ್ನು ದೇವಗಿರಿಯ ಯಾದವರೂ ದಕ್ಷಿಣ ಭಾಗವನ್ನು ಹೊಯ್ಸಳರೂ ಸ್ವಾಧೀನಪಡಿಸಿಕೊಂಡರು.

ಅವನ ಬಳಿಕ

೧. **೨ನೇ ನರಸಿಂಹ** (೧೨೨೦ – ೧೨೩೪.)
೨. ಸೋಮೇಶ್ವರ (೧೨೩೪ರಿಂದ ೧೨೫೩.)
೩. ೩ನೇ ನರಸಿಂಹ (೧೨೫೪ರಿಂದ ೧೨೯೦.)
೪. ೩ನೇ ವೀರ ಬಲ್ಲಾಳ (೧೨೯೦ರಿಂದ ೧೩೩೬.)

ಇವರು ಹೊಯ್ಸಳ ಅರಸರಾಗಿ ಆಳಿದರು. ಅವರ ರಾಜಧಾನಿಯು ದ್ವಾರ ಸಮುದ್ರ (ಈಗಿನ ಹಳೇ ಬೀಡು)ದಲ್ಲಿತ್ತು.

೩ನೇ ನರಸಿಂಹನ ಕಾಲದಲ್ಲಿ, ಆತನ ಪ್ರತಿನಿಧಿಯಾಗಿ, ಯುವರಾಜ ನಾಗಿದ್ದ ೩ನೇ ವೀರ ಬಲ್ಲಾಳನು ಮೂಡಬಿದ್ರೆಯಲ್ಲಿ ರಾಜಧಾನಿಯನ್ನು ಮಾಡಿಕೊಂಡು ತುಳುವವನ್ನಾಳುತ್ತಿದ್ದನು. ೩ನೇ ವೀರ ಬಲ್ಲಾಳನ ಕಾಲದಲ್ಲಿ, ಕಂದಾವರದಲ್ಲಿ, ಬಸವದೇವನೆಂಬ ಒಬ್ಬ ಪಾಳ್ಯಗಾರನು ದಂಗೆ ಮಾಡಿ, ವೀರ ಬಲ್ಲಾಳನ ಸೇನಾಧಿಪತಿಯಾದ ಸಂಗೀಯ ನಾಯಕನಿಂದ ಪರಾಜಿತ ನಾದನು. ವೀರ ಬಲ್ಲಾಳನ ರಾಣಿಯು ತುಳುವದ ರಾಜವಂಶದವಳಾಗಿದ್ದ ಳೆಂದು ತೋರುತ್ತದೆ. ಅವಳ ಹೆಸರು ಚಿಕ್ಕಯ್ಯ ತಾಯಿ, ಕಿಕ್ಕಾಯ ತಾಯಿ, ಅಥವಾ ಕೃಷ್ಣಾಯಿ ತಾಯಿ ಎಂದು ನಾಲ್ಕೈದು ಶಾಸನಗಳಿಂದ ತಿಳಿದುಬರುತ್ತದೆ.

೩ನೇ ವೀರ ಬಲ್ಲಾಳನ ಕಾಲದಲ್ಲಿ ಅಲ್ಲಾವುದ್ದೀನ್ ಖಿಲಜಿಯ ಸೇನಾ ಪತಿಯಾದ ಮಲ್ಲಿಕಾಫರನು ದ್ವಾರ ಸಮುದ್ರದ ಮೇಲೆ ದಾಳಿ ಮಾಡಿ, ರಾಜಧಾನಿಯನ್ನು ಸುಲಿದು, ಅಪರಿಮಿತ ಸಂಪತ್ತಿನೊಡನೆ ಬಲ್ಲಾಳನನ್ನು ಕೈಸೆರೆ ಹಿಡಿದು ಢಿಲ್ಲಿಗೆ ತೆರಳಿದನು. ಅಲ್ಲಿ ಬಲ್ಲಾಳನನ್ನು ಬಿಡುಗಡೆ ಮಾಡಿದ್ದ ರಿಂದ, ಅವನು ಬೇಲೂರನ್ನು ರಾಜಧಾನಿಯಾಗಿ ಮಾಡಿಕೊಂಡು ಪುನಃ ತನ್ನ ಸಂಕೋಚವಾದ ರಾಜ್ಯವನ್ನಾಳಿದನು. ಕ್ರಿ. ಶಕ ೧೩೩೬ಲ್ಲಿ ವಿಜಯನಗರ ಸ್ಥಾಪನೆಯಾಯಿತು. ವಿಜಯನಗರ ಸ್ಥಾಪನೆಯ ಬಳಿಕವೂ ಹೊಯ್ಸಳ ಅರಸರು ಕೆಲವು ಕಾಲ ಬೇಲೂರಿನಲ್ಲಿ ಆಳಿಕೊಂಡಿದ್ದರೂ ಅವರ ಅಧಿಕಾರವು ಕ್ಷೀಣಿಸುತ್ತಾ ಹೋಗಿ, ೩ನೇ ಬಲ್ಲಾಳನ ಮಗ ವಿರೂಪಾಕ್ಷನ ಕಾಲದಲ್ಲಿ ಅದು ಸಂಪೂರ್ಣ ನಾಶವಾಯಿತು.

## ೨. ಶ್ರೀ ಮಧ್ವಾಚಾರ್ಯರು

ಶ್ರೀ ಶಂಕರಾಚಾರ್ಯರು ಅದ್ವೈತ ವೇದಾಂತವನ್ನು ಬೋಧಿಸಿ, ಹಿಂದೂ ಮತವನ್ನು ಪುನಃ ಉಜ್ವಲ ಶಿಖರಕ್ಕೆತ್ತಿದರೆಂದು ನಾವು ಹಿಂದೆ ಓದಿರುತ್ತೇವೆ. ಅವರ ಸಿದ್ಧಾಂತ ತತ್ವದ ಪ್ರಕಾರ ಈ ಜಗತ್ತಿನಲ್ಲಿ ನಿಜವಾದದ್ದೆಂದರೆ "ಬ್ರಹ್ಮ" ವೊಂದೇ – ನಮ್ಮ ಕಣ್ಣಿಗೆ ಕಾಣಿಸುವ ವಸ್ತುಗಳೆಲ್ಲವೂ ನಿಜವಾದ್ದವಲ್ಲ. ನಾವು ನಮ್ಮ ಸುತ್ತಲಿರುವ ಆಯಾಯ ವಸ್ತುಗಳ ಭ್ರಮೆಯನ್ನು ನಮ್ಮ ಮನಸ್ಸಿನಿಂದ ದೂರ ಮಾಡಿ, ಅವುಗಳೆಲ್ಲದರಲ್ಲಿಯೂ ನಮ್ಮಲ್ಲಿಯೂ ಇರುವ ಬ್ರಹ್ಮವನ್ನು ಆತ್ಮಾನುಭವದಿಂದ ತಿಳಿದು ಸಾಕ್ಷಾತ್ಕಾರವನ್ನು ಪಡೆಯುವುದೇ ಮೋಕ್ಷವಾಗಿದೆ.

ಶಂಕರಾಚಾರ್ಯರ ಸಿದ್ಧಾಂತಕ್ಕೆ ಮಾಯಾವಾದವೆನ್ನುತ್ತಾರೆ. ಈ ಮಾಯಾವಾದವನ್ನು ತಿಳಕೊಳ್ಳುವದು ಕಷ್ಟವಾದ್ದರಿಂದ ಶ್ರೀ ರಾಮಾನುಜಾಚಾರ್ಯರು ವಿಶಿಷ್ಟಾದ್ವೈತ ವಿಚಾರವನ್ನು ಬೋಧಿಸಿದರು. ಶಂಕರನು ಹೇಳಿದಂತೆ ಈ ಜಗತ್ತಿನಲ್ಲಿ ನಿಜವಾದದ್ದು ಬ್ರಹ್ಮವೊಂದೇಯಾದರೂ ಈ ಜಗತ್ತೂ ಜಗತ್ತಿನಲ್ಲಿರುವ ಜೀವಗಳೂ ಆ ಬ್ರಹ್ಮದ್ದೇ ಅಂಶವಾದ್ದರಿಂದ ಅವು ತೀರಾ ಸುಳ್ಳಲ್ಲವೆಂದು ಶ್ರೀ ರಾಮಾನುಜಾಚಾರ್ಯರ ಸಿದ್ಧಾಂತವಾಗಿದೆ.

ಶ್ರೀ ರಾಮಾನುಜಾಚಾರ್ಯರು ಭಕ್ತಿಗೆ ಅಗ್ರಸ್ಥಾನವನ್ನಿತ್ತು ಜ್ಞಾನ, ಕರ್ಮಗಳು ಭಕ್ತಿಗೆ ಸಹಾಯಕವಾಗಬೇಕೆಂದು ಹೇಳಿದ್ದಾರೆ. ಅವರು ವಿಷ್ಣುವೇ ಬ್ರಹ್ಮಸ್ವರೂಪಿಯಾದ ಜಗದೀಶ್ವರನೆಂದು ಹೇಳಿದ್ದರಿಂದ ವೈಷ್ಣವ ಮತವು ಅವರಿಂದ ಬಲಹೊಂದಿತು.

ಈ ಎರಡು ಸಿದ್ಧಾಂತಗಳೂ ಜನ ಸಾಮಾನ್ಯರಿಂದ ಗ್ರಹಿಸಲಿಕ್ಕೆ ಕಷ್ಟವಾಗುತ್ತಿದ್ದವು. ಶ್ರೀ ಮಧ್ವಾಚಾರ್ಯರು ತನ್ನದೊಂದು ವಿಶಿಷ್ಟ ಮತ್ತು ಗ್ರಹಿಕೆಗೆ ಸುಲಭವಾದ ತತ್ವವನ್ನು ಸಾರಿದರು. ಅವರು ಹರಿಯೇ ಸರ್ವೋತ್ತಮನು, ಆತನನ್ನು ಸಾಕ್ಷಾತ್ತಾಗಿ ಕಾಣುವುದೇ ಮೋಕ್ಷ– ಜೀವಗಳು ಬೇರೆ, ಈಶ್ವರನು ಬೇರೆ – ಮುಕ್ತಿಯನ್ನು ಪಡೆದ ನಂತರವೂ, ಈಶ್ವರ ಜೀವರೊಳಗೆ, ಜೀವ, ಜೀವರೊಳಗೆ ಭೇದ ಉಳಿಯುವುದೆಂದು ಹೇಳಿ ಬೋಧಿಸಿದರು. ಹೀಗಾಗಿ ಶ್ರೀ ಮಧ್ವಾಚಾರ್ಯರು ಹಿಂದೂ ಧರ್ಮದಲ್ಲಿ ದ್ವೈತ ಮತ ಸಂಸ್ಥಾಪಕರೆಂಬ ಕೀರ್ತಿಯನ್ನು ಪಡೆದರು. ಶ್ರೀ ಮಧ್ವಾಚಾರ್ಯರು ಉಡುಪಿ

ಯಿಂದ ಆಗ್ನೇಯಕ್ಕೆ ಸುಮಾರು ಆರೇಳು ಮೈಲು ದೂರವಿರುವ ಬೆಳ್ಳೆ ಗ್ರಾಮದಲ್ಲಿ, ಬಡ ಬ್ರಾಹ್ಮಣ ಕುಟುಂಬವೊಂದರಲ್ಲಿ ಕ್ರಿ. ಶಕ ೧೨೩೮ ಲ್ಲಿ ಜನ್ಮವೆತ್ತಿದ್ದರು. ಅವರಿಗೆ ಅವರ ತಂದೆತಾಯಿಗಳು ವಾಸುದೇವನೆಂಬ ಹೆಸರನ್ನಿಟ್ಟು, ಚಿಕ್ಕ ವಯಸ್ಸಿನಲ್ಲಿಯೇ ಉಪನಯನ ಮಾಡಿ, ವಿದ್ಯಾಭ್ಯಾಸಕ್ಕಾಗಿ ರಜತಪೀಠಕ್ಕೆ (ಉಡುಪಿಗೆ) ಕಳುಹಿಸಿದರು. ಅಲ್ಲಿ ಅವರು ಬೇಗನೇ ತನ್ನ ವಿದ್ಯಾಭ್ಯಾಸವನ್ನು ಮುಗಿಸಿ, ಅನಂತೇಶ್ವರ ದೇವಸ್ಥಾನದಲ್ಲಿದ್ದ, ಶಂಕರಾಚಾರ್ಯರ ಮಠಕ್ಕೆ ಸೇರಿದ ಅಚ್ಯುತ ಪ್ರೇಕ್ಷಾಚಾರ್ಯರಿಂದ ಸನ್ಯಾಸಾಶ್ರಮವನ್ನು ಪಡೆದು, ಪೂರ್ಣಪ್ರಜ್ಞನೆಂಬ ಹೆಸರನ್ನು ಧರಿಸಿದರು.

ಪೂರ್ಣಪ್ರಜ್ಞರು ಕೆಲವು ವರ್ಷಗಳ ತನಕ ಉಡುಪಿಯಲ್ಲೇ ಇದ್ದು, ತಮ್ಮ ವೈಷ್ಣವ ಸಿದ್ಧಾಂತವನ್ನು ಅಲ್ಲಿ ಬೋಧಿಸ ತೊಡಗಿದರು. ಅವರ ಗುರುಗಳು ತನಗೆ ವಾರ್ಧಿಕ್ಯ ಪ್ರಾಪ್ತವಾದ್ದರಿಂದ ಪೂರ್ಣಪ್ರಜ್ಞರಿಗೆ ಪಟ್ಟಕಟ್ಟಿ, ಆನಂದ ತೀರ್ಥರೆಂಬ ಹೆಸರನ್ನಿಟ್ಟರು. ಆನಂದ ತೀರ್ಥರು ಕ್ರಿ. ಶಕ ೧೨೫೬ಲ್ಲಿ ದಕ್ಷಿಣ ಹಿಂದೂದೇಶವನ್ನು ಸಂಚರಿಸಿ ತನ್ನ ದ್ವೈತ ಸಿದ್ಧಾಂತವನ್ನು ಎಲ್ಲಾ ಕಡೆಗಳಲ್ಲಿಯೂ ಪ್ರಚಾರ ಮಾಡಿದರು. ಅವರು ಕುಂಬಳೆಗೆ ಹೋಗಿ, ಅಲ್ಲಿಂದ ವಿಷ್ಣು ಮಂಗಲಕ್ಕೆ ಹೋಗಿ, ಕುಂಬಳೆ ಅರಸನಿಂದ ಸನ್ಮಾನ ಹೊಂದಿ, ಅಲ್ಲಿಂದ ಅನಂತಶಯನಕ್ಕೆ, ಅನಂತಶಯನದಿಂದ ಕನ್ಯಾಕುಮಾರಿ, ರಾಮೇಶ್ವರಕ್ಕೆ ಹೋಗಿ ದ್ವೈತ ಮತ ಪ್ರಚಾರವನ್ನು ಮಾಡಿ, ಕೆಲವು ಕಾಲದ ಬಳಿಕ ಉಡುಪಿಗೆ ಮರಳಿದರು.

ಕ್ರಿ. ಶಕ ೧೨೬೬ಲ್ಲಿ ಅವರು ಉತ್ತರ ಹಿಂದುಸ್ಥಾನದ ಸಂಚಾರಕ್ಕೆ ಹೊರಟರು. ಬದರೀಕಾಶ್ರಮಕ್ಕೆ ಹೋಗಿ ಅಲ್ಲಿ ಕೆಲವು ಕಾಲ ನಿಂತು ಬಾದರಾಯಣ ಸೂತ್ರಗಳಿಗೆ ದ್ವೈತ ಭಾಷ್ಯವನ್ನು ಬರೆದರು. ಬದರೀಕಾಶ್ರಮದಿಂದ ಹೊರಟು ಬಂಗಾಳ, ಒರಿಸ್ಸಾ ದೇಶಗಳನ್ನು ದಾಟಿ ಆಂಧ್ರ ದೇಶಕ್ಕೆ ಹೋದರು. ಅಲ್ಲಿ ಅವರಿಗೆ ಪದ್ಮನಾಭತೀರ್ಥರೆಂಬ ಶಿಷ್ಯರು ದೊರಕಿದರು. ಪದ್ಮನಾಭತೀರ್ಥರನ್ನು ಆಂಧ್ರ, ಕಳಿಂಗ ದೇಶಗಳಲ್ಲಿ ದ್ವೈತ ಸಿದ್ಧಾಂತ ಪ್ರಚಾರಕ್ಕಾಗಿ ಬಿಟ್ಟು ಶ್ರೀ ಮಧ್ವಾಚಾರ್ಯರು ಉಡುಪಿಗೆ ಹಿಂತೆರಳಿದರು.

ಉಡುಪಿಯಲ್ಲಿರುವಾಗ ಒಂದು ದಿನ ಮಧ್ವಾಚಾರ್ಯರು ಶಿಷ್ಯರೊಡಗೂಡಿ ಸಮುದ್ರ ಸ್ನಾನಕ್ಕೆ ಹೋಗಿ ಸ್ನಾನ, ಜಪಗಳನ್ನು ಮುಗಿಸಿ, ದಡದ ಮೇಲೆ ಕುಳಿತಿರುವಾಗ, ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿ ಮುಳುಗಿ ಹೋಗುವ

ಸ್ಥಿತಿಯಲ್ಲಿದ್ದ ಒಂದು ಹಡಗಿನಲ್ಲಿರುವ ಜನರ ಗೋಳಾಟವು ಕೇಳಿಸಿತು. ಅದನ್ನು ಕೇಳಿದೊಡನೆ ಶ್ರೀ ಮಧ್ವಾಚಾರ್ಯರು ಹಡಗಿನ ಕಡೆಗೆ ತಮ್ಮ ಕಾಶಾಯ ವಸ್ತ್ರವನ್ನು ಬೀಸಿದರು. ಆಗ ಆ ಪ್ರದೇಶದಲ್ಲಿ ಊರು ಉಂಟೆಂದು ಹಡಗಿನ ಜನರಿಗೆ ತಿಳಿದು, ಅವರು ಹಡಗನ್ನು ಆ ಕಡೆ ತಿರುಗಿಸಿ ಕರೆಗೆ ಬಂದು ಮುಟ್ಟಿದರು. ಅವರು ತಮ್ಮ ಭಕ್ತಿಯನ್ನು ಪ್ರದರ್ಶಿಸಲಿಕ್ಕಾಗಿ, ಮಧ್ವಾಚಾರ್ಯರಿಗೆ ಮೂರು ಗೋಪಿಚಂದನದ ಉಂಡೆಗಳನ್ನು ಕೊಟ್ಟರು. ಮಧ್ವಾಚಾರ್ಯರು ಅವುಗಳನ್ನು ತೆಗೆದುಕೊಂಡು ಉಡುಪಿಗೆ ಬರುವಾಗ, ದಾರಿಯಲ್ಲಿ ಒಂದು ಉಂಡೆಯು ವಡ ಬಾಂಡೇಶ್ವರದಲ್ಲಿ ಫಕ್ಕನೆ ಕೆಳಗೆ ಬಿದ್ದು ಒಡೆದು ಹೋಯಿತು. ಅದರಲ್ಲಿ ಬಲರಾಮನ ಮೂರ್ತಿಯಿದ್ದದ್ದನ್ನು ಕಂಡು ಮಧ್ವಾಚಾರ್ಯರು ಅದನ್ನು ಅಲ್ಲಿಯೇ ಪ್ರತಿಷ್ಠೆ ಮಾಡಿದರು. ಇನ್ನೊಂದು ಉಂಡೆಯನ್ನು ಬಡಿಯುವಾಗ ಅದರಲ್ಲಿ ಸುಂದರವಾದ ಶ್ರೀಕೃಷ್ಣನ ಪ್ರತಿಮೆಯು ದೊರಕಿತು. ಮಧ್ವಾಚಾರ್ಯರು ಆ ವಿಗ್ರಹವನ್ನು ಉಡುಪಿಗೆ ಕೊಂಡು ಹೋಗಿ ಅದನ್ನು ಮಧ್ವ ಸರೋವರದಲ್ಲಿ ಚೆನ್ನಾಗಿ ತೊಳೆದು, ಆ ಕೆರೆಯ ದಡದಲ್ಲಿ ಒಂದು ಸಣ್ಣ ದೇವಸ್ಥಾನವನ್ನು ಕಟ್ಟಿಸಿ ಅಲ್ಲಿ ಅದನ್ನು ಪ್ರತಿಷ್ಠೆ ಮಾಡಿದರು. ಅದು ಮೊದಲುಗೊಂಡು, ಶ್ರೀಕೃಷ್ಣನ ಪೂಜೆಗೆ ಬೇಕಾದ ಏರ್ಪಾಡುಗಳನ್ನು ಮಾಡಿ, ಎಂಟು ಮಂದಿ ಸನ್ಯಾಸಿಗಳು ಸರ್ತಿ ಮೇರೆಗೆ ಎರಡೆರಡು ವರ್ಷ ಕಾಲ ಪೂಜೆಯನ್ನು ನಡಿಸಬೇಕೆಂದು ಕಟ್ಟನ್ನು ವಿಧಿಸಿ, (ಪಲಿಮಾರು, ಕಾಣ್ಯೂರು, ಸೋದೆ, ಪುತ್ತಿಗೆ, ಅದಮಾರು, ಪೇಜಾವರ, ಕೃಷ್ಣಾಪುರ, ಶಿರೂರು ಎಂಬ) ಎಂಟು ಮಠಗಳನ್ನು ಸ್ಥಾಪಿಸಿ, ಆ ಸನ್ಯಾಸಿಗಳನ್ನು ಒಬ್ಬೊಬ್ಬರನ್ನು ಒಂದೊಂದು ಮಠದ ಅಧಿಕಾರಿಯಾಗಿ ನೇಮಿಸಿದರು.

ಇದೆಲ್ಲಾ ಮುಗಿದ ತರುವಾಯ ಮಧ್ವಾಚಾರ್ಯರು ಮತ್ತೊಮ್ಮೆ ಬದರೀಕಾಶ್ರಮಕ್ಕೆ ಹೋಗಿ, ಅಲ್ಲಿಯ ಋಷಿಗಳ ಸಂದರ್ಶನ ಮಾಡಿ, ತನಗಿದ್ದ ಅನುಮಾನಗಳನ್ನೆಲ್ಲಾ ಪರಿಹರಿಸಿಕೊಂಡು ಭಾರತ ತಾತ್ಪರ್ಯ ನಿರ್ಣಯವೆಂಬ ಗ್ರಂಥವನ್ನು ಬರೆದರು. ಅದರ ಬಳಿಕ ಆ ಋಷಿಗಳು ಕೊಟ್ಟ ೮ ಸಾಲಿಗ್ರಾಮಗಳನ್ನು ಹಿಡಕೊಂಡು ಹೃಷಿಕೇಶ, ಹಸ್ತಿನಾಪುರ ಮೊದಲಾದ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಿ, ಗೋವೆಗೆ ಬಂದು, ಅಲ್ಲಿದ್ದ ಗೌಡ ಸಾರಸ್ವತರಿಗೆ ತನ್ನ ದ್ವೈತ ಸಿದ್ಧಾಂತವನ್ನು ಬೋಧಿಸಿ, ಅವರಲ್ಲನೇಕರನ್ನು ತನ್ನ ಮತಕ್ಕೆ ಸೇರಿಸಿ, ಕೊನೆಗೆ ಉಡುಪಿಗೆ ಮರಳಿದರು. ಅಷ್ಟರಲ್ಲಿ ಮಧ್ವಾಚಾರ್ಯರ

ಕೀರ್ತಿಯು ಭಾರತ ದೇಶದಲ್ಲೆಲ್ಲಾ – ಮುಖ್ಯ ದಕ್ಷಿಣ ಹಿಂದೂದೇಶದಲ್ಲಿ– ತುಂಬಿ, ಅವರೊಡನೆ ಚರ್ಚಿಸಲಿಕ್ಕೆ ಅನೇಕ ಅದ್ವೈತಿಗಳು ಬಂದು ಸೋತು, ದ್ವೈತ ಮತವನ್ನೊಪ್ಪಿ ಹೋಗುತ್ತಿದ್ದರು. ಮಧ್ವಾಚಾರ್ಯರು ಶೃಂಗೇರಿ ಜಗದ್ಗುರುಗಳ ಅಧೀನರಾಗಿರಲಿಕ್ಕೆ ಒಪ್ಪದೆ, ತನ್ನ ಸ್ವತಂತ್ರ ಮಠವನ್ನು ಸ್ಥಾಪಿಸಿದರು. ಅವರ ತಂದೆತಾಯಿಗಳು ಮೃತರಾದ ಬಳಿಕ ಅವರು ತನ್ನ ತಮ್ಮನಿಗೆ ಆಶ್ರಮವನ್ನು ಕೊಟ್ಟು ವಿಷ್ಣುತೀರ್ಥಾಚಾರ್ಯರೆಂಬ ಹೆಸರಿಟ್ಟರು. ಅದೇ ಸಮಯ, ಮತ್ತೂ ನಾಲ್ಕು ಮಂದಿಗೆ ಆಶ್ರಮ ಕೊಟ್ಟು, ತನ್ನ ತರುವಾಯ ಅವರು ಕ್ರಮವಾಗಿ ಪೀಠಕ್ಕೆ ಬರತಕ್ಕದ್ದೆಂದು ನಿಶ್ಚಯಿಸಿದರು. ಆ ನಾಲ್ಕು ಶಿಷ್ಯರನ್ನು ದ್ವೈತ ಮತ ಪ್ರಚಾರಕ್ಕಾಗಿ ನಾಲ್ಕು ದಿಕ್ಕುಗಳಿಗೆ ಕಳುಹಿಸಿ, ಮಧ್ವಾಚಾರ್ಯರು ತಾನು ಸುಬ್ರಹ್ಮಣ್ಯಕ್ಕೆ ಹೋಗಿ ಅಲ್ಲಿ ಒಂದು ಮಠವನ್ನು ಸ್ಥಾಪಿಸಿ, ತನ್ನ ತಮ್ಮನಾದ ವಿಷ್ಣುತೀರ್ಥಾಚಾರ್ಯರಿಗೆ ಅಲ್ಲಿ ಪಟ್ಟ ಕಟ್ಟಿದರು. ಸುಬ್ರಹ್ಮಣ್ಯ ಮಠವೆಂದು ಪ್ರಸಿದ್ಧವಾದ ಮಠವು ಅದೇ.

ಇದರ ಬಳಿಕ ತನ್ನ ೭೯ನೇ ವಯಸ್ಸಿನಲ್ಲಿ ಮಧ್ವಾಚಾರ್ಯರು ಪಿಂಗಳ ಸಂವತ್ಸರದ ಮಾಘಶುದ್ಧ ನವಮಿಯ ದಿನ ಸ್ವರ್ಗಸ್ಥರಾದರು. (ಶನಿವಾರ ೨೨ನೇ ಜನವರಿ ೧೩೧೭.)

ಶ್ರೀ ಮಧ್ವಾಚಾರ್ಯರು ತನ್ನ ಜೀವಕಾಲದಲ್ಲಿ ೩೭ ಪ್ರಸಿದ್ಧ ಗ್ರಂಥಗಳನ್ನು ಬರೆದರು. ಅವರು ಶಂಕರಾಚಾರ್ಯರ ಮಾಯಾವಾದವನ್ನು ತಿರಸ್ಕರಿಸಿ ದೇವರನ್ನು ಭಕ್ತಿ ಮಾರ್ಗದಿಂದ ಎಲ್ಲರೂ ಮೆಚ್ಚಿಸಿ ಮುಕ್ತಿಯನ್ನು ಪಡೆಯ ಸಾಧ್ಯವಿದೆಯೆಂದು ಬೋಧಿಸಿದರು. ತುಳುವದಲ್ಲಿ ಆಲೂಪ ಅರಸರು ಶೈವರಾಗಿದ್ದು ಶ್ರೀ ಮಧ್ವಾಚಾರ್ಯರ ವೈಷ್ಣವ ದ್ವೈತ ಮತವನ್ನು ಸ್ವೀಕರಿಸದಿದ್ದರೂ ಜನಸಾಮಾನ್ಯರಲ್ಲನೇಕರು ಮಾಧ್ವರಾದರು. ಶ್ರೀ ಮಧ್ವಾಚಾರ್ಯರು ವಾಯುದೇವರ ೩ನೇ ಅವತಾರವೆಂದು ಮಾಧ್ವರ ನಂಬುಗೆಯಾಗಿದೆ (ಹನುಮಂತ ಮತ್ತು ಭೀಮಸೇನರು ಮೊದಲಿನ ೨ ಅವತಾರಗಳು). ಅವರು ತನ್ನ ಜೀವಕಾಲದಲ್ಲಿ ತನ್ನ ಶರೀರದ ಅದ್ಭುತ ಶಕ್ತಿಯನ್ನು ಅನೇಕ ಸಲ ಪ್ರದರ್ಶಿಸಿ ಜನರನ್ನು ಬೆರಗುಗೊಳಿಸುತ್ತಿದ್ದುದರಿಂದ ಆ ನಂಬಿಕೆಯು ಹುಟ್ಟಿರಬೇಕು. ಮಧ್ವಾಚಾರ್ಯರು ತನ್ನ ಮತಾನುಯಾಯಿಗಳೆಲ್ಲಾ ಭಗವಂತನ ನಾಮ ಮುದ್ರೆಗಳನ್ನು ಮೈಮೇಲೆ ಧರಿಸಿಯೂ, ಮಕ್ಕಳಿಗೆ ಭಗವಂತನ ಹೆಸರಿಟ್ಟೂ, ಭಗವಂತನ ಭಜನೆ ಪೂಜನೆಗಳಿಂದಲೂ ಭಗವಂತನ ಸೇವೆ ಮಾಡ

ಬೇಕೆಂದು ಆಜ್ಞಾಪಿಸಿದ್ದರಿಂದ ಮಾಧ್ವರೆಲ್ಲರೂ ಗೋಪಿ ಚಂದನ ನಾಮಗಳನ್ನೂ ಪಂಚ ಮುದ್ರೆಗಳನ್ನೂ (ಶಂಖ, ಚಕ್ರ, ಗದಾ, ಪದ್ಮ ಮತ್ತು ನಾರಾಯಣ) ಶರೀರದಲ್ಲಿ ಧರಿಸಿಕೊಳ್ಳುತ್ತಾರೆ.

ತುಳುವದಲ್ಲಿ ಜನ್ಮವೆತ್ತಿದ್ದ ಸ್ತ್ರೀಪುರುಷರಲ್ಲಿ ಶ್ರೀ ಮಧ್ವಾಚಾರ್ಯರೇ ಶ್ರೇಷ್ಠರೆಂಬದು ನಿರ್ವಿವಾದವಾಗಿದೆ. ಅವರು ಸ್ಥಾಪಿಸಿದ ಶ್ರೀ ಕೃಷ್ಣ ದೇವಸ್ಥಾನವೂ ಅಷ್ಟ ಮಠಗಳೂ ಇನ್ನೂ ಉಡುಪಿಯಲ್ಲಿ ಶೋಭಿಸಿಕೊಂಡು ದಕ್ಷಿಣ ಹಿಂದುಸ್ಥಾನದ ನಾನಾ ದಿಕ್ಕುಗಳಿಂದ ಹಿಂದುಗಳನ್ನು ಅಲ್ಲಿಗೆ ಆಕರ್ಷಿಸಿ ಕೊಳ್ಳುತ್ತಿವೆ. ತುಳು ಬ್ರಾಹ್ಮಣರಲ್ಲಿ ಮಧ್ವಾಚಾರ್ಯರ ದ್ವೈತ ಮತವನ್ನು ಸ್ವೀಕರಿಸಿದವರಿಗೆ ಶಿವಳ್ಳಿ ಬ್ರಾಹ್ಮಣರೆಂಬ ಹೆಸರು ಬಂತು. ಶೈವರ ಪ್ರಧಾನ ಕೇಂದ್ರವಾದ ಶಿವಬೆಳ್ಳಿಯು ಮಾಧ್ವ ಧರ್ಮದ ಮುಖ್ಯ ಕೇಂದ್ರವಾಗಿ ಅದರ ಹೆಸರು ಶಿವಳ್ಳಿಯೆಂದಾದ್ದರಿಂದ, ಶಿವಳ್ಳಿ ಬ್ರಾಹ್ಮಣರೆಂಬ ಹೆಸರು ಬರಲಿಕ್ಕೆ ಕಾರಣವಾಗಿದೆ.

## ೩. ಮಹಮ್ಮದೀಯರ ದಕ್ಷಿಣವಿಜಯ. ವಿಜಯನಗರ ಸ್ಥಾಪನೆ

ಚಾಲುಕ್ಯರ ಕಾಲದಲ್ಲಿ ಅರೇಬಿಯದಲ್ಲಿ ಸ್ಥಾಪನೆಯಾದ ಇಸ್ಲಾಂ ಮತವು ಅವರ ಕಾಲದಲ್ಲಿಯೇ ಇರಾಕು, ಇರಾಣಗಳಲ್ಲಿ ಪ್ರಬಲವಾಗಿ ಹಿಂದುಸ್ಥಾನದ ಸಿಂಧೂ ಪ್ರಾಂತ್ಯದೊಳಗೆ ಸೇರಿ, ಆ ಪ್ರಾಂತ್ಯದಲ್ಲಿ ಕ್ರಿ. ಶಕ ೭೧೨ರಲ್ಲಿ ಮುಸ್ಲಿಮ್ ಅರಬರ ರಾಜ್ಯವು ಸ್ಥಾಪಿಸಲ್ಪಟ್ಟಿತ್ತು. ಆದರೆ ೮ನೇ ಶತಮಾನ ದಲ್ಲಿಯೂ ಬಳಿಕವೂ ನರ್ಮದೆಯ ದಕ್ಷಿಣಕ್ಕೆ ಕರ್ಣಾಟಕ ಸಾಮ್ರಾಟರು ಬಲಿಷ್ಠರೂ ಪರಾಕ್ರಮಿಗಳೂ ಆದ್ದರಿಂದ ಅರಬರಿಗೆ ತಮ್ಮ ರಾಜ್ಯವನ್ನು ವಿಸ್ತರಿಸ ಲಿಕ್ಕೆ ಎಡೆ ದೊರಕಲಿಲ್ಲ. ರಾಷ್ಟ್ರಕೂಟರ ಕಾಲದಲ್ಲಿ ಅರಬರು ಕನ್ನಡ ನಾಡಿ ನೊಡನೆ ವ್ಯಾಪಾರ ಬೆಳೆಸತೊಡಗಿದರು. ತುಳುವಕ್ಕೆ ಅದರ ಮೊದಲೇ ಇರಾಣ್ ಮತ್ತು ಅರೇಬಿಯದ ವ್ಯಾಪಾರಸ್ಥರು ಬಂದು ಹೋಗುತ್ತಿದ್ದರು. ಅವರಲ್ಲಿ ಹಲವರು ತುಳುವದ ಮಂಗಳೂರು, ಉಳ್ಳಾಲ, ಮಂಜೇಶ್ವರ, ಕಾಸರಗೋಡು ವಗೈರೆ ಬಂದರುಗಳಲ್ಲಿ ನೆಲೆ ನಿಂತು, ಪರದೇಶಗಳೊಡನೆ ವ್ಯಾಪಾರ ನಡಿಸು ತ್ತಿದ್ದರು. ಈ ವರ್ತಕರಲ್ಲಿ ಕೆಲವರು ಇಲ್ಲಿಯ ಬಡ ಹಿಂದೂ ಹೆಂಗಸರನ್ನು ಮದುವೆ ಮಾಡಿಕೊಂಡು ಆ ಸಂಬಂಧಗಳಿಂದ ತುಳುವದಲ್ಲಿ ಅನೇಕ

ಮುಸ್ಲಿಮ್ ಕುಟುಂಬಗಳುಂಟಾಗಿ, ಅವರಿಗೆಲ್ಲಾ ಮಾಪಿಳ್ಳೆಯರೆಂಬ ಹೆಸರು ಬಂತು. ಅವರು ಅಲ್ಲಲ್ಲಿ ಪಳ್ಳಿಗಳನ್ನು ಕಟ್ಟಿಸಿ, ತಮ್ಮ ಮತ ಧರ್ಮಕ್ಕನುಸಾರವಾಗಿ ನಡೆಯುತ್ತ, ತುಳುವದ ಹಿಂದುಗಳೊಡನೆ ಪರಸ್ಪರ ಸ್ನೇಹದಿಂದ ಜೀವಿಸಿಕೊಂಡಿದ್ದರು.

ಅರೇಬಿಯ, ಇರಾಕು, ಇರಾಣುಗಳಲ್ಲಿ ೭ರಿಂದ ೯ನೇ ಶತಮಾನಗಳ ತನಕ ಪ್ರಬಲರಾಗಿದ್ದ ಅರಬರು ಅದರ ಬಳಿಕ ಕಳೆಗುಂದಿ, ಅವರ ಚಕ್ರಾಧಿಪತ್ಯವು ಇಸ್ಲಾಂ ಮತದ ತುರ್ಕರ ಕೈಯಲ್ಲಿ ಬಿತ್ತು. ತುರ್ಕರು ಅರಬರಂತೆ ನಾಗರೀಕರಾಗಲಿ ವಿದ್ಯಾವಂತರಾಗಲಿ ಇರಲಿಲ್ಲ; ಆದರೆ ಸಮರ ಶೂರರಾಗಿದ್ದರು. ಹನ್ನೊಂದನೇ ಶತಮಾನದಲ್ಲಿ ಅವರು ಹಿಂದುಸ್ಥಾನದ ವಾಯುವ್ಯ ಗಡಿಯಿಂದ ಒಳನುಗ್ಗ ತೊಡಗಿದರು. ಆ ಶತಮಾನದ ಆರಂಭದಲ್ಲಿ ಉತ್ತರ ಹಿಂದುಸ್ಥಾನದಲ್ಲಿ ಘಜನೀಮಾಮೂದನು ಅನೇಕ ಸಲ ದಾಳಿ ನಡೆಸಿ, ಅಪರಿಮಿತ ದ್ರವ್ಯವನ್ನು ಘಜನಿಗೆ ಕೊಂಡುಹೋದನು. ಆದರೆ ಅವನು ಹಿಂದುಸ್ಥಾನದಲ್ಲಿ ನೆಲೆಗೊಳ್ಳಲಿಲ್ಲ. ಸುಮಾರು ಕ್ರಿ. ಶಕ ೧೦೩೦ಲ್ಲಿ ಘಜನಿಯ ಮಾಮೂದನು ಮೃತನಾಗಿ, ಆತನ ಹಿಂದೆ ಸ್ವಲ್ಪ ಕಾಲದಲ್ಲಿಯೇ ಆತನ ಘಜನಿಯ ರಾಜ್ಯವೂ ನಿರ್ನಾಮವಾಯಿತು. ಹಿಂದೂ ದೇವಾಲಯಗಳನ್ನು ನಾಶಮಾಡಿ, ಘಳಿಸಿದ ಅಪರಿಮಿತ ದ್ರವ್ಯವು ಘಜನಿಮಾಮೂದನ ಸಂತತಿಯ ಪರಿಗುಳಿಯಲಿಲ್ಲ. ಅವನು ಸತ್ತ ೧೬೦ ವರ್ಷಗಳ ತನಕ, ಈ ಪುಣ್ಯಭೂಮಿಯು ಯವನರ ಪಾದಸ್ಪರ್ಶದಿಂದ ಕಳಂಕಿತವಾಗದೆ ಭದ್ರವಾಗಿ ಇತ್ತು. ಆದರೆ ಈ ಪುಣ್ಯಭೂಮಿಯ ಉಜ್ವಲ ಸೌಂದರ್ಯದ ಮೇಲೆ ಹೊರಗಿನ ದುಷ್ಟರ ದೃಷ್ಟಿಯು ಎಂದೂ ತಪ್ಪಿದ್ದುಂಟೇ? ಅದರ ರಕ್ಷಣೆಗೆ ಬಲಿಷ್ಠ ರಾಷ್ಟ್ರಾಧಿಪತಿಗಳಿರುವ ತನಕ, ಅವರ ಬಾಧೆಯು ಅದನ್ನು ತಟ್ಟಿರಲಿಲ್ಲ. ಆದರೆ ಅದರ ಗಡಿಯಲ್ಲಿಯೇ ಬಲಿಷ್ಠ ಮುಸ್ಲಿಮ್ ರಾಷ್ಟ್ರಗಳು ತಲೆದೋರುವಾಗ, ಒಳಗೆ ಭ್ರಾತೃ ಕಲಹಗಳೂ ಬಲವಾಗಿ, ಒಕ್ಕಟ್ಟು ತಪ್ಪಿದ್ದರಿಂದ, ಅದು ಅನ್ಯರ ಪಾಲಾಯಿತು. ಜಯಚಂದ, ಪೃಥ್ವೀರಾಜರ ಪರಸ್ಪರ ದ್ವೇಷಗಳಿಂದ ಘೋರಿ ಮುಹಮ್ಮದನಿಗೆ ಅವರಿಬ್ಬರನ್ನೂ ನಾಶ ಮಾಡಿ, ಡಿಲ್ಲಿಯನ್ನು ಸ್ವಾಧೀನಪಡಿಸಿಕೊಂಡು, ಉತ್ತರ ಹಿಂದೂಸ್ಥಾನದಲ್ಲಿ ಮುಸ್ಲಿಮ್ ರಾಜ್ಯವನ್ನು ಸ್ಥಾಪಿಸಲಿಕ್ಕೆ ಅನುಕೂಲವಾಯಿತು. ಘೋರಿ ಮುಹಮ್ಮದನ ಸೇವಕನಾಗಿದ್ದ ಕುತುಬುದ್ದೀನನು ಕ್ರಿ. ಶಕ ೧೨೦೬ಲ್ಲಿ ಡಿಲ್ಲಿಯಲ್ಲಿ ಮುಸ್ಲಿಮರ ಸ್ಥಿರ ಸಿಂಹಾಸನವನ್ನು

ಸ್ಥಾಪಿಸಿದನು. ಅವನ ವಂಶದವರು ಉತ್ತರ ಹಿಂದುಸ್ಥಾನವನ್ನು ೧೨೯೦ರ ತನಕ ಆಳಿದ ಬಳಿಕ ಜಲಾಲುದ್ದೀನ್ ಖಿಲ್ಜಿಯು ಆ ಡಿಲ್ಲಿಯ ಸಿಂಹಾಸನ ವನ್ನೇರಿದನು. ಜಲಾಲುದ್ದೀನ್ ಖಿಲ್ಜಿಯ ತಮ್ಮನ ಮಗನಾದ ಅಲ್ಲಾ ವುದ್ದೀನನ ಕಾಲದಲ್ಲಿ (೧೨೯೬ರಿಂದ ೧೩೧೫) ಮುಸ್ಲಿಮರ ದೃಷ್ಟಿಯು ವಿಂಧ್ಯಾ ಚಲವನ್ನು ದಾಟಿ, ದಕ್ಷಿಣ ಹಿಂದುಸ್ಥಾನದ ಮೇಲೆ ಬೀಳ ತೊಡಗಿತು.

ದಕ್ಷಿಣ ಹಿಂದುಸ್ಥಾನದಲ್ಲಿ ಆಗ ಪ್ರಬಲ ಸಾಮ್ರಾಟರಿರಲಿಲ್ಲ. ಅರಬ ರನ್ನು ತಡೆಗಟ್ಟಿದ ಚಾಲುಕ್ಯ, ರಾಷ್ಟ್ರಕೂಟರು ಆಳಿದ ರಾಜ್ಯವು ಭಿನ್ನವಾಗಿ, ಉತ್ತರ ಭಾಗದಲ್ಲಿ ದೇವಗಿರಿಯ ಯಾದವರೂ ದಕ್ಷಿಣ ಭಾಗದಲ್ಲಿ ಹೊಯ್ಸಳ ಬಲ್ಲಾಳರೂ ಆಳುತ್ತಿದ್ದರು. ಯಾದವ, ಹೊಯ್ಸಳರು ನಿರಂತರ ಹೋರಾಟ ಗಳಲ್ಲಿದ್ದು ಇಬ್ಬರ ಬಲವೂ ಕ್ಷೀಣಿಸಿತ್ತು. ತುಳುವದಲ್ಲಿ ಶ್ರೀ ಮಧ್ವಾ ಚಾರ್ಯರು ಉತ್ತರ ಹಿಂದುಸ್ಥಾನದ ದಿಗ್ವಿಜಯವನ್ನು ಸಂಪೂರ್ಣಪಡಿಸಿ, ಉಡುಪಿಯಲ್ಲಿ ಶ್ರೀಕೃಷ್ಣನ ದೇವಾಲಯವನ್ನೂ ಅಷ್ಟ ಮಠಗಳನ್ನೂ ಸ್ಥಾಪಿಸಿ ತನ್ನ ದ್ವೈತಮತವನ್ನು ತುಳುವದಲ್ಲಿ ಸ್ಥಿರಗೊಳಿಸುತ್ತಿರುವಾಗ- ಅತ್ತ ಢಿಲ್ಲಿಯ ಯುವರಾಜನಾದ ಅಲ್ಲಾವುದ್ದೀನ್ ಖಿಲ್ಜಿಯು ದೇವಗಿರಿಯ ಯಾದವ ಅರಸನನ್ನು ಜೈಸಿ, ದೇವಗಿರಿಯನ್ನು ಕೊಳ್ಳೆ ಹೊಡೆದು– ಬಳಿಕ ತಾನು ಢಿಲ್ಲಿಯ ಸಿಂಹಾಸನವನ್ನೇರಿ, ತನ್ನ ಸೇನಾಪತಿಯಾದ ಮಲ್ಲಿ ಕಾಫರನನ್ನು ದಕ್ಷಿಣ ಹಿಂದುಸ್ಥಾನದ ದಿಗ್ವಿಜಯವನ್ನು ಸಂಪೂರ್ಣ ಪಡಿಸಲಿಕ್ಕಾಗಿ ಕಳುಹಿಸಿದನು. ಕ್ರಿ. ಶಕ ೧೩೧೦ರಷ್ಟಕ್ಕೆ ಮಲ್ಲಿ ಕಾಫರನು ದೇವಗಿರಿಯನ್ನು ಸ್ವಾಧೀನ ಪಡಿಸಿಕೊಂಡು, ದ್ವಾರ ಸಮುದ್ರವನ್ನು ಹಿಡಿದು, ಹೊಯ್ಸಳ ರಾಜ್ಯವನ್ನು ಸುಲಿಗೆಮಾಡಿ, ಹೊಯ್ಸಳ ಅರಸನಾದ ೩ನೇ ವೀರಬಲ್ಲಾಳನನ್ನು ಸೆರೆಹಿಡಿದು ಢಿಲ್ಲಿಗೆ ಕೊಂಡುಹೋದನು. ೩ನೇ ವೀರಬಲ್ಲಾಳನನ್ನು ಢಿಲ್ಲಿಯಲ್ಲಿ ಸೆರೆಯಿಂದ ಬಿಟ್ಟರೂ ಆತನು ಅವರ ಬಳಿಕ ಢಿಲ್ಲಿಯ ಸುಲ್ತಾನನ ಹೆಸರಿನಲ್ಲಿ ಕನ್ನಡನಾಡನ್ನು ಆಳ ಒಪ್ಪಿದನು. ಹೊಯ್ಸಳ ರಾಜ್ಯವು ಕ್ಷೀಣವಾಗಿ, ತೀರಾ ಕಳೆಗುಂದಿತು. ತುಳುವದಲ್ಲಿ ಹೊಯ್ಸಳರ ಅಧಿಕಾರವು ಹಾಗೆಯೇ ಉಳಿದರೂ ಜೈನ ಮಾಂಡ ಲಿಕರು ತುಳುವದಲ್ಲಿ ಅಲ್ಲಲ್ಲಿ ಪ್ರಬಲರಾದರು.

ಕ್ರಿ. ಶಕ ೧೩೧೫ಲ್ಲಿ ಅಲ್ಲಾವುದ್ದೀನನು ಕಾಲಾಧೀನನಾಗಿ, ಅವನ ಬಳಿಕ ೧೦ ವರ್ಷಗಳಲ್ಲಿ ಆತನ ವಂಶವೂ ನಿರ್ನಾಮವಾಯಿತು. ಆಗ ಢಿಲ್ಲಿಯ ಸಿಂಹಾಸನವನ್ನು ಘಯಾಸುದ್ದೀನ್ ತೊಗಲಾಕನು ಏರಿ, ಆತನ ಬಳಿಕ ಅವನ

ಮಗನಾದ ಮುಹಮ್ಮದ್ ಬೀನ್ ತೊಗಲಾಕನು ೧೩೨೫ ರಿಂದ ೧೩೫೧ ರ ತನಕ ಢಿಲ್ಲಿಯ ಸಾಮ್ರಾಜ್ಯವನ್ನಾಳಿದನು. ಅವನು ದೇವಗಿರಿಯಲ್ಲಿ ರಾಜಧಾನಿಯನ್ನು ಸ್ಥಾಪಿಸಬೇಕೆಂದು ಪ್ರಯತ್ನಿಸಿದರೂ ಅದು ಅವನಿಂದ ಸಾಧ್ಯವಾಗಲಿಲ್ಲ. ೧೩೨೭ ರಲ್ಲಿ ಮುಸ್ಲಿಮರು ಪುನಃ ಹೊಯ್ಸಳ ರಾಜ್ಯದೊಳಗೆ ನುಗ್ಗಿ, ದ್ವಾರ ಸಮುದ್ರವನ್ನು ನಾಶಮಾಡಿದರು. ಆದರೆ ಮುಹಮ್ಮದ್ ಬೀನ್ ತೊಗಲಾಕಿನ ಕಾಲದ ಅಂತ್ಯದಲ್ಲಿ ಮುಸ್ಲಿಮರ ಬಲವು ದಕ್ಷಿಣ ಹಿಂದುಸ್ಥಾನದಲ್ಲಿ ಕ್ಷೀಣಿಸ ತೊಡಗಿತು. ತುಂಗಭದ್ರೆಯ ತೀರದಲ್ಲಿ ಕ್ರಿ. ಶಕ ೧೩೩೬ ಲ್ಲಿ ವಿಜಯನಗರವು ತಲೆದೋರಿ, ಮುಸ್ಲಿಮರನ್ನು ತಡೆಗಟ್ಟಿತು. ಕ್ರಿ. ಶಕ ೧೩೪೭ ಲ್ಲಿ ವಿಜಯನಗರದ ಉತ್ತರದಲ್ಲಿ ಸ್ವತಂತ್ರ ಮುಸ್ಲಿಮ್ ಬಾಹಮನೀ ರಾಜ್ಯವೂ ಸ್ಥಾಪಿಸಲ್ಪಟ್ಟಿತು.

ಹೊಯ್ಸಳ ಬಲ್ಲಾಳರ ಅರಸನಾದ ೩ನೇ ವೀರಬಲ್ಲಾಳನು ಕ್ರಿ. ಶಕ ೧೩೪೨ ಲ್ಲಿ ಕಾಲಾಧೀನನಾದ ಬಳಿಕ ಆತನ ರಾಣಿಯಾದ ಕಿಕ್ಕಾಯಿ ತಾಯಿಯು ತನ್ನ ಸಂಬಂಧಿಕನಾದ ಆಲೂಪ ಅರಸನ ರಾಜ್ಯದಲ್ಲಿದ್ದಳು.

ವಿಜಯನಗರ ಸ್ಥಾಪನೆಯು ಕ್ರಿ. ಶಕ ೧೩೩೬ ರಲ್ಲಾದರೂ ತುಳುವದಲ್ಲಿ ವಿಜಯನಗರದ ಅಧಿಕಾರವು ೧೩೪೬ ರ ಬಳಿಕ ಸ್ಥಾಪಿತವಾದದ್ದೆಂದು ತೋರುತ್ತದೆ. ಹೊಯ್ಸಳ ಬಲ್ಲಾಳರು ವಿಜಯನಗರ ಸ್ಥಾಪನೆಗೆ ಸಹಾಯಕರಾಗಿದ್ದರು. ವಿಜಯನಗರ ಸಾಮ್ರಾಟರು ಹೊಯ್ಸಳ ಬಲ್ಲಾಳರನ್ನು ಮನ್ನಿಸುತ್ತಿದ್ದರು. ಆದರೆ ಸೂರ್ಯನ ಪ್ರಭೆಯಲ್ಲಿ ಚಂದ್ರನು ಕ್ಷೀಣಿಸುವಂತೆ, ವಿಜಯನಗರವು ಸ್ಥಾಪನೆಯಾದ ಬಳಿಕ ಹೊಯ್ಸಳರ ಬಲವು ದಿನೇ ದಿನೇ ಕಳೆಗುಂದಿ, ಕೊನೆಗೆ ೧೩೪೬ ಲ್ಲಿ ಮಾಯವಾಯಿತು. ವಿಜಯನಗರ ಸ್ಥಾಪನೆಯಾಗುವಾಗ ತುಳುವ ದಲ್ಲಿ ಹೊಯ್ಸಳರ ಮಂಡಲೇಶ್ವರನಾದ ವೀರ ಕುಲಶೇಖರ ದೇವನು ಆಳುತ್ತಿ ದ್ದನು. ಕ್ರಿ. ಶಕ ೧೩೪೬ ಲ್ಲಿ ಆಲೂಪ ಸಿಂಹಾಸನವನ್ನು ೨ನೇ ವೀರಪಾಂಡ್ಯ ದೇವನು ಏರಿದನು. ಅವನು ವಿಜಯನಗರದ ಸಾಮ್ರಾಟರ ಕೆಳಗೆ ಮಂಡ ಲೇಶ್ವರನಾದನು. ಅವನ ಕಾಲದಲ್ಲಿ ವಿಜಯನಗರ ಸಾಮ್ರಾಟರು ತುಳುವದಲ್ಲಿ ಬಾರಕೂರು, ಮಂಗಳೂರು, ಬಂಗಾಡಿಗಳಲ್ಲಿ ತಮ್ಮ ಪ್ರತಿನಿಧಿಗಳನ್ನು ನೇಮಿಸಿ,– ತುಳುವದ ಜೈನ ಸಾಮಂತರೆಲ್ಲಾ ಅದರ ಬಳಿಕ, ತಮ್ಮ ತಮ್ಮ ಸಂಸ್ಥಾನ ಗಳಿಗೊಪ್ಪಿದ ಪ್ರತಿನಿಧಿಯೊಡನೆ ತಮ್ಮ ಕಪ್ಪವನ್ನು ಸಲ್ಲಿಸುತ್ತಾ, ವಿಜಯನಗರ ಸಾಮ್ರಾಟರ ಕೆಳಗಾದರು; ಆಲೂಪರ ಅಧಿಕಾರವು ತುಳುವದಲ್ಲಿ ಹೆಸರಿಗೆ ಮಾತ್ರ ಉಳಿಯಿತು.

# ಅಧ್ಯಾಯ ೯

## ತುಳುವದ ರಾಜಕೀಯ, ಸಾಮಾಜಿಕ ಸ್ಥಿತಿಗತಿಗಳು

೧. ಆಲೂಪ ಅರಸರು. ೨. ರಾಜಕೀಯ ವಿಭಾಗಗಳು.
೩. ಪಾಡ್ದೊನೆಗಳು ೪. ಸಾಮಾಜಿಕ ಸ್ಥಿತಿಗತಿಗಳು.

ಹಿಂದಿನ ೮ ಅಧ್ಯಾಯಗಳಲ್ಲಿ ಪ್ರಾಚೀನ ಕಾಲದಿಂದ ವಿಜಯನಗರ ಸ್ಥಾಪನೆಯ ತನಕದ ತುಳುವ ಚರಿತ್ರೆಯನ್ನು ನಾವು ಓದಿದ್ದಾಯಿತು. ವಿಜಯ ನಗರ ಸ್ಥಾಪನೆಯ ಸಮಯ ತುಳುವದ ರಾಜಕೀಯ, ಸಾಮಾಜಿಕ ಸ್ಥಿತಿಗತಿಗಳು ಹೇಗಿದ್ದವೆಂದು ನಿಶ್ಚಯ ಹೇಳಲಿಕ್ಕೆ ಆ ಕಾಲದ ಸಾಹಿತ್ಯವೇನೂ ದೊರಕಿರುವುದಿಲ್ಲ. ಶಾಸನಗಳಲ್ಲಿ ಬರೇ ಅಲ್ಪ ಸ್ವಲ್ಪ ವಿವರಗಳೂ "ಗ್ರಾಮ ಪದ್ಧತಿ" ಗ್ರಂಥಗಳಲ್ಲಿ ಇನ್ನು ಸ್ವಲ್ಪ ವಿವರಗಳೂ ದೊರಕುತ್ತವೆ. ಆದರೆ ಈ ಕುರಿತು ಬೇಕಾದಷ್ಟು ಅನುಭವವು ನಮಗೆ ತುಳು "ಪಾಡ್ದೊನೆ"ಗಳಲ್ಲಿ ಸಿಕ್ಕುತ್ತದೆ.

## ೧. ಆಲೂಪ ಅರಸರು

ತುಳುವವು ಸ್ವತಂತ್ರ ಅರಸನೊಬ್ಬನ ಕೆಳಗೆ ಎಂದೂ ಇರಲಿಲ್ಲ. ಕ್ರಿ. ಶಕ ೬ನೇ ಶತಮಾನದಿಂದ ಆಲೂಪ ಅರಸರು ಅದನ್ನು ಕರ್ಣಾಟಕ ಸಾಮ್ರಾಟರ ಮಂಡಲೇಶ್ವರರಾಗಿ ಆಳಿ ಬಂದದ್ದನ್ನು ನಾವು ನೋಡಿರುತ್ತೇವೆ. ಆಲೂಪರ ಅಧಿಕಾರವು ಎಲ್ಲಾ ಕಾಲದಲ್ಲಿಯೂ, ಒಂದೇ ರೀತಿ, ತುಳುವವನ್ನಿಡೀ ವ್ಯಾಪಿಸಿ ಕೊಂಡಿರಲಿಲ್ಲವೆಂಬು ತೋರುತ್ತದೆ. ಅವರ ಕೆಳಗೆ ಅಲ್ಲಲ್ಲಿ ಸಂಸ್ಥಾನಾಧೀಶರೂ, ಆ ಸಂಸ್ಥಾನಾಧೀಶರ ಕೆಳಗ ಚಿಕ್ಕ ಪುಟ್ಟ 'ಬಲ್ಲಾಳ' 'ಅರಸ'ರೂ ಇರುತ್ತಿದ್ದರು.

ಆಲೂಪ ಅರಸರು ಯಾವಾಗಲೂ ಕರ್ಣಾಟಕ ಸಾಮ್ರಾಜ್ಯದೊಡನೆ ಸಂಬಂಧವುಳ್ಳವರಾಗಿದ್ದು, ಸಾಮ್ರಾಟರ ರಾಜ್ಯಾಡಳಿತೆಯ ಕ್ರಮವನ್ನು ತಾವೂ ತಮ್ಮ ರಾಜ್ಯದೊಳಗೆ ಪಾಲಿಸುತ್ತಿದ್ದರು. ಅವರ ಅಧಿಕಾರವು ಕುಟುಂಬ ಪಾರಂಪರ್ಯವಾಗಿ ನಡೆದು ಬರುತ್ತಿತ್ತು; ಮಕ್ಕಳ ಕಟ್ಟಿನ ಪ್ರಕಾರ ತಂದೆಯ ನಂತರ ಮಗನು ಪಟ್ಟಕ್ಕೇರುತ್ತಿದ್ದನು.

ರಾಜ್ಯ ರಕ್ಷಣೆ, ನೀತಿ ಪರಿಪಾಲನೆಗಳು ಅರಸನ ಮುಖ್ಯ ಧರ್ಮವೆಂಬದನ್ನು ಆಲೂಪ ಅರಸರು ತಿಳಿದಿದ್ದರು. ೨ನೇ ಕುಂದವರ್ಮನ ಕದಿರಿಕಾ ಶಾಸನವಲ್ಲಿ ಅವನು ಬಾಹುಬಲದಿಂದ ಭೂಮಂಡಲವನ್ನು ರಕ್ಷಿಸುವನೆಂದೂ,- ಇತರ ಶಾಸನಗಳಲ್ಲಿ ಹೇಳಿದ ಆಯಾ ಅರಸರು ದುಷ್ಟ ನಿಗ್ರಹ, ಶಿಷ್ಟ ಪರಿಪಾಲನಗಳನ್ನು ಮಾಡುವವರೆಂದೂ ಅವರನ್ನು ಹೊಗಳಿರುತ್ತದೆ. ದೇವಸ್ಥಾನಗಳನ್ನು ಕಟ್ಟಿಸುವದು, ಅವುಗಳಲ್ಲಿ ವಿನಿಯೋಗಗಳು ಕ್ರಮ ಪ್ರಕಾರ ನಡಿಯುತ್ತವೆಯೆಂದು ಜಾಗ್ರತೆ ನೋಡುವದು – ಇವುಗಳೂ ಆಲೂಪ ಅರಸರು ಯಾವಾಗಲೂ ತಮ್ಮ ದೃಷ್ಟಿಯನ್ನಿಡುತ್ತಿದ್ದ ಕರ್ತವ್ಯಗಳಾಗಿದ್ದವು. ಆಲೂಪ ಅರಸರು ಶೈವರಾಗಿದ್ದು ಉದ್ಯಾವರದ ಶಂಭುಕಲ್ಲು ಬೈರವ ದೇವಸ್ಥಾನವು ಅವರ ಕಾಲದಲ್ಲಿ ತುಳುವದ ರಾಜ ದೇವಸ್ಥಾನವಾಗಿತ್ತು. "ಶಂಭುಕಲ್ಲು ಭಟ್ಟಾರಕ"ರೆಂಬ ಬಿರುದು ಅವರ ಶಾಸನಗಳಲ್ಲಿ ಕಾಣುತ್ತದೆ.

## ಮಂತ್ರಿಗಳು

ಆಲೂಪ ಅರಸರಿಗೆ ಹಲವು ಮಂತ್ರಿಗಳಿದ್ದರು. ಅವರಿಗೆ "ಪ್ರಧಾನ"ರೆಂಬ ಸಾಮಾನ್ಯ ಹೆಸರಿತ್ತು. ಈ ಪ್ರಧಾನರಲ್ಲಿ ಮುಖ್ಯನಾದವನಿಗೆ ಮಹಾ ಪ್ರಧಾನನೆಂದೂ, ಒಳ ಅರಸುಗಳ ವ್ಯವಹಾರಗಳನ್ನು ನಡೆಸುತ್ತಿರುವವನಿಗೆ ಸಾಮಂತ ಪ್ರಧಾನನೆಂದೂ, ಹೆಸರಿದ್ದವು. ಆಲೂಪ ಅರಸರು ಮಂಡಲೇಶ್ವರರಾಗಿದ್ದು ಹೊರಗಣ ಅರಸರೊಡನೆ ಯುದ್ಧ ಮಾಡುವ ಅಥವಾ ಒಪ್ಪಂದಗಳನ್ನು ಬೆಳೆಸುವ ಅಧಿಕಾರವು ಅವರಿಗಿದ್ದಿಲ್ಲವಾದ್ದರಿಂದ ಅವರಲ್ಲಿ "ಸಂಧಿ, ವಿಗ್ರಹ" ಪ್ರಧಾನನೆಂಬ ಕರ್ಣಾಟಕ ಸಾಮ್ರಾಟರಲ್ಲಿದ್ದಂತೆ ಪ್ರತ್ಯೇಕ ಪ್ರಧಾನನೊಬ್ಬನಿರಲಿಲ್ಲ. ಧರ್ಮ ವಿಚಾರವು ಅರಸರ ಮುಖ್ಯ ಕರ್ತವ್ಯವಾಗಿದ್ದ ಆ ಕಾಲದಲ್ಲಿ, ಅರಸರಿಗೆ ಧರ್ಮ ವಿಚಾರಗಳಿಗೂ ದೇವಸ್ಥಾನಗಳ ಮೇಲ್ವಿಚಾರಕ್ಕೂ ಸಹಾಯಕರಾಗಿ 'ಧರ್ಮಕರಣೀಕ'ರೆಂಬ ಹೆಸರಿನ ಉದ್ಯೋಗಸ್ಥರಿದ್ದರು. ಆದರೆ ಮಂತ್ರಿಗಳಿಗೆಲ್ಲಾ ನಿರ್ದಿಷ್ಟ ಕರ್ತವ್ಯಗಳಿದ್ದಂತೆ ತೋರುವುದಿಲ್ಲ. ಒಬ್ಬನು ಎರಡೆರಡು ಯಾ ಹೆಚ್ಚು ಕೆಲಸಗಳನ್ನು ಮಾಡುತ್ತಿದ್ದನೆಂದು ತೋರುತ್ತದೆ. ಮಹಾ ಪ್ರಧಾನನು ದಂಡ ನಾಯಕನ ಕೆಲಸವನ್ನೂ ಮಾಡುತ್ತಿದ್ದನು. ಆದರೆ ಯುದ್ಧಗಳಲ್ಲಿ ಹೆಚ್ಚಾಗಿ ಅರಸನೇ ಸ್ವತಹಾ ಭಾಗವಹಿಸುತ್ತಿದ್ದನಾದ್ದರಿಂದ ದಂಡ ನಾಯಕನಿಗೆ ಕರ್ತವ್ಯಗಳು ಹೆಚ್ಚಿರ ಕಾರಣವಿಲ್ಲ.

## ಅರಮನೆಗಳೂ ಅರಸಿಯರೂ

ಅರಮನೆಗಳೊಳಗಣ ವ್ಯವಸ್ಥೆಗಳ ಕುರಿತು ವಿಶೇಷ ಸಂಗತಿಗಳೇನೂ ತಿಳಿದುಬಂದಿರುವದಿಲ್ಲ. ಅರಸಿಯರನ್ನು ತುಳುವದ ಹೊರಗಿನ ರಾಜ ಕುಲಗಳಿಂದಲೇ ತರುತ್ತಿದ್ದರೆಂಬದು ಶಾಂತಾರ ಆಲೂಪ ಸಂಬಂಧಗಳಿಂದಲೂ, ಆಲೂಪ ಹೊಯ್ಸಳ ಸಂಬಂಧಗಳಿಂದಲೂ ವ್ಯಕ್ತವಾಗುತ್ತದೆ. ಆಲೂಪ ರಾಜಮನೆತನವನ್ನು ಕರ್ಣಾಟಕದ ಇತರ ರಾಜ ಮನೆತನಗಳು ಮನ್ನಣೆಯಿಂದ ಕಾಣುತ್ತಿದ್ದರು.

ಹಲವು ಅರಸಿಯರು ರಾಜ್ಯದ ಆಡಳಿತೆಯಲ್ಲಿ ಅರಸನೊಂದಿಗೆ ಸೇರಿದ್ದ ದೃಷ್ಟಾಂತಗಳು ಶಾಸನಗಳಲ್ಲಿ ದೊರಕುತ್ತವೆ. ಅರಸನು ಹಲವು ಅರಸಿಯರನ್ನು ಮದುವೆಯಾದಾಗ ಪಟ್ಟದ ಅರಸಿಗೆ ಮಹಾದೇವಿಯೆಂದು ಕರೆಯುತ್ತಿದ್ದರೆಂದು ತೋರುತ್ತದೆ. ಅಂಥಾ ಮಹಾದೇವಿಯರ ಹೆಸರು ಆಲೂಪ ಅರಸರ ಹಲವು ಶಾಸನಗಳಲ್ಲಿ ಕಂಡುಬರುತ್ತವೆ.

ಅನೇಕ ಸಲ ರಾಜ್ಯಭಾರದ ಶ್ರಮವನ್ನು ಅರಸರು ತಮ್ಮ ಅರಸಿಯರೊಂದಿಗೆ, ಅರಮನೆಯೊಳಗೆ, ಪುರಾಣ ಕಥೆಗಳ ಶ್ರವಣದಲ್ಲಿ, ಮರೆಯುತ್ತಿದ್ದರು. ಯುವರಾಜರಿಗೆ ಯಾವ ಕರ್ತವ್ಯಗಳು ನೇಮಕವಾಗಿದ್ದವೆಂದು ತಿಳಿದುಬರುವುದಿಲ್ಲ.

## ೨. ರಾಜಕೀಯ ವಿಭಾಗಗಳು

### (i) ಮಾಗಣೆಗಳು

ತುಳು ರಾಜ್ಯಕ್ಕೆ ಕೆಲವು ಶಾಸನಗಳಲ್ಲಿ 'ತುಳು ವಿಷಯ'ವೆಂದು ಕರೆದಿರುವದು ಕಾಣುತ್ತದೆ. 'ವಿಷಯ'ವೆಂದರೆ ರಾಷ್ಟ್ರಕ್ಕಿಂತಲೂ ಸಣ್ಣದಾದ ಭಾಗ. ಕರ್ಣಾಟಕ ರಾಷ್ಟ್ರದ ಭಾಗವಾಗಿ ತುಳುವಕ್ಕೆ 'ವಿಷಯ'ವೆಂದು ಕರೆದಿರಬೇಕು.

ತುಳು ರಾಜ್ಯದಲ್ಲಿ ಹಲವು ಸಂಸ್ಥಾನಗಳಿದ್ದವು. ಅವುಗಳು ಸಾಮಂತರ ಕೆಳಗಿದ್ದವು. ಬಂಗರೂ ಚೌಟರೂ ಮೊದಲಿನಿಂದಲೂ ತುಳು ರಾಜ್ಯದಲ್ಲಿ ಸಂಸ್ಥಾನಾಧಿಪತಿಗಳಾಗಿದ್ದರೆಂದು ಭೂತಾಳಪಾಂಡ್ಯನ ಚರಿತ್ರೆಯಿಂದ ತೋರುತ್ತದೆ.

ಸಂಸ್ಥಾನಾಧಿಪತಿಗಳ ಕೆಳಗೆ ಬಲ್ಲಾಳರೆಂಬ ಪುಟ್ಟ ಅರಸರಿದ್ದರು. ಅವರು ಆಳುವ ವಿಸ್ತೀರ್ಣಕ್ಕೆ ಮಾಗಣೆಯೆಂದು ಕರೆಯುತ್ತಿದ್ದರು. ಕೆಲವು ಮಾಗಣೆಗಳಲ್ಲಿ ನಾಲ್ಕೈದು ಗ್ರಾಮಗಳೂ ಕೆಲವಲ್ಲಿ ಹತ್ತು, ಹನ್ನೆರಡು ಗ್ರಾಮಗಳೂ ಇದ್ದವು. ಕೆಲವು ಕಡೆ ಅಂಥಾ ಪುಟ್ಟ ಅರಸರನ್ನು ಹೆಗ್ಗಡೆಯರೆಂದೂ ಕರೆಯುತ್ತಿದ್ದರು. ಗ್ರಾಮಗಳಲ್ಲಿ ಗುರಿಕಾರರೆಂಬ ಮುಖ್ಯಸ್ಥರಿದ್ದರು ಜಾತಿನೀತಿಗಳ ವಿಚಾರಕ್ಕೆ ಆಯಾ ಜಾತಿಗಳಿಗೆ ಸಂಬಂಧಪಟ್ಟ ಗುರಿಕಾರರೂ, ಸಾಮಾನ್ಯ ವಿಚಾರಗಳಿಗೆ ಗ್ರಾಮದ ಗುರಿಕಾರರೂ, ಪ್ರತ್ಯಪ್ರತ್ಯೇಕವಿದ್ದರು. ಗ್ರಾಮಗಳಿಂದ ಆರಿಸಿದ "ಮಾಗಣೆ ಗುರಿಕಾರರು" ಪ್ರತ್ಯೇಕವಿದ್ದರು. ಬಲ್ಲಾಳರು ರಾಜ್ಯವನ್ನು ಈ ಗ್ರಾಮ ಗುರಿಕಾರರ ಮತ್ತು ಮಾಗಣೆ ಗುರಿಕಾರರ ಸಹಾಯದಿಂದ ಆಳುತ್ತಿದ್ದರು. ಚಿಲ್ಲರೆ ನ್ಯಾಯಗಳನ್ನು ಗ್ರಾಮ ಗುರಿಕಾರರೂ ಮಾಗಣೆ ಗುರಿಕಾರರೂ ತೀರ್ಮಾನಿಸುತ್ತಿದ್ದರು. ದೈವಸ್ಥಾನಗಳ ಚಾವಡಿಯಲ್ಲಾಗಲಿ ಅಶ್ವತ್ಥದ ಕಟ್ಟೆಗಳಲ್ಲಾಗಲಿ ಅವರು ತಮ್ಮ ನ್ಯಾಯಸ್ಥಾನವನ್ನು ಮಾಡುತ್ತಿದ್ದರು. ಈ ಗುರಿಕಾರರೊಳಗಣ ಸಂಬಂಧದ ವಿವರಗಳು ಸ್ಪಷ್ಟವಾಗಿ ತಿಳಿದುಬರುವುದಿಲ್ಲವಾದರೂ ಗ್ರಾಮ ಗುರಿಕಾರರಿಗೆ ಬರೀ ಅಲ್ಪ ಸಂಗತಿಗಳಲ್ಲಿ ಮಾತ್ರ ಅಧಿಕಾರವಿತ್ತೆಂದೂ ಅವುಗಳಿಂದ ಮೇಲಣ ಸಂಗತಿಗಳನ್ನು ಮಾಗಣೆ ಗುರಿಕಾರರು ಇತ್ಯರ್ಥಪಡಿಸಬೇಕಿತ್ತೆಂದೂ ನಾವು ಎಣಿಸಬಹುದು.

ಮಾಗಣೆಗಳನ್ನು ನಾಡು ಅಥವಾ ಸೀಮೆ ಎಂದೂ ಕರೆಯುತ್ತಿದ್ದರು. ಅವುಗಳನ್ನಾಳುವ ಬಲ್ಲಾಳರು ರಾಜರೀವಿಯನ್ನು ಪ್ರದರ್ಶಿಸುತ್ತಿದ್ದರು. ಬಲ್ಲಾಳರಿಗೆಲ್ಲಾ ಪಟ್ಟಾಭಿಷೇಕವಾಗುವ ಕ್ರಮವಿತ್ತು. ಆಗ ಮಾಗಣೆ ಗುರಿಕಾರರಲ್ಲೊಬ್ಬನು ಬಲ್ಲಾಳನ ಕೈಹಿಡಿದು ಕೊಂಡುಹೋಗಿ, ಆತನನ್ನು ಪಟ್ಟದ ಮಂಚದ ಮೇಲೆ ಕೂತುಕೊಳ್ಳಿಸುವದಿತ್ತು; ಇನ್ನೊಬ್ಬನು ಅದರ ಬಳಿಕ ಆತನ ಕೈಬೆರಳಿಗೆ ಪಟ್ಟದ ಉಂಗುರವನ್ನಿಟ್ಟು. ಮತ್ತೊಬ್ಬನು ಆತನ ಕೈಗೆ ಪಟ್ಟದ ಕತ್ತಿಯನ್ನು ಕೊಡುತ್ತಿದ್ದನು; ಅದರ ಬಳಿಕ ನಾಲ್ಕನೇಯವನು ಬಲ್ಲಾಳನ ಪಟ್ಟದ ಹೆಸರನ್ನು ಕೂಗಿ ಹೇಳುತ್ತಿದ್ದನು.

## (ii) ಸಂಸ್ಥಾನಗಳು

ವಿಜಯನಗರ ಸ್ಥಾಪನೆಯ ಸಮಯ ತುಳುವದಲ್ಲಿ ಬಂಗರು, ಚೌಟರು, ಆಜಿಲರು, ಮೂಲರು, ಸಾವಂತರು, ತೋಳಾರರು, ಬಿನ್ನಣರೆಂಬ ಏಳು

ಸಂಸ್ಥಾನಾಧೀಶರಿದ್ದರು. ಇವರು ಸಾಮಂತರಾಗಿ, ಮಂಡಲೇಶ್ವರರಾದ ಆಲೂಪರ ಕೆಳಗೆ ತಮ್ಮ ತಮ್ಮ ಸಂಸ್ಥಾನಗಳನ್ನಾಳಿಕೊಂಡಿದ್ದರು. ಇವರ ಆಳಿಕೆಯಲ್ಲಿದ್ದ ಸಾಮಂತ ರಾಜ್ಯಗಳಿಗೆ ಸಮುದಾಯವಾಗಿ 'ಸಪ್ತ ತುಳುವ' ವೆಂಬ ಹೆಸರಿತ್ತು. ಆಲೂಪ ಅರಸರು ನಗರಗಳನ್ನೂ ರಾಜ್ಯದ ಕೆಲವು ಅಂಶ ವನ್ನೂ ತಾವೇ, ಸಾಮಂತರ ಸಹಾಯವಿಲ್ಲದೆ, ಆಳಿಕೊಂಡಿದ್ದರು.

ಈ ಸಂಸ್ಥಾನಗಳೆಲ್ಲಾ ಯಾವಾಗ ತಲೆದೋರಿದವೆಂದು ನಿಶ್ಚಯ ಹೇಳ ಸಾಧ್ಯವಿಲ್ಲ. ಭೂತಾಳಪಾಂಡ್ಯನ ಚರಿತ್ರೆಯಿಂದ ಆತನ ಕಾಲದಿಂದಲೇ ಚೌಟರೂ ಬಂಗರೂ ತುಳುವದಲ್ಲಿ ಸಂಸ್ಥಾನಾಧೀಶರಾಗಿ ಆಳುತ್ತಿದ್ದರೆಂದು ತೋರುತ್ತದೆ. ತುಳುವದಲ್ಲಿರುವ ಅರಸುಗಳಿಗೂ ಸೀಮೆಯವರಿಗೂ ಮಾಗಣೆ, ಗ್ರಾಮ, ಕೇರಿ ಮೊದಲಾದ ಸ್ಥಳಗಳಲ್ಲಿ ಯಾವ ಕ್ರಮದಿಂದ ಮರ್ಯಾದೆ ಸಲ್ಲಬೇಕಾದ್ದೆಂದು ಶಕ ೧೩೮೭ರ ತಾಮ್ರಶಾಸನವೊಂದರಲ್ಲಿ ಕಾಣುವ ವಿವರ ಗಳು ಶ್ರೀ ಅ. ಶ್ರೀನಿವಾಸ ಹೆಗ್ಡೆಯರ ಪುಸ್ತಕದಲ್ಲಿ ಕಾಣುತ್ತವೆ. ಆದರೆ ಆ ಸಂಸ್ಥಾನಗಳು ನಿಜವಾಗಿಯೂ ಕ್ರೈಸ್ತಶಕ ಪ್ರಾರಂಭದಿಂದಲೇ ತುಳುವ ದಲ್ಲಿದ್ದವೆಂದು ನಂಬಸಾಧ್ಯವಿಲ್ಲ. ವಿಜಯನಗರ ಸ್ಥಾಪನೆಯ ಸಮಯ ತುಳುವದಲ್ಲೆಲ್ಲಾ ಜೈನ ಸಾಮಂತರೇ ಇದ್ದರು. ಹೊಯ್ಸಳರ ಕಾಲದ ಮೊದಲಿನ ಪೂರ್ವ ಚರಿತ್ರೆಯೇನೂ ಆ ಸಾಮಂತರ ಕುರಿತು ದೊರಕಿದ್ದಿಲ್ಲ. ಅವರು ಮೈಸೂರು ಮಲೆನಾಡಿನ ಬಳಿ ಇದ್ದ ಜೈನ ರಾಜವಂಶದವರಾಗಿದ್ದು,– ಹೊಯ್ಸಳ ರಾಜನಾದ ಬಿಟ್ಟಿದೇವನು ವೈಷ್ಣವ ಧರ್ಮವನ್ನು ಸ್ವೀಕರಿಸಿದಾಗ ಅವರ ಸುತ್ತಲೂ ಉದ್ಭವವಾದ ಮಹಾಕ್ರಾಂತಿಯ ವಾತಾವರಣದಲ್ಲಿ ಅವರು ಜೈನರಾಗಿ ಬಾಳಿಕೊಂಡಿರಲಿಕ್ಕೆ ಸಾಧ್ಯವಾಗದೆ,– ತುಳುವಕ್ಕಿಳಿದು ಅಲ್ಲಿ ಸಂಸ್ಥಾನಾಧೀಶರಾಗಿ ಆಳತೊಡಗಿರಬೇಕು. ಆಲೂಪರು ಶೈವರಾಗಿದ್ದರು; ಜೈನ ಶಾಂತಾರರ ಸಂಬಂಧಿಕರಾಗಿದ್ದರು. ಆಲೂಪರ ಸಹಾಯದಿಂದ ಆ ಜೈನ ರಾಜ ವಂಶದವರೆಲ್ಲಾ ತುಳುವದಲ್ಲಿ ಆಶ್ರಯವನ್ನು ಪಡೆದಿರಬೇಕು.

ಭೂತಾಳಪಾಂಡ್ಯನ ಚರಿತ್ರೆಯಲ್ಲಿ ಚೌಟರು ಆತನ ೧ನೇ ಪತ್ನಿಯಾದ ಚಾರುಮತಿಯ ಸಂತಾನದವರೆಂದೂ ಬಂಗರು ಆತನ ೨ನೇ ಪತ್ನಿಯಾದ ಅನಂತಮತಿಯ ಸಂತಾನದವರೆಂದೂ ಮೂಲರು, ಸುರಾಲಿನ ತೊಳವಾರರು, ಅಜಿಲರು ಇನ್ನು ಇತರ ಪತ್ನಿಗಳ ಸಂತಾನದವರೆಂದೂ ಕಾರ್ಕಳ, ವಿಟ್ಲ, ಎಲ್ಲೂರು ಮೊದಲಾದ ಅರಸು ಮನೆತನಗಳು ಸಹಾ ಅವನ ಉಳಿದ ಪತ್ನಿಗಳ

ಸಂತಾನದವರೆಂದೂ ಹೇಳಿರುತ್ತದೆ. ಭೂತಾಳಪಾಂಡ್ಯನು ತನ್ನ ಹನ್ನೆರಡು ಪತ್ನಿಗಳ ಮಕ್ಕಳಲ್ಲಿ ಕೆಲವರನ್ನು ದೊಡ್ಡ ಸಂಸ್ಥಾನಾಧೀಶರಾಗಿಯೂ,-ಕೆಲವರನ್ನು ಸಣ್ಣ ಒಳ ಅರಸರಾಗಿಯೂ ಇನ್ನೂ ಕೆಲವನ್ನು ಬರೇ ಮಾಗಣೆಗಳ ಅಧಿಪತಿಗಳಾಗಿಯೂ ನೇಮಿಸಿ, ಅಷ್ಟೊಂದು ಭೇದ, ಪಕ್ಷಪಾತಗಳನ್ನು ಯಾಕೆ ಪ್ರಕಟ ಪಡಿಸಿದನೆಂದು ಆ ಚರಿತ್ರೆಯಲ್ಲಿ ಕಾಣುವುದಿಲ್ಲ. ಚೌಟರು, ಬಂಗರು, ಅಜಿಲರು ಮೊದಲಾದ ಸಂಸ್ಥಾನಾಧೀಶರೆಲ್ಲಾ ತುಳುವದಲ್ಲಿ ಪ್ರಬಲರಾದ ಬಳಿಕವೇ ಬರೆದಿರಬೇಕಾದ ಆ ಭೂತಾಳಪಾಂಡ್ಯನ ಚರಿತ್ರೆಯಲ್ಲಿ-ಆ ಸಂಸ್ಥಾನಾಧೀಶರೂ ತುಳುವದ ಜನರಲ್ಲಿ ಮೊದಲಿಂದ ಪ್ರಖ್ಯಾತನಾದ ಆ ಭೂತಾಳಪಾಂಡ್ಯನ ಸಂತಾನದವರೇ ಎಂದು ತೋರಿಸಲಿಕ್ಕೆ ಗ್ರಂಥಕರ್ತನು ಪ್ರಯತ್ನಿಸಿ, ಗೊಂದಲದಲ್ಲಿ ಬಿದ್ದಿರಬೇಕು.

ಈ ಸಂಸ್ಥಾನಗಳ ಗಡಿಗಳಾಗಲಿ ವಿಸ್ತೀರ್ಣವಾಗಲಿ ನಿರ್ದಿಷ್ಟವಾಗಿರಲಿಲ್ಲ. ಸಂಸ್ಥಾನಾಧೀಶರಲ್ಲೆಲ್ಲಾ ಬಂಗರೇ ಪ್ರಮುಖರಾಗಿದ್ದರೆಂದು ತೋರುತ್ತದೆ. ಅವರ ವಿವರಗಳನ್ನು ಮುಂದಕ್ಕೆ ನಾವು ಓದುವೆವು. ಅವರೆಲ್ಲಾ ತಮ್ಮ ಕೆಳಗಿರುವ ಒಳ ಅರಸು, ಬಲ್ಲಾಳ, ಹೆಗ್ಡೆ ಮೊದಲಾದ ಪುಟ್ಟ ನರೇಶರಿಂದ ಕಂದಾಯವನ್ನು ಪಡೆದು, ಅದರಿಂದ ತಮ್ಮ ಖರ್ಚಿಗೆ ಬೇಕಾದ್ದನ್ನು ಇಟ್ಟುಕೊಂಡು ಉಳಿದ ಅಂಶವನ್ನು ತಾವು ಮಂಡಲೇಶ್ವರರಿಗೆ ಕಪ್ಪವಾಗಿ ಕೊಡುತ್ತಿದ್ದರೆಂದು ತೋರುತ್ತದೆ.

(iii) **ನಗರಗಳು.** ಮುಖ್ಯ ನಗರಗಳನ್ನು ಆಲೂಪ ಅರಸರು ತಾವೇ, 'ನಗರ ಸಮೂಹ'ಗಳೆಂಬ ಸಂಸ್ಥೆಗಳ ಮೂಲಕ, ಆಳುತ್ತಿದ್ದರು. ಉದ್ಯಾವರ, ಬಾರಕೂರು, ಮೂಡಬಿದರೆ, ಮಂಗಳಪುರ (ಮಂಗಳೂರು) ಗಳು ಅಂಥಾ ಮುಖ್ಯ ನಗರಗಳಾಗಿದ್ದವು. ನಗರಗಳಲ್ಲಿರುವ ಜನರ ಕುಟುಂಬಗಳಿಗೆ 'ಒಕ್ಕಲು'ಗಳೆಂಬ ಹೆಸರಿತ್ತು. ಆ ಒಕ್ಕಲುಗಳ ಪ್ರತಿನಿಧಿಗಳು-ಮುನ್ನೂರ್ವರು, ಸಾಸಿರ್ವರು ಎಂಬ ಮೊದಲಾದ ನಿರ್ದಿಷ್ಟ ಸಂಖ್ಯೆಯ ಕೂಟಗಳಾಗಿ ಕೂಡಿ, ನಗರಗಳ ನಿತ್ಯದ ವ್ಯವಸ್ಥೆಗಳ ಮೇಲ್ವಿಚಾರವನ್ನು ನೋಡುತ್ತಿದ್ದರು. ನಗರಗಳಲ್ಲಿಯೂ ಬಂದರುಗಳಲ್ಲಿಯೂ "ನಾಯಕ"ರೆಂಬ ಉದ್ಯೋಗಸ್ಥರು ಇರುತ್ತಿದ್ದರು.

**ಪಟ್ಟಣಗಳು.** ಸಂಸ್ಥಾನಾಧೀಶರ ಕೆಳಗೂ ಇದೇ ರೀತಿಯ ಇತರ 'ಪಟ್ಟಣ'ಗಳಿದ್ದವು. ಹಲವು ಕೇರಿಗಳಿಂದ ಕೂಡಿ, ಪೇಟೆಯಿರುವ ಗ್ರಾಮ

ಗಳಿಗೆ 'ಪಟ್ಟಣ'ಗಳೆಂದು ಕರೆಯುತ್ತಿದ್ದರು. ಇವುಗಳ ಆಡಳಿತೆಯಲ್ಲಿಯೂ ಎಲ್ಲಾ ಜಾತಿಯ ಜನರ ಪ್ರತಿನಿಧಿಗಳು ಭಾಗವಹಿಸುತ್ತಿದ್ದರು. ಬಸರೂರು, ಸುರಾಲ, ಪಡುಬಿದರೆ, ಬಂಗಾಡಿ, ವೇಣೂರು, ಎರವಾಳ, ಮುಂಡಕೂರು, ಬೈಲಂಗಡಿ, ಮಣೇಲ, ವಿಟ್ಲ, ಕಡಬ, ನಂದಾವರ, ಉಳ್ಳಾಲ ಮೊದಲಾದ ಅನೇಕ ಈ ತರದ ಪಟ್ಟಣಗಳಿದ್ದವು. ಆ ಪಟ್ಟಣಗಳಲ್ಲಿ "ಪಟ್ಟಣಸೆಟ್ಟಿ"ಯೆಂಬ ಮುಖ್ಯ ಉದ್ಯೋಗಸ್ಥರಿದ್ದರು.

## ೩. ಪಾಡ್ದೊನೆಗಳು

ತುಳುವದ ಸಾಮಾಜಿಕ ಸ್ಥಿತಿಗಳನ್ನು ತಿಳಕೊಳ್ಳಲಿಕ್ಕೆ ಪಾಡ್ದೊನೆಗಳಷ್ಟು ಪ್ರಯೋಜನವಾಗುವ ಬೇರೆ ಸಾಮಗ್ರಿಗಳಿಲ್ಲ. ತುಳುನಾಡಿನಲ್ಲಿ ಆಗಿಹೋದ ಪುರಾತನ ವೀರರ ಚರಿತ್ರೆಗಳೇ ಆ ಪಾಡ್ದೊನೆಗಳು. "ಮಳೆಗಾಲದ ಹಗಲು ಹೊತ್ತಿನಲ್ಲಿ ತುಳುನಾಡಿನ ಒಕ್ಕಲಿಗನು ನಾಟಿ ಕೆಲಸವನ್ನು ಮುಗಿಸಿ, ಹೊತ್ತು ಮುಳುಗುವುದರೊಳಗೆ ತನ್ನ ಹುಲ್ಲುಮನೆಯನ್ನು ಸೇರಿಕೊಂಡು, ಬೇಗನೆ ಊಟಮಾಡಿ, ಜೊಯ್ಯೆಂದು ಹೊರಗೆ ಹೊಯ್ಯುತ್ತಿದ್ದ ಕಾರತಿಂಗಳ ಮಳೆಯಿಂದ ರಾತ್ರಿಯ ಕತ್ತಲು ಭಯಂಕರವಾಗಿ ಕಾಣುತಿದ್ದಾಗ, ಮಿಣಮಿಣನೆ ಉರಿಯುವ ಬೆಳಕಿನ ಬಳಿಯಲ್ಲಿ ಕುಳಿತುಕೊಂಡು, ಆತನು ದುಡಿಯಿಂದ ತಾಳ ಹಾಕಿ, ಬಾಯಿಂದ ರಾಗವೆತ್ತಿ, ಹಾಡುವ ಪಾಡ್ದೊನೆಯನ್ನು ಕೇಳಿ ಉಂಟಾಗುವ ರಸಾಸ್ವಾದನೆಯು" ಕನ್ನಡ ಕಥೆಯ ಒಣಮಾತುಗಳನ್ನು ಓದುವುದರಿಂದಾಗದೆಂದು ದಿವಂಗತ ಶ್ರೀ. ಪಂಜೆ ಮಂಗೇಶರಾಯರು ಬರೆದಿರುವುದು ನಿಜವೇ. ಪಾಡ್ದೊನೆಗಳು ಅನೇಕವಿವೆ. ದಿವಂಗತ ಶ್ರೀ. ಎಮ್. ಗಣಪತಿರಾವ್ ಐಗಳರು ಮುಂಡತ್ತಾಯೆ, ಬೊಬ್ಬರ್ಯೆ, ತೊಡಕಿನಾರ್ ಮೊದಲಾದವುಗಳನ್ನು ಕನ್ನಡ ಮುನ್ನುಡಿಯೊಂದಿಗೆ ಛಾಪಿಸಿರುತ್ತಾರೆ. ಕೋಟಿ-ಚೆನ್ನಯ ಎಂಬ ಪ್ರಸಿದ್ಧ ಪಾಡ್ದೊನೆಯ ಕಥೆಯನ್ನು ಶ್ರೀ. ಪಂಜೆ ಮಂಗೇಶರಾಯರು ಕನ್ನಡದಲ್ಲಿ ಸಂಕ್ಷಿಪ್ತವಾಗಿಯೂ ಸುರಸವಾಗಿಯೂ ಕಥಾರೂಪದಲ್ಲಿ ಬರೆದಿರುತ್ತಾರೆ. ಎಲ್ಲಾ ಪಾಡ್ದೊನೆಗಳ ಸಾರಾಂಶವನ್ನೂ ಶ್ರೀ. ಆ. ಭಾ. ಸಾಲೆತ್ತೂರರು ತಮ್ಮ ತುಳುವ ಚರಿತ್ರೆಯ ಕೊನೆಯ ಅಧ್ಯಾಯದಲ್ಲಿ ಸಾಂಗೋಪಾಂಗವಾಗಿ ಕೊಟ್ಟಿರುತ್ತಾರೆ.

**ತುಳು ಜನರು.** ಕದಂಬರ ಕಾಲದಲ್ಲಿ ಹೊರಗಿನಿಂದ ಬಂದ ಬ್ರಾಹ್ಮಣರು ಶತಮಾನಗಳ ನಡುವೆ ತಾವೂ ತುಳು ಜನರಲ್ಲೊಂದಾಗಿ, ತುಳು ಸಾಮಾಜಿಕ

ವ್ಯವಸ್ಥೆಗಳಲ್ಲಿ ಸೇರಿಹೋಗಿದ್ದರು. ತುಳು ದ್ರಾವಿಡರಲ್ಲಿಯೂ ವೃತ್ತಿ, ಅಧಿಕಾರ ಗಳಿಗನುಗುಣವಾಗಿ ವಿವಿಧ ಜಾತಿಗಳೆದ್ದಿದ್ದವು. ಮೂಲನಿವಾಸಿಗಳು ದ್ರಾವಿಡರ ಅಧಿಕಾರವನ್ನೊಪ್ಪಿ, ಅವರಲ್ಲಿ ಅನೇಕರು ದ್ರಾವಿಡರ ಕೆಳಗೆ ಕೃಷಿಸಹಾಯಕ ಆಳುಗಳಾಗಿ ಪರಂಪರೆಯಿಂದ ಜೀವಿಸಿಕೊಂಡು ಬರುತ್ತಿದ್ದರು; ಉಳಿದವರು ಆರ್ಯ, ದ್ರಾವಿಡ ಸಮಾಜಗಳಿಂದ ಬಾಹಿರರಾಗಿ, ಆರ್ಥಿಕ ಬಲವಿಲ್ಲದೆ,—ದಿನೇ ದಿನೇ ಹೀನಾವಸ್ಥೆಯನ್ನು ಹೊಂದುತ್ತಾ ಕಳೆಹೀನ ಪಶುಗಳಂತಿದ್ದರು. ತುಳುವದ ಸರ್ವ ಜಾತಿ, ಮತ, ಸಮಾಜಗಳು ಪರಸ್ಪರ ಕಲಹಗಳಿಲ್ಲದೆ, ಒಟ್ಟಿನಿಂದ ಗ್ರಾಮಗಳಲ್ಲಿ ಜೀವಿಸಿಕೊಂಡು ಬರುತ್ತಿದ್ದವು. ಆರ್ಯ, ದ್ರಾವಿಡ, ಮೂಲನಿವಾಸಿಗಳಲ್ಲದೆ ಅರಬ ಮುಸ್ಲಿಮ್ ವರ್ತಕರಿಗೆ ತುಳು ಹೆಂಗಸರಲ್ಲಿ ಹುಟ್ಟಿದ "ಬ್ಯಾರಿ"ಗಳೂ ಆ ತುಳು ಸಮಾಜಗಳಲ್ಲೊಂದಾಗಿದ್ದರು. ವಿಜಯ ನಗರ ಸಾಮ್ರಾಜ್ಯ ಸ್ಥಾಪನೆಯ ಮೊದಲಿನ ಕಾಲದಲ್ಲಿ ಕ್ರೈಸ್ತ ಮತವು ತುಳುವ ದಲ್ಲಿ ಪ್ರವೇಶವಾಗಿದ್ದಂತೆ ತೋರುವುದಿಲ್ಲ.

**ಬ್ರಾಹ್ಮಣರು.** ಕದಂಬರ ಕಾಲದಲ್ಲಿ ಬ್ರಾಹ್ಮಣರ ಕುಟುಂಬಗಳನ್ನು ತುಳುವದ ೧೬ ಮೂಡು ಗ್ರಾಮಗಳಲ್ಲಿಯೂ ೧೬ ಪಡು ಗ್ರಾಮಗಳಲ್ಲಿಯೂ ನೆಲೆಗೊಳಿಸಿತ್ತೆಂದು ನಾವು ಹಿಂದೆ ಓದಿರುತ್ತೇವೆ. ಆ ಬ್ರಾಹ್ಮಣರಿಗೆ ಕದಂಬರು ಆ ಗ್ರಾಮಗಳ ಹುಟ್ಟುವಳಿಯನ್ನು ತೀರ್ವೆ ಮಾಫಿಯಿಂದ ಅನುಭವಿಸಲಿಕ್ಕೆ ಕೊಟ್ಟಿದ್ದರು. ತುಳು ಜನರು ಆ ಬ್ರಾಹ್ಮಣರಿಗೆ ಮಾನಮರ್ಯಾದೆಗಳನ್ನು ಯಾವ ರೀತಿಯಿಂದ ಕೊಡಬೇಕೆಂದು ಅವರು ನಿಯಮಿಸಿದ್ದರು.

ತುಳು ಬ್ರಾಹ್ಮಣರೊಡನಿರುವ "ಗ್ರಾಮ ಪದ್ಧತಿ"ಯೆಂಬ ಗ್ರಂಥದಲ್ಲಿ ಆ ಬ್ರಾಹ್ಮಣರಿಗೆ ಕೊಟ್ಟ ಗ್ರಾಮಗಳಲ್ಲಿ ರಾಜ್ಯಾಡಳಿತೆಯು ಯಾವ ರೀತಿ ನಡೆಯುತ್ತಿತ್ತೆಂದು ತಿಳಿದುಬರುತ್ತದೆ; ತುಳು ಬ್ರಾಹ್ಮಣರ ಕುಟುಂಬಗಳು ಬೇರೆ ಬೇರೆ ವೃತ್ತಿಗಳಿಗನುಸಾರವಾಗಿ ಬೇರೆ ಬೇರೆ ಶಾಖೆಗಳಾಗಿ ಬೆಳೆದಿದ್ದವು. ಸ್ಮಾರ್ತರು, ಭಟ್ಟರು, ತಂತ್ರಿಗಳು, ಪಂಡಿತರು, ಪಕ್ಷನಾಥರು, ಅಗ್ನಿಹೋತ್ರಿ ಗಳು, ಬಲ್ಲಾಳರು ಮೊದಲಾದ ಶಾಖೆಗಳು ಅವರಲ್ಲಿ ತಲೆದೋರಿದ್ದವು. ಬ್ರಾಹ್ಮಣರಲ್ಲಿ ಉಂಟಾಗಬಹುದಾದ ಎಲ್ಲಾ ತರದ ವಿವಾದಗಳನ್ನೂ ತೀರ್ಮಾನಿಸಲಿಕ್ಕೆ "ಕಟ್ಟಳೆ"ಗಳನ್ನು ಸಂಗ್ರಹಿಸಿತ್ತು – ಆ 'ಕಟ್ಟಳೆ'ಗಳಿಗನು ಸಾರವಾಗಿ ಪ್ರತಿನಿಧಿ ಕೂಟಗಳು ವಿವಾದಗಳನ್ನು ತೀರ್ಮಾನಿಸುತ್ತಿದ್ದವು. ಶೈವ, ವೈಷ್ಣವ ಭೇದಗಳು ತಲೆದೋರಿದ ಬಳಿಕ, ಶೈವ ವೈಷ್ಣವರೊಳಗಣ ವಿವಾದ

ಗಳನ್ನು ಕ್ರೋಡಮಂಡಲ (ಈಗಿನ ಶಂಕರನಾರಾಯಣ) ದಲ್ಲಿ ಉಭಯತರ ಪ್ರತಿನಿಧಿಗಳೂ ಕೂಟವಾಗಿ ಕೂಡಿ ತೀರ್ಮಾನಿಸುತ್ತಿದ್ದರು. ಬೇರೆ ವ್ಯಾಜ್ಯ ಗಳ ತನಖಿಗೆ ಕೋಟ ಮತ್ತು ಅನಂತೇಶ್ವರ (ಉಡುಪಿ) ಗಳಲ್ಲಿ ಕೂಟಗಳು ಕೂಡುತ್ತಿದ್ದವು. ಅವುಗಳ ತೀರ್ಮಾನಕ್ಕೆ ಸ್ಮೃತಿಕಾರರೆಂಬ ಏಳು ಜನರು ನೇಮಕಪಟ್ಟಿದ್ದರು. ವಿಶೇಷ ಸಂಗತಿಗಳ ವಿಚಾರಕ್ಕೆ "ಜಗತ್ಕೂಟವು" ಕೂಡು ತ್ತಿತ್ತು. ಜಗತ್ಕೂಟದಲ್ಲಿ ಅರಸನೇ ಭಾಗವಹಿಸುತ್ತಿದ್ದನು. ಆ ಕೂಟದಲ್ಲಿ ಸಾಮಂತರಾದ ಚೌಟ, ಬಂಗರೂ ಇತರ ಶ್ರೀಮಂತರೂ ಹಾಜರಿದ್ದು, ಸಭಾ ಕಾರ್ಯವು ಮೊದಲೇ ನಿಶ್ಚಯಿಸಿಟ್ಟ ಕ್ರಮಪ್ರಕಾರ ನಡೆಯಬೇಕಿತ್ತು. ಕೂಡಿದ ಎಲ್ಲಾ ವಿದ್ವತ್ತಾ ಮಹಾಜನರ ಅಭಿಪ್ರಾಯವನ್ನು ಅರಸನು ಪಕ್ಷನಾಥರ ಮೂಲಕ ತಿಳಕೊಂಡು ಕೊನೆಗೆ ತನ್ನ ತೀರ್ಮಾನವನ್ನು ಕೊಡುತ್ತಿದ್ದನು.

ಕೋಟ, ಕೋಟೀಶ್ವರ ಬ್ರಾಹ್ಮಣರಲ್ಲಿ ಒದಗಿದ ಮಹತ್ವದ ಗ್ರಾಮ ಗಡಿ ವಿವಾದವೊಂದನ್ನು ಅರಸನು ತೀರ್ಮಾನಪಡಿಸಿದ ಕ್ರಮವು ಗ್ರಾಮ ಪದ್ಧತಿಯಲ್ಲಿ ವಿವರವಾಗಿ ಹೇಳಿದೆ. ಅನೇಕ ವರ್ಷಗಳಿಂದ ನಡೆಯುತ್ತಿದ್ದ ಆ ವಿವಾದವನ್ನು ಇತ್ಯರ್ಥಪಡಿಸಲಿಕ್ಕೆ ಆಲೂಪ ಅರಸನಾದ ವಿಬುಧವಸುವು ಒಂದು ದಿನವನ್ನು ನಿಶ್ಚೈಸಿ, ಆ ದಿನ ಮೂವತ್ತೆರಡು ಗ್ರಾಮಗಳ ಪ್ರತಿನಿಧಿಗಳನ್ನೂ ವಿವಾದ ಸ್ಥಳದಲ್ಲಿ ಸಭೆ ಕೂಡಲಿಕ್ಕೆ ಆಮಂತ್ರಣಗಳನ್ನು ಕಳುಹಿಸಿದನು. ಆ ದಿನದ ಮೊದಲಿನ ರಾತ್ರೆ ಕೋಟೀಶ್ವರರು ವಿವಾದ ಸ್ಥಳಕ್ಕೆ ಹೋಗಿ, ಅಲ್ಲಿ ಭೂಮಿಯನ್ನು ಅಗೆದು ಹೊಂಡ ಮಾಡಿ, ಆ ಹೊಂಡದಲ್ಲಿ ತಮ್ಮವರಲ್ಲೊಬ್ಬನನ್ನು ಅಡಗಿಸಿಟ್ಟು, ಅವನ ಮೇಲೆ ಪುನಃ ಮಣ್ಣನ್ನು ಮುಚ್ಚಿ, ಏನೂ ತಿಳಿಯದವರಂತೆ ನಟಿಸುತ್ತಾ ತಮ್ಮ ತಮ್ಮ ಮನೆಗೆ ಹಿಂತೆರಳಿದರು. ಮರುದಿನ ಅರಸನು ಮೂವತ್ತೆರಡು ಗ್ರಾಮ ಗಳ ಪ್ರತಿನಿಧಿಗಳ ಸಹಿತ ವಿವಾದ ಸ್ಥಳಕ್ಕೆ ಬಂದು, ಭೂದೇವಿಯನ್ನು ಪೂಜಿಸಿ, ಆ ಸ್ಥಳವು ಕೋಟದವರಿಗೊಪ್ಪಿದ್ದೋ ಕೋಟೀಶ್ವರರದ್ದೋ ಎಂದು ತನಗೆ ಸೂಚನೆಯನ್ನು ಕೊಡಬೇಕಾಗಿ ಬೇಡಿದನು: ಒಡನೆ ಭೂಗರ್ಭದಲ್ಲಿಂದ "ಇದು ಕೋಟೀಶ್ವರರ ಜಾಗ, ಅದಕ್ಕೆ ಸಂಶಯ ಬೇಡ" ಎಂಬ ಧ್ವನಿಯು ಕೇಳಿಬಂದು, ಕೋಟೀಶ್ವರರು ತಮ್ಮ ಕುಟಿಲದಿಂದ ತಾವು ಜಯ ಹೊಂದಿದೆವೆಂದು ಸಂತೋಷ ಪಟ್ಟರು. ಆದರೆ ಅಷ್ಟರಲ್ಲಿ ಭಗವತೀ ದೇವಿಯು ಅರಸನಿಗೆ ಪ್ರತ್ಯಕ್ಷಳಾಗಿ, ಕೋಟೀಶ್ವರರ ಕಪಟವನ್ನೆಲ್ಲಾ ಬಯಲುಮಾಡಿದಳು. ಅದರ ಬಳಿಕ ಆ ಕೋಟೀಶ್ವರರನ್ನು ಅಲ್ಲಿ ಕೂಡಿದ ಮೂವತ್ತೆರಡು ಗ್ರಾಮಗಳ ಪ್ರತಿನಿಧಿಗಳು

ಬ್ರಾಹ್ಮಣ ಸಮಾಜದಿಂದ ಬಹಿಷ್ಕರಿಸಿ, ಅವರನ್ನು ಬ್ರಾಹ್ಮಣರ ವಿವಾಹಾದಿ ಸಂಸ್ಕಾರಗಳಿಂದ ಹೊರಗಿಟ್ಟರು. ಆ ಕೋಟೇಶ್ವರರು ಆ ತೀರ್ಮಾನದ ಬಳಿಕ ಜಾತಿಭ್ರಷ್ಟರಾಗಿ, ತಿರುಕುಳಿಗಳಂತೆ ತಿರುಗುತ್ತಾ ಹೀನಾವಸ್ಥೆಯಲ್ಲಿದ್ದರು. ಕೆಲವು ಕಾಲದ ಬಳಿಕ ಶ್ರೀ ಮಧ್ವಾಚಾರ್ಯರು ತಮ್ಮ ತುಳುವ ಸಂಚಾರದಲ್ಲಿ ಅವರನ್ನು ಕಂಡು, ಅವರಿಗೆ ಪ್ರಾಯಶ್ಚಿತ್ತವನ್ನು ಕೊಟ್ಟು ಅವರನ್ನು ಪುನಃ ಬ್ರಾಹ್ಮಣ ಸಮಾಜಕ್ಕೆ ಸೇರಿಸಿಕೊಂಡದ್ದರಿಂದ ಅವರೀಗ "ಕೋಟೇಶ್ವರ ಶಿವಳ್ಳಿ" ಬ್ರಾಹ್ಮಣರಾಗಿದ್ದಾರೆ. ಉಡುಪಿಯ ಶಿವಳ್ಳಿ ಬ್ರಾಹ್ಮಣರೂ ಮತ್ತು ಕೋಟೇಶ್ವರ ಶಿವಳ್ಳಿ ಬ್ರಾಹ್ಮಣರೂ ವೈಷ್ಣವರಾಗಿ ಮಧ್ವಾಚಾರ್ಯರ ಶಿಷ್ಯ ವೃಂದಕ್ಕೆ ಸೇರಿರುತ್ತಾರೆ. ನಡುವೆ ವಾಸಿಸಿರುವ ಕೋಟ ಬ್ರಾಹ್ಮಣರು ಈಗಲೂ ಶೈವರಾಗಿಯೇ ಉಳಿದಿರುತ್ತಾರೆ. ಕದಂಬರ ಕಾಲದಲ್ಲಿ ಮೂವತ್ತೆರಡು ಗ್ರಾಮಗಳಲ್ಲಿ ಸ್ಥಾಪಿಸಿದ ಬ್ರಾಹ್ಮಣ ಕುಟುಂಬಗಳಲ್ಲಿ ಅನೇಕ ಕುಟುಂಬಗಳು ಈಗಲೂ ಇವೆ. ಕೋಟ ಬ್ರಾಹ್ಮಣರಲ್ಲಿರುವ ಹೊಳ್ಳ, ಹಂದೆ, ಮಯ್ಯ, ಕಾರಂತ ಕುಟುಂಬಗಳೂ, ಮೂಡಿಲ ನಿಡಂಬೂರು ಮತ್ತು ಚಿಟುಪಾಡಿ ಬಲ್ಲಾಳರ ಕುಟುಂಬಗಳೂ ತುಳುವದಲ್ಲಿ ಮೊದಲಿಂದ ಹೆಸರುಗೊಂಡಿದ್ದವು.

ಈ ಪ್ರಮುಖ ಬ್ರಾಹ್ಮಣ ಕುಟುಂಬಗಳಲ್ಲದೆ ಇತರ ಬಡ ಬ್ರಾಹ್ಮಣ ಕುಟುಂಬಗಳು ತುಳುವದಲ್ಲೆಲ್ಲಾ ಹಳ್ಳಿ ಹಳ್ಳಿಗಳಲ್ಲಿ ಸೇರಿಕೊಂಡಿದ್ದವು. ಬಲ್ಲಾಳ ರಾಜ್ಯಗಳಲ್ಲಿ ಸೀಮೆಯ ದೇವಸ್ಥಾನಗಳ ಅರ್ಚಕರಾಗಿಯೂ,–ಶಕುನ ಜ್ಯೋತಿಷ್ಯಗಳನ್ನು ಹೇಳಿಕೊಂಡೂ–ನೀರಿನ ಅರವಟ್ಟಿಗೆಗಳ ಪಾಲಕರಾಗಿಯೂ–ಬ್ರಾಹ್ಮಣರು ಜೀವಿಸಿಕೊಂಡಿದ್ದದ್ದನ್ನು ನಾವು ಕೋಟಿ ಚೆನ್ನಯರ ಪಾಡ್ದೊನೆಯಲ್ಲಿ ಕಾಣುತ್ತೇವೆ. ಬ್ರಾಹ್ಮಣರು ಕೃಷಿಯನ್ನೂ ಮಾಡುತ್ತಿದ್ದರು. ತುಳುನಾಡಿನಲ್ಲಿ ಕದಂಬರು ನೆಲೆಗೊಳಿಸಿದ ಬ್ರಾಹ್ಮಣರಲ್ಲದೆ ಹವೀಕ ಬ್ರಾಹ್ಮಣರು ಉತ್ತರಕನ್ನಡ ಮೈಸೂರುಗಳಿಂದ ತುಳುವಕ್ಕೆ ಬಂದು ಸೇರಿಕೊಂಡು, ಅಡಕೆಯ ಕೃಷಿಯನ್ನು ಪ್ರಾರಂಭಿಸಿದ್ದರು. ಅವರಿಗೆ ತುಳುವದಲ್ಲಿ ದೇವಾಲಯ, ಮಠಗಳಿರಲಿಲ್ಲ; ತುಳುವ ಬ್ರಾಹ್ಮಣರಿಂದ ಪ್ರತ್ಯೇಕವಾಗಿದ್ದು ಅವರು ತಮ್ಮ ಕೃಷಿಯಿಂದಲೇ ಜೀವಿಸಿಕೊಂಡಿದ್ದರು.

ತುಳುವದ ರಾಜಕೀಯ ಯಾ ಸಾಮಾಜಿಕ ವ್ಯವಸ್ಥೆಗಳಲ್ಲಿ ತುಳು ಬ್ರಾಹ್ಮಣರೇನೂ ಮುಖ್ಯ ಭಾಗವನ್ನು ವಹಿಸಿದ್ದೆಲ್ಲಿಯೂ ಕಾಣುವುದಿಲ್ಲ.

**ಬಂಟರು, ನಾಡವರು.** ಬಲ್ಲಾಳ ರಾಜ್ಯಗಳಲ್ಲಾಗಲಿ ಸಾಮಂತ

ಸಂಸ್ಥಾನಗಳಲ್ಲಾಗಲಿ ಬಂಟರೂ ನಾಡವರೂ ಪ್ರಮುಖರಾಗಿದ್ದರು. ದೇವಸ್ಥಾನಗಳಲ್ಲಿ ಕೂಡಾ ಬ್ರಾಹ್ಮಣರ ನಂತರ ಎರಡನೇ ಮರ್ಯಾದೆಯು ಬಂಟನಾಡವರಿಗೆ ಸಲ್ಲುತ್ತಿತ್ತು. ಬಲ್ಲಾಳ ಅರಸರ ಮಂತ್ರಿ, ಸೇನಾಧಿಪತಿಗಳು ಅವರಾಗಿದ್ದರು; ಬಂಟ ಬಾರಗರ ಸಹಾಯವಿಲ್ಲದೆ ಬಲ್ಲಾಳ ಅರಸರ ಯಾವ ಕಾರ್ಯಗಳೂ ಮುಂದುವರಿಯುತ್ತಿದ್ದಿಲ್ಲ. ಸಂಸ್ಥಾನಾಧೀಶರಲ್ಲಿಯೂ ಸಾನೂರಾಳ, ಆರ್ನೂರಾಳ, ಸಾಸಿರಾಳ ಮೊದಲಾದ ಬಂಟ ದಂಡನಾಯಕರಿದ್ದರು.

**ಬಿಲ್ಲವರು.** ಬಲ್ಲಾಳ ರಾಜ್ಯಗಳಲ್ಲಿ ಮರಮೂರ್ತೆ ಮಾಡಿ ಶೇಂದಿಯನ್ನು ಸಂಗ್ರಹಿಸುವ ಕೆಲಸವು ಬಿಲ್ಲವರಿಗೆ ಸೇರಿತ್ತು. ಆ ಶೇಂದಿಯಿಂದ ಬಲ್ಲಾಳ ಅರಸರಿಗೆ ತುಂಬಾ ಆದಾಯ ದೊರಕುತ್ತಿತ್ತಾದ್ದರಿಂದ ಅವರು ತಮ್ಮ ಬಿಲ್ಲವ ಪ್ರಮುಖರನ್ನು ಪ್ರೀತಿಯಿಂದಲೂ ಮರ್ಯಾದೆಯಿಂದಲೂ ನಡೆಸುತ್ತಿದ್ದರು. ಬಿಲ್ಲವರು ರಕ್ತಪಾತಕ್ಕೆ ಹೆದರದ ವೀರರಾಗಿದ್ದರೆಂಬದು ಕೋಟಿ ಚೆನ್ನಯ ಪಾಡ್ದೊನೆಯಿಂದ ನಮಗೆ ಕಾಣುತ್ತದೆ. ಆದರೆ ಬಿಲ್ಲವರು ತಮ್ಮ ವೃತ್ತಿಯಿಂದಾಗಿ ಕೀಳು ಸ್ಥಾನವನ್ನು ಹೊಂದಿದ್ದರೆಂಬದು ಅರಳಿಕಟ್ಟೆಯ ಬಳಿ ಕೋಟಿ ಚೆನ್ನಯರಿಗೂ ಅರವಟ್ಟಿಗೆಯ ಬ್ರಾಹ್ಮಣರಿಗೂ ನಡೆದ ಸಂವಾದದಿಂದ ತೋರಿಬರುತ್ತದೆ. ತುಳುವದಲ್ಲಿ ಕ್ರೈಸ್ತಶಕ ಪ್ರಾರಂಭದ ಮೊದಲು ಸೇರಿದ ದ್ರಾವಿಡರಲ್ಲಿ ಕೆಲವರು ಸಾರ್ವಜನಿಕ, ರಾಜಕೀಯ ಕಾರ್ಯಗಳಲ್ಲಿ ಮುಂದಾಳುಗಳಾಗಿ,–ಇತರ ದ್ರಾವಿಡರೊಡನೆ ಮಿಶ್ರವಾಗದೆ,–ಬಂಟರೂ ನಾಡವರೂ ಎಂಬ ಹೆಸರಿನಿಂದ, ತುಳುವ ಸಮಾಜಗಳಲ್ಲಿ ಮನ್ನಣೆಯ ಸಮಾಜವಾಗಿದ್ದರು. ಅವರು ಕೃಷಿಯನ್ನು ಮಾಡಿಕೊಂಡಿದ್ದರೂ ಭೂಮ್ಯಾಲಿಕರಾಗಿ ಆಳುಗಳ ಮೂಲಕ ಆ ಕೃಷಿಯನ್ನು ಮಾಡಿಕೊಳ್ಳುತ್ತಿದ್ದರು. ಉಳಿದವರಲ್ಲಿ ಬಿಲ್ಲವರೇ ಪ್ರಮುಖರಾಗಿದ್ದರು. ಅವರು ಶೇಂದಿ ಮಾಡುವುದಲ್ಲದೆ ಕೃಷಿಯನ್ನೂ ಮಾಡುತ್ತಿದ್ದರು. ಅವರಲ್ಲಿ ಮಿಶ್ರ ವಿವಾಹಗಳಿನ್ನೂ ನಡೆಯುತ್ತಿದ್ದವೆಂದು ನಾವು ಕೋಟಿ ಚೆನ್ನಯರ ತಾಯಿ ದೇಯಿ ಬೈದ್ಯತಿಯ ಕಥೆಯಿಂದ ತಿಳಕೊಳ್ಳಬಹುದು. ದೇಯಿ ಬೈದ್ಯತಿಯು ಬ್ರಾಹ್ಮಣ ಕುಮಾರಿಯಾಗಿ ಹುಟ್ಟಿದ್ದಳು. ಅವಳು ಮದುವೆಯಾಗುವ ಮೊದಲೇ ರಜಸ್ವಲೆಯಾದ್ದರಿಂದ ಅವಳ ತಾಯಿ ತಂದೆಗಳು ತಮ್ಮ ಜಾತಿಕಟ್ಟಳೆ ಮೀರಲಾರದೆ ಅವಳನ್ನು ಕಣ್ಣು ಕಟ್ಟಿ ಕಾಡಿನಲ್ಲಿ ಬಿಟ್ಟರು. ಅವಳು ಅಲ್ಲಿ ಅತ್ತುಕೊಂಡಿರುವಾಗ ಅಲ್ಲಿಯೇ ತಾಳೇ ಮರವನ್ನೇರಿದ್ದ ಸಾಮ ಆಳ್ವನೆಂಬ ಬಿಲ್ಲವನು ಮರದಿಂದ ಕೆಳಗಿಳಿದು ಅವಳನ್ನು ಸಮಾಧಾನಗೊಳಿಸಿ, ಅವಳ

ಸಂಗತಿಯನ್ನೆಲ್ಲಾ ತಿಳಕೊಂಡು, ತನ್ನ ಮನೆಗೆ ಕರಕೊಂಡು ಹೋಗಿ, ಅವಳಿಗೆ ದೇಯಿಯೆಂಬ ಹೆಸರನ್ನಿಟ್ಟು, ಅವಳನ್ನು ತನ್ನ ಸೋದರ ಅಳಿಯನಿಗೆ ಮದುವೆ ಮಾಡಿದನು. ದೇಯಿಯು ಬಿಲ್ಲವರ ಸಮಾಜದವಳೊಬ್ಬಳಾಗಿ ಬೆಳೆದು, ಕಾಲ ಕ್ರಮದಲ್ಲಿ ಕೋಟಿ ಚೆನ್ನಯರನ್ನು ಹೆತ್ತಳು.

**ಮೂಲನಿವಾಸಿಗಳು.** ಪಾಡ್ದೊನೆಗಳಲ್ಲಿ 'ಹೊಲೆಯರ' ಸ್ಥಿತಿಗತಿಗಳು ತಿಳಿದುಬರುತ್ತವೆ. ಅವರಲ್ಲಿ ಈಗಿನಂತೆಯೇ ಬಾಕುಡರು, ಪೊಂಬಡರು, ಕೊರಗರು ಮೊದಲಾದ ಬೇರೆ ಬೇರೆ ಸಮಾಜಗಳಿದ್ದವು. ಸಮುದಾಯವಾಗಿ ಅವರನ್ನೆಲ್ಲಾ ಹೊಲೆಯರೆಂದು ಕರೆಯುತ್ತಿತ್ತು. ತುಳುನಾಡಿನಲ್ಲಿ ಈಗಲೂ "ಭೂತ"ಗಳ ಮೇಲೆ ವಿಶ್ವಾಸವಿರುವ ಅನೇಕ ಜನರಿದ್ದಾರೆ. ತುಳುವದ ಮೂಲ ನಿವಾಸಿಗಳಿಂದ ಬಂದ ಈ ಭೂತಗಳ ಆರಾಧನೆಯಲ್ಲಿ ನಲ್ಕೆಯವರು, ಪೊಂಬಡರು ಎಂಬ ಎರಡು ಆದಿದ್ರಾವಿಡ (ಹೊಲೆಯ) ಸಮಾಜಗಳವರು, ಮುಖ್ಯ ಭಾಗ ವನ್ನು ವಹಿಸುವ ರೂಢಿಯು ಹಿಂದಿನಿಂದ ನಡೆದು ಬಂದಿರುತ್ತದೆ. ಹೊಲೆಯ ರಲ್ಲೆಲ್ಲಾ ನಲ್ಕೆಯವರು ಅತ್ಯಂತ ಹೀನರೆನ್ನಿಸಿಕೊಂಡರೂ ಭೂತದ ಕೋಲದ ಸಮಯ ನಲ್ಕೆಯವರೇ ಭೂತದ ವೇಷ ಹಾಕಿಕೊಳ್ಳಬೇಕಾದ್ದರಿಂದ ಅವರು ತುಳುವರಿಗೆ ಅತೀ ಅವಶ್ಯದವರಾಗಿದ್ದಾರೆ. ಪೊಂಬಡರು ನಲ್ಕೆಯವರಿಂದ ಮೇಲು ಎನ್ನಿಸಿಕೊಳ್ಳುತ್ತಾರೆ. ಅವರು ಭೂತಗಳ ಪೈಕಿ ಜುಮಾದಿ, ಪಂಜುರ್ಲಿ, ಕೊಡಮುಂತ್ತಾಯ ಮೊದಲಾದ ಶ್ರೇಷ್ಠ ಭೂತಗಳ ವೇಷವನ್ನು ಮಾತ್ರ ಹಾಕು ತ್ತಾರೆ. ಈ ಪೊಂಬಡರ ಸಂಗತಿಯು ತುಳು ಪಾಡ್ದೊನೆಗಳಲ್ಲಿ ಕಾಣಬರುತ್ತದೆ. ಹೀಗೆ ಹೀನರಾದರೂ ತುಳು ಸಾಮಾಜಿಕ ಜೀವನದಲ್ಲಿ ಹೊಲೆಯರು ಅತ್ಯಾ ವಶ್ಯದ ಮತ್ತು ಪ್ರಾಮುಖ್ಯದ ಅಂಗವಾಗಿದ್ದರು. ಅವರು ಹಿಂದಿನ ತಮ್ಮ ಸ್ವಾತಂತ್ರ್ಯವನ್ನೆಲ್ಲಾ ಮರೆತು ದ್ರಾವಿಡರೊಡನೆ ಭಕ್ತಿಯಿಂದ ನಡೆಯುತ್ತಿದ್ದರು. ತುಳುವದ ನಾಗರೀಕತೆಯಿಂದ ಹೊರಗಾಗಿ, ಅವರ ಅವಸ್ಥೆಯು ದಿನೇ ದಿನೇ ಹೀನವಾಗುತ್ತ ಬರುತ್ತಿತ್ತು.

**ಬ್ಯಾರಿಗಳು.** ಮುಸ್ಲಿಮ್ ಮತಾನುಯಾಯಿಗಳಾದ ಬ್ಯಾರಿಗಳೂ ತುಳುನಾಡಿನ ಇತರ ಸಮಾಜಗಳೊಡನೆ ಭ್ರಾತೃಭಾವದಿಂದ ಜೀವಿಸಿಕೊಂಡಿ ದ್ದರು. ಅವರ ವೃತ್ತಿಯು ಹೆಚ್ಚಾಗಿ ವ್ಯಾಪಾರ (ಬ್ಯಾರ) ವಾದ್ದರಿಂದ ಅವರಿಗೆ ತುಳು ಜನರು ಬ್ಯಾರಿಗಳೆಂದು ಕರೆಯಲಿಕ್ಕೆ ಕಾರಣವಾಗಿತ್ತು. ಅವರು ತುಳು ಸಂಸ್ಥಾನಾಧೀಶರ ಸೈನಿಕರೂ ಸೇನಾಧಿಪತಿಗಳೂ ನೌಕಾಧಿಪತಿಗಳೂ ಆಗಿದ್ದರು.

ತುಳು ಜನರು ಆರಾಧಿಸುವ ಭೂತಗಳಲ್ಲಿ ಬೊಬ್ಬರ್ಯ ಭೂತವು ಬ್ಯಾರಿಯ ಭೂತವಾಗಿದೆ. ತುಳು ಜನರ ಭೂತಾರಾಧನೆಯಲ್ಲಿ ಬ್ಯಾರಿಗಳೂ ಸೇರುತ್ತಿದ್ದ ರೆಂದು ತೋರುತ್ತದೆ ಇಸ್ಲಾಮಿನ ದಿವ್ಯ ಧ್ಯೇಯಗಳ ಅರಿವಿನಿಂದ ಮುಸ್ಲಿಮ ರಾದವರು ತುಳುವದಲ್ಲಿ ಯಾರೂ ಇರಲಿಲ್ಲ.

**ಮೊಗೇರರು.** ಪಾಡ್ದೊನೆಗಳಲ್ಲಿ ಮೊಗೇರರ ಕುರಿತೂ ಅನೇಕ ಕಡೆ ಪ್ರಸ್ತಾಪವಿದೆ. ಅವರು ಪ್ರತ್ಯೇಕ ಸಮಾಜವಾಗಿ "ಓಣಿ"ಗಳಲ್ಲಿ ವಾಸ್ತವಿಸಿ ಕೊಂಡಿರುತ್ತಿದ್ದರು. ಬಲ್ಲಾಳ ಅರಸನಿಗೆ ವಿಶೇಷ ತರದ ಕೆಲಸಗಳಿದ್ದಾಗ ಆ ಅರಸರು ಅವರಿಗೆ ಹೇಳಿಕಳುಹಿಸುತ್ತಿದ್ದರು.

**ಜೈನರು.** ಜೈನರ ಬಸದಿಗಳು ತುಳುವದ ಎಲ್ಲಾ ಕಡೆಗಳಲ್ಲಿದ್ದವು. ಅವರಲ್ಲಿಯೂ ಬ್ರಾಹ್ಮಣರಲ್ಲಿದ್ದಂತೆ 'ಬಲ್ಲಾಳ'ರಿದ್ದರು. ತುಳು ಜನರ ಭೂತ ಆರಾಧನೆಯಲ್ಲಿ ಅವರೂ ಸೇರುತ್ತಿದ್ದರು. "ಸೋಮನಾಥ"ನ ಭಕ್ತಿಯೊಂದಿಗೆ ಜಿನಮತದ ತೀರ್ಥಂಕರರ ಆರಾಧನೆಯು ಅವರಲ್ಲಿ ಮಿಶ್ರವಾಗಿ, ನೆಲೆಗೊಂಡಿತ್ತು.

## ಸಾಮಾಜಿಕ ಸ್ಥಿತಿಗತಿಗಳು

ಸಹ್ಯಾದ್ರಿಯ ನೆರಳಲ್ಲಿರುವ ತುಳುನಾಡಿನ ಜನರು ಉಳಿದ ಹಿಂದುಸ್ಥಾನ ದವರೊಡನೆ ವಿಶೇಷ ಸಂಪರ್ಕವಿಲ್ಲದೆ ಶತಮಾನಗಳನ್ನು ಕಳೆಯುತ್ತಾ ಬಂದಿದ್ದರು. ಉತ್ತರ ಹಿಂದುಸ್ಥಾನದಲ್ಲಿ ಬಲಿಷ್ಠ ಮೌರ್ಯ, ಗುಪ್ತ ಮೊದಲಾದ ಸಾಮ್ರಾಜ್ಯಗಳು ಉತ್ಥಾನ ಪತನಗಳನ್ನು ಹೊಂದುವಾಗಲೂ – ಅದು ಹರ್ಷವರ್ಧನನ ಬಳಿಕ, ಒಕ್ಕಟ್ಟಿಲ್ಲದೆ, ಯವನರ ದಾಸ್ಯತ್ವದಲ್ಲಿ ಬೀಳುವಾಗಲೂ ಆ ಮಹಾ ಕ್ರಾಂತಿಗಳ ಬಿರುಗಾಳಿಯು ತುಳುವಕ್ಕೆ ಬೀಸಲಿಲ್ಲ. ಬಲಿಷ್ಠ ಕರ್ಣಾಟಕ ಸಾಮ್ರಾಟರು ವಿಂಧ್ಯಾಚಲದ ದಕ್ಷಿಣದಲ್ಲಿ ಆಳಿಕೊಂಡಿರುವ ತನಕ ಯವನರ ದೃಷ್ಟಿಯೂ ವಿಂಧ್ಯಾಚಲವನ್ನು ದಾಟಲಿಲ್ಲ. ಚಾಲುಕ್ಯ ವಂಶವು ಕ್ರಿ. ಶಕ ೧೨ನೇ ಶತಮಾನದಲ್ಲಿ ನಿರ್ನಾಮವಾದ ಬಳಿಕ, ಕರ್ಣಾಟಕ ಸಾಮ್ರಾಜ್ಯ ವನ್ನು ದೇವಗಿರಿಯ ಯಾದವರೂ ಹೊಯ್ಸಳದ ಬಲ್ಲಾಳರೂ ಪಾಲು ಮಾಡಿ ಕೊಂಡು, ನಿರಂತರ ಯುದ್ಧಗಳಲ್ಲಿ ಕಾಲಕಳೆಯ ತೊಡಗುವಾಗ, ಉತ್ತರ ಹಿಂದು ಸ್ಥಾನದಲ್ಲಿ ಮುಸ್ಲಿಮ್ ಯವನರು ದಿಲ್ಲಿಯಲ್ಲಿ ತಮ್ಮ ಸ್ಥಿರ ಸಿಂಹಾಸನವನ್ನು ಸ್ಥಾಪಿಸಿ, ದಕ್ಷಿಣ ಹಿಂದುಸ್ಥಾನದ ಕಡೆ ದೃಷ್ಟಿಯನ್ನಿಡ ತೊಡಗಿದರು. ಅಲ್ಲಾವುದ್ದೀನ್ ಮತ್ತು ಮುಹಮ್ಮದ್ ಬಿನ್ ತೊಗಲಾಕರ ಕಾಲದಲ್ಲಿ, ಮುಸ್ಲಿಮರ

ಪ್ರಚಂಡ ದಳಗಳು ವಿಂಧ್ಯಾಚಲವನ್ನು ದಾಟಿ, ದಕ್ಷಿಣ ಹಿಂದುಸ್ಥಾನದಲ್ಲಿ ನುಗ್ಗಿ, ಅಲ್ಲಿ ಶತಮಾನಗಳಿಂದ ಬಾಳಿಕೊಂಡು ಬಂದ ರಾಜ ವಂಶಗಳನ್ನೆಲ್ಲಾ ಅಳಿಸಿ ಬಿಟ್ಟವು. ಆ ಉತ್ಪಾತಗಳ ಕಾಲದಲ್ಲಿಯೂ ತುಳುವವು ಸಹ್ಯಾದ್ರಿಯ ರಕ್ಷಣೆಯಲ್ಲಿ, ಹೊರಗಿನ ಗಂಡಾಂತರಗಳನ್ನೆಲ್ಲಾ ತಪ್ಪಿಸಿಕೊಂಡು, ತನ್ನ ಪ್ರಾಚೀನ ಸಾಂಪ್ರದಾಯಗಳಲ್ಲಿಯೇ ಕಾಲ ಕಳೆದುಕೊಂಡು ಬಂತು. ಪ್ರಪಂಚದ ಸ್ಥಿತಿಗತಿಗಳ ಕುರಿತಾಗಲಿ, ಉಳಿದ ಹಿಂದುಸ್ಥಾನದ ಸಂಗತಿಗಳ ಕುರಿತಾಗಲಿ, ತುಳು ಜನರಲ್ಲಿ ಲವಷ್ಟಾದರೂ ಜ್ಞಾನವಿತ್ತೆಂದು ತೋರಿಸುವ ಸಾಹಿತ್ಯವಾಗಲಿ ಇತರ ದಾಖಲೆಗಳಾಗಲಿ ಸಿಕ್ಕಿದ್ದಿಲ್ಲ. ತುಳುವದಲ್ಲಿ ಈ ಬಲ್ಲಾಳ ಅರಸನು ಆಚೆಯ ಬಲ್ಲಾಳ ಅರಸನ ರಾಜ್ಯದಿಂದ ಅರ್ಧ ಫರ್ಲಂಗಿನ ಜಾಗವನ್ನು ಹೇಗೆ ಅಪಹರಿಸುವುದೆಂಬ ಚಿಂತೆಯಲ್ಲಿದ್ದನು; ಈ ಗುತ್ತಿನವನು ಆ ಗುತ್ತಿನವನಿಂದ ತಾನು ಮೇಲೆಂಬುದನ್ನು ಹೇಗೆ ತೋರಿಸಬಹುದೆಂಬ ಸಾಹಸದಲ್ಲಿದ್ದನು; ಸಂಸ್ಥಾನಾಧೀಶರಾದ ಚೌಟ, ಬಂಗ ಮೊದಲಾದವರು ಸಾಮ್ರಾಟರಿಗೆ ಕೊಡುವ ಕಪ್ಪವನ್ನು ಹೇಗೆ ತಪ್ಪಿಸಿಕೊಳ್ಳಬಹುದು ಎಂಬ ಕುರಿತು ವಿಚಾರಮಗ್ನರಾಗಿದ್ದರು. "ತುಳು ವಿಷಯ"ದ ಹೊರಗಣ ಸಂಗತಿಗಳು ಅವರ ತಿಳುವಳಿಕೆಗೆ ಬಂದಂತೆ ತೋರುವುದಿಲ್ಲ; ಬಂದಿದ್ದರೆ ಅದರಿಂದ ಅವರು ತಮ್ಮ ನಡವಳಿಕೆಯಲ್ಲಿ ಏನಾದರೂ ಬದಲಾವಣೆಗಳನ್ನು ಮಾಡಿದ್ದು ಕಾಣಬರುವುದಿಲ್ಲ. ನೆರೆನೀರಿನ ಪ್ರವಾಹವು ದೊಡ್ಡ ದೊಡ್ಡ ವೃಕ್ಷ, ಮನೆಗಳನ್ನು ಬೀಳಿಸಿ, ಕೊಚ್ಚಿಕೊಂಡು ಹೋಗುವಾಗಲೂ, ಮಣ್ಣಿನ ಹೆಂಟೆಯೊಂದು ಆ ಪ್ರವಾಹದ ಹೊಯಿಲಿಗೆ ಸಿಕ್ಕದೆ ಭದ್ರತೆಯಿಂದ ಬಾಳಿಕೊಂಡು ಬರುವಂತೆ ತುಳುನಾಡು ತನ್ನ ಭೂತಾರಾಧನೆ, – ಬಲ್ಲಾಳ ಬಲ್ಲಾಳರ ಯುದ್ಧ – ಕಂಬಳ, ಕೋಳಿಜೂಜು – ಇವುಗಳಲ್ಲಿ ಲೀನವಾಗಿ ಸುಖದಲ್ಲಿ ಬಾಳಿಕೊಂಡು ಬಂತು. ಶ್ರೀ ಶಂಕರಾಚಾರ್ಯ, ಮಧ್ವಾಚಾರ್ಯರ ಬೋಧನೆಗಳು ತುಳುವದ ಜನರಲ್ಲಿದ್ದ ಭೂತಾರಾಧನೆಯನ್ನಾಗಲಿ ಇತರ ನಂಬಿಕೆಗಳನ್ನಾಗಲಿ ಅಲುಗಾಡಿಸಲಿಲ್ಲ. ಜೈನ ಪ್ರಚಾರದಿಂದ, ತುಳು ಜನರ ಭೈರವ ಪೂಜೆಯಾಗಲಿ ಮಾರಿ ಪೂಜೆಯಾಗಲಿ ಎಲ್ಲಿಯೂ ನಿಂತುಹೋಗಲಿಲ್ಲ.

**ಕಂಬಳ, ಕೋಳಿಜೂಜು.** ಬಲ್ಲಾಳ ರಾಜ್ಯಗಳಲ್ಲಿ ಚೆಂಡಾಟ, ಬಿಲ್ಲಾಟಗಳಿಗೆ ಪ್ರತ್ಯೇಕವಿಟ್ಟ ವಿಸ್ತಾರವಾದ ಆಟದ ಬೈಲುಗಳಿದ್ದವು. ಈ ಆಟಗಳಲ್ಲಿ ಸರ್ವರೂ ಭಾಗವಹಿಸುತ್ತಿದ್ದರು. ಕೋಳಿಜೂಜು, ಕಂಬಳಗಳು ತುಳುವದಲ್ಲಿ

ಪ್ರಾಚೀನದಿಂದಲೂ ಜನರ ಮನಸ್ಸನ್ನು ಆಕರ್ಷಿಸುತ್ತಿದ್ದವು. ಕಂಬಳಗಳಲ್ಲಿ ಬಲ್ಲಾಳ ಅರಸರಿಗೆ ಕೂಡ ಆಸಕ್ತಿಯಿತ್ತು. ಬಲ್ಲಾಳ ಅರಸರು ಬೇಟೆಯಾಡು ವದರಲ್ಲಿ ನಿಪುಣರಾಗಿದ್ದರು; ಅವರೊಡನೆ ಬೇಟೆಯ ನಾಯಿಗಳಿದ್ದವು.

**ವಿದ್ಯೆ.** ತುಳು ಬಾಲಕರು ಓದು ಬರಹಗಳನ್ನು 'ಗರಡಿ'ಗಳಲ್ಲಿ ಕಲಿಯು ತ್ತಿದ್ದರು; ಹೊಯ್ಗೆಯ ಮೇಲೆ ಬರಿಯು ಕಲಿಯುತ್ತಿದ್ದರು. ತುಳು ಜನರು ತಮ್ಮ ಕಾಗದ ಪತ್ರಗಳನ್ನು ತಾಳೆಯ ಮರದ ಓಲೆಗಳ ಮೇಲೆ ಬರೆಯುತ್ತಿದ್ದರು. ಅಕ್ಷರಜ್ಞಾನಕ್ಕಿಂತ ಮೇಲಣ ಪಾಂಡಿತ್ಯವಿದ್ದ ಜನರು ತುಳುವದಲ್ಲಿ ವಿರಳರಾಗಿ ದ್ದರು. ಬ್ರಾಹ್ಮಣರಲ್ಲಿ ಪುರಾಣ, ಸ್ಮೃತಿಗಳನ್ನು ಬಲ್ಲವರಿದ್ದರೂ ಅವರಿಗೆ ಹೊರ ಪ್ರಪಂಚದ ಜ್ಞಾನವಿತ್ತೆಂದು ತೋರುವುದಿಲ್ಲ. ಅವರ ಪುರಾಣ ಸ್ಮೃತಿಗಳಲ್ಲಿ ತುಳುವದ ದ್ರಾವಿಡರಿಗೆ ವಿಶೇಷ ಭಕ್ತಿಯಿತ್ತೆಂದೂ ತೋರುವುದಿಲ್ಲ.

**ಸ್ತ್ರೀಯರು.** ಬ್ರಾಹ್ಮಣರಲ್ಲಿ ಸ್ತ್ರೀಯರಿಗೆ ಮನೆಯ ಸೇವೆಯೇ ಗತಿ ಯಾಗಿತ್ತು. ಕಟ್ಟಳೆ, ಸಾಂಪ್ರದಾಯಗಳಿಂದ ಬಂಧಿತರಾಗಿ, ಬ್ರಾಹ್ಮಣ ಸ್ತ್ರೀಯ ರಲ್ಲಿ ವ್ಯಕ್ತಿತ್ವವೇನೂ ಉಳಿದಿರಲಿಲ್ಲ. ತುಳು ದ್ರಾವಿಡರ ಸ್ತ್ರೀಯರೂ ಜೈನ ಸಮಾಜಗಳ ಸ್ತ್ರೀಯರೂ ಬ್ರಾಹ್ಮಣ ಸ್ತ್ರೀಯರಿಗಿಂತಲೂ ಹೆಚ್ಚಿನ ಸ್ವಾತಂತ್ರ್ಯದಲ್ಲಿ ಬೆಳೆದು ಸಮರ್ಥೆಯರೂ ಧೀರೆಯರೂ ಆಗಿದ್ದರು. ಆದರೆ ಯಾವ ಸಮಾಜ ಗಳಲ್ಲಿಯೂ ಉತ್ಸವಾದಿ ವಿಶೇಷ ಸಂದರ್ಭಗಳಲ್ಲಿ ಜನರು ಕೂಡುವಾಗ ಹೆಂಗಸರು ಗಂಡಸರ ಗುಂಪಿನಲ್ಲಿ ಸೇರುವ ವಾಡಿಕೆ ಇರಲಿಲ್ಲ; ಸಮಾಜದಲ್ಲಿ ಹೆಂಗಸರ ಸ್ಥಾನವು ಬೇರೆ ಎಂಬದು ಎಲ್ಲರಿಗೂ ತಿಳಿದಿತ್ತು.

**ಆಹಾರ, ಉಡಿಗೆ ತೊಡಿಗೆ.** ಈಗಿನಂತೆ ಹಿಂದೆಯೂ ಅಕ್ಕಿಯೇ ತುಳುವದ ಜನರ ಮುಖ್ಯ ಆಹಾರವಾಗಿತ್ತು. ಹಾಲು, ಬೆಣ್ಣೆ, ತುಪ್ಪ, ಜೇನು ಗಳನ್ನು ಅನುಕೂಲಸ್ಥರು ಉಪಯೋಗಿಸುತ್ತಿದ್ದರು. ಬಡವರು ಕಳ್ಳನ್ನು ಕುಡಿದು ತೃಪ್ತರಾಗುತ್ತಿದ್ದರು.

ಉಡಿಗೆ ತೊಡಿಗೆಗಳಲ್ಲಿ ಆಡಂಬರವಿರಲಿಲ್ಲ. ಎಲ್ಲಾ ಜಾತಿಯವರೂ ತಲೆಗೆ ಅಡಕೆ ಮರದ ಹಾಳೆಯಿಂದ ಮಾಡಿದ ಮುಟ್ಟಾಳೆಯನ್ನು ಇಡುತ್ತಿದ್ದರು. ಬಲ್ಲಾಳ ಅರಸನು ತಲೆಗೆ ನವಿಲಿನ ಗರಿಯಿರುವ ಮುಟ್ಟಾಳೆಯನ್ನಿಟ್ಟು, ಮಲ್ಲಿಗೆ ಹೂವಿನ ಮಾಲೆಯನ್ನು ಅದರ ಸುತ್ತಲೂ ಸುತ್ತಿಕೊಳ್ಳುತ್ತಿದ್ದನು. ಮುಟ್ಟಾಳೆ ಗಳಲ್ಲಿ ಬೇರೆ ಬೇರೆ ರೀತಿಯ ಮುಟ್ಟಾಳೆಗಳಿದ್ದವು; ಆಯಾಯ ಜಾತಿಯವರು ಆಯಾಯ ರೀತಿಯ ಮುಟ್ಟಾಳೆಯನ್ನು ಧರಿಸುವದು ವಾಡಿಕೆಯಾಗಿತ್ತು.

ತುಳು ಹೆಂಗಸರು ಸೀರೆ ಕುಪ್ಪಸಗಳನ್ನು ತೊಟ್ಟು, ಕಾಲ್ಬೆರಳುಗಳಿಗೆ ಬೆಳ್ಳಿಯ ಉಂಗುರಗಳನ್ನಿಟ್ಟು,– ಕೈಗೆ ಬಳೆ, ಕೊರಳಿಗೆ ಸರ, ಕಿವಿಗೆ ಕೊಪ್ಪು, ವೋಲೆ ಗಳನ್ನಿಟ್ಟುಕೊಂಡು,– ಕಣ್ಣಿಗೆ ಕಾಡಿಗೆ ಹಚ್ಚಿ– ಪುರುಷರ ಮನಸ್ಸನ್ನು ಸೂರೆ ಗೊಳ್ಳುತ್ತಿದ್ದರು. ಪುರುಷರು ಕಾಲಿಗೆ ಮೆಟ್ಟು, ಸೊಂಟಕ್ಕೆ ವಸ್ತ್ರ, ಮೈಮೇಲೆ ಎಲವಸ್ತ್ರಗಳನ್ನು ಧರಿಸಿ, ತಲೆಗೆ ಮುಟ್ಟಾಳೆಯನ್ನಿಟ್ಟುಕೊಂಡು, ಠೀವಿಯಿಂದ ನಡೆಯುತ್ತಿದ್ದರು.

**ಸೈನ್ಯ.** ಸೈನ್ಯದಲ್ಲಿ ಪದಾತಿಗಳೇ ಇದ್ದರು. ಬಲ್ಲಾಳ ಅರಸರೂ ದಂಡ ನಾಯಕರೂ ಅಶ್ವಾರೂಢರಾಗಿ ಅವರ ನಡುವೆ ತಿರುಗುತ್ತಿದ್ದರು. ಕತ್ತಿಗಳೇ ಸೈನಿಕರ ಮುಖ್ಯ ಆಯುಧವಾಗಿದ್ದವು. ಸೈನಿಕರಲ್ಲಿ ಕೆಲವರು ಧನುರ್ಬಾಣ ಗಳನ್ನು ಉಪಯೋಗಿಸುತ್ತಿದ್ದರು. ಸೈನ್ಯಗಳಲ್ಲಿ ಜನರನ್ನು ಒಟ್ಟುಕೂಡಿಸ ಲಿಕ್ಕೂ ಇತರ ಸಂದರ್ಭಗಳಲ್ಲಿಯೂ ರಣಭೇರಿ, ರಣಕಹಳೆಗಳನ್ನು ಉಪಯೋ ಗಿಸುವದಿತ್ತು. ತುಳು ದ್ರಾವಿಡ ಸ್ತ್ರೀಯರು ಯುದ್ಧಗಳಲ್ಲಿ ಭಾಗವಹಿಸದಿದ್ದರೂ ಯುದ್ಧಕ್ಕೆ ಹೆದರುತ್ತಿದ್ದಿಲ್ಲ; ಪುರುಷರನ್ನು ಹುರುಪುಗೊಳಿಸುತ್ತಿದ್ದರು.

**ಮನೆಗಳು.** ಮನೆಗಳಿಗೆ ಹೆಚ್ಚಾಗಿ ಮಣ್ಣಿನ ಗೋಡೆ,–ಬಿದಿರು ಮತ್ತು ಮುಳಿಹುಲ್ಲಿನ ಮಾಡುಗಳಿದ್ದವು. ಜನರು ತಮ್ಮ ಮನೆಗಳ ಬಳಿ ಮಾವಿನ ಯಾ ತೆಂಗಿನ ಮರಗಳ ಸುತ್ತಲೂ ಕಟ್ಟೆ ಕಟ್ಟಿ ಕೂತುಕೊಳ್ಳುತ್ತಿದ್ದರು. ಬೆಳಕಿಗೆ ಕೈಚಿಮಿಣಿಯನ್ನು ಉಪಯೋಗಿಸುತ್ತಿದ್ದರು. ಮನೆಯ ಹಿಂದೆ ದನಗಳ ಹಟ್ಟಿ ಇರುವದಿತ್ತು; ಮುಂದೆ ಮೊಗಸಾಲೆ, ಮೊಗಸಾಲೆಯಲ್ಲಿ ತೂಗುಯ್ಯಾಲೆ ಇದ್ದವು.

**ವಾಹನಗಳೂ ಮಾರ್ಗಗಳೂ.** ಶ್ರೀಮಂತರು ಪಲ್ಲಕಿ ಯಾ ದಂಡಿಗೆ ಗಳಲ್ಲಿ ಸಂಚಾರ ಮಾಡುತ್ತಿದ್ದರು. ಬಲ್ಲಾಳ ಅರಸರೊಡನೆ ದಂಡಿಗೆಗಳನ್ನು ಹೊರಲಿಕ್ಕೆ ಬೋವಿಗಳಿದ್ದರು. ಸೈನ್ಯಾಧೀಶರಿಗೆ ಕುದುರೆಗಳ ಸವಾರಿಯು ತಿಳಿದಿತ್ತಾದರೂ, ಸಾಮಾನ್ಯ ತುಳುವರೊಡನೆ ಕುದುರೆಗಳಾಗಲಿ ಭಂಡಿಗಳಾಗಲಿ ಇರಲಿಲ್ಲ. ಎಲ್ಲರೂ ನಡಕೊಂಡು ಹೋಗುವದೇ ರೂಢಿಯಾಗಿತ್ತು.

ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹೋಗುವ ದಾರಿಯಲ್ಲಿ ಸುಂಕದ ಕಟ್ಟೆ, ಗಡಿ ಕಲ್ಲು, ಗಡಿ ಕಾಡುಗಳಿದ್ದವು. ಬಲ್ಲಾಳ ರಾಜ್ಯಗಳಲ್ಲಿ ಎಲ್ಲವರಿಂದಲೂ ನಿಷ್ಪಕ್ಷಪಾತವಾಗಿ ಸುಂಕ ವಸೂಲ್ಮಾಡುವ ಸುಂಕದ ಅಧಿಕಾರಿ ಗಳಿದ್ದರು. ಹೊಳೆ ದಾಟುವಲ್ಲಿ 'ಕಡವು'ಗಳಿದ್ದವು; ಆ ಕಡವುಗಳಲ್ಲಿ ಶ್ರೀ

ಮಂತರು ಜನರನ್ನು ನಿಶ್ಚಿತ ಸಮಯ ದಾಟಿಸಲಿಕ್ಕೆ ದೋಣಿಗಳನ್ನೂ ಆಳುಗಳನ್ನೂ ಇಟ್ಟು, ಜನರಿಂದ ಕಡವಿನ ಫೀಸನ್ನು ಪಡೆಯುತ್ತಿದ್ದರು. ತುಳುವದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗಲಿಕ್ಕೆ ಯೋಗ್ಯವಾದ ಒಳ್ಳೇ ರಾಜ ಮಾರ್ಗಗಳಿರಲಿಲ್ಲ. ಘಟ್ಟದ ಮೇಲಿನವರು ಮಳೆಗಾಲದಲ್ಲಿ ತುಳುವಕ್ಕೆ ಇಳಿಯಲಿಕ್ಕೆ ಸಾಧ್ಯವಿರಲಿಲ್ಲ; ಬೇಸಿಗೆಯಲ್ಲಿ ಹೇರೆತ್ತುಗಳ ಮೇಲೆ ಸರಕುಗಳನ್ನು ಹೊರಿಸಿ, ಕಾಡುಗಳ ನಡುವೆ ಇರುವ ಸವೆದ ದಾರಿಗಳಿಂದ ಜನರು ಆಚೆ ಈಚೆ ಹೋಗುತ್ತಿದ್ದರು.

**ಮತ, ಧರ್ಮ ವಿಚಾರಗಳು.** ಹಿಂದೂ ಇಸ್ಲಾಮ್ ಮತಗಳ ತಿರುಳಿನ ಜ್ಞಾನವಿದ್ದ ಜನರು ವಿರಳರಾಗಿದ್ದರು. ಸಾಮಾಜಿಕ ಭೇದಗಳಿಂದ ಹಿಂದು ಮುಸ್ಲಿಮರೆಂದು ಬೇರೆಯಾಗಿ ಜೀವಿಸಿಕೊಂಡು ಬರುತ್ತಿದ್ದರಲ್ಲದೆ ಧರ್ಮ ವಿಚಾರಗಳಿಂದಲ್ಲ.

ಹಿಂದೂ ಧರ್ಮವು ಮೂಲನಿವಾಸಿಗಳ ನಂಬಿಕೆಗಳನ್ನು ಹಾಗೆಯೇ ಒಳಗಿಟ್ಟು, ಅವುಗಳ ಮೇಲೆ ಪಸರಿಸಿಕೊಂಡಿತ್ತು. ಪ್ರತಿಯೊಂದು ಗ್ರಾಮದಲ್ಲಿ ಗ್ರಾಮದ ಭೂತವೊಂದಿತ್ತು; ಅಲ್ಲಲ್ಲಿ ಮಾರಿಯಮ್ಮನ ಗುಡಿಗಳಿದ್ದವು. ಆ ಭೂತವನ್ನೂ ಆ ಮಾರಿಯಮ್ಮನನ್ನೂ ಒಲಿಸಲಿಕ್ಕಾಗಿ ವರ್ಷಕ್ಕೊಂದು ಜಾತ್ರೆ ನಡೆಯುತ್ತಿತ್ತು. ತುಳು ಜನರು ತಮ್ಮ ಸಂಸಾರ ಕಷ್ಟಗಳೂ ಕಾಹಿಲೆಗಳೂ ದೂರವಾಗಬೇಕಾದರೆ ಆ ಭೂತದ ಮತ್ತು ಆ ಮಾರಿಯಮ್ಮನ ದಯೆ ಬೇಕೆಂದು ನಂಬಿ, ಅವರನ್ನು ಹಣ್ಣುಕಾಯಿಯ ಹರಿಕೆಗಳಿಂದಲೂ ರಕ್ತ ಮಾಂಸದ ಬಲಿಗಳಿಂದಲೂ ಮೆಚ್ಚಿಸ ಪ್ರಯತ್ನಿಸುತ್ತಿದ್ದರು. ಭೂತಗಳ ಆರಾಧನೆಯನ್ನು ಕೋಲ, ಬಂಡಿ, ನೇಮ, ಅಗೆಲು, ತಂಬಿಲಗಳೆಂಬ ನಾಲ್ಕು ವಿಧಗಳಿಂದ ಮಾಡುತ್ತಿದ್ದರು. ಆದರೆ ಇತ್ತ ಭೂತಾರಾಧನೆಯು ನಡೆಯುತ್ತಾ ಇದ್ದರೂ ಅತ್ತ ಹಿಂದೂ ದೇವಾಲಯಗಳೂ ಜೈನ ಬಸದಿಗಳೂ ತುಳುವದಲ್ಲಿ ತುಂಬಿದ್ದವು. ಶಿವಭಕ್ತಿಯ ಪ್ರಧಾನ ಕೇಂದ್ರವಾದ ಶಿವ ಬೆಳ್ಳಿಯಲ್ಲಿ ವೈಷ್ಣವ ಮಠಗಳು ಪ್ರಬಲವಾಗಿ, ಶಿವನ ನೆನಪೇ ಅಳಿಸಿಹೋಗಿದ್ದರೂ—ತುಳುವದ ಹಳ್ಳಿಗಳಲ್ಲಿ ಮಹಾಲಿಂಗೇಶ್ವರ, ಸೋಮನಾಥ, ದುರ್ಗಾಪರಮೇಶ್ವರೀ ದೇವಾಲಯಗಳೇ ಪ್ರಬಲವಾಗಿದ್ದವು. ರಕ್ತ ಮಾಂಸದ ಬಲಿಗಳನ್ನು ವೈಷ್ಣವ ಭಕ್ತಿಮಾರ್ಗಕ್ಕೆ ಜೋಡಿಸಲಿಕ್ಕೆ ಕಷ್ಟವಾಗುವುದರಿಂದ ವೈಷ್ಣವ ಧರ್ಮವು ತುಳುವರಲ್ಲಿ ಬೇರೂರಲಿಲ್ಲ. ತಾವು ಆರಾಧಿಸುವ ಭೂತವು ಶಿವನ ಗಣಗಳಲ್ಲೊಂದು, ಮಾರಿಯು

ದುರ್ಗಾಪರಮೇಶ್ವರಿಯ ರೂಪಗಳಲ್ಲೊಂದು– ಎಂದು ನಂಬಲಿಕ್ಕೆ ಕಷ್ಟವಾಗದ್ದರಿಂದ ತುಳು ಜನರು ಶಿವಭಕ್ತಿಯವರಾಗಿ ಬಾಳಿಕೊಂಡು ಬರುತ್ತಿದ್ದಾರೆ. ತುಳುವದಲ್ಲಿ ಈ ಶತಮಾನಗಳ ನಡುವೆ ವೈಷ್ಣವ ಮಠಗಳಲ್ಲದೆ ಭಾಗವತ ಸಾಂಪ್ರದಾಯವೆಂಬ ಸ್ಮಾರ್ತಧರ್ಮದ ಮಠವೊಂದೂ ಬಾಲಕುದ್ರು ಗ್ರಾಮದಲ್ಲಿ ಸ್ಥಾಪನೆಯಾಗಿತ್ತು.

---

# ಅಧ್ಯಾಯ ೧೦

**೧. ವಿಜಯನಗರ ಸ್ಥಾಪನೆ. ೨. ಸಂಗಮ, ಸಾಳುವ ವಂಶಗಳ ಸಾಮ್ರಾಟರು. ೩. ತುಳುವದ ಸ್ಥಿತಿಗತಿಗಳು. ೪. ತುಳುವ ವಂಶ. ೫. ಪೋರ್ತುಗೀಸರ ಪ್ರವೇಶ. ೬. ಸಾರಸ್ವತರು. ೭. ಕ್ರೈಸ್ತಮತ ಪ್ರಚಾರ.**

## ೧. ವಿಜಯನಗರ ಸ್ಥಾಪನೆ

ಹಿಂದೆ ೮ನೇ ಅಧ್ಯಾಯದ ಕೊನೆಯಲ್ಲಿ ಢಿಲ್ಲಿಯ ಮುಸ್ಲಿಮರು ನರ್ಮದೆಯನ್ನು ದಾಟಿ, ಹೊಯ್ಸಳ ಅರಸನಾದ ೩ನೇ ಬಲ್ಲಾಳನನ್ನು ಒಮ್ಮೆ ಸೆರೆ ಹಿಡಿದು ಢಿಲ್ಲಿಗೆ ಕೊಂಡುಹೋಗಿ, ಅಲ್ಲಿ ಅವನನ್ನು ಬಿಡುಗಡೆ ಮಾಡಿದ ವಿಷಯವನ್ನೂ– ಇನ್ನೊಮ್ಮೆ ಬಂದು ಅವನನ್ನು ಸೋಲಿಸಿ, ಆತನ ರಾಜಧಾನಿಯಾದ ದ್ವಾರ ಸಮುದ್ರದಿಂದ ಓಡಿಸಿದ ವಿಷಯವನ್ನೂ ನಾವು ಓದಿರುತ್ತೇವೆ.

ಮುಹಮ್ಮದ್ ಬಿನ್ ತೊಗಲಾಕಿನ ಆಳಿಕೆಯ ಪ್ರಾರಂಭದಲ್ಲಿ ಢಿಲ್ಲಿಯ ಸಾಮ್ರಾಜ್ಯವು ದಕ್ಷಿಣ ಹಿಂದುಸ್ಥಾನದಲ್ಲಿ ಸ್ಥಿರವಾದಂತೆ ತೋರಿತು. ಆದರೆ ಆ ಆಳಿಕೆಯು ಪ್ರಾರಂಭವಾದ ಹತ್ತು, ಹನ್ನೆರಡು ವರ್ಷಗಳು ದಾಟುವಷ್ಟರಲ್ಲಿ ದಕ್ಷಿಣ ಹಿಂದುಸ್ಥಾನದ ಹಿಂದುಗಳಲ್ಲಿ ನೂತನ ಜಾಗೃತಿಯು ತಲೆದೋರಿ, ವಿಜಯನಗರ ಸ್ಥಾಪನೆಯಾಯಿತು. ಅಲ್ಲಾವುದ್ದೀನ್, ಮಲ್ಲಿಕಾಫರ, ಮುಹಮ್ಮದ್ ಬಿನ್ ತೊಗಲಾಕರ ದಾಳಿಗಳ ಮೊದಲು ದಕ್ಷಿಣ ಹಿಂದುಸ್ಥಾನದ ಜನರಿಗೆ ಮುಸ್ಲಿಮ್ ದಾಳಿಗಳ ಪರಿಚಯವಿರಲಿಲ್ಲ. ಅಷ್ಟರ ತನಕ ಅಲ್ಲಿ ಸಾಮ್ರಾಜ್ಯ ಸ್ಥಾಪನೆಯೆಂದರೆ ಯಾವದಾದರೊಂದು ರಾಜ ಮನೆತನದವರು ಪ್ರಬಲರಾಗಿ, ಸುತ್ತಲಿರುವ ಇತರ ರಾಜ್ಯಗಳನ್ನು ತಮ್ಮ ಅಂಕಿತದಲ್ಲಿಟ್ಟುಕೊಂಡು

ಕಪ್ಪಕಾಣಿಕೆಗಳನ್ನು ಪಡೆಯುವದು – ಇಷ್ಟು ಮಾತ್ರವಿತ್ತು. ಸಾಮಾನ್ಯ ಜನತೆಯ ಸ್ಥಿತಿಗತಿಗಳಿಗೆ ಆ ಸಾಮ್ರಾಜ್ಯ ಸ್ಥಾಪನೆಗಳಿಂದ ದಕ್ಕೆ ತಗಲುತ್ತಿರಲಿಲ್ಲ. ಮುಸ್ಲಿಮರ ದಾಳಿಗಳಲ್ಲಿ ಊರು ಊರುಗಳೇ ಕೊಳ್ಳೆಯಾಗಿ ಬರಿದಾದವು; ಜನರು ಸಹಸ್ರಗಟ್ಲೆ ಹತರಾಗಿ, ಅವರ ಸಂಪತ್ತು ಸೂರೆಯಾಯಿತು; ಗೋವುಗಳ ಸಂಹಾರ – ದೇವಾಲಯ, ಮೂರ್ತಿಗಳ ನಾಶ – ಇವುಗಳಿಂದ ಜನರಲ್ಲಿ ಹಾಹಾಕಾರವೆದ್ದಿತು. ಹಿಂದೂ ಸಂಸ್ಕೃತಿ, ಹಿಂದೂ ಧರ್ಮಗಳು ಇನ್ನು ಉಳಿಯದೆಂದು ತೋರತೊಡಗಿತು. ಈ ಕಷ್ಟಗಳ ನಡುವೆ ಹಿಂದೂ ಧರ್ಮರಕ್ಷಣೆಯ ಕಾರ್ಯವನ್ನು ಮಾಧವಾಚಾರ್ಯರೆಂಬ ಪುಣ್ಯಪುರುಷರು ಕೈಕೊಂಡರು. ಕ್ರಿ. ಶಕ ೧೩೩೧ ರಷ್ಟಕ್ಕೆ ಅವರು ವಿದ್ಯಾರಣ್ಯರೆಂಬ ಹೆಸರಿನಿಂದ ಸನ್ಯಾಸಾಶ್ರಮವನ್ನು ಧರಿಸಿ, ಹಿಂದೂ ಸಂಘಟನೆಗೂ ಹಿಂದೂ ಧರ್ಮರಕ್ಷಣೆಗೂ ಆತ್ಮಸಮರ್ಪಣೆಯನ್ನು ಮಾಡಿ, ಮುಸ್ಲಿಮರ ದಾಳಿಗಳನ್ನು ತಡೆಯ ಶಕ್ತವಾಗುವ ಬಲಿಷ್ಠ ಹಿಂದೂ ಸಾಮ್ರಾಜ್ಯವೊಂದರ ಸ್ಥಾಪನೆಗೆ ಕಾರಣರಾದರು. ಸುತ್ತಲಿರುವ ರಾಜವಂಶೀಯರಲ್ಲಿ ಸಂಗಮನ ಮಕ್ಕಳಾದ ಹರಿಹರ ಬುಕ್ಕರೇ ಆ ಹಿಂದೂ ಧರ್ಮರಕ್ಷಣೆಯ ಸಾಹಸಗಳಿಗೆ ಯೋಗ್ಯರೆಂದು ಅವರು ನಿರ್ಧರಿಸಿ,– ಕ್ರಿ. ಶಕ ೧೩೩೬ ರಲ್ಲಿ ತುಂಗಭದ್ರೆಯ ದಕ್ಷಿಣಕ್ಕೆ ವಿಜಯನಗರ ಸ್ಥಾಪನೆಯನ್ನು ಆ ಹರಿಹರ ಬುಕ್ಕರಿಂದ ಮಾಡಿಸಿ, – ಹಿರಿಯವನಾದ ಹರಿಹರನನ್ನು ಅಲ್ಲಿ ಪಟ್ಟಕ್ಕೇರಿಸಿದರು. ಅಂದು ಸ್ಥಾಪಿತವಾದ ಆ **ವಿಜಯನಗರ** ಸಾಮ್ರಾಜ್ಯವು ೨೩೦ ವರ್ಷಗಳ ತನಕ ಅದ್ವಿತೀಯ ವೈಭವದಿಂದ ಮೆರೆದು, ಭೂಲೋಕದ ಸರ್ವ ದಿಕ್ಕುಗಳಲ್ಲಿಯೂ ತನ್ನ ಪ್ರಭೆಯನ್ನು ಬೀರಿ, ಕೊನೆಗೆ ಕಾಲಚಕ್ರದ ದವಡೆಯಲ್ಲಿ ಸಿಲುಕಿ, ನಿರ್ನಾಮವಾಗಿ ಹೋಯಿತು.

## ೨. ಸಂಗಮ ವಂಶ

### (೧೩೩೬ ರಿಂದ ೧೪೭೮)

ವಿಜಯನಗರ ಸ್ಥಾಪನೆಯ ಮೊದಲು ಹರಿಹರನು ಹೊಯ್ಸಳ ಅರಸನ ಮಾಂಡಲಿಕನಾಗಿದ್ದನು. ವಿಜಯನಗರ ಸ್ಥಾಪನೆಯ ಬಳಿಕವೂ ಹರಿಹರನು ತಾನು ಹೊಯ್ಸಳರ ಮಹಾ ಮಂಡಲೇಶ್ವರನೆನ್ನುತ್ತಾ ಹೊಯ್ಸಳ ಮನೆತನದ ಗೌರವವನ್ನು ಪಾಲಿಸಿಕೊಂಡಿದ್ದನು. ವಿಜಯನಗರ ಸ್ಥಾಪನೆಯಾದ ಬಳಿಕ ದಕ್ಷಿಣ ಹಿಂದುಸ್ಥಾನದ ಪುಟ್ಟ, ದೊಡ್ಡ ಕಿರೀಟಾಧಿಪತಿಗಳೆಲ್ಲಾ ತಾವಾಗಿಯೇ

ಹರಿಹರನಿಗೆ ಅಂಕಿತರಾಗಿ ಕಪ್ಪಕಾಣಿಕೆಗಳನ್ನು ಸಲ್ಲಿಸ ತೊಡಗಿದರು. ಹೊಯ್ಸಳ ಅರಸನಾದ ೩ನೇ ವೀರಬಲ್ಲಾಳನು ಹೆಸರಿಗಿನ್ನೂ ಸ್ವತಂತ್ರ ಅರಸನಾಗಿದ್ದರೂ ಹೊಯ್ಸಳ ರಾಜ್ಯವೆಲ್ಲ ವಿಜಯನಗರ ಸಾಮ್ರಾಜ್ಯದಲ್ಲಿ ಸೇರಿಹೋಗಿ, ತುಳುವ ದಲ್ಲಿ ಮಾತ್ರ ವೀರಬಲ್ಲಾಳನ ಅಧಿಕಾರವುಳಿದಿತ್ತು. ಕ್ರಿ. ಶಕ ೧೩೪೨ರಲ್ಲಿ ವೀರಬಲ್ಲಾಳನು ಕಾಲವಶನಾದ ಬಳಿಕ ಹೊಯ್ಸಳ ವಂಶವು ಕೊನೆಗಂಡಿತು. ತುಳುವದ ಮಹಾ ಮಂಡಲೇಶ್ವರನಾದ ಆಲೂಪ ಅರಸನೂ ತುಳುವದ ಸಾಮಂತರೂ ಅದರ ಬಳಿಕ ವಿಜಯನಗರ ಸಾಮ್ರಾಜ್ಯದ ಅಧಿಕಾರವನ್ನೊಪ್ಪಿ, ಅದಕ್ಕೆ ಕಪ್ಪವನ್ನು ಕೊಡಲಾರಂಭಿಸಿದರು.

ಹರಿಹರನು ತುಳುವದಲ್ಲಿ ತನ್ನ ಕಡೆಯಿಂದ ಮೂವರು ಅಧಿಕಾರಿಗಳನ್ನು ಇಟ್ಟು, ಅವರಿಂದ ಸಾಮಂತರ ಕಪ್ಪಕಾಣಿಕೆಗಳನ್ನು ಶೇಖರಿಸುತ್ತಿದ್ದನಾದ್ದರಿಂದ ಆಲೂಪರ ಅಧಿಕಾರವು ತೀರಾ ನಿಸ್ತೇಜವಾಯಿತು. ವಿಜಯನಗರದ ಅಧಿಕಾರಿ ಗಳಿಗೆ "ಒಡೆಯರು" ಎಂಬ ಹೆಸರಿತ್ತು. ಒಬ್ಬನು ಬಾರ್ಕೂರಿನಲ್ಲಿಯೂ ಇನ್ನೊಬ್ಬನು ಮಂಗಳೂರಿನಲ್ಲಿಯೂ ವಾಸ್ತವಿಸಿಕೊಂಡಿರುತ್ತಿದ್ದರು; ಕೆಲವು ಕಾಲ ಮೂರನೇಯವನೊಬ್ಬನು ಬಂಗಾಡಿಯಲ್ಲಿಯೂ ಇದ್ದನು. ಈಒಡೆಯ ರಿಗೆ ಸಂತಾನ ಪಾರಂಪರ್ಯದ ಹಕ್ಕಿರಲಿಲ್ಲ; ಅವರು ಸಾಮ್ರಾಜ್ಯದ ನೌಕರ ಶಾಹಿಗೆ ಸೇರಿದವರಾಗಿದ್ದರು. ಹರಿಹರನು ತುಳುವದ ಕಂದಾಯ ಕ್ರಮವನ್ನು ಸ್ಮೃತಿಗಳಿಗನುಸಾರವಾಗಿ ತಿದ್ದುಪಡಿಸಿ, – ತುಳುವದಲ್ಲಿ ಶಾಂತಿನೆಲೆಗೊಂಡು ರಾಜ್ಯಭಾರವು ಸುಸೂತ್ರವಾಗಿ ನಡೆಯುವಂತೆ ಜಾಗ್ರತೆ ಇಟ್ಟನು. ಹರಿಹರನು ೧೭ ವರ್ಷ ಆಳಿ ಕಾಲವಶನಾದ ಬಳಿಕ, ಅವನ ವಂಶದ ಅರಸರು ಕ್ರಿ. ಶಕ ೧೪೭೮ರ ತನಕ ವಿಜಯನಗರ ಸಾಮ್ರಾಜ್ಯವನ್ನಾಳಿದರು. ಹರಿಹರನು ವಿಜಯ ನಗರವನ್ನಾಳುತ್ತಿರುವಾಗಲೇ ಮಹಮ್ಮದ್ ಬಿನ್ ತೊಗಲಾಕನ ಆಳಿಕೆಯು ದಕ್ಷಿಣ ಹಿಂದುಸ್ಥಾನದಲ್ಲಿ ಕೊನೆಗಂಡಿತು. ಅವನ ಸುಬೇದಾರನನ್ನು ಓಡಿಸಿ, ಮುಸ್ಲಿಮ್ ಸರದಾರನೊಬ್ಬನು ಕ್ರಿ. ಶಕ ೧೩೪೭ ಲ್ಲಿ ಕಲಬುರ್ಗೆಯಲ್ಲಿ ಹೊಸ ತೊಂದು ರಾಜ್ಯವನ್ನು ಸ್ಥಾಪಿಸಿದನು. ಆ ರಾಜ್ಯವು ಕೃಷ್ಣಾನದಿಯ ಉತ್ತರದಲ್ಲಿ ಪ್ರಬಲವಾಗ ತೊಡಗಿತು. ಹರಿಹರನ ಬಳಿಕ ಆ "ಬಾಹಮನೀ" ರಾಜ್ಯದ ಅರಸರಿಗೂ ವಿಜಯನಗರದ ಅರಸರಿಗೂ ನಿರಂತರ ಯುದ್ಧ ವೊದಗಿತು.

ಅತ್ತ ಢಿಲ್ಲಿಯ ಸಾಮ್ರಾಜ್ಯವು ತೈಮೂರಲಂಗನ ಹಾವಳಿಗೊಳಗಾಗಿ ಹದಿನೈದನೇ ಶತಮಾನದ ಆರಂಭದಲ್ಲಿ ತೀರಾ ಕ್ಷೀಣವಾಗಿ ಹೋಯಿತು.

ವಿಜಯನಗರದ ಸಂಗಮ ವಂಶದ ಅರಸರಲ್ಲಿ ಕ್ರಿ. ಶಕ ೧೪೧೯ರಲ್ಲಿ ಪಟ್ಟವನ್ನೇರಿದ ೨ನೇ ದೇವರಾಯನ ಕಾಲವು ಅತ್ಯಂತ ವೈಭವದ್ದಾಗಿತ್ತು. ಇಟಲಿ ದೇಶದ ಪ್ರವಾಸಿಯೊಬ್ಬನೂ ಇರಾಣಿನ ರಾಯಭಾರಿಯಾದ ಅಬ್ದುಲ್ ರಜಾಕನೆಂಬವನೂ ಆ ಕಾಲದ ವಿಜಯನಗರ ಸಾಮ್ರಾಜ್ಯದ ವೈಭವವನ್ನು ವರ್ಣಿಸಿರುತ್ತಾರೆ. ಅಬ್ದುಲ್ ರಜಾಕನು ಮಂಗಳೂರಿನಲ್ಲಿಳಿದು,- ಪೊಳಲಿ, ಬಂಟವಾಳ, ನಾವೂರು, ಸರಪಾಡಿ, ಉಪ್ಪಿನಂಗಡಿಗಳನ್ನು ಸುತ್ತಿ,- ಬೆಳ್ತಂಗಡಿ ದಾರಿಯಾಗಿ ಘಟ್ಟ ಹತ್ತಿ, ವಿಜಯನಗರವನ್ನು ಮುಟ್ಟಿದನು. ಮಂಗಳೂರಿನಲ್ಲಿ ಆಗ ಬಂಗ ಅರಸನು ವಿಜಯನಗರದ ಸಾಮಂತನಾಗಿ ಆಳುತ್ತಿದ್ದನು. ದೇಶವೆಲ್ಲಾ ಶಾಂತಿಯಿಂದ ತುಂಬಿ, ಜನರು ಸುಖದಲ್ಲಿರುತ್ತಿದ್ದರು. ಅಬ್ದುಲ್ ರಜಾಕನು ಪೊಳಲಿ ದೇವಾಲಯದಲ್ಲಿ ಒಂದು ಮನುಷ್ಯನಷ್ಟು ಎತ್ತರದ ಹೊನ್ನಿನ ಪ್ರತಿಮೆಯನ್ನು ಕಂಡೆನಾಗಿ ಬರೆದಿರುತ್ತಾನೆ. ಅದು ಕಂಚಿನದ್ದಾಗಿರಬಹುದು.

೨ನೇ ದೇವರಾಯನ ಕಾಲದಲ್ಲಿ ಕಾರ್ಕಳದ ಭೈರವ ವೀರಪಾಂಡ್ಯ ಅರಸನು ಅದ್ಭುತ ಶಿಲಾಶಿಲ್ಪದ ಗೋಮಟೇಶ್ವರ ವಿಗ್ರಹವನ್ನು ವೈಭವದಿಂದ ಕಾರ್ಕಳದ ಬೆಟ್ಟದ ಮೇಲೆ ಪ್ರತಿಷ್ಠಿಸಿದನು. ೧೪೩೧ರಲ್ಲಾದ ಆ ಪ್ರತಿಷ್ಠೆಯ ಸಮಯ ಸಾಮ್ರಾಟನಾದ ೨ನೇ ದೇವರಾಯನು ಕಾರ್ಕಳಕ್ಕೆ ಬಂದಿದ್ದನು. ೨ನೇ ದೇವ ರಾಯನು ಕ್ರಿ. ಶಕ ೧೪೪೬ಲ್ಲಿ ಗತಿಸಿದ ಬಳಿಕ ಆತನ ಹಿರಿಯ ಮಗನಾದ ಮಲ್ಲಿಕಾರ್ಜುನನು ಸಿಂಹಾಸನವನ್ನೇರಿ ೨೧ ವರ್ಷ ರಾಜ್ಯವನ್ನಾಳಿದನು. ೧೪೬೭ಲ್ಲಿ ಅವನು ಕಾಲಾಧೀನನಾಗಿ ಅವನ ಮಲತಮ್ಮನಾದ ವಿರೂಪಾಕ್ಷನು ಪಟ್ಟಕ್ಕೇರಿದನು. ಅವನು ಸ್ತ್ರೀಲೋಲನೂ, ಅಮಲಖೋರನೂ ಆಗಿ ಪ್ರಜಾ ಕಂಟಕನಾದನು; ವಿಜಯನಗರ ಸಾಮ್ರಾಜ್ಯವು ಅವನ ಕಾಲದಲ್ಲಿ ಕ್ಷೀಣಿಸ ತೊಡಗಿದ್ದನ್ನು ಕಂಡು ಅವನ ಸಾಮಂತರಲ್ಲೊಬ್ಬನಾದ ಸಾಳುವ ನರಸಿಂಹನು ಉಳಿದ ಸಾಮಂತ ಸರದಾರರೊಡನಾಲೋಚಿಸಿ, ವಿರೂಪಾಕ್ಷನನ್ನು ಸಿಂಹಾಸನ ದಿಂದ ಹೊಡೆದೋಡಿಸಿ, ಸಂಗಮ ವಂಶವನ್ನು ಅಂತ್ಯಗೊಳಿಸಿದನು.

## ಸಾಳುವ ವಂಶ.

ಸಾಳುವ ನರಸಿಂಹನು ಅದರ ಬಳಿಕ ತಾನೇ ಪಟ್ಟಕ್ಕೇರಿ, ಅನ್ಯರ ವಶವಾದ ವಿಜಯನಗರ ಸಾಮ್ರಾಜ್ಯದ ಭಾಗಗಳನ್ನೆಲ್ಲಾ ಪುನಃ ಜೈಸಿ ಸಾಮ್ರಾಜ್ಯಕ್ಕೆ ಸೇರಿಸಿಕೊಂಡು, ವಿಜಯನಗರದ ಕೀರ್ತಿಯನ್ನು ಪುನಃ ಸ್ಥಾಪಿಸಿದನು.

ಸಾಳುವ ನರಸಿಂಹನು ೧೫ ವರ್ಷಗಳ ವರೆಗೆ (ಕ್ರಿ. ಶಕ ೧೪೭೮ರಿಂದ ೧೪೯೩) ಸಾಮ್ರಾಜ್ಯವನ್ನಾಳಿ ಕಾಲವಶನಾದನು. ಅವನ ಬಳಿಕ ಅವನ ವಂಶವು ಹೆಚ್ಚು ಕಾಲ ಬಾಳಲಿಲ್ಲ. ಸಾಳುವ ನರಸಿಂಹನ ಕೆಳಗೆ ಸೇನಾನಾಯಕನಾಗಿದ್ದ ತುಳುವ ನರಸಿಂಹನು ಕ್ರಿ. ಶಕ ೧೪೯೬ಲ್ಲಿ ಸಾಳುವ ನರಸಿಂಹನ ಮಗನನ್ನು ಮೂಲೆಗೊತ್ತಿ ಸಿಂಹಾಸನವನ್ನಾಕ್ರಮಿಸಿ ತಾನೇ ಆಳತೊಡಗಿದನು.

## ೩. ತುಳುವದ ಸ್ಥಿತಿಗತಿಗಳು

(೧೩೩೬ರಿಂದ ೧೪೯೬)

**ಕಂದಾಯ ಕ್ರಮ.** ಹರಿಹರನ ಕಂದಾಯ ಕ್ರಮುವನ್ನು ಸರ್. ತೋಮಸ್ ಮನ್ರೋವು ತಾನು ಕ್ರಿ. ಶಕ ೧೮೦೦ಲ್ಲಿ ಮದ್ರಾಸು ಸರಕಾರಕ್ಕೆ ಬರೆದ ಪತ್ರಗಳಲ್ಲಿ ಬಹಳ ಪ್ರಶಂಸಿಸಿರುತ್ತಾನೆ. ತುಳುವದಲ್ಲಿ ಅರಸರಿಗೆಂದೂ ಭೂಮ್ಲಾಲೀಕತನದ ಹಕ್ಕಿರಲಿಲ್ಲ. ಭೂಮಿಯು ರೈತನದ್ದೆಂದೂ ಅವನಿಂದ ಕಂದಾಯ ಪಡೆಯುವ ಹಕ್ಕು ಮಾತ್ರ ಅರಸನದ್ದೆಂದೂ ಮೊದಲೇ ನಿಶ್ಚಯವಾಗಿತ್ತು. ಅರಸನ ಕಂದಾಯವು ಸಾಗ್ವಳ್ಳಿಯಾದ ಭೂಮಿಯ ದಾಮಾಯಿಶೆಯಿಂದ ನಿಶ್ಚಯವಾಗುತ್ತಿತ್ತು. ಒಂದು ಗದ್ದೆಗೆ ಎರಡು ಮುಡಿ ಬೀಜ ಬಿತ್ತಲಿಕ್ಕೆ ಬೇಕಾಗಿದ್ದರೆ, ಅದರಿಂದ ಅರಸನಿಗೆ ಎರಡು ಮುಡಿ ಅಕ್ಕಿ ಕಂದಾಯ ಕೊಡಬೇಕಿತ್ತು. ಬಿತ್ತಿದ ಬೀಜದ ೧೨ ಪಾಲಷ್ಟು ಬೆಳೆ ದೊರಕುತ್ತದೆಂಬ ನಿಯಮಕ್ಕನುಸಾರವಾಗಿ ಈ ಕಂದಾಯವು ಹುಟ್ಟುವಳ್ಳಿಯ ಆರರಲ್ಲಿ ಒಂದಂಶವೆಂದು ಎಣಿಸಲಾಗುತ್ತಿತ್ತು.

ಹರಿಹರನು ಈ ಕಂದಾಯ ಕ್ರಮುವನ್ನು ಇನ್ನೂ ತಿದ್ದುಪಡಿಸಿದನು. ಬಿತ್ತಿದ ಬೀಜದ ಹನ್ನೆರಡು ಪಾಲು ಬೆಳೆಯೆಂಬ ಲೆಕ್ಕವನ್ನೇ ಆಧರಿಸಿ, ಭೂಮಿಗಳ ಹುಟ್ಟುವಳಿಯನ್ನು ಗೊತ್ತುಮಾಡಿ,– ಆ ಹುಟ್ಟುವಳಿಯಲ್ಲಿ ಮೂವತ್ತು ಪಾಲು ಮಾಡಿದನು:–

| | | |
|---|---|---|
| ಸರಕಾರಕ್ಕೆ | . . | ೭½ |
| ಕೃಷಿ ಮಾಡಿದವನಿಗೆ | | ೧೫ |
| ಭೂಮ್ಲಾಲಿಕರಿಗೆ | . | ೭½ |
| ಒಟ್ಟಿಗೆ | | ೩೦ |

ಈ ರೀತಿ ಪಾಲು ಮಾಡಿದನು. ಸರಕಾರದ ೭೫ ಲ್ಲಿ,–ಅರಸನಿಗೆ ೫, ಬ್ರಾಹ್ಮಣರಿಗೆ ೧೫, ದೇವಸ್ಥಾನಗಳಿಗೆ ೧ ಹೀಗೆ ಪಾಲಿದ್ದರೂ ಅದನ್ನೆಲ್ಲಾ ಸರಕಾರವೇ ಪಡೆದು, ದೇವಸ್ಥಾನಗಳಿಗೂ ಬ್ರಾಹ್ಮಣರಿಗೂ ಸರಕಾರದ ಕೋಶದಿಂದ ಹಂಚುವ ಸಾಂಪ್ರದಾಯವನ್ನು ಸ್ಥಾಪಿಸಿದನು. ಕಂದಾಯ ರಹಿತದಾಗಿ ತುಳುವ ಬ್ರಾಹ್ಮಣರು ಆ ತನಕ ಅನುಭವಿಸಿ ಬರುತ್ತಿದ್ದ ಭೂಮಿಗಳು ಈ ರೀತಿ ಕಂದಾಯಕ್ಕೊಳಗಾದವು.

ಹರಿಹರನ ಕಂದಾಯ ಕ್ರಮವು ತುಳುವದಲ್ಲಿ ೩ ಶತಮಾನಗಳ ತನಕ ನಡೆದು, ತುಳುವದ ಜನರಲ್ಲಿ ಸಂಪೂರ್ಣ ಸಂತೃಪ್ತಿಯನ್ನುಂಟುಮಾಡಿತು. ತುಳುವದ ಕೃಷಿಕರ ಸ್ಥಿತಿಯು ಅದರಿಂದಾಗಿ ಬಹಳ ಉತ್ಕೃಷ್ಟತೆಯನ್ನು ಹೊಂದಿ, ತುಳುವವು ಸಂಪತ್ತಿನ ಬೀಡಾಯಿತು. ವಿಜಯನಗರ ಅರಸರ ಕಾಲದಲ್ಲಿ ಬಿತ್ತಿದ ಬೀಜದ ಲೆಕ್ಕವನ್ನು ಕೂಡಾ ಸರಕಾರವು ಆಯಾಯ ರೈತರಿಂದಲೇ ಪಡೆಯುತ್ತಿದ್ದುದರಿಂದ ಜನರಿಗೆ ಯಾವ ತರದಿಂದಲಾದರೂ ಯಾವ ಕಂದಾಯ ಅಧಿಕಾರಿಗಳ ಬಾಧೆಯೂ ತಟ್ಟುತ್ತಿರಲಿಲ್ಲ.

## ತುಳು ಸಾಮಂತರು.

ತುಳು ಸಾಮಂತರ ಸ್ವಂತ ಆಸ್ತಿಗಳಿಗೆ ಕಂದಾಯವಿರಲಿಲ್ಲ. ಅವರು ಪ್ರಜೆಗಳಿಂದ ಸಲ್ಲಬೇಕಾದ ಕಂದಾಯವನ್ನು ಶೇಖರಿಸಿ, ಸ್ವಲ್ಪ ಪಾಲನ್ನು ತಮ್ಮ ಖರ್ಚಿಗಾಗಿ ಇಟ್ಟುಕೊಂಡು, ಉಳಿದ ಪಾಲನ್ನು ಸಾಮ್ರಾಟನಿಗೆ ಕಪ್ಪವಾಗಿ ಕೊಡಬೇಕಿತ್ತು. ಸಾಮಂತರಿಗೆಲ್ಲಾ ತಮ್ಮ ತಮ್ಮ ರಾಜ್ಯಗಳಲ್ಲಿ ಸಂಪೂರ್ಣ ಅಧಿಕಾರವಿತ್ತು. ಆ ಅಧಿಕಾರ ಪಾಲನೆಯಲ್ಲಿ ವಿಧಿಸಿದ ದಂಡಣೆಗಳಲ್ಲಿ ಸಾಮ್ರಾಟನಿಗೆ ಪಾಲಿರಲಿಲ್ಲ. ಸಾಮ್ರಾಟನು ಅಪೇಕ್ಷಿಸಿದಾಗ ಸಾಮಂತರು ತಮ್ಮ ಸೈನ್ಯಗಳೊಂದಿಗೆ ಬಂದು ಸಾಮ್ರಾಟನ ಸಹಾಯಕ್ಕೆ ಸೇರಬೇಕಿತ್ತಾದರೂ ತುಳುವದ ಸಾಮಂತರ ಪಾಲಿಗೆ ಅಂಥಾ ಸಹಾಯಮಾಡುವ ಸಂದರ್ಭಗಳೆದ್ದಂತೆ ತೋರುವುದಿಲ್ಲ. ತುಳುವದಲ್ಲಿ ಆ ತನಕ ಬಲ್ಲಾಳ ಬಲ್ಲಾಳರೊಳಗೂ ಗುತ್ತು ಗುತ್ತಿನವರಿಗೂ ನಿರಂತರ ಕದನಗಳು ತಪ್ಪುತ್ತಿರಲಿಲ್ಲವಾದ್ದರಿಂದ ಹರಿಹರನು ತುಳುವ ಸಾಮಂತರ ಬಲವನ್ನು ಕಾಪಾಡಿ, ತುಳುವದಲ್ಲಿ ಶಾಂತಿ ತಪ್ಪದಂತೆ ನೋಡುವ ಭಾರವನ್ನು ಅವರ ಮೇಲಿಟ್ಟನು. ತುಳುವವು ವಿಜಯನಗರದ ಕಾಲದಲ್ಲಿ, ಸಾಮ್ರಾಟನಿಗೆ ಕಂದಾಯವನ್ನು ಒಪ್ಪಿಸಿ,– ತನ್ನ ಎಂದಿನ ಜೀವನ ಕ್ರಮವನ್ನೇ ಆಚರಿಸಿಕೊಂಡಿತ್ತು.

## ವ್ಯಾಪಾರ, ವಾಣಿಜ್ಯ.

ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ ಬಳಿಕ ತುಳುವವು ವ್ಯಾಪಾರ, ವಾಣಿಜ್ಯಗಳಲ್ಲಿ ಮುಂದುವರಿಯಿತು. ವಿಜಯನಗರ ಸಾಮ್ರಾಟರ ಕೈಕೆಳಗೆ ದೇಶವಲ್ಲೆಲ್ಲಾ ಶಾಂತಿ ತುಂಬಿ, ಪ್ರಯಾಣದ ಸೌಕರ್ಯಗಳು ಹೆಚ್ಚಿದ್ದರಿಂದ ಜನರು ಸಾಮ್ರಾಜ್ಯದೊಳಗೆ ಅತ್ತಿತ್ತ ಪ್ರವಾಸವನ್ನು ಬೆಳೆಸಲಿಕ್ಕೂ ವ್ಯಾಪಾರವನ್ನು ಮಾಡಲಿಕ್ಕೂ ತುಂಬಾ ಅನುಕೂಲತೆಗಳು ದೊರಕಿದವು. ಮಂಗಳೂರು ದೊಡ್ಡ ಬಂದರವಾಗಿ ಬೆಳೆಯಿತು; ತುಳುವದ ಬೇರೆ ಬಂದರುಗಳಲ್ಲಿಯೂ ವ್ಯಾಪಾರವು ಹೆಚ್ಚಿತು. ತುಳುವದ ಹೊರ ವ್ಯಾಪಾರವೆಲ್ಲಾ ಮೊದಲು ಅರಬ್ಬೀ ಮೂರರ ಕೈಯಲ್ಲಿತ್ತು. ಪೊರ್ತುಗೀಸರು ಹಿಂದುಸ್ಥಾನಕ್ಕೆ ಬಂದ ಬಳಿಕ ಆದು ಅವರ ಕೈಗೆ ಸೇರಿತು.

## ೪. ತುಳುವ ವಂಶ

### (ಕ್ರಿ. ಶಕ ೧೪೯೬ ರಿಂದ ೧೫೬೭)

ತುಳುವ ನರಸಿಂಹನು ಸ್ಥಾಪಿಸಿದ ವಂಶಕ್ಕೆ ತುಳುವ ವಂಶವೆಂಬ ಹೆಸರು ಬಂದಿರುತ್ತದೆ. ಆದರೆ ತುಳುವಕ್ಕೂ ಆ ವಂಶಕ್ಕೂ ಸಂಬಂಧವೇನಿತ್ತೆಂಬದಿನ್ನೂ ಶೋಧನೆಯಾಗಿರುವುದಿಲ್ಲ.

ತುಳುವ ನರಸಿಂಹನು ಕ್ರಿ. ಶಕ ೧೫೦೪ಲ್ಲಿ ಕಾಲವಶನಾದ ಬಳಿಕ ಆತನ ಹಿರಿಯ ಮಗನಾದ ವೀರ ನರಸಿಂಹನು ೫ ವರ್ಷಗಳ ತನಕ ವಿಜಯನಗರ ಸಾಮ್ರಾಜ್ಯವನ್ನಾಳಿದನು. ಅವನ ಬಳಿಕ ಅವನ ಮಲತಮ್ಮನಾದ ಕೃಷ್ಣದೇವ ರಾಯನು ಪಟ್ಟಕ್ಕೇರಿದನು. ಕೃಷ್ಣದೇವ ರಾಯನು ಮಹಾ ಪ್ರತಾಪಿಯಾಗಿದ್ದು, ಅವನ ಕಾಲದಲ್ಲಿ (ಕ್ರಿ. ಶಕ ೧೫೦೯ ರಿಂದ ೧೫೩೦) ವಿಜಯನಗರದ ವೈಭವವು ಅತ್ಯಂತ ಉನ್ನತಿಯನ್ನೈದಿತು.

ಕ್ರಿ. ಶಕ ೧೩೪೭ಲ್ಲಿ ಕೃಷ್ಣಾನದಿಯ ಉತ್ತರಕ್ಕೆ ಸ್ಥಾಪಿತವಾದ ಬಾಹಮನೀ ರಾಜ್ಯವು ಸುಮಾರು ಕ್ರಿ. ಶಕ ೧೪೮೭ ವರ್ಷಕ್ಕೆ ಐದು ತುಂಡಾಗಿ ಬಿಜಾಪುರ, ಗೋವಳಕೊಂಡ, ಬೇರಾರು, ಅಹಮ್ಮದನಗರ, ಬೀಡಾರಗಳೆಂಬ ಐದು ಸ್ವತಂತ್ರ ರಾಜ್ಯಗಳೆದ್ದಿದ್ದವು. ಅವುಗಳಲ್ಲಿ ಬಲಿಷ್ಠವಾದ ಬಿಜಾಪುರ ರಾಜ್ಯವು ವಿಜಯನಗರಕ್ಕೆ ಸಮೀಪವಲ್ಲಿದ್ದು, ಬಿಜಾಪುರ ಸುಲ್ತಾನರಿಗೂ ವಿಜಯನಗರ

ಸಾಮ್ರಾಟರಿಗೂ ಹೋರಾಟವು ತಪ್ಪುತ್ತಿರಲಿಲ್ಲ. ಕೃಷ್ಣದೇವ ರಾಯನು ಬಿಜಾಪುರ ಸುಲ್ತಾನನನ್ನು ಸಂಪೂರ್ಣ ಸೋಲಿಸಿ ಆತನ ಬಲವನ್ನು ಮುರಿದನು.

ಕೃಷ್ಣದೇವರಾಯನು ತನ್ನ ಸಾಮ್ರಾಜ್ಯವನ್ನು ನಾಲ್ಕು ದಿಕ್ಕಿಗೂ ವಿಸ್ತರಿಸಿ,-ವಿದ್ಯೆ, ಕಲೆ, ವ್ಯಾಪಾರಗಳಿಗೆ ತುಂಬಾ ಪ್ರೋತ್ಸಾಹವನ್ನಿತ್ತು,-ವಿಜಯನಗರದ ಕೀರ್ತಿಯನ್ನು ನಾಗರೀಕ ಪ್ರಪಂಚದಲ್ಲೆಲ್ಲಾ ಪಸರಿಸಿ ಬಿಟ್ಟನು. ಉತ್ತರ ಹಿಂದುಸ್ಥಾನದಲ್ಲಿ ಮೊಗಲ್ ಬಾಬರನು ನುಗ್ಗಿ, ಢಿಲ್ಲಿಯ ಸಿಂಹಾಸನವನ್ನೇರುವಾಗ ಕೃಷ್ಣದೇವರಾಯನ ಆಳಿಕೆಯಲ್ಲಿದ್ದ ದಕ್ಷಿಣ ಹಿಂದುಸ್ಥಾನವು ಬಲಿಷ್ಠ ಹಿಂದೂ ಸಾಮ್ರಾಜ್ಯವಾಗಿತ್ತು.

ಕೃಷ್ಣದೇವರಾಯನು ಕ್ರಿ. ಶಕ ೧೫೩೦ ಲ್ಲಿ ಕಾಲವಶನಾದನು. ಅವನ ಬಳಿಕ ಅವನ ತಮ್ಮನಾದ ಅಚ್ಯುತ ರಾಯನು ೧೨ ವರ್ಷವಾಳಿದನು. ಆತನ ಕಾಲದಲ್ಲಿಯೇ ವಿಜಯನಗರ ಸಾಮ್ರಾಜ್ಯವು ಕ್ಷೀಣಿಸ ತೊಡಗಿತು. ಅವನ ಬಳಿಕ ಅವನ ಮಗನಾದ ವೆಂಕಟದೇವ ರಾಯನು ಸಿಂಹಾಸನವನ್ನೇರಿದನು. ಅವನನ್ನು ಅವನ ಮಂತ್ರಿಯಾದ ಸಾಳುಕ ತಿಮ್ಮನು ಕೊಂದು, ಸಿಂಹಾಸನವನ್ನಾಕ್ರಮಿಸ ಪ್ರಯತ್ನಿಸಿದನು. ಆದರೆ ಕೃಷ್ಣದೇವ ರಾಯನ ಅಳಿಯನಾದ ರಾಮರಾಯನು ಸಾಳುಕ ತಿಮ್ಮನನ್ನು ಜೈಸಿ, ಅಚ್ಯುತರಾಯನ ತಮ್ಮನ ಮಗನಾದ ಸದಾಶಿವರಾಯನನ್ನು ಸಿಂಹಾಸನಕ್ಕೇರಿಸಿ, ಅವನ ಹೆಸರಲ್ಲಿ ತಾನೇ ರಾಜ್ಯವಾಳ ತೊಡಗಿದನು. ರಾಮರಾಯನು ಶೂರನೂ ಚತುರನೂ ಆಗಿದ್ದನು. ಅವನು ಸಾಮ್ರಾಜ್ಯವನ್ನು ಭದ್ರಪಡಿಸಿ, ಬಾಹಮನೀ ರಾಜ್ಯಗಳ ಸುಲ್ತಾನರೊಬ್ಬೊಬ್ಬರನ್ನೇ ಹಣ್ಣುಗೊಳಿಸಿದನು. ಆದರೆ ಇದರಿಂದ ಕೊನೆಗೆ ಆ ಸುಲ್ತಾನರಲ್ಲಿ ಒಕ್ಕಟ್ಟುಂಟಾಗಿ, ಅವರು ಎಲ್ಲರೂ ಕೂಡಿ ಬಲಿಷ್ಠ ಸೈನ್ಯಗಳೊಂದಿಗೆ ವಿಜಯನಗರ ಸಾಮ್ರಾಜ್ಯದ ಮೇಲೆ ಸಾಗಿ ಬಂದರು. ರಕ್ಕಸತಂಗಡಿಗೆ ಎಂಬಲ್ಲಿ ಕ್ರಿ. ಶಕ ೧೫೬೫ನೇ ಜನವರಿಯಲ್ಲಿ ಉಭಯ ಪಕ್ಷಗಳೊಳಗೆ ಘೋರ ಕದನವು ನಡೆಯಿತು. ಆ ಕದನದಲ್ಲಿ ಹಿಂದುಗಳು ಶೌರ್ಯದಿಂದ ಹೋರಾಡಿದರೂ ಜಯಲಕ್ಷ್ಮಿಯು ವಿಜಯನಗರ ಧ್ವಜವನ್ನು ಬಿಟ್ಟುಹೋದಳು. ರಾಮರಾಯನು ಆ ಯುದ್ಧದಲ್ಲಿ ಮಡಿದು ಹೋದನು; ಹಿಂದುಗಳು ಮತಿಗೆಟ್ಟು, ವಿಜಯನಗರವನ್ನು ರಕ್ಷಿಸಿಕೊಳ್ಳುವ ವಿಚಾರವನ್ನು ಕೂಡ ಮಾಡದೆ ಹೋದರು. ಸಾಮ್ರಾಟನಾದ ಸದಾಶಿವರಾಯನನ್ನು ರಾಮರಾಯನ ತಮ್ಮನಾದ ತಿರುಮಲರಾಯನು ಪೆನುಕೊಂಡೆಗೆ ಕೊಂಡುಹೋಗಿ, ಅಲ್ಲಿ ಸಿಂಹಾಸನವನ್ನು ಸ್ಥಾಪಿಸಿದನು.

ವಿಜಯನಗರವು ಸುಲಭದಿಂದ ಮುಸ್ಲಿಮರ ಕೈವಶವಾಗಿ, ಅವರ ಕೈಯಿಂದ ಸಂಪೂರ್ಣ ನಾಶಹೊಂದಿತು. ಕ್ರಿ. ಶಕ ೧೫೭೦ ಲ್ಲಿ ಸದಾಶಿವರಾಯನನ್ನು ತಿರುಮುಲರಾಯನು ಕೊಲೆಮಾಡಿಸಿ, ತಾನು ಸಿಂಹಾಸನಕ್ಕೇರಿದನು. ತುಳುವ ವಂಶವು ಅಲ್ಲಿಗೆ ಅಂತ್ಯವಾಯಿತು.

## ೫. ಪೋರ್ತುಗೀಸರು

ಹಿಂದುಸ್ಥಾನಕ್ಕೆ ವ್ಯಾಪಾರಕ್ಕೆಂದು ಬಂದ ಯುರೋಪಿನ ಜನರಲ್ಲಿ ಪೊರ್ತುಗೀಸರೇ ಮೊದಲಿನವರು. ಅವರ ಶ್ರೀಮಂತರಲ್ಲೊಬ್ಬನಾದ ವಾಸ್ಕೋಡಿ ಗಾಮನು ಪಶ್ಚಿಮ ಯುರೋಪಿನಿಂದ, ಸಮುದ್ರ ದ್ವಾರಾ, ಹಿಂದುಸ್ಥಾನಕ್ಕೆ ಮುಟ್ಟಲಿಕ್ಕೆ ದಾರಿಯನ್ನು ಹುಡುಕುತ್ತಾ ಬಂದು, ಕ್ರಿ. ಶಕ ೧೪೯೮ನೇ ವರ್ಷದ ಮೇ ತಿಂಗಳಲ್ಲಿ ತನ್ನ ಹಡಗುಗಳೊಂದಿಗೆ ಕಲ್ಲಿಕೋಟೆ ಬಂದರವನ್ನು ಮುಟ್ಟಿದನು. ಹಿಂದುಸ್ಥಾನದ ಪಶ್ಚಿಮ ಕರಾವಳಿಯ ವ್ಯಾಪಾರವೆಲ್ಲಾ ಆಗ ಮುಸ್ಲಿಮ ಅರಬ್ಬೀ ಮೂರರ ಕೈಯಲ್ಲಿತ್ತು. ಪಶ್ಚಿಮ ಸಮುದ್ರದಲ್ಲಿ ಮೂರರ ಹಡಗುಗಳೇ ಇಲ್ಲಿಯ ಸರಕನ್ನು ಪಾಶ್ಚಾತ್ಯ ದೇಶಗಳಿಗೆ ಒಯ್ಯುವದೂ – ಪಾಶ್ಚಾತ್ಯ ದೇಶ ಗಳಿಂದ ಇಲ್ಲಿಗೆ ಸರಕನ್ನು ತರುವದೂ – ಇತ್ತು. ಪೊರ್ತುಗೀಸರು ಆ ವ್ಯಾಪಾರ ದಲ್ಲಿ ಭಾಗಿಯಾಗುವದು ಮೂರರಿಗೆ ಸಂತೋಷವಾಗಲಿಲ್ಲ. ಕಲ್ಲಿಕೋಟೆಯ ಸಾಮುದ್ರಿ ಅರಸನು ಮೂರರ ಪ್ರೇರಣೆಯಿಂದ ಪೊರ್ತುಗೀಸರಿಗೆ ಆಶ್ರಯವನ್ನು ಕೊಡದೆ ಇದ್ದುದರಿಂದ, ಪೊರ್ತುಗೀಸರು ಕೊನೆಗೆ ಕೊಚ್ಚಿ, ತಿರುವಾಂಕೂರು ಗಳಲ್ಲಿ ತಮ್ಮ ಭಂಡಸಾಲೆಗಳನ್ನು ಕಟ್ಟಿಸಬೇಕಾಯಿತು. ಪೊರ್ತುಗೀಸರಿಗೂ ಮುಸ್ಲಿಮರಾದ ಅರಬ್ ಮೂರರಿಗೂ ನಿರಂತರ ಯುದ್ಧ ನಡೆಯುತ್ತಿದ್ದುದರಿಂದ, ಅವರು ಮುಸ್ಲಿಮರನ್ನು ದ್ವೇಷಿಸುತ್ತಿದ್ದರು. ಕೃಷ್ಣದೇವರಾಯನು ಪೊರ್ತುಗೀಸ ರಿಗೆ ಸಹಾಯವನ್ನು ಮಾಡಿದ್ದರಿಂದ ಅವರು ಕ್ರಿ. ಶಕ ೧೫೨೦ಲ್ಲಿ ಅರಬ್ ಮೂರ ರನ್ನು ಸಂಪೂರ್ಣ ಸೋಲಿಸಿ, ಪಶ್ಚಿಮ ಕರಾವಳಿಯಲ್ಲೆಲ್ಲಾ ತಮ್ಮ ಅಧಿಕಾರ ವನ್ನು ಸ್ಥಾಪಿಸಿಕೊಂಡರು. ಕೃಷ್ಣದೇವರಾಯನಿಗೆ ಪೊರ್ತುಗೀಸರು ತುಂಬಾ ಸಹಾಯಕರಾಗಿದ್ದರು. ಅವರು ಯುದ್ಧಕ್ಕೆ ಬೇಕಾದ ಶಸ್ತ್ರಗಳನ್ನೂ ಕುದುರೆ ಗಳನ್ನೂ ಪರ್ಸಿಯಾ ವ ಇತರ ದೇಶಗಳಿಂದ ತಂದು, ಕೃಷ್ಣದೇವರಾಯನಿಗೆ ಒದಗಿಸುತ್ತಿದ್ದರು. ಆದರೆ ಅವುಗಳನ್ನು ಇಳಿಸಲಿಕ್ಕೆ ಯೋಗ್ಯವಾದ ಬಂದರು ಅವರಿಗೆ ಮೊದಲು ದೊರಕಲಿಲ್ಲ. ಗೋವೆಯು ಆಗ ಬಿಜಾಪುರ ಸುಲ್ತಾನನ

ರಾಜ್ಯದೊಳಗಿತ್ತು. ೧೫೧೦ ಲ್ಲಿ ಪೋರ್ತುಗೀಸರು ಗೋವೆಯ ಹಿಂದುಗಳ ಸಹಾಯದಿಂದ ಗೋವೆಯನ್ನು ಜೈಸಿ, ಅದನ್ನು ತಮ್ಮ ಮುಖ್ಯ ಬಂದರವಾಗಿಯೂ ತಮ್ಮ ಪೂರ್ವ ಸಾಮ್ರಾಜ್ಯದ ರಾಜಧಾನಿಯಾಗಿಯೂ ಮಾಡಿಕೊಂಡರು.

ಪೋರ್ತುಗೀಸರು ಕಡು ಮತಾಂಧರಾಗಿದ್ದು ಅವರು ಹೋದಲ್ಲೆಲ್ಲಾ ಕ್ರೈಸ್ತಮತ ಪ್ರಚಾರವನ್ನು ಮಾಡುತ್ತಿದ್ದರು. ಗೋವೆಯು ಅವರ ಕೈವಶವಾದ ಬಳಿಕ, ಅಲ್ಲಿ ಅನೇಕ ಶತಮಾನಗಳಿಂದ ವಾಸಿಸಿಕೊಂಡು ಬಂದ ಸಾರಸ್ವತ ಬ್ರಾಹ್ಮಣರು ವಿಜಯನಗರ ಸಾಮ್ರಾಜ್ಯದ ನಾನಾ ಕಡೆಗಳಿಗೆ ಹೋಗಿ ಸೇರ ತೊಡಗಿದರು.

ಕೃಷ್ಣದೇವ ರಾಯನ ಕಾಲದಲ್ಲಿ ತುಳುವದ ಬಸರೂರು, ಬಾರಕೂರು–ಮಂಗಳೂರುಗಳು ದೊಡ್ಡ ಬಂದರುಗಳಾಗಿದ್ದವು. ಪೋರ್ತುಗೀಸರು ಬಸರೂರು, ಮಂಗಳೂರುಗಳಿಂದ ಅರಬ್ ಮೂರರನ್ನು ಓಡಿಸಿ, ತಮ್ಮ ವ್ಯಾಪಾರದ ಕೇಂದ್ರಗಳನ್ನು ಅಲ್ಲಿ ಸ್ಥಾಪಿಸಿದರು. ಅವರು ತುಳುವದ ಕರಾವಳಿಯ ವ್ಯಾಪಾರವನ್ನೆಲ್ಲಾ ತಮ್ಮ ಅಧಿಕಾರದೊಳಗಿಟ್ಟುಕೊಂಡು ಎಲ್ಲಾ ಬಂದರುಗಳಿಂದಲೂ ಸುಂಕ ವಸೂಲ್ಮಾಡ ತೊಡಗಿದರು. ಬಸರೂರು, ಬಾರ್ಕೂರು, ಮೂಲ್ಕಿ, ಮಂಗಳೂರು, ಮಂಜೇಶ್ವರ, ಕುಂಬಳೆ ಬಂದರುಗಳಿಂದ ಅವರಿಗೆ ಒಟ್ಟಿಗೆ ಸುಮಾರು ಆರು ಸಾವಿರ ಮುಡಿಯಷ್ಟು ಅಕ್ಕಿ ಸುಂಕವಾಗಿ ಸಿಕ್ಕುತ್ತಿತ್ತು.

## ೬. ಸಾರಸ್ವತರು

ಸಾರಸ್ವತ ಬ್ರಾಹ್ಮಣರು ಉತ್ತರ ಹಿಂದುಸ್ಥಾನದ 'ಗೌಡ' ಬ್ರಾಹ್ಮಣರಾಗಿದ್ದು – ದ್ರಾವಿಡ ಬ್ರಾಹ್ಮಣರು ತುಳುವದಲ್ಲಿ ಸ್ಥಾಪನೆಯಾಗುವಾಗ ಗೋಮಾಂತಕದಲ್ಲಿ (ಗೋವೆಯಲ್ಲಿ) ತಾವು ನೆಲೆಗೊಂಡಿದ್ದರು. ಅವರು ಉತ್ತರ ಹಿಂದುಸ್ಥಾನದವರಾದ್ದರಿಂದ ದ್ರಾವಿಡ ಭೂಮಿಯಲ್ಲಿ ಅವರಿಗೆ ತಮ್ಮ ವೈದಿಕ ವೃತ್ತಿಗಳಿಂದ ಜೀವನವನ್ನು ನಡೆಸ ಸಾಧ್ಯವಾಗದೆ, ಗೋವೆಯಲ್ಲಿ ಸೇರಿಕೊಂಡ ಬಳಿಕ ಅವರು ವ್ಯಾಪಾರದಲ್ಲಿ ಸೇರಿಕೊಂಡಿದ್ದರು. ಅವರು ಅನೇಕ ಶತಮಾನಗಳ ಕಾಲ, ಗೋವೆಯಲ್ಲಿ, ಹಿಂದೂ ಅರಸರ ಕೆಳಗೆ ನಿಶ್ಚಿಂತರಾಗಿ ಜೀವಿಸಿಕೊಂಡು ಅಲ್ಲಿ ತಮ್ಮ ದೇವಾಲಯಗಳನ್ನು ಕಟ್ಟಿಕೊಂಡು, ವ್ಯಾಪಾರದಿಂದ ಐಶ್ವರ್ಯವಂತರಾಗಿದ್ದರು. ಅವರ ಸುಖಶಾಂತಿಗಳಿಗೆ ಹದಿಮೂರನೇ ಶತಮಾನದ

ಅಂತ್ಯದಲ್ಲಿ ಮುಸ್ಲಿಮರ ದಾಳಿಗಳಿಂದ ಅವಸಾನ ಒದಗಿತು. ಗೋವೆಯು ಮುಸ್ಲಿಮ್ ಅರಸರ ಕೆಳಗಾಯಿತು. ಆದರೆ ಮುಸ್ಲಿಮ್ ಅರಸರ ಕೆಳಗೆ ಸಾರಸ್ವತ ಬ್ರಾಹ್ಮಣರ ವರ್ಚಸ್ಸು ಕಡಿಮೆಯಾದರೂ ಅವರು ತಮ್ಮ ಧರ್ಮ, ತಮ್ಮ ವ್ಯಾಪಾರಗಳನ್ನು ಕಾಪಾಡಿಕೊಂಡು, ಕ್ರಿ. ಶಕ ೧೫೧೦ ರ ತನಕ ಗೋವೆಯನ್ನು ಬಿಡದೆ ಅಲ್ಲಿಯೇ ಜೀವಿಸಿಕೊಂಡಿದ್ದರು. ಪೋರ್ತುಗೀಸರು ಗೋವೆಯನ್ನು ಸ್ವಾಧೀನಪಡಿಸಿಕೊಂಡ ಬಳಿಕ, ಅವರ ವ್ಯಾಪಾರವೂ ಕುಂದ ತೊಡಗಿ, ಅವರ ಧರ್ಮಕ್ಕೂ ಕೇಡು ಬರ ತೊಡಗಿದ್ದರಿಂದ ಅವರು ಗೋವೆಯನ್ನು ಬಿಟ್ಟು, ವಿಜಯನಗರ ಸಾಮ್ರಾಜ್ಯದಲ್ಲೆಲ್ಲಾ ಚದರಿ ಅಲ್ಲಲ್ಲಿ ವಾಸ್ತವಿಸಿಕೊಂಡಿರ ತೊಡಗಿದರು.

ಸಾರಸ್ವತ ಬ್ರಾಹ್ಮಣರು ಮೊದಲು ಸ್ಮಾರ್ತರಾಗಿದ್ದರು. ಆದರೆ ಶ್ರೀ ಮಧ್ವಾಚಾರ್ಯರು ತಮ್ಮ ಉತ್ತರ ದಿಗ್ವಿಜಯದ ನಡುವೆ ಗೋವೆಗೆ ಬಂದು, ಅಲ್ಲಿ ಉಳಕೊಂಡು ಹಲವು ಸಾರಸ್ವತ ಬ್ರಾಹ್ಮಣ ಕುಟುಂಬಗಳನ್ನು ತಮ್ಮ ದ್ವೈತ ಸಿದ್ಧಾಂತದ ವೈಷ್ಣವ ಮತಕ್ಕೆ ಸೇರಿಸಿಕೊಂಡಿದ್ದರು. ಸಾರಸ್ವತರಲ್ಲಿ ವೈಷ್ಣವರು ಹೆಚ್ಚಾಗಿ ವ್ಯಾಪಾರಸ್ಥರೇ ಆಗಿದ್ದು ಅವರಿಗೆ ತುಳುವದ ಪರಿಚಯವಿತ್ತು. ತುಳುವದಲ್ಲಿ ಆಳುತ್ತಿದ್ದ ಜೈನ ಸಾಮಂತರಾದ ಕಾರ್ಕಳದ ಭೈರರಸ ಒಡೆಯರೂ, ಮೂಲ್ಕಿಯ ಸಾವಂತರೂ, ಬಂಟವಾಳ ಮಂಗಳೂರುಗಳನ್ನಾಳುತ್ತಿದ್ದ ಬಂಗ ರಾಜರೂ ಅವರಿಗೆ ಆಶ್ರಯವನ್ನು ಕೊಟ್ಟದ್ದರಿಂದ, ವೈಷ್ಣವ ಸಾರಸ್ವತರಲ್ಲನೇಕರು ಆ ಸಾಮಂತ ರಾಜ್ಯಗಳಲ್ಲಿ ಬಂದು ಉಳಕೊಂಡು, ಅಲ್ಲಿ ವ್ಯಾಪಾರದಿಂದ ಜೀವನ ಮಾಡಿಕೊಂಡಿರ ತೊಡಗಿದರು. ತುಳುವದ ದ್ರಾವಿಡ ಬ್ರಾಹ್ಮಣರು ಅವರನ್ನು ತಮ್ಮೊಂದಿಗೆ ಸೇರಿಸಿಕೊಳ್ಳಲಿಲ್ಲ. ಅವರು ತಮ್ಮ ಪ್ರತ್ಯೇಕ ದೇವಾಲಯಗಳನ್ನು ಅಲ್ಲಲ್ಲಿ ಕಟ್ಟಿಕೊಂಡು, ಪ್ರತ್ಯೇಕ ಸಮಾಜವಾಗಿದ್ದರು. ಅವರಲ್ಲಿ ಹೆಚ್ಚಿನ ಮಂದಿ ಕಾರ್ಕಳ, ಮೂಲ್ಕಿಗಳಲ್ಲಿ ಸೇರಿಕೊಂಡರೆಂದು ತೋರುತ್ತದೆ, ಅಲ್ಲಿಯ ಜೈನ ಅರಸರು ಅವರಿಗೆ ದೇವಾಲಯಗಳನ್ನು ಕಟ್ಟಿಸಲಿಕ್ಕೆ ಉದಾರಾಶ್ರಯವನ್ನಿತ್ತರು. ಅವರಿದ್ದಲ್ಲೆಲ್ಲಾ ವ್ಯಾಪಾರದ ಕ್ಷೇತ್ರಗಳು ಬೆಳೆದು, ಪೇಟೆಗಳೂ ಪಟ್ಟಣಗಳೂ ತಲೆದೋರಿದವು.

## ೭. ಕ್ರೈಸ್ತ ಮತಪ್ರಚಾರ

ಪೋರ್ತುಗೀಸರು ತುಳುವಕ್ಕೆ ಬರುವ ಮೊದಲು, ತುಳುವದಲ್ಲಿ ಕ್ರೈಸ್ತ ಮತವು ಎಲ್ಲಿಯೂ ಬೇರೂರಿದ್ದಂತೆ ತೋರುವುದಿಲ್ಲ. ಪೋರ್ತುಗೀಸರು ಬಂದ

ಬಳಿಕ, ಕ್ರೈಸ್ತ ಪಾದರಿಗಳು ತುಳುವದಲ್ಲಿ ಮತಪ್ರಚಾರವನ್ನು ಪ್ರಾರಂಭಿಸಿದರು. ವಿಜಯನಗರದಲ್ಲಿ ಬಲಿಷ್ಠ ಹಿಂದೂ ಸಾಮ್ರಾಟರಿರುವ ತನಕ ಪೋರ್ತುಗೀಸರ ಮತಭ್ರಾಂತಿಯು ಮೇರೆತಪ್ಪಲಿಲ್ಲ. ರಕ್ಕಸತಂಗಡಿಯ ಬಳಿಕ ಅದು ಮೇರೆತಪ್ಪಿ, ಗೋವೆಯಲ್ಲಿರುವ ಎಲ್ಲಾ ಹಿಂದುಗಳನ್ನು ಕ್ರೈಸ್ತ ಮತಕ್ಕೆ ಸೇರಿಸುವ ಪ್ರಯತ್ನಗಳು ನಡೆದವು. ಗೋವೆಯಲ್ಲಿ ಇನ್ನೂ ಉಳಿದಿದ್ದ ವೈಷ್ಣವ ಸಾರಸ್ವತರೂ ಸ್ಮಾರ್ತ ಸಾರಸ್ವತರೂ ಇದರ ದೆಸೆಯಿಂದಾಗಿ ಗೋವೆಯನ್ನು ತಂಡ ತಂಡಗಳಾಗಿ ಬಿಟ್ಟು ಪಲಾಯನರಾದರು. ಸ್ಮಾರ್ತ ಸಾರಸ್ವತರು ನೆಲದಾರಿಯಾಗಿ ಬಂದು, ಹೆಚ್ಚಾಗಿ ಉತ್ತರ ಕನ್ನಡದಲ್ಲಿಯೂ ಕುಂದಾಪುರ, ಬಸರೂರುಗಳ ಸುತ್ತಲೂ ಸೇರಿಕೊಂಡರು. ವೈಷ್ಣವ ಸಾರಸ್ವತರು ಮೊದಲೇ ತಮ್ಮವರಿದ್ದ ಮೂಲ್ಕಿ, ಕಾರ್ಕಳ, ಬಂಟವಾಳ, ಮಂಗಳೂರು, ಮಂಜೇಶ್ವರ ಮೊದಲಾದ ಪಟ್ಟಣಗಳಲ್ಲಿ ಸೇರಿಕೊಂಡರು.

---

# ಅಧ್ಯಾಯ ೧೧

**೧. ವಿಜಯನಗರದ ಅರವೀಡು ವಂಶ. ೨. ಇಕ್ಕೇರಿಯ ಅರಸರು (೧೭೧೫ ರ ತನಕ). ೩. ಪೋರ್ತುಗೀಸರೂ ಇಂಗ್ಲೀಷರೂ. ೪. ಇಕ್ಕೇರಿ ವಂಶದ ಕೊನೆಗಾಲ. ೫. ತುಳುವದ ಸ್ಥಿತಿ.**

## ೧. ಅರವೀಡು ವಂಶ

ರಕ್ಕಸತಂಗಡಿಯ ಯುದ್ಧದ ಬಳಿಕ ವಿಜಯನಗರ ಸಾಮ್ರಾಜ್ಯವು ಸಂಪೂರ್ಣ ಕಳೆಗುಂದಿತು. ಕ್ರಿ. ಶಕ ೧೫೬೭ ಲ್ಲಿ ತಿರುಮಲರಾಯನು ತುಳುವ ವಂಶದ ಸದಾಶಿವರಾಯನ ಕೊಲೆಮಾಡಿಸಿ ತಾನೇ ಸಿಂಹಾಸನವನ್ನೇರಿದನು. ಆ ತಿರುಮಲರಾಯನ ಹಿರಿಯನೊಬ್ಬನು ಅರವೀಟಿ ಬುಕ್ಕರಾಯನೆಂದಿದ್ದನು. ತಿರುಮಲರಾಯನ ವಂಶಕ್ಕೆ ಇದರಿಂದಾಗಿ ಚರಿತ್ರೆಯಲ್ಲಿ ಅರವೀಡು ವಂಶವೆಂಬ ಹೆಸರು ಬಂದಿರುತ್ತದೆ.

ಈ ವಂಶದಲ್ಲಿ ಐದು ಜನ ಅರಸರು ಆಳಿದರು:-(೧) ಕ್ರಿ. ಶಕ ೧೫೬೭ ರಿಂದ ೧೫೭೫ – ತಿರುಮಲರಾಯ. (೨) ೧೫೭೫ ರಿಂದ ೧೫೮೬ – ತಿರುಮಲ

ರಾಯನ ಮಗ ೧ನೇ ಶ್ರೀರಂಗ. (೩) ೧೫೮೬ ರಿಂದ ೧೬೧೫ – ವೀರ ವೆಂಕಟ ಪತಿರಾಯ (ಶ್ರೀರಂಗನ ತಮ್ಮ). (೪) ೧೬೧೫ ರಿಂದ ೧೬೨೬ – ೨ನೇ ಶ್ರೀ ರಂಗ. (೫) ೧೬೨೬ ರಿಂದ ೧೬೪೦ – ೨ನೇ ವೆಂಕಟಪತಿರಾಯ. ೧೬೧೫ ರ ಬಳಿಕ ವಿಜಯನಗರದ ಮಾಂಡಲಿಕರೆಲ್ಲರೂ ಸ್ವತಂತ್ರರಾದರು. ೧೬೬೪ ಲ್ಲಿ ಆ ರಾಜ ವಂಶದ ಹೆಸರು ಸಹಾ ಅಡಗಿ ಹೋಯಿತು.

ವೀರ ವೆಂಕಟಪತಿರಾಯನ ಕಾಲದಲ್ಲಿ ಸಾಮ್ರಾಜ್ಯದ ರಾಜಧಾನಿಯನ್ನು ಪೆನುಗೊಂಡೆಯಿಂದ ಚಂದ್ರಗಿರಿಗೆ ಒಯ್ದಿದ್ದರು. ಅದರ ಬಳಿಕ ವಿಜಯನಗರ ಅರಸರಿಗೆ ಚಂದ್ರಗಿರಿಯ ಅರಸರೆಂಬ ಹೆಸರು ಬಂತು. ಅವರಿಂದಲೇ ಇಂಗ್ಲೀಷರು ಕ್ರಿ. ಶಕ ೧೬೩೯ ಲ್ಲಿ ಮದ್ರಾಸಿನ ಪೋರ್ಟುಸೆಂಟ ಜಾರ್ಜ ಎಂಬ ಕೋಟೆಯನ್ನು ಕಟ್ಟಲಿಕ್ಕೆ ಸ್ಥಳವನ್ನು ಪಡೆದ್ದಾಗಿರುತ್ತದೆ.

## ೨. ಇಕ್ಕೇರಿಯ ಅರಸರು

ಅರವೀಡು ವಂಶದ ಅರಸರು ಆಳುತ್ತಿರುವಾಗ ತುಳುವವು ವಿಜಯನಗರ ಸಾಮ್ರಾಟರ ಕೈಯಿಂದ ತಪ್ಪಿ, ಕೆಳದಿಯ ಅರಸರ ಕೆಳಗೆ ಆ ಸಾಮ್ರಾಜ್ಯದಿಂದ ಹೊರಗಾಯಿತು. ಕೆಳದಿಯ ಅರಸರಿಗೆ ಇಕ್ಕೇರಿಯ ಅರಸರೆಂದೂ ಚರಿತ್ರೆಯಲ್ಲಿ ಹೆಸರು ಬಂದಿರುತ್ತದೆ. ಅವರು ಕ್ರಿ. ಶಕ ೧೫೬೫ ರಿಂದ ಕ್ರಿ. ಶಕ ೧೭೬೩ ರ ತನಕ ಸುಮಾರು ಇನ್ನೂರು ವರ್ಷ ಕಾಲ ತುಳುವದ ಅಧಿರಾಜರಾಗಿದ್ದರು.

**ಮೂಲ.** ಮೈಸೂರು ಸಂಸ್ಥಾನದ ವಾಯುವ್ಯ ಪಾರ್ಶ್ವದಲ್ಲಿ ತುಂಗ ಭದ್ರೆಯ ಉಪನದಿಯಾದ ವರದಾನದಿಗೆ ಸಮೀಪ ಕೆಳದಿ ಎಂಬ ಗ್ರಾಮವಿದೆ. ಅಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ಭದ್ರಪ್ಪ, ಚೌಡಪ್ಪ ಎಂಬ ಇಬ್ಬರು ವೀರಶೈವ (ಲಿಂಗವಂತ) ಸಹೋದರರಿದ್ದರು. ಅವರಿಗೆ ದೈವಯೋಗದಿಂದ ದೊಡ್ಡದೊಂದು ನಿಧಿಯು ಸಿಕ್ಕಿ, ಅವರು ಅಲ್ಲಿ ಪ್ರಬಲರಾದರು. ಕೃಷ್ಣದೇವ ರಾಯನು ಅವರ ಸಂಗತಿಗಳನ್ನೆಲ್ಲಾ ಕೇಳಿ, ಅವರನ್ನು ತನ್ನ ಸಮ್ಮುಖಕ್ಕೆ ಕರೆಯಿಸಿಕೊಂಡು, ಅವರಿಗೆ ಬಿರುದು ಉಡುಗೊರೆಗಳನ್ನು ಕೊಟ್ಟು, ರಾಜ ಕಾರ್ಯಕ್ಕೆ ಅವರು ಸಹಾಯಕರಾಗುವಂತೆ ಅವರನ್ನೊಡಂಬಡಿಸಿದನು. ಅವರಿಗೆ ವಂಶಪಾರಂಪರ್ಯವಾಗಿ ಅನುಭವಿಸಲಿಕ್ಕೆ ಚಂದ್ರಗುತ್ತಿ, ಕೆಳದಿ, ಇಕ್ಕೇರಿ ಮೊದಲಾದ ೮ ಮಾಗಣೆಗಳನ್ನೂ ಕೃಷ್ಣದೇವರಾಯನು ಕೊಟ್ಟದ್ದರಿಂದ ಕ್ರಿ. ಶಕ ೧೫೦೦ ಲ್ಲಿ ಚೌಡಪ್ಪನಿಗೆ ಕೆಳದಿಯಲ್ಲಿ ಪಟ್ಟಾಭಿಷೇಕವಾಯಿತು.

ಕ್ರಿ. ಶಕ ೧೫೧೨ಲ್ಲಿ ಚೌಡಪ್ಪನು ಇಕ್ಕೇರಿಯನ್ನು ರಾಜಧಾನಿಯಾಗಿ ಮಾಡಿಕೊಂಡು, ಅಲ್ಲಿ ಅರಮನೆಯನ್ನು ಕಟ್ಟಿಸಿದನು. ಕ್ರಿ. ಶಕ ೧೫೧೪ಲ್ಲಿ ಅವನು ಕಾಲವಶನಾಗಿ ಅವನ ಮಗನಾದ ಸದಾಶಿವ ನಾಯಕನು ಇಕ್ಕೇರಿಯ ಸಿಂಹಾಸನವನ್ನೇರಿದನು. ಸದಾಶಿವ ನಾಯಕನು ಕೃಷ್ಣದೇವರಾಯನ ಅಚ್ಚು ಮೆಚ್ಚಿನ ಭೃತ್ಯನಾಗಿ ರಾಜಕಾರ್ಯಗಳಲ್ಲಿ ತುಂಬಾ ಸಹಾಯಕನಾಗಿದ್ದನು. ಅವನು ಕ್ರಿ. ಶಕ ೧೫೪೯ ಲ್ಲಿ ಕಾಲವಶನಾದ ಬಳಿಕ, ದೊಡ್ಡ ಸಂಕಣ್ಣನು ಕ್ರಿ. ಶಕ ೧೫೫೯ ರ ತನಕ ಆಳಿದನು. ಆ ಮೇಲೆ ಅವನ ತಮ್ಮನಾದ ಚಿಕ್ಕ ಸಂಕಣ್ಣನು ಇಕ್ಕೇರಿಯ ಅರಸನಾದನು. ಅವನು ೧೨ ವರ್ಷ ಆಳಿದನು. ಅವನನ್ನು ಆಗ ವಿಜಯನಗರ ಸಾಮ್ರಾಟನಾದ ಸದಾಶಿವರಾಯನು ತುಳುವದ ಮಂಡಲೇಶ್ವರನಾಗಿ ನೇಮಿಸಿದನು. ವಿಜಯನಗರ ಸಾಮ್ರಾಜ್ಯವು ರಕ್ಕಸತಂಗಡಿಯ ಕಾಳಗದಲ್ಲಿ ಕಳೆಗುಂದಿದ ಬಳಿಕ, ಚಿಕ್ಕ ಸಂಕಣ್ಣ ನಾಯಕನು ಸ್ವತಂತ್ರ ರೀತಿಯಿಂದ ತನ್ನ ಆ ರಾಜ್ಯವನ್ನು ಆಳಲಾರಂಭಿಸಿದನು. ಚಿಕ್ಕ ಸಂಕಣ್ಣನ ಬಳಿಕ ೧೫೭೧ ರಿಂದ ೧೫೮೩ ರ ತನಕ ದೊಡ್ಡ ಸಂಕಣ್ಣನ ಮಗನಾದ ರಾಮರಾಜ ನಾಯಕನೂ ೧೫೮೩ ರಿಂದ ೧೬೩೦ ರ ತನಕ ರಾಮರಾಜ ನಾಯಕನ ತಮ್ಮನಾದ ಹಿರಿಯ ವೆಂಕಟಪ್ಪ ನಾಯಕನೂ ಇಕ್ಕೇರಿಯ ಅರಸರಾಗಿ ಆಳಿದರು.

## ಹಿರಿಯ ವೆಂಕಟಪ್ಪ ನಾಯಕ (ಕ್ರಿ ಶಕ ೧೫೮೩ ರಿಂದ ೧೬೩೦)

ವಿಜಯನಗರದ ಪತನದ ಬಳಿಕ ತುಳುವದ ಸಾಮಂತರೆಲ್ಲರೂ ಕಪ್ಪ ಕೊಡುವುದನ್ನು ನಿಲ್ಲಿಸಿ, ಸ್ವತಂತ್ರ ರೀತಿಯಿಂದ ವರ್ತಿಸ ತೊಡಗಿದ್ದರು. ಕಾರ್ಕಳದ ಭೈರರಸ ಒಡೆಯನಾದ ದಾವಣಿ ಇಮ್ಮಡಿ ಭೈರವರಾಯನು ವೇಣೂರಿನ ಅಜಿಲರೊಂದಿಗೂ ಮೂಡಬಿದರೆಯ ಚೌಟರೊಡನೆಯೂ, ಬಂಗ ರಾಜನೊಡನೆಯೂ ನಿರಂತರ ಕಾದಾಡುತ್ತಿದ್ದು, ತುಳುವದ ಉಳಿದ ಸಾಮಂತ ಅರಸರ ದ್ವೇಷವನ್ನು ಸಂಪಾದಿಸಿಕೊಂಡಿದ್ದನು. ಕೊನೆಗೆ ಆ ದಾವಣಿ ಇಮ್ಮಡಿ ಭೈರವರಾಯನು ಚೌಟ ರಾಣಿಯಾದ ತಿರುಮಲಾ ದೇವಿಯನ್ನು ಯುದ್ಧದಲ್ಲಿ ಸೋಲಿಸಿ, ಅವಳನ್ನು ಕೊಂದು, ಅವಳ ತಲೆಯನ್ನು ಕಡಿದು ಶೂಲಕ್ಕೆ ಹಾಕಿದನು. ಆ ಘೋರ ಕೃತ್ಯದ ಸೇಡನ್ನು ತೀರಿಸಲಿಕ್ಕಾಗಿ ಅವಳ ಮಗನಾದ ಚಿಕ್ಕ ರಾಯ ಚೌಟನೂ ಅವಳ ಸಂಬಂಧಿಕನಾದ ಸುರಾಲದ ತೋಳಾರ ಅರಸನೂ ಇಕ್ಕೇರಿಗೆ ಹೋಗಿ, ವೆಂಕಟಪ್ಪ ನಾಯಕನೊಡನೆ ದೂರನ್ನು ಕೊಟ್ಟು, ಭೈರವ

ರಾಯನನ್ನು ಶಿಕ್ಷಿಸಬೇಕಾಗಿ ಅವನೊಡನೆ ಹೇಳಿಕೊಂಡರು. ಕ್ರಿ. ಶಕ ೧೬೦೮ರಷ್ಟಕ್ಕೆ ವೆಂಕಟಪ್ಪನಾಯಕನು ದೊಡ್ಡ ಸೈನ್ಯದೊಂದಿಗೆ ತುಳುವಕ್ಕಿಳಿದು, ಇಮ್ಮಡಿ ಭೈರವರಾಯನನ್ನು ಸೋಲಿಸಿ, ಆತನ ರಾಜ್ಯವನ್ನು ತನ್ನ ಸ್ವಾಧೀನ ಪಡಿಸಿಕೊಂಡನು.

ಅದರ ಬಳಿಕ ವೆಂಕಟಪ್ಪ ನಾಯಕನು ಮಂಗಳೂರಿಗೆ ಬಂದು, ತುಳುವದ ಸಾಮಂತ ಅರಸರನ್ನೆಲ್ಲಾ ಅಲ್ಲಿ ಬರಮಾಡಿ, ಅವರು ಕಪ್ಪ ಕೊಡತಕ್ಕ ಹಣವನ್ನು ನಿಶ್ಚಯಮಾಡಿದನು. ಮೂಲ್ಕಿಯ ಸಾವಂತನು ಮಂಗಳೂರಿಗೆ ಬರಲಿಲ್ಲ. ವೆಂಕಟಪ್ಪ ನಾಯಕನು ಅವನ ರಾಜ್ಯಕ್ಕೆ ಹೋಗಿ ಅವನನ್ನು ಜೈಸಿದ್ದರಿಂದ ಅವನೂ ಕಪ್ಪ ಕೊಡಲಿಕ್ಕೆ ಒಪ್ಪಿ, ವೆಂಕಟಪ್ಪ ನಾಯಕನೊಡನೆ ಕೌಲುಮಾಡಿಕೊಂಡನು. ವೆಂಕಟಪ್ಪ ನಾಯಕನು ಮೂಲ್ಕಿಯಿಂದ ಬಾರಕೂರಿಗೆ ಹೋಗಿ ಸುರಾಲದ ತೋಳಾರರ ಮತ್ತು ಭಟ್ಕಳ ರಾಣಿಯಾದ ಭೈರಾದೇವಿಯರೊಡನೆ ಕೌಲುಮಾಡಿಕೊಂಡು ಕೊಲ್ಲೂರಿಗೆ ಹೋಗಿ, ಅಲ್ಲಿಂದ ಇಕ್ಕೇರಿಗೆ ಮರಳಿದನು.

ವೆಂಕಟಪ್ಪ ನಾಯಕನು ತುಳುವದ ಎಲ್ಲಾ ಕಡೆಗಳಲ್ಲಿಯೂ ಆಗ ಪ್ರಬಲವಾಗುತ್ತಿದ್ದ ಪೊರ್ತುಗೀಸರ ಹಾವಳಿಯನ್ನು ತಡೆಸಲಿಕ್ಕಾಗಿಯೂ ರಾಜ್ಯದ ಶಾಂತಿಯನ್ನು ಕಾಪಾಡಲಿಕ್ಕಾಗಿಯೂ ತುಂಬಾ ಕೋಟೆಗಳನ್ನು ಕಟ್ಟಿಸಿದನು. ಆ ಕೋಟೆಗಳಲ್ಲಿ "ರಾಮರಾಜ ಕ್ಷತ್ರಿಯ" ಸೈನಿಕರನ್ನಿಟ್ಟನು.

ಕ್ರಿ. ಶಕ ೧೬೧೮ರಲ್ಲಿ ತುಳುವದಲ್ಲಿ ಪೊರ್ತುಗೀಸರ ಹಾವಳಿಯು ಪ್ರಬಲವಾಗ ತೊಡಗಿತು. ಆಗ ವೆಂಕಟಪ್ಪ ನಾಯಕನು ಪುನಃ ಸೈನ್ಯ ಸಹಿತ ತುಳುವಕ್ಕೆ ಬಂದು, ಪೊರ್ತುಗೀಸರೊಡನೆ ಮಂಗಳೂರಿನಲ್ಲಿ ಯುದ್ಧ ಮಾಡಿದನು. ಬಂಗರಾಜನಾದ ಕಾಮರಾಯನು ಆಗ ಪೊರ್ತುಗೀಸರ ಸ್ನೇಹಿತನಾಗಿದ್ದುದರಿಂದ ಅವನು ವೆಂಕಟಪ್ಪ ನಾಯಕನಿಗೆ ಹೆದರಿ, ಕುಂಬಳೆ ಅರಸನ ರಾಜ್ಯದಲ್ಲಿ ಅಡಗಿಕೊಂಡನು. ವೆಂಕಟಪ್ಪ ನಾಯಕನು ಪೊರ್ತುಗೀಸರೊಡನೆ ಮೊದಲು ಎರಡು ಸಲ ಸೋತನು. ಆದರೆ ಹೆಚ್ಚಿನ ಸೈನ್ಯವನ್ನು ತಂದು, ಉಳ್ಳಾಲ ರಾಣಿಯಾದ ಅಬ್ಬಕ್ಕಾ ದೇವಿಯ ಸಹಾಯವನ್ನೂ ಪಡೆದು, ಪೊರ್ತುಗೀಸರೊಡನೆ ಪುನಃ ಕಾದಾಡಿ, ಅವರ ಮಂಗಳೂರು ಕೋಟೆಗೆ ಮುತ್ತಿಗೆ ಹಾಕಿದನು. ಕೊನೆಗೆ ಪೊರ್ತುಗೀಸರಿಗೂ ವೆಂಕಟಪ್ಪ ನಾಯಕನಿಗೂ ಒಪ್ಪಂದವಾಯಿತು. ಬಂಗರಾಜನು ಅದರ ಬಳಿಕ ಪುನಃ ಮಂಗಳೂರಿಗೆ ಬಂದು ಇಕ್ಕೇರಿ ಅರಸನ ಸಾಮಂತನಾಗಿ ಆಳತೊಡಗಿದನು.

ವೆಂಕಟಪ್ಪ ನಾಯಕನು ತನ್ನ ಯುದ್ಧದ ಖರ್ಚಿಗಾಗಿ ತುಳು ಸಾಮಂತರಿಂದ ಬರಬೇಕಾದ ಕಪ್ಪವನ್ನು ಏರಿಸಿ, ತೆಂಗಿನ ಮರ ಮತ್ತು ಇತರ ಫಲ ಮರಗಳ ಮೇಲೂ ಕಂದಾಯವನ್ನು ಹೊರಿಸಿದನು. ಅವನು ತುಳುವದ ಮುಖ್ಯ ಊರುಗಳಲ್ಲೆಲ್ಲಾ ದೊಡ್ಡ ಜಂಗಮ ಮಠಗಳನ್ನು ಕಟ್ಟಿಸಿ, ಅವುಗಳಿಗೆ ಉಂಬಳಿ ಬಿಟ್ಟನು. ವಂಕಟಪ್ಪ ನಾಯಕನು ಜೈನ ಮತದ ಮೇಲಣ ದ್ವೇಷದಿಂದ ಬಾರಕೂರನ್ನು ನಾಶಪಡಿಸಿದನೆಂದು ಕೆಲವು ಇತಿಹಾಸ ಕರ್ತರು ಹೇಳಿರುತ್ತಾರೆ. ಅದಕ್ಕೆ ಸರಿಯಾದ ಆಧಾರವೇನೂ ಕಾಣುವುದಿಲ್ಲ. ವೆಂಕಟಪ್ಪ ನಾಯಕನು ಶೂರನೂ ರಾಜನೀತಿ ಬಲ್ಲವನೂ ಆಗಿದ್ದನು. ಮತಭ್ರಾಂತಿಯು ಅವನಲ್ಲಿ ಮೇರೆತಪ್ಪಲಿಕ್ಕೆ ಕಾರಣವಿಲ್ಲ.

## ವೀರಭದ್ರಪ್ಪ ನಾಯಕ (ಕ್ರಿ. ಶಕ ೧೬೩೦ ರಿಂದ ೧೬೪೬)

ವೆಂಕಟಪ್ಪ ನಾಯಕನ ಬಳಿಕ ಆತನ ಮೊಮ್ಮಗನಾದ ವೀರಭದ್ರಪ್ಪ ನಾಯಕನು ಪಟ್ಟವನ್ನೇರಿದನು. ಅವನ ಕಾಲದಲ್ಲಿ ಪೊರ್ತುಗೀಸರಿಗೆ ಬಸರೂರಲ್ಲಿ ಕೋಟೆಯನ್ನು ಕಟ್ಟಲಿಕ್ಕೆ ಅನುಮತಿ ದೊರಕಿತು. ಅತ್ತ ಅದೇ ಸಮಯ ಇಕ್ಕೇರಿ ಸಾಮ್ರಾಜ್ಯದ ರಾಜಧಾನಿಯು ವೇಣುಪುರ (ಬಿದನೂರು) ದಲ್ಲಿ ಸ್ಥಾಪಿತವಾಯಿತು.

## ಶಿವಪ್ಪ ನಾಯಕ (ಕ್ರಿ. ಶಕ ೧೬೪೬ ರಿಂದ ೧೬೬೧)

ವೀರಭದ್ರಪ್ಪ ನಾಯಕನು ಮೃತನಾದ ಬಳಿಕ ಇಕ್ಕೇರಿ ರಾಜ್ಯಕ್ಕೆ ವಾರಸುದಾರರ್ಯಾರೆಂಬ ಕುರಿತು ಗೊಂದಲವೆದ್ದಿತು. ಕೊನೆಗೆ ಚಿಕ್ಕ ಸಂಕಣ್ಣನಾಯಕನ ಮಗನ ಮಗನಾದ ಶಿವಪ್ಪ ನಾಯಕನು ಆ ವಿವಾದಗಳಲ್ಲಿ ಜಯಶೀಲನಾಗಿ ಪಟ್ಟವನ್ನೇರಿದನು.

ಶಿವಪ್ಪ ನಾಯಕನು ರಾಜಧಾನಿಯಾದ ವೇಣುಪುರವನ್ನು ವೈಭವದ ನಗರವನ್ನಾಗಿ ಮಾಡಿದನು. ಅವನ ಕಾಲದಲ್ಲಿ ಇಕ್ಕೇರಿಯ ಅರಸರ ಕೀರ್ತಿಯು ಜಗತ್ತಿನಲ್ಲೆಲ್ಲಾ ತುಂಬಿತು. ಅವನು ಪೊರ್ತುಗೀಸರ ಸ್ವಾಧೀನವಿದ್ದ ಕುಂದಾಪುರ, ಗಂಗೊಳ್ಳಿ, ಹೊನ್ನಾವರ, ಮಂಗಳೂರು ಕೋಟೆಗಳನ್ನು ತನ್ನ ಸ್ವಾಧೀನ ಪಡಕೊಂಡು ಅರ್ಕುಳವನ್ನು ಪೊರ್ತುಗೀಸರಿಗೆ ಬಿಟ್ಟುಕೊಟ್ಟನು. ಬೇಕಲ, ಚಿತ್ತಾರಿ, ಚಂದ್ರಗಿರಿ ಕೋಟೆಗಳನ್ನು ಬಲಪಡಿಸಿ, ನೀಲೇಶ್ವರ ಅರಸನಿಂದ ಅಲವತ್ತುನಾಡು, ಪಡುವನ್ನಾಡುಗಳ ಬಗ್ಗೆ ಕಪ್ಪವನ್ನು ಪಡೆದನು.

ಶಿವಪ್ಪ ನಾಯಕನ ಕಾಲದಲ್ಲಿ ಇಕ್ಕೇರಿ ರಾಜ್ಯವು ಅತ್ಯಂತ ವೈಭವಕ್ಕೆ ಮುಟ್ಟಿತು. ಅವನು ಕಂದಾಯ ವಸೂಲಿಗಾಗಿ ಮಾಡಿದ ನಿಬಂಧನೆಗಳು ಚರಿತ್ರೆಯಲ್ಲಿ ಹೆಸರುಗೊಂಡಿವೆ. ಅವನು ಭೂಪ್ರದೇಶವನ್ನೆಲ್ಲಾ ೫ ತರಗತಿಗಳಾಗಿ ವಿಂಗಡಿಸಿ, ಪ್ರತಿ ಗ್ರಾಮದಲ್ಲೂ ಆ ಐದು ತರಗತಿಗಳಿಗೆ ಸೇರಿದ ಒಂದೇ ಅಳತೆಯ ಪ್ರದೇಶಗಳನ್ನು ಸರಕಾರದ ಕಡೆಯಿಂದ ಕೃಷಿ ಮಾಡಿಸಿ–ಬೀಜ, ಖರ್ಚು, ಉತ್ಪನ್ನ, ಬೆಲೆ ಇವುಗಳ ಲೆಕ್ಕವನ್ನಿಟ್ಟುಕೊಂಡು–ಅದರ ಆಧಾರದ ಮೇಲೆ ಭೂಕಂದಾಯವನ್ನು ನಿಶ್ಚೈಸಿದನು. ಶಿವಪ್ಪ ನಾಯಕನು ಹೀಗೆ ಏರ್ಪಡಿಸಿದ ಶಿಸ್ತು ೨೫೦ ವರ್ಷಗಳ ಬಳಿಕ ಆಂಗ್ಲ ಅಧಿಕಾರಿಗಳಿಂದ ಕೂಡ ಮೆಚ್ಚಿಕೆಯನ್ನು ಪಡೆಯಿತು.

ವಿಜಯನಗರದರಸರ ವಂಶೀಕರಿಂದ ತಪ್ಪಿಹೋದ ರಾಜ್ಯವನ್ನು ಅವರಿಗಾಗಿ ಜೈಸಿ ಆ ಮಹಾ ಸಾಮ್ರಾಜ್ಯವನ್ನು ಪುನಃ ಸ್ಥಾಪಿಸಬೇಕೆಂಬ ಆಶೆಯು ಧೀರನಾದ ಶಿವಪ್ಪ ನಾಯಕನಲ್ಲಿತ್ತು. ಆದರೆ ಅದು ಸಫಲವಾಗುವ ಮೊದಲೇ ಅವನು ಕಾಲಾಧೀನನಾದನು.

## (ಕ್ರಿ. ಶಕ ೧೬೬೧ ರಿಂದ ೧೬೬೪)

ಶಿವಪ್ಪ ನಾಯಕನ ಬಳಿಕ ಅವನ ತಮ್ಮ ಕಿರಿಯ ವೆಂಕಟಪ್ಪ ನಾಯಕನು ೧೬೬೨ ರ ತನಕವೂ ಅದರ ಬಳಿಕ ಶಿವಪ್ಪ ನಾಯಕನ ಹಿರೇ ಮಗನಾದ ಭದ್ರಪ್ಪ ನಾಯಕನು ೧೬೬೪ ರ ತನಕವೂ ಇಕ್ಕೇರಿ ಸಾಮ್ರಾಜ್ಯವನ್ನಾಳಿದರು.

## ಹಿರಿಯ ಸೋಮಶೇಖರ ನಾಯಕ (೧೬೬೧ ರಿಂದ ೧೬೭೨)

ಆ ಬಳಿಕ ಆಳಿದ ಹಿರಿಯ ಸೋಮಶೇಖರ ನಾಯಕನು ತನ್ನ ದುರಾಚಾರಗಳಿಂದ ಪ್ರಜೆಗಳ ಪ್ರೀತಿಯನ್ನು ಕಳಕೊಂಡು, ಕೊನೆಗೆ ತಾನು ಕೆಡಿಸಿದ ಬ್ರಾಹ್ಮಣ ಕನ್ಯೆಯೊಬ್ಬಳ ತಂದೆಯಿಂದ ಹತನಾದನು. ಅವನ ಕಾಲದಲ್ಲಿ ಮರಾಟರ ನಾಯಕನಾದ ಶಿವಾಜಿಯು ಬಸರೂರಿಗೆ ಬಂದು, ಅದನ್ನು ಲೂಟಿ ಮಾಡಿ, ಗೋಕರ್ಣಕ್ಕೆ ಮುಂದರಿದನು.

## ಚೆನ್ನಮ್ಮಾಜಿ (ಕಿ. ಶಕ ೧೬೭೨ ರಿಂದ ೧೬೯೭)

ಹಿರಿಯ ಸೋಮಶೇಖರನ ಬಳಿಕ ಅವನ ಪತ್ನಿಯಾದ ಚೆನ್ನಮ್ಮಾಜಿಯು ಕ್ರಿ. ಶಕ ೧೬೯೭ ರ ತನಕ ಇಕ್ಕೇರಿಯ ರಾಜ್ಯವನ್ನು ಯೋಗ್ಯರೀತಿಯಿಂದ ಆಳಿ,

ಪುನಃ ಇಕ್ಕೇರಿ ಸಾಮ್ರಾಜ್ಯಕ್ಕೆ ಶೋಭೆಯನ್ನು ತಂದಳು. ಅವಳ ಕಾಲದಲ್ಲಿ ಬಿಜಾಪುರ ಸುಲ್ತಾನನು ಇಕ್ಕೇರಿ ಸಂಸ್ಥಾನವನ್ನು ಹಿಡಿಯ ಪ್ರಯತ್ನಿಸಿದನು. ಆದರೆ ಚೆನ್ನಮ್ಮಾಜಿಯು ಅವನಿಗೆ ಬೇಕಾದ ದ್ರವ್ಯವನ್ನು ಕೊಟ್ಟು-ಒಪ್ಪಂದವನ್ನು ಬೆಳೆಸಿ, ಸಾಮ್ರಾಜ್ಯವನ್ನು ಉಳಿಸಿಕೊಂಡಳು. ಚೆನ್ನಮ್ಮಾಜಿಯು ತುಳುವದ ಕಲ್ಯಾಣಪುರ ಮೊದಲಾದ ಪಟ್ಟಣಗಳಲ್ಲಿ ಕ್ರೈಸ್ತ ದೇವಾಲಯ (ಇಗರ್ಜಿ) ಗಳನ್ನು ಸ್ಥಾಪಿಸಲಿಕ್ಕೆ ಪೊರ್ತುಗೀಸರಿಗೆ ಅನುಮತಿಯಿತ್ತಳು. ಹಿಂದೂ ದೇವಾಲಯಗಳಿಗೆ ಅವಳು ತುಂಬಾ ಉಂಬಳಿ ಬಿಟ್ಟಳು.

### ಹಿರಿಯ ಬಸವಪ್ಪ ನಾಯಕ (ಕ್ರಿ. ಶಕ ೧೬೯೮ ರಿಂದ ೧೭೧೫)

ಚೆನ್ನಮ್ಮಾಜಿಯ ಬಳಿಕ ಆಕೆಯ ದತ್ತಪುತ್ರನಾದ ಹಿರಿಯ ಬಸವಪ್ಪ ನಾಯಕನು ಪಟ್ಟಕ್ಕೇರಿದನು. ಅವನು ತನ್ನ ರಾಜ್ಯದಲ್ಲೆಲ್ಲಾ ಹಸಿದು ಬಂದ ಪ್ರಯಾಣಿಕರಿಗೆ ಆಹಾರ ದೊರಕುವಂತೆ ಗಂಜೀ ಮಠಗಳನ್ನು ಸ್ಥಾಪಿಸಿ ಕೀರ್ತಿ ಪಡೆದನು.

## ೩. ಪೊರ್ತುಗೀಸರೂ—ಇಂಗ್ಲಿಷರೂ

ಪೊರ್ತುಗೀಸರು ಕೃಷ್ಣದೇವರಾಯನ ಕಾಲದಲ್ಲಿ ಗೋವೆಯನ್ನು ತಮ್ಮ ರಾಜಧಾನಿಯಾಗಿ ಮಾಡಿಕೊಂಡು, ಹಿಂದುಸ್ಥಾನದ ಪಶ್ಚಿಮ ಕರಾವಳಿಯಲ್ಲೆಲ್ಲಾ ತಮ್ಮ ವ್ಯಾಪಾರದ ಭಂಡಸಾಲೆಗಳನ್ನು ಅಲ್ಲಲ್ಲಿ ಸ್ಥಾಪಿಸಿದ್ದರು. ರಾಮರಾಯನ ಕಾಲದಲ್ಲಿಯೂ ಅವರಿಗೆ ವಿಜಯನಗರ ಸಾಮ್ರಾಟನ ಸಹಾಯವು ತುಂಬಾ ಇದ್ದುದರಿಂದ ವಿಜಯನಗರದ ಪತನದ ಮೊದಲೇ ಅವರು ತುಳುವದ ಕರಾವಳಿಯಲ್ಲೆಲ್ಲಾ ಪ್ರಬಲರಾಗಿದ್ದರು. ಅವರು ಸಮುದ್ರದ ಮೇಲಣ ಅಧಿಕಾರವು ತಮ್ಮದೆಂದು ಹೇಳಿ, ತುಳುವದ ಬಂದರುಗಳಿಂದೆಲ್ಲಾ ಸುಂಕ ವಸೂಲ್ಮಾಡುತ್ತಿದ್ದರು. ವಿಜಯನಗರ ಸಾಮ್ರಾಟರ ಕೃಪೆಯಿಂದ ಬಲ ಹೊಂದಿ, ಅವರು ತುಳುವದಲ್ಲಿ ತಮ್ಮ ದರ್ಪವನ್ನು ತೋರಿಸುತ್ತಿದ್ದುದರಿಂದ ಸಾಮಂತರಾದ ಬಂಗರಿಗೂ, ಚೌಟರಿಗೂ ಅವರ ವರ್ತನೆಯಿಂದ ಬೇಸರವಾಗಿತ್ತು. ಪೊರ್ತುಗೀಸರು ಬಂಗರಸನ ರಾಜ್ಯದ ಬಂದರುಗಳಿಂದ ಸುಂಕದ ರೂಪವಾಗಿ ೨೪೦೦ ಮುಡಿ ಅಕ್ಕಿ ೧೦೦೦ ಬುದ್ದಲಿ ಎಣ್ಣೆಯನ್ನು ಪಡೆಯುತ್ತಿದ್ದದ್ದು ಬಂಗರಸನಿಗೆ ಸಂತೋಷವಿರಲಿಲ್ಲ. ಆದರೆ ನೌಕಾಬಲವು ಸಾಮ್ರಾಟರಿ

ಗಾಗಲಿ ಸಾಮಂತರಿಗಾಗಲಿ ಆ ಕಾಲದಲ್ಲಿ ಇಲ್ಲದ್ದರಿಂದಲೂ - ಸುಂಕವನ್ನು ಕೊಡ ತಪ್ಪಿದ ಬಂದರುಗಳಿಂದ ಹೊರ ಹೋಗುವ ಹಡಗು, ಮಂಜಿಗಳನ್ನು ಪೊರ್ತುಗೀಸರು ಹಿಡಿದು ಬಾಧಿಸುತ್ತಿದ್ದರಿಂದಲೂ, ವ್ಯಾಪಾರಸ್ಥರೆಲ್ಲರೂ ಆಯಾ ಬಂದರುಗಳಿಂದ ಅವರು ನಿಶ್ಚೈಸಿದ ಸುಂಕವನ್ನು ತಮ್ಮೊಳಗೆ ಶೇಖರಿಸಿ ಪೊರ್ತು ಗೀಸರಿಗೆ ಕೊಡುತ್ತಿದ್ದರು. ಕ್ರಿ. ಶಕ ೧೫೪೫ - ೧೫೫೮ರ ನಡುವೆ ತುಳುವದಲ್ಲಿ ೨ನೇ ಲಕ್ಷ್ಮಪ್ಪರಸ ಬಂಗರಾಜನು ಮಂಗಳೂರಿನಲ್ಲಿಯೂ ಆತನ ಅರಸಿಯಾದ ಚೌಟ ರಾಣಿ ಅಬ್ಬಕ್ಕಾದೇವಿಯು ಉಳ್ಳಾಲದಲ್ಲಿಯೂ ಸಾಮಂತರಾಗಿ ಆಳು ತ್ತಿದ್ದರು. ಲಕ್ಷ್ಮಪ್ಪರಸನ ಬಳಿಕ, ಆತನ ಅಳಿಯನಾದ ೩ನೇ ಕಾಮರಾಯನು ಬಂಗರಸನಾದನು. ಅವನು ತನ್ನ ಅತ್ತೆಯಾದ ಅಬ್ಬಕ್ಕಾದೇವಿಯೊಡನೆ ದ್ವೇಷ ಬೆಳೆಸಿ, ಉಳ್ಳಾಲವನ್ನು ತನ್ನ ಸ್ವಾಧೀನ ಪಡಿಸಿಕೊಳ್ಳಬೇಕೆಂಬ ದುರಾಶೆಯಿಂದ ಪೊರ್ತುಗೀಸರ ಸ್ನೇಹವನ್ನು ಬೆಳೆಸಿದನು. ಅವನ ಸಹಾಯಕ್ಕೆಂದು ಪೊರ್ತು ಗೀಸರು ಉಳ್ಳಾಲಕ್ಕೆ ಎದುರಾಗಿ ಈಗಿನ ಹೊಯ್ಗೆ ಬಜಾರಿನ ಬಳಿ ತಮ್ಮ "ಸೆವೊ ಸೆಬೆಸ್ಟಿಯನ್" ಎಂಬ ಹೆಸರಿನ ಕೋಟೆಯೊಂದನ್ನು ಕಟ್ಟಿಸಿದರು. ಕ್ರಿ. ಶಕ ೧೫೬೭ರಲ್ಲಿ ಪೊರ್ತುಗೀಸರು ೩೦೦೦ ಸೈನಿಕರನ್ನು ಹಡಗುಗಳಲ್ಲಿ ತುಂಬಿಸಿ, ಉಳ್ಳಾಲದ ಬಳಿ ಲಂಗರು ಹಾಕಿದರು. ಆದರೆ ಅಬ್ಬಕ್ಕಾದೇವಿಯ ಸೈನ್ಯವು ಅವರ ಮೇಲೆ ಬಿದ್ದು ಅವರನ್ನು ಓಡಿಸಿತು. ಅಬ್ಬಕ್ಕಾದೇವಿಗೂ ಪೊರ್ತುಗೀಸರಿಗೂ ಅದರ ಬಳಿಕ ನಿರಂತರ ಕಾದಾಟ ತೊಡಗಿ, ಪೊರ್ತುಗೀಸರು ಉಳ್ಳಾಲವನ್ನು ಒಂದೆರಡು ಸಲ ಸುಟ್ಟುಹಾಕಿದರು. ಕೊನೆಗೆ ಕ್ರಿ ಶಕ ೧೫೮೧ರಲ್ಲಿ ಅಬ್ಬಕ್ಕಾದೇವಿಯು ತನ್ನ ರಾಜ್ಯದಿಂದ ಪೊರ್ತುಗೀಸರಿಗೆ ಸುಂಕ ಕೊಡಲೊಪ್ಪಿ, ಅವರೊಡನೆ ಸಂಧಾನ ಬೆಳೆಸಿದಳು.

ತುಳುವದಲ್ಲಿ ಪೊರ್ತುಗೀಸರು ಮಾಡುತ್ತಿದ್ದ ಹಾವಳಿಯನ್ನು ಕೇಳಿ, ಇಕ್ಕೇರಿಯ ಅರಸನಾದ ವೆಂಕಟಪ್ಪನಾಯಕನು ಸೈನ್ಯಸಹಿತ ಬಂದು, ಅವರನ್ನು ಹತೋಟಿಗೆ ತರಬೇಕೆಂದು ಅವರೊಡನೆ ಕಾದಾಡಿದರೂ, ಸಂಪೂರ್ಣ ಜಯ ಶೀಲನಾಗಲಿಲ್ಲ. ಪೊರ್ತುಗೀಸರಿಗೆ ನೌಕಾಬಲವಿದ್ದುದರಿಂದ ಅವರು ತಮ್ಮ ಸೈನ್ಯವನ್ನು ಸಮುದ್ರ ದ್ವಾರಾ ಅತ್ತಿತ್ತ ಕೊಂಡುಹೋಗಲಿಕ್ಕೆ ಸುಲಭವಾಗು ತ್ತಿತ್ತು. ಕೊನೆಗೆ ವೆಂಕಟಪ್ಪನಾಯಕನೂ ಅವರೊಡನೆ ಸಂಧಾನ ಮಾಡಿ, ಅವರಿಗೆ ಬಾರಕೂರಿನಲ್ಲಿ ವ್ಯಾಪಾರದ ಭಂಡಸಾಲೆ ಕಟ್ಟಲಿಕ್ಕೂ ತುಳುವದಲ್ಲಿ ಇಗರ್ಜಿಗಳನ್ನು ಅಲ್ಲಲ್ಲಿ ಕಟ್ಟಲಿಕ್ಕೂ ಅನುಮತಿಯನ್ನಿತ್ತು ಅವರು ಹಿಂದು

ಗಳನ್ನು ಕ್ರೈಸ್ತ ಮತಕ್ಕೆ ಸೇರಿಸುವದನ್ನು ಬಿಡಬೇಕೆಂದೂ ತುಳುವದಲ್ಲಿ ಸಭ್ಯ ರೀತಿಯಿಂದ ವರ್ತಿಸಬೇಕೆಂದೂ ಆವರಿಂದ ಕರಾರು ಪಡೆದನು.

ಪೊರ್ತುಗೀಸರಿಗೆ ತುಳುವದ ಮಂಗಳೂರು, ಬಸರೂರುಗಳಲ್ಲಿ ಕೋಟೆಗಳೂ ಭಂಡಸಾಲೆಗಳೂ ಮೊದಲೇ ಇದ್ದವು. ಬಸರೂರಿನಲ್ಲಿಯೂ ಪೊರ್ತುಗೀಸರ ಉಪಟಳಗಳಿಂದ ಅವರಿಗೂ ಅಲ್ಲಿಯ ಸಾಮಂತರಾದ ಸುರಾಲದ ತೋಳಾಹಾರರಿಗೂ ಹೋರಾಟಗಳು ನಡೆಯುತ್ತಿದ್ದವು.

ಪೊರ್ತುಗೀಸರು ತುಳುವಕ್ಕೆ ಕಾಲಿಟ್ಟೊಡನೆ ಅಲ್ಲಿ ಕ್ರೈಸ್ತ ಮತಪ್ರಚಾರವನ್ನು ಪ್ರಾರಂಭಿಸಿದ್ದರು. ಕ್ರಿ. ಶಕ ೧೫೨೬ ಲ್ಲಿ ಫ್ರಾನ್ಸಿಸ್ಕನರೆಂಬ ಸನ್ಯಾಸಿಗಳ ದಳವು ಈ ಕಾರ್ಯದಲ್ಲಿ ಸೇರಿ, ತುಳುವದಲ್ಲಿ ಮೂರು ಕ್ರೈಸ್ತ ಮತದ ಇಗರ್ಜಿಗಳು ತಲೆದೋರಿದವು. ಇವುಗಳಲ್ಲಿ ಫರಂಗಿಪೇಟೆಯಲ್ಲಿದ್ದ ಇಗರ್ಜಿಯು ಮುಖ್ಯವಾದ್ದಾಗಿತ್ತು. ತುಳುವದಲ್ಲಿ ಅತೀ ಬಡವರು ಮಾತ್ರ ಕ್ರೈಸ್ತ ಮತದ ವಿಚಾರಗಳಿಗೆ ಕಿವಿ ಕೊಡುತ್ತಿದ್ದುದರಿಂದ ತುಳುವದ ಕ್ರೈಸ್ತರೆಲ್ಲಾ ಆರ್ಥಿಕ ಬಲವಿಲ್ಲದ ದರಿದ್ರರಾಗಿದ್ದರು. ಪೊರ್ತುಗೀಸರು ತುಂಬಾ ಹಣವನ್ನು ವೆಚ್ಚ ಮಾಡಿ, ಅವರಿಗಾಗಿ ಶಾಲೆಗಳನ್ನೂ ಔಷಧಾಲಯಗಳನ್ನೂ ಕಟ್ಟಿಸಿ, ಅವರಿಗೆ ವೃತ್ತಿಗಳನ್ನು ಕಲಿಸಿ ಅವರ ದಾರಿದ್ರ್ಯವನ್ನು ದೂರಗೊಳಿಸ ಸಹಾಯಮಾಡಿದರು. ಹೀಗಾಗಿ ಕಾಲಹೋಗುತ್ತಾ ಕ್ರೈಸ್ತರ ಸಂಖ್ಯೆಯು ಹೆಚ್ಚಿತು. ಗೋವೆಯಲ್ಲಿದ್ದ ಕ್ರೈಸ್ತರೂ ಅಲ್ಲಿ ಮರಾಠರ ತೊಂದರೆಗಳು ಪ್ರಾರಂಭವಾಗುತ್ತಲೇ ತುಳುವಕ್ಕೆ ಬಂದು ಸೇರ ತೊಡಗಿದ್ದರಿಂದ ತುಳುವದಲ್ಲಿ ಕ್ರೈಸ್ತ ಸಮಾಜವು ಬಲವಾಯಿತು.

ಚೆನ್ನಮ್ಮಾಜಿ, ಹಿರಿಯ ಬಸವಪ್ಪನಾಯಕರ ಕಾಲದಲ್ಲಿ ಪೊರ್ತುಗೀಸರು ಪುನಃ ಹಾವಳಿಗೆ ತೊಡಗಿದರು. ಕೊನೆಗೆ ಇಕ್ಕೇರಿ ಅರಸರಿಗೂ ಪೊರ್ತುಗೀಸರಿಗೂ ಪುನಃ ಕರಾರಾಗಿ ಪೊರ್ತುಗೀಸರು ಹಿಂದುಗಳನ್ನು ಕ್ರೈಸ್ತ ಮತಕ್ಕೆ ಸೇರಿಸಕೂಡದೆಂದೂ ಹಿಂದೂ ಹೆಂಗಸರನ್ನು ಮದುವೆಯಾಗ ಕೂಡದೆಂದೂ ಶರ್ತಗಳಾದವು.

ಬಸವಪ್ಪ ನಾಯಕನ ಕಾಲದಲ್ಲಿ ಹಿಂದುಸ್ಥಾನದಲ್ಲೆಲ್ಲಾ ಪೊರ್ತುಗೀಸರ ಪ್ರಾಬಲ್ಯವು ಕಡಿಮೆಯಾಯಿತು. ಪೊರ್ತುಗೀಸರಿಗೆ ಸಾಮ್ರಾಜ್ಯ ಸ್ಥಾಪನೆ ಮಾಡಬೇಕೆಂಬ ಆಶೆ ಇರಲಿಲ್ಲ. ಅವರ ಕಾಲದಲ್ಲಿ ಮೊಗಲ್ ಅಧಿಕಾರವು ಡಿಲ್ಲಿಯಲ್ಲಿ ಸ್ಥಾಪನೆಯಾಗಿ ಉತ್ತರ ಹಿಂದುಸ್ಥಾನದಲ್ಲೆಲ್ಲಾ ಸ್ಥಿರವಾಗಿ, ದಕ್ಷಿಣ ಹಿಂದುಸ್ಥಾನದೊಳಗೆ ಕೂಡ ವ್ಯಾಪಿಸಿತ್ತು. ಡಿಲ್ಲಿಯ ಸಿಂಹಾಸನದ ಮೇಲೆ

ಶೂರ, ಬಲಿಷ್ಠ, ಮೊಗಲ್ ಚಕ್ರವರ್ತಿಗಳಾದ ಅಕ್ಬರ್, ಜಹಾಂಗಿರ್, ಶಾಜಹಾನ್, ಅವರಂಗಜೇಬರು ಕೂತಿದ್ದ ತನಕ ಈ ಹಿಂದುಸ್ಥಾನವು ಎಂದಾದರೂ ಪಾಶ್ಚಾತ್ಯರ ಕೈಸೇರಬಹುದೆಂದು ಯಾರಿಗೂ ಕನಸಿನಲ್ಲಿ ಕೂಡ ತೋರುತ್ತಿರಲಿಲ್ಲ. ದಕ್ಷಿಣ ಹಿಂದುಸ್ಥಾನದಲ್ಲಿ ವಿಜಯನಗರ ಸಾಮ್ರಾಜ್ಯವು ಕ್ರಿ. ಶಕ ೧೫೬೫ರಲ್ಲಿ ಕಳೆಗುಂದಿ ನಿರ್ನಾಮವಾದರೂ ಅದರ ಬಳಿಕ ಒಂದು ಶತಮಾನ ತನಕ ಬಾಹಮನೀ ರಾಜ್ಯಗಳಾದ ಬಿಜಾಪುರ, ಗೋವಳಕೊಂಡಗಳು ಇನ್ನೂ ಪ್ರಬಲವಾಗಿದ್ದವು. ಅತ್ತ ಹಿಂದುಗಳ ಪುನರುತ್ಥಾನವನ್ನು ಕೈಕೊಂಡ ಶಿವಾಜಿಯು ಆ ಬಾಹಮನೀ ರಾಜ್ಯಗಳನ್ನೂ ಮೊಗಲ್ ಚಕ್ರಾಧಿಪತ್ಯವನ್ನೂ ದಂಗುಬಡಿಸಿ, ಮರಾಠರನ್ನು ಹಿಂದುಸ್ಥಾನದ ದಿಗ್ವಿಜಯಕ್ಕೆ ಅಣಿಗೊಳಿಸುತ್ತಿದ್ದನು. ಆ ಬಲಾಢ್ಯ ಶಕ್ತಿಗಳ ನಡುವೆ ಪೋರ್ತುಗೀಸರು ಸಾಮ್ರಾಜ್ಯದ ಕಾಂಕ್ಷೆಯನ್ನು ಪಡಲಿಕ್ಕೆ ಸಂದರ್ಭವಿರಲಿಲ್ಲ. ಹದಿನೆಂಟನೇ ಶತಮಾನವು ಪ್ರಾರಂಭಿಸುವ ಮೊದಲೇ ಅವರ ನೌಕಾಬಲವನ್ನು ಡಚ್ಚರು ಮುರಿದುಬಿಟ್ಟುವದರಿಂದ, ಅದರ ಬಳಿಕ ಪೋರ್ತುಗೀಸರಿಗೆ ತಮ್ಮ ಸ್ವಾಧೀನವಿದ್ದ ಗೋವಾ, ದೀಯು, ಡಮನಗಳನ್ನು ಮರಾಠರಿಂದ ರಕ್ಷಿಸಿಕೊಳ್ಳುವುದೇ ಕಷ್ಟವಾಗ ಹತ್ತಿತು. ಕ್ರಿ. ಶಕ ೧೭೧೫ರಲ್ಲಿ ಇಕ್ಕೇರಿ ಅರಸನಾದ ಹಿರಿಯ ಬಸವಪ್ಪ ನಾಯಕನು ಕಾಲವಶನಾಗುವಾಗ– ತುಳುವದಲ್ಲಿ ಪೋರ್ತುಗೀಸರ ವ್ಯಾಪಾರವು ತೀರಾ ಕಡಿಮೆಯಾಗಿ, ಹೊನ್ನಾವರ, ತಲಚೇರಿಗಳಲ್ಲಿ ಸೇರಿಕೊಂಡಿದ್ದ ಆಂಗ್ಲರು ತುಳುವದ ವ್ಯಾಪಾರವನ್ನು ತಮ್ಮ ಸ್ವಾಧೀನ ಪಡಿಸಿಕೊಳ್ಳಬೇಕೆಂಬ ಪ್ರಯತ್ನದಲ್ಲಿದ್ದರು.

ಇಂಗ್ಲಿಷರು ಹದಿನೇಳನೇ ಶತಮಾನ ಪ್ರಾರಂಭವಾಗುವ ತನಕ ಹಿಂದುಸ್ಥಾನದಲ್ಲಿ ಕಾಲಿಡಲಿಲ್ಲ. ಮೊಗಲ್ ಚಕ್ರವರ್ತಿಯಾದ ಜಹಾಂಗೀರನ ಕಾಲದಲ್ಲಿ ಅವರು ಆತನ ಅನುಮತಿಯನ್ನು ಪಡೆದು ಸುರತ್ತಿನಲ್ಲಿ (ಕ್ರಿ. ಶಕ ೧೬೧೨ಲ್ಲಿ) ತಮ್ಮ ಮೊತ್ತಮೊದಲಿನ ವ್ಯಾಪಾರದ ಭಂಡಸಾಲೆಯನ್ನು ಸ್ಥಾಪಿಸಿದರು; ಕ್ರಿ. ಶಕ ೧೬೩೯ಲ್ಲಿ ಚಂದ್ರಗಿರಿ ಅರಸರಿಂದ ಅವರು ಮದ್ರಾಸಿನ ಪೋರ್ಟಸೆಂಟ ಜಾರ್ಜಿನ ಸ್ಥಳವನ್ನು ಪಡೆದರು; ಕ್ರಿ. ಶಕ ೧೬೬೧ರಷ್ಟಕ್ಕೆ ಪೋರ್ತುಗೀಸ್ ಅರಸನು ತನ್ನ ಅಳಿಯನಾದ ಇಂಗ್ಲಿಷ್ ಅರಸನಿಗೆ ಈಗಿನ ಮುಂಬಯಿ ಇರುವ ಪ್ರದೇಶವನ್ನು ವರದಕ್ಷಿಣೆಯಾಗಿ ಕೊಟ್ಟನು. ಹೀಗೆ ಅವರು ಹಿಂದುಸ್ಥಾನದ ಪೂರ್ವ, ಪಶ್ಚಿಮ ಕರಾವಳಿಗಳಲ್ಲಿ ತಮ್ಮ ವ್ಯಾಪಾರದ ಭಂಡಸಾಲೆಗಳನ್ನು ಮೆಲ್ಲ ಮೆಲ್ಲನೆ ಹೆಚ್ಚಿಸುತ್ತಾ, ಹದಿನೇಳನೇ ಶತಮಾನವನ್ನು ತಮ್ಮ ವ್ಯಾಪಾರದ

ಅಭಿವೃದ್ಧಿಯ ಚಿಂತೆಯಲ್ಲಿಯೇ ಕಳೆದರು. ಪಶ್ಚಿಮ ಕರಾವಳಿಯಲ್ಲಿ ಆಗ ತಲಚೇರಿ, ಹೊನ್ನಾವರಗಳಲ್ಲಿ ಅವರ ಭಂಡಸಾಲೆಗಳಿದ್ದರೂ ತುಳುವದಲ್ಲಿರಲಿಲ್ಲ. ತುಳುವದ ವ್ಯಾಪಾರವು ಪೊರ್ತುಗೀಸರ ಕೈಬಿಟ್ಟು ಹೋಗುವಾಗ ಅವರು ಆ ವ್ಯಾಪಾರದ ಮೇಲೆ ಕಣ್ಣಿಡ ತೊಡಗಿದರು.

## ೪. ಇಕ್ಕೇರಿ ವಂಶದ ಕೊನೆಗಾಲ

(೧೭೧೫ ರಿಂದ ೧೭೬೩)

### ೨ನೇ ಸೋಮಶೇಖರ (ಕ್ರಿ. ೧೭೧೫ ರಿಂದ ೧೭೪೦)

ಹಿರಿಯ ಬಸವಪ್ಪನಾಯಕನು ಕಾಲವಶನಾದ ಬಳಿಕ, ಆತನ ಮಗನಾದ ಸೋಮಶೇಖರನು ಇಕ್ಕೇರಿ ಸಿಂಹಾಸನವನ್ನೇರಿದನು. ಅವನ ಕಾಲದಲ್ಲಿ ಅವನ ಪ್ರತಿನಿಧಿಯಾಗಿ ತುಳುವವನ್ನು ದಂಡನಾಯಕ ಸೂರಪ್ಪಯ್ಯನು ಮಂಗಳೂರಿನಿಂದ ಆಳುತ್ತಿದ್ದನು. ಕುಂಬಳೆ, ಕೋಲತ್ತಿರಿ ಅರಸರು ಕೂಡಿ ಕನ್ನಡ ಜಿಲ್ಲೆಯ ದಕ್ಷಿಣ ಭಾಗವನ್ನು ಸುಲಿಗೆ ಮಾಡಹತ್ತಿದ್ದರಿಂದ ಸೂರಪ್ಪಯ್ಯನು ಅವರನ್ನು ಸೋಲಿಸಿ, ಕುಂಬಳೆ ಅರಸನನ್ನು ಸೆರೆಯಲ್ಲಿಟ್ಟು, ಕೋಲತ್ತಿರಿ ರಾಜ್ಯವನ್ನು ಜೈಸಬೇಕೆಂದು ಹೊರಟನು. ತಲಚೇರಿಯಲ್ಲಿದ್ದ ಇಂಗ್ಲಿಷರು ಸೂರಪ್ಪಯ್ಯನಿಗೆ ಸಹಾಯಕರಾಗಲಿಕ್ಕೆ ಒಪ್ಪಿ, ಅವರೊಳಗೆ ಕರಾರಾಯಿತು. ಕ್ರಿ. ಶಕ ೧೭೩೯ಲ್ಲಿ ಸೂರಪ್ಪಯ್ಯನು ಕಾಂಞಂಗಾಡನ್ನು ಹಿಡಿದು, ಅಲ್ಲಿ ಹೊಸ ಕೋಟೆ (ಹೊಸ ದುರ್ಗ) ಯನ್ನು ಕಟ್ಟಿಸಿದನು. ಅದರ ಬಳಿಕ ಸುಮಾರು ೧೨ ವರ್ಷಗಳ ತನಕ ಸೂರಪ್ಪಯ್ಯನು ಕೋಲತ್ತಿರಿ ಅರಸನ ರಾಜ್ಯವನ್ನು ಜೈಸುವುದರಲ್ಲಿಯೇ ಇದ್ದನು.

### ೨ನೇ ಬಸವಪ್ಪ ನಾಯಕ (ಕ್ರಿ. ಶಕ ೧೭೪೦ ರಿಂಧ ೧೭೫೫)

ಸೋಮಶೇಖರನ ಬಳಿಕ ಅವನ ತಮ್ಮನ ಮಗನಾದ ಬಸವಪ್ಪ ನಾಯಕನು ಇಕ್ಕೇರಿ ಸಿಂಹಾಸನವನ್ನೇರಿದನು. ಕ್ರಿ. ಶಕ ೧೭೪೨ಲ್ಲಿ ಕೋಲತ್ತಿರಿ ಅರಸನಿಗೂ ಅವನಿಗೂ ಒಪ್ಪಂದವಾಗಿ, ಕೋಲತ್ತಿರಿ ಅರಸನು ಕಪ್ಪ ಕೊಡುವ ಶರ್ತದ ಮೇಲೆ ಅವನ ನೀಲೇಶ್ವರ ರಾಜ್ಯವನ್ನು ಅವನಿಗೆ ಹಿಂದೆ ಕೊಟ್ಟಿತು. ಕೋಲತ್ತಿರಿ ಅರಸನು ಕೆಲವು ವರ್ಷ ಸುಮ್ಮನಿದ್ದು, ಕ್ರಿ. ಶಕ ೧೭೫೩ಲ್ಲಿ

ಚಂದ್ರಗಿರಿ ಕೋಟೆಯನ್ನು ಹಿಡಿಯ ಪ್ರಯತ್ನಿಸಿದನು. ಆದರೆ ಅವನಿಂದ ಅದು ಸಾಧ್ಯವಾಗಲಿಲ್ಲ.

## ಚೆನ್ನಬಸವಪ್ಪ ನಾಯಕ, ಸೋಮಶೇಖರ ನಾಯಕ, ವೀರಮ್ಮಾಜಿ (೧೭೫೫ ರಿಂದ ೧೭೬೩)

೨ನೇ ಬಸವಪ್ಪ ನಾಯಕನಿಗೆ ಮಕ್ಕಳಿಲ್ಲದ್ದರಿಂದ ಅವನು ಚೆನ್ನಬಸವಪ್ಪ ನಾಯಕನನ್ನು ದತ್ತಕ್ಕೆ ಪಡಕೊಂಡಿದ್ದನು. ಬಸವಪ್ಪ ನಾಯಕನು ಕ್ರಿ. ಶಕ ೧೭೫೫ ಲ್ಲಿ ಕಾಲವಶನಾಗುವಾಗ ಚೆನ್ನಬಸವಪ್ಪನು ಇನ್ನೂ ಬರೇ ೧೧ ವರ್ಷದ ಬಾಲಕನಾಗಿದ್ದನು. ಅವನು ೧೭೫೮ ಲ್ಲಿ ತೀರಿಹೋಗುವ ತನಕ, ಅವನ ಹೆಸರಲ್ಲಿ ಬಸವಪ್ಪ ನಾಯಕನ ಕಿರೇ ಹೆಂಡತಿಯಾದ ವೀರಮ್ಮಾಜಿಯು ಎಲ್ಲಾ ರಾಜ್ಯ ಭಾರವನ್ನು ನಡೆಸಿದಳು. ಅವಳು ಬ್ರಾಹ್ಮಣನೊಬ್ಬನ ಸ್ನೇಹದಲ್ಲಿ, ವಿಷಯ ಲಂಪಟಳಾಗಿ, ಕಾಲಕಳೆದು, ಇಕ್ಕೇರಿ ಸಾಮ್ರಾಜ್ಯದ ಸರದಾರರ ಭಕ್ತಿ, ಪ್ರೀತಿ ಗಳನ್ನು ಕಳಕೊಂಡಳು. ಕ್ರಿ. ಶಕ ೧೭೫೮ ಲ್ಲಿ ಚೆನ್ನಬಸವಪ್ಪ ನಾಯಕನು ತೀರಿ ಹೋದೊಡನೆ ಅವಳು ತನ್ನ ಕಡೆಯ ಬಾಲಕನಾದ ೩ನೇ ಸೋಮಶೇಖರನನ್ನು ದತ್ತಕ್ಕೆ ಪಡೆದು, ಅವನನ್ನು ಸಿಂಹಾಸನಕ್ಕೇರಿಸಿ, ಅವನ ಹೆಸರಲ್ಲಿ ಮೊದಲಿ ನಂತೆಯೇ ಆಳುತ್ತಿದ್ದಳು. ಆದರೆ ಚೆನ್ನಬಸವಪ್ಪ ನಾಯಕನನ್ನು ಕೊಲ್ಲಿಸಿದ ಳೆಂಬ ಅಪವಾದವು ಅವಳ ಮೇಲೆ ಸ್ಥಾಪನೆಯಾದ್ದರಿಂದ ಅವಳ ಮುಖ್ಯ ಸರದಾರರೆಲ್ಲಾ ಅವಳ ವಿರೋಧಿಗಳಾದರು.

ಕ್ರಿ. ಶಕ ೧೭೬೩ ಲ್ಲಿ, ಮೈಸೂರಿನ ರಾಜ್ಯಸೂತ್ರಗಳನ್ನೆಲ್ಲಾ ಅದರ ಮೊದಲೇ ತನ್ನ ಕೈಗೆ ಎಳಕೊಂಡಿದ್ದ ಹೈದರಾಲಿ ಖಾನನು ಇಕ್ಕೇರಿ ರಾಜ್ಯದೊಳಗೆ ನುಗ್ಗಿ, ಬಸವಪ್ಪ ನಾಯಕನ ಮಂತ್ರಿಯನ್ನು ವೀರಮ್ಮಾಜಿಯ ಸೆರೆಯಿಂದ ಬಿಡಿಸಿ, ಆತನಿಂದ ಬೇಕಾದ ಅನುಭವವನ್ನು ಪಡೆದು, ಬೆದನೂರನ್ನು ಹಿಡಿದನು. ರಾಣಿಯು ಪಲಾಯನಳಾದಳು. ಆದರೆ ಹೈದರನ ಸೈನಿಕರು ಅವಳನ್ನು ಹಿಂಬಾಲಿಸಿ, ಅವಳನ್ನು ಹಿಡಿದು ಹೈದರನಿಗೊಪ್ಪಿಸಿದರು. ಹೈದರನು ಅವಳನ್ನೂ ಅವಳ ಸಾಕುಮಗನನ್ನೂ ಸೆರೆಯಲ್ಲಿಟ್ಟು ತಾನು ಬೆದನೂರಿನ ಸಿಂಹಾಸನವನ್ನೇರಿ ದನು. ಹೈದರನಿಗೆ ಬೆದನೂರಿನ ಖಜಾನೆಯಲ್ಲಿ ೧೨ ಮಿಲಿಯ ಪವನಿನಷ್ಟು ದ್ರವ್ಯ ದೊರಕಿ, ಆ ದ್ರವ್ಯದ ಸಹಾಯದಿಂದ ಅವನು ಪ್ರಚಂಡ ಸೈನ್ಯಗಳ ನ್ನೊಟ್ಟು ಮಾಡಿ, ದಕ್ಷಿಣ ಹಿಂದುಸ್ಥಾನದ ದಿಗ್ವಿಜಯಕ್ಕೆ ಹೊರಟನು. ಬೆದ

ನೂರು ಹೈದರ್ ನಗರವಾಯಿತು. ಇಕ್ಕೇರಿಯ ರಾಜವಂಶವು ನಿರ್ನಾಮವಾಗಿ, ತುಳುವವು ಹೈದರನ ಕೈವಶವಾಯಿತು.

## ೫. ತುಳುವದ ಸ್ಥಿತಿಗತಿಗಳು

ತುಳುವವು ಹೈದರನ ಕೈವಶವಾಗುವಾಗ ಅದು ಸಂಪತ್ತಿನ ಬೀಡಾಗಿತ್ತು. ವಿಜಯನಗರ ಸಾಮ್ರಾಟನಾದ ಹರಿಹರನು ನಿರ್ಣೈಸಿದ ಭೂಕಂದಾಯ ಕ್ರಮವು ವಿಜಯನಗರ ಪತನದ ತನಕ ತುಳುವದಲ್ಲಿ ನಡೆಯುತ್ತಿದ್ದುದರಿಂದ ಇಲ್ಲಿಯ ಕೃಷಿಕರೂ, ಭೂಮ್ಸಾಲಿಕರೂ ತುಂಬಾ ಐಶ್ವರ್ಯವಂತರಾಗಿದ್ದರು. ಹಿರಿಯ ವೆಂಕಟಪ್ಪನ ಕಾಲದಲ್ಲಿ (೧೬೧೮) ಈ ಭೂಕಂದಾಯವಲ್ಲದೆ ತೆಂಗಿನ ಮತ್ತು ಇತರ ಫಲಮರಗಳ ಮೇಲೆ ಪ್ರತ್ಯೇಕ ಕಂದಾಯವು ಹೊರಿಸಲ್ಪಟ್ಟಿತು. ಹಿರಿಯ ಸೋಮಶೇಖರ ನಾಯಕನ ಹೆಂಡತಿಯಾದ ಚೆನ್ನಮ್ಮಾಜಿಯು ತನ್ನ ಮಗ ಬಸವಪ್ಪ ನಾಯಕನ ಮದುವೆಯ ಖರ್ಚಿನ ನೆವನವನ್ನು ಹೇಳಿ ಕಂದಾಯವಲ್ಲಿ ರೂಪಾಯಿಗೆ ಒಂದಾಣೆಯಂತೆ ಹೆಚ್ಚಿಸಿದಳು. ಅವಳ ಬಳಿಕ ಬಸವಪ್ಪ ನಾಯಕನು ಗಂಜೀ ಮಠಗಳನ್ನು ಸ್ಥಾಪಿಸಲಿಕ್ಕಾಗಿ ಹತ್ತು ರೂಪಾಯಿಗೆ ಒಂದಾಣೆಯಂತೆ ಹೆಚ್ಚಿನ ಕಂದಾಯವನ್ನು ವಿಧಿಸಿದನು. ಕ್ರಿ. ಶಕ ೧೭೫೮ ಲ್ಲಿ ವೀರಮ್ಮಾಜಿಯು ಇಕ್ಕೇರಿಯ ಮೇಲೆ ದಂಡೆತ್ತಿ ಬಂದ ಮರಾಠರಿಗೆ ತೆರಲಿಕ್ಕಾಗಿ, ತುಳುವದ ತನ್ನ ಪ್ರಜೆಗಳಿಗೆ, ಅವರು ಒಂದು ವರ್ಷದ ಕಂದಾಯದ ಅರ್ಧಾಂಶವನ್ನು ತಮ್ಮ ನಿತ್ಯದ ಕಂದಾಯಕ್ಕೆ ಕೂಡಿಸಿ ನಾಲ್ಕು ವಾರ್ಷಿಕ ಕಂತುಗಳಾಗಿ ಕೊಡಬೇಕೆಂದು ನಿಯಮಿಸಿದಳು.

ಆದರೆ ವಿಜಯನಗರ ಕಾಲದ ಬಳಿಕ ಇಕ್ಕೇರಿಯ ಅರಸರು ಕಂದಾಯಕ್ಕೆ ಈ ಕೆಲವು ರೀತಿಗಳಲ್ಲಿ ಕೂಡಿಸಿದ ಭಾಗವು ತುಳುವದ ಕೃಷಿಕರಿಗೆ ನಿಜವಾಗಿ ಭಾರವಾಗುವಷ್ಟಿರಲಿಲ್ಲ. ಹರಿಹರನ ಕಾಲದಿಂದ ಹೈದರನ ಕಾಲದ ತನಕ ತುಳುವದ ಭೂಮಿಯೆಲ್ಲವೂ ಕೃಷಿಯಾಗಿ, ತುಳುವದ ಜನರಲ್ಲಿ ಸುಖಸಂತೃಪ್ತಿಗಳು ನೆಲೆಸಿದ್ದವು. ಜನರ ಆರ್ಥಿಕ ಸ್ಥಿತಿಯು ಉತ್ತಮವಾಗಿತ್ತು. ತುಳುವದ ಹೊರ ವ್ಯಾಪಾರವು ಮೊದಲು ಪೊರ್ತುಗೀಸರ ಕೈಯಲ್ಲಿದ್ದು ಕ್ರಿ. ಶಕ ೧೬೧೫ರ ಬಳಿಕ ಅದು ಪುನಃ ಊರವರ ಕೈಗೆ ಸೇರಿತ್ತು. ಗೋವೆಯಿಂದ ಬಂದ ವೈಷ್ಣವ ಸಾರಸ್ವತರು ಒಳ, ಹೊರ ವ್ಯಾಪಾರದಲ್ಲಿ ಪ್ರಬಲರಾಗ ತೊಡಗಿದ್ದರು. ಅವರೊಂದಿಗೆ ಪಲಾಯನರಾಗಿ ಬಂದ ಸ್ಮಾರ್ತ ಸಾರಸ್ವತರು ಉತ್ತರ ತುಳುವ

ದಲ್ಲಿಯೇ ಹೆಚ್ಚಾಗಿ ನೆಲೆಗೊಂಡಿದ್ದರು; ಅವರಲ್ಲಿ ಹಲವರಿಗೆ ಇಕ್ಕೇರಿ ಅರಸರ ಕೈಕೆಳಗೆ ಹುದ್ದೆಗಳು ದೊರಕಿ– ಅವರಲ್ಲಿ ಪಂಡಿತ, ಉಗ್ರಾಣಕಾರ ಮೊದಲಾದ ಔದ್ಯೋಗಿಕ ಹೆಸರಿನ ಕುಟುಂಬಗಳು ತಲೆದೋರಿದ್ದವು. ಕ್ರಿ. ಶಕ ೧೭೦೮ರಲ್ಲಿ ಆ ಸ್ಮಾರ್ತ ಸಾರಸ್ವತರ ಕೆಲವು ಕುಟುಂಬಗಳು ಚಿತ್ರಾಪುರ ಮಠವನ್ನು ಸ್ಥಾಪಿಸಿ ಕೊಂಡು ಪ್ರತ್ಯೇಕ ಸಮಾಜವಾದರು.

ಗೋವೆಯಿಂದ ಬಂದು ಸೇರಿದ ಕ್ರೈಸ್ತರು ತುಳುವದಲ್ಲಿ ಕೃಷಿಮಾಡಿ ಕೊಂಡಿದ್ದರು. ಪೊರ್ತುಗೀಸರು ಮತಾಂತರಗೊಳಿಸಿದ ಸಾರಸ್ವತ ಕುಟುಂಬ ದವರನೇಕರು ಅವರಲ್ಲಿದ್ದರು. ಅವರು ಮಂಗಳೂರು, ಕಲ್ಯಾಣಪುರಗಳ ಸುತ್ತಲೂ ಪ್ರಬಲರಾದರು.

ಇಕ್ಕೇರಿ ಅರಸನ ಸೈನಿಕರಾಗಿ ಬಂದು, ತುಳುವದಲ್ಲಿ ಸೇರಿಕೊಂಡ ಇತರ ರಲ್ಲಿ ರಾಮರಾಜ ಕ್ಷತ್ರಿಯರು ಇಕ್ಕೇರಿಯವರ ಕೋಟೆಗಳ ಸುತ್ತಲೂ ವಾಸ್ತವಿಸಿ ಕೊಂಡಿದ್ದರಿಂದ ಅವರಿಗೆ ಕೋಟೆಯವರೆಂದು ಕರೆಯುತ್ತಿದ್ದರು. ಅವರು ಬೇಕಲ್, ಚಿತ್ತಾರಿಗಳಲ್ಲಿಯೂ ಕುಂಬಳೆಗಳಲ್ಲಿಯೂ ಹೆಚ್ಚಿದ್ದರು. ತಿಗಳರೆಂಬ ತಮಿಳು ರಕ್ತದ ಜನರೂ ಕಾರ್ಕಳ ಮೊದಲಾದ ಕಡೆಗಳಲ್ಲಿ ಸೇರಿಕೊಂಡು ತಮ್ಮ ದೇವಸ್ಥಾನಗಳನ್ನು ಕಟ್ಟಿ, ಜೀವಿಸಿಕೊಂಡಿದ್ದರು. ತುಳುವದಲ್ಲಿ ಹೀಗೆ ಸಂಪತ್ತಿನೊಂದಿಗೆ ಜನಸಂಖ್ಯೆಯೂ ಹೆಚ್ಚಾಗಿತ್ತು. ಇಕ್ಕೇರಿಯ ಅರಸರಿಗೆ ಕೊಲ್ಲೂರು ಮೂಕಾಂಬಿಕೆಯ ಮೇಲೆ ತುಂಬಾ ಭಕ್ತಿಯಿತ್ತು. ಅವರು ಧರ್ಮಪಾಲನೆಯ ಕುರಿತು ಹೆಚ್ಚು ಗಮನವನ್ನೀಯುತ್ತಿದ್ದರು. ಅವರು ಎಲ್ಲಾ ಜಾತಿ, ಮತಗಳ ಜನರನ್ನೂ ಭೇದವಿಲ್ಲದೆ ಪಾಲಿಸಿಕೊಂಡಿದ್ದರೂ, ಅವರ ಕಾಲದಲ್ಲಿ ತುಳುವದಲ್ಲಿ ಅನೇಕ ಕಡೆ ಜಂಗಮರ ಮಠಗಳು ಸ್ಥಾಪಿತವಾಗಿದ್ದವು. ಆ ತನಕ ಬ್ರಾಹ್ಮಣರಿಗೆ ಸಲ್ಲುತ್ತಿದ್ದ ಬ್ರಹ್ಮಾದಾಯ, ತಸದೀಕುಗಳಲ್ಲಿ ಕೆಲವನ್ನು ಅವರು ಜಂಗಮರಿಗೆ ಹಂಚಿದ್ದರು. ಇಕ್ಕೇರಿ ಅರಸರ ಧರ್ಮನಿಷ್ಠೆಯ ಒಂದು ಅದ್ಭುತ ದೃಷ್ಟಾಂತವನ್ನು ಸರ್ ತೋಮಸ್ ಮನ್ರೋರವರು ಕೊಟ್ಟಿರು ತ್ತಾರೆ. ಅವರು ಬ್ರಾಹ್ಮಣ ಮತ್ತು ಉಚ್ಚ ಜಾತಿಯವರಲ್ಲಿ ವಿಧವೆಯರು ದುರಾಚಾರಿಗಳಾಗದಂತೆ ಅವರ ಮೇಲೆ ನಜರನ್ನಿಡಲಿಕ್ಕೆ ವ್ಯವಸ್ಥೆಯನ್ನಿಟ್ಟಿದ್ದರು. ಆ ವಿಧವೆಯರಲ್ಲಿ ಯಾರಾದರೂ ಗರ್ಭವತಿಯಾದ ಸಂಗತಿ ತಿಳಿದುಬಂದರೆ, ಅವರನ್ನು ಅರಸರ ಕಡೆಯ ಉದ್ಯೋಗಸ್ಥರು ತನಿಖಿಗೆ ಗುರಿಮಾಡಿ, ಆ ವಿಧವೆ ಯರ ದುರಾಚಾರವು ನಿಜವೆಂತಾದರೆ ಅವರನ್ನು ವೇಶ್ಯಾವೃತ್ತಿಯವರಿಗೆ ಮಾರು

ತ್ತಿದ್ದರು. ಅಂಥಾ ಮಾರಾಟಗಳಿಂದ ಅರಸರಿಗೆ ಸ್ವಲ್ಪ ಆದಾಯವಿತ್ತಾದ್ದರಿಂದ ವಿಧವೆಯರನ್ನು ಅನೇಕ ಸಲ ಅರಸನ ಅಧಿಕಾರಿಗಳು ನಿಷ್ಕಾರಣವಾಗಿ ಪೀಡಿಸುತ್ತಿದ್ದರು. ಇಕ್ಕೇರಿ ಅರಸರ ಬಳಿಕ ಹೈದರನು ಆ ಅಸಹ್ಯ ಕ್ರಮವನ್ನು ನಿಲ್ಲಿಸಿದನು.

ಅರಸರು ಧರ್ಮ ರಕ್ಷಣೆಯ ಕುರಿತು ಕೊಟ್ಟಷ್ಟು ವಿಚಾರವನ್ನು ದೇಶ ರಕ್ಷಣೆಯ ಕಡೆ ಕೊಡುತ್ತಿರಲಿಲ್ಲವೆಂದು ವ್ಯಕ್ತವಾಗುತ್ತದೆ. ಇಕ್ಕೇರಿಯವರ ಕಾಲದಲ್ಲಿ ಪೊರ್ತುಗೀಸರ ಕಾಟವು ಅನೇಕ ಸಲ ಅಸಹನೀಯವಾದರೂ ಅವರು ನೌಕಾಬಲವನ್ನು ಸಂಪಾದಿಸಿಕೊಳ್ಳಲಿಕ್ಕೇನೂ ಪ್ರಯತ್ನಪಡಲಿಲ್ಲ. ತುಳುವದ ಸಾಮಂತರು ತಮ್ಮ ತಮ್ಮೊಳಗೆ ಕಾದಾಡಿ ಶಾಂತಿಭಂಗವನ್ನು ಮಾಡುತ್ತಿರುವಾಗಲೂ ರಾಜ್ಯವನ್ನು ತಮ್ಮ ಕೈಗೇನೇ ತಕ್ಕೊಂಡು ಸುವ್ಯವಸ್ಥೆಗೆ ತರಲಿಕ್ಕೆ ಆ ಅರಸರು ಹವಣಿಸಲಿಲ್ಲ. ಇಕ್ಕೇರಿ ಅರಸರು ತುಳುವವನ್ನಾಳಿದ ಎರಡು ಶತಮಾನಗಳ ನಡುವೆ ಒಟ್ಟಾರೆ ತುಳುವವು ತನ್ನ ಆರ್ಥಿಕ ಸ್ಥಿತಿಯನ್ನು ಸರಿಯಿಟ್ಟುಕೊಂಡಿದ್ದರೂ ಪ್ರಗತಿಯ ಮಾರ್ಗದಿಂದಿನ್ನೂ ದೂರವೇ ಇತ್ತು.

---

# ಅಧ್ಯಾಯ ೧೨

## ಹೈದರ್ ಮತ್ತು ಟೀಪು

೧. ದಕ್ಷಿಣ ಹಿಂದುಸ್ಥಾನದ ಸ್ಥಿತಿ. ೨. ಮೈಸೂರು ರಾಜ್ಯ.
೩. ಹೈದರನ ದಿಗ್ವಿಜಯ. ೪. ಟೀಪು.

ತುಳುವವು ಇಕ್ಕೇರಿ ಅರಸರ ಕೆಳಗೆ ಶಾಂತಿಯಿಂದ ಬಾಳಿಕೊಂಡಿರುವಾಗ ಅತ್ತ ಹಿಂದುಸ್ಥಾನದ ಸ್ಥಿತಿಗತಿಗಳು ಸಂಪೂರ್ಣ ಬದಲಾವಣೆ ಹೊಂದಿದ್ದವು. ಕ್ರಿ. ಶಕ ೧೭೦೭ ಲ್ಲಿ ಮೊಗಲ್ ಬಾದಶಾಹನಾದ ಅವರಂಗಜೇಬನು ಕಾಲಾಧೀನನಾದೊಡನೆ ಅವನ ಚಕ್ರಾಧಿಪತ್ಯವು ಕುಸಿದು ಬೀಳತೊಡಗಿತು. ೧೭೦೭ ರಿಂದ ೧೭೩೯ ರ ನಡುವೆ ಅನೇಕ ಸುಬೇದಾರರು ಡಿಲ್ಲಿಯ ಅಧಿಕಾರವನ್ನು ಧಿಕ್ಕರಿಸಿ ಸ್ವತಂತ್ರರಾದರು. ೧೭೩೯ ಲ್ಲಿ ಪರ್ಶಿಯಾದೇಶದ ಅರಸನಾದ ನಾದಿರ್‌ಶಹನು ಹಿಂದುಸ್ಥಾನದೊಳಗೆ ನುಗ್ಗಿ, ಮೊಗಲ್ ಬಾದಶಾಹನಾದ ಮುಹಮ್ಮದ ಶಹನನು

ಸೋಲಿಸಿ, ಡಿಲ್ಲಿಯನ್ನು ಸ್ವಾಧೀನ ಪಡಿಸಿಕೊಂಡು ಅದನ್ನು ಸಂಪೂರ್ಣ ಲೂಟಿ ಮಾಡಿ, ಹಿಂದಿನ ಮೊಗಲ್ ಬಾದಶಾಹರು ಸಂಗ್ರಹಮಾಡಿಟ್ಟ ದ್ರವ್ಯವನ್ನೆಲ್ಲಾ ಪರ್ಷಿಯಕ್ಕೆ ಕೊಂಡುಹೋದನು. ನಾದಿರ್‌ಶಹನ ದಾಳಿಯ ಬಳಿಕ ಮೊಗಲ್ ಬಾದಶಾಹನ ಅಧಿಕಾರವು ತೀರಾ ಕುಂದಿ, ಹಿಂದುಸ್ಥಾನದ ಪ್ರಭುತ್ವಕ್ಕಾಗಿ ಮರಾಠರು ಹೋರಾಡ ತೊಡಗಿದರು.

ದಕ್ಷಿಣ ಹಿಂದುಸ್ಥಾನದಲ್ಲಿ ದಖ್ಖಣದ ಸುಬೇದಾರನಾಗಿದ್ದ ಅಸಾಫ ಜಹಾನು ಕ್ರಿ. ಶಕ ೧೭೨೩ ಲ್ಲಿ ತನ್ನ ಸ್ವಾತಂತ್ರ್ಯವನ್ನು ಸ್ಥಾಪಿಸಿ, ಹೈದರಾಬಾದಿನಲ್ಲಿ ತನ್ನ ರಾಜಧಾನಿಯನ್ನು ಮಾಡಿಕೊಂಡಿದ್ದನು. ಅವನೇ ಈಗಿನ ನಿಜಾಮರ ವಂಶದ ಮೂಲಪುರುಷನು. ನಾದಿರಶಹನ ದಾಳಿಯ ಸಮಯ ಅಸಾಫ ಜಹಾನು ಸಾಮ್ರಾಟನ ಸಹಾಯಕ್ಕೆ ಹೋಗದೆ, ತನ್ನ ಅಧಿಕಾರವನ್ನು ದಖ್ಖಣದಲ್ಲಿ ಸ್ಥಿರಗೊಳಿಸುವ ಬಗೆ ಹೇಗೆಂದು ನೋಡಿ ಕೂತಿದ್ದನು. ಅವನ ರಾಷ್ಟ್ರದ ಪಶ್ಚಿಮಕ್ಕೆ ಆಗ ಮರಾಠರು ಪುನಃ ಪ್ರಬಲರಾಗ ತೊಡಗಿದ್ದರು. ಕ್ರಿ. ಶಕ ೧೭೧೪ರ ಬಳಿಕ ಮರಾಠರ ರಾಜ್ಯದಲ್ಲಿ ಶಿವಾಜಿಯ ಸಂತತಿಯವರು ಹೆಸರಿಗೆ ಮಾತ್ರ ಅರಸರಾಗಿ ಉಳಿದು, ನಿಜವಾದ ಅಧಿಕಾರವೆಲ್ಲ ಪೇಶ್ವೆಯರಕೈಗೆ ಹೋಯಿತು. ಅವರು ನಾದಿರ ಶಹನ ದಾಳಿಯಿಂದ ನಿರ್ಬಲವಾದ ಮೊಗಲ್ ಚಕ್ರಾಧಿಪತ್ಯವನ್ನು ಮೂಲೆಗೊತ್ತಿ, ಇಡೀ ಹಿಂದುಸ್ಥಾನವನ್ನು ಹಿಂದೂರಾಷ್ಟ್ರವಾಗಿ ಮಾಡಬೇಕೆಂದು ಹೊರಟರು.

ಕ್ರಿ. ಶಕ ೧೭೪೮ರಲ್ಲಿ ಅಸಾಫ ಜಹಾನು ಕಾಲಾಧೀನನಾದೊಡನೆ ನಿಜಾಮ ಸಿಂಹಾಸನದ ಕುರಿತು ಅವನ ಮಗನಾದ ನಾಜಿರ ಜಂಗನಿಗೂ ಮೊಮ್ಮಗನಾದ ಮುಜಾಫರ ಜಂಗನಿಗೂ ಹೋರಾಟವೊದಗಿತು. ನಿಜಾಮರ ಕೆಳಗೆ ದಖ್ಖಣದ ಸುಭೆಗೆ ಸೇರಿದ ಆರ್ಕಾಟಿನ ನವಾಬಸ್ಥಾನಕ್ಕೂ ಅದೇ ಸಮಯ ಅನುವಾರುದ್ದೀನ್, ಚಂದಾಸಾಹೇಬರೊಳಗೆ ಹೋರಾಟ, ತೊಡಗಿತು. ಆ ಹೋರಾಟಗಳಲ್ಲಿ ದಕ್ಷಿಣ ಹಿಂದುಸ್ಥಾನದ ಪೂರ್ವ ಕರಾವಳಿಯಲ್ಲಿ ಭಂಡಸಾಲೆಗಳನ್ನು ಮಾಡಿಕೊಂಡಿದ್ದ ಫ್ರೆಂಚರೂ ಇಂಗ್ಲೀಷರೂ ಭಾಗವಹಿಸಿ, ಕೊನೆಗೆ ಇಂಗ್ಲೀಷರು ಸಹಾಯ ಮಾಡುತ್ತಿದ್ದ ಅನುವಾರುದ್ದೀನನ ಪಕ್ಷವು ಗೆದ್ದು, ಅನುವಾರುದ್ದೀನನ ಮಗನಾದ ಮುಹಮ್ಮದ್ ಆಲಿಯು ಆರ್ಕಾಟಿನ ನವಾಬನಾದನು. ೧೭೬೦ರಲ್ಲಿ, ಆಗ ನಿಜಾಮನಾದ ಸಲಬತ್ ಜಂಗನೂ ಇಂಗ್ಲೀಷರ ಪಕ್ಷವನ್ನು ವಹಿಸಿದ್ದರಿಂದ ದಕ್ಷಿಣ ಹಿಂದುಸ್ಥಾನದಲ್ಲಿ ಫ್ರೆಂಚರ ವರ್ಚಸ್ಸು ಅಳಿದು, ಪೂರ್ವ ಕರಾವಳಿಯಲ್ಲೆಲ್ಲಾ ಇಂಗ್ಲೀಷರು ಪ್ರಬಲರಾದರು.

ಹೈದರನು ಬೆದನೂರನ್ನು ಸ್ವಾಧೀನ ಪಡಿಸಿಕೊಳ್ಳುವಾಗ (೧೭೬೩) ಮರಾಠರು ಪಾಣಿಪತ್ತಿನ ಮಹಾಕದನದಲ್ಲಿ ಅಹಮ್ಮದ್‌ಶಹಾ ಅಬ್ದಾಲಿಯಿಂದ ಪರಾಜಿತರಾಗಿ, ಅವರ ಸ್ಥಿತಿಗತಿಗಳು ಅಸ್ತವ್ಯಸ್ತವಾಗಿದ್ದವು. ಆದರೆ ಪೇಶ್ವೆಯ ಸ್ಥಾನಕ್ಕೆ ಆಗ ಮಹಾಶೂರನೂ ಚತುರನೂ ಆದ ಮಾಧವರಾಯನು ಏರಿದ್ದರಿಂದ — ಆ ಪರಾಜಯದಿಂದ ಮರಾಠರು ಸಂಪೂರ್ಣ ಕುಗ್ಗಿಹೋಗದೆ, ಸ್ವಲ್ಪ ಕಾಲದಲ್ಲಿಯೇ ಪುನಃ ತಮ್ಮ ಬಲವನ್ನು ಸಂಗ್ರಹಿಸಿಕೊಂಡು, ದಕ್ಷಿಣ ಹಿಂದುಸ್ಥಾನದ ಪ್ರಭುತ್ವಕ್ಕಾಗಿ ನಿಜಾಮನೊಡನೆಯೂ ಹೈದರನೊಡನೆಯೂ ಕಾದಾಡ ಸಿದ್ಧರಾದರು. ಕ್ರಿ. ಶಕ ೧೭೫೭ರಲ್ಲಿ ಇಂಗ್ಲೀಷರು ಉತ್ತರ ಹಿಂದುಸ್ಥಾನದಲ್ಲಿ ತಮ್ಮ ಸಾಮ್ರಾಜ್ಯ ಸ್ಥಾಪನೆಗೆ ಅಡಿಗಲ್ಲನ್ನು ಹಾಕಿ, ದಕ್ಷಿಣ ಹಿಂದುಸ್ಥಾನದ ಹೋರಾಟದಲ್ಲಿ ತಾವೂ ಸೇರ ಸಿದ್ಧರಾದರು.

## ೨. ಮೈಸೂರು ರಾಜ್ಯ

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಮೈಸೂರು ರಾಜ್ಯವು ಮೈಸೂರಿನ ಸುತ್ತಲಿರುವ ಪ್ರದೇಶದಲ್ಲಿ ಕಿರಾ ಪುಟ್ಟದೊಂದು ರಾಷ್ಟ್ರವಾಗಿತ್ತು. ವಿಜಯನಗರ ಸಾಮ್ರಾಟನ ಪ್ರತಿನಿಧಿಯು ಶ್ರೀರಂಗಪಟ್ಟಣದಲ್ಲಿ ರಾಜಧಾನಿ ಮಾಡಿಕೊಂಡು, ಮೈಸೂರು ಅರಸನ ಕಪ್ಪವನ್ನು ಪಡೆದು, ಸಾಮ್ರಾಟನಿಗೆ ಕಳುಹಿಸಿಕೊಡುತ್ತಿದ್ದನು. ರಕ್ಕಸತಂಗಡಿಗೆಯ ಕದನದಲ್ಲಿ ವಿಜಯನಗರ ಸಾಮ್ರಾಜ್ಯವು ಕಳೆಗುಂದಿದ ಬಳಿಕ, ಮೈಸೂರಿನ ಅರಸನು ಕಪ್ಪವನ್ನು ಕೊಡ ನಿರಾಕರಿಸಿ, ಶ್ರೀರಂಗಪಟ್ಟಣದಿಂದ ವಿಜಯನಗರದ ಪ್ರತಿನಿಧಿಯನ್ನು ಓಡಿಸಿ ಅಲ್ಲಿ ತನ್ನ ರಾಜಧಾನಿಯನ್ನು ಸ್ಥಾಪಿಸಿದನು. ಅದರ ಬಳಿಕ, ದಕ್ಷಿಣ ಹಿಂದುಸ್ಥಾನದಲ್ಲಿ ಅವರಂಗಜೇಬನಿಗೂ ಬಿಜಾಪುರ ಸುಲ್ತಾನನಿಗೂ ನಡೆದ ಯುದ್ಧದ ನಡುವೆ ಮೈಸೂರಿನ ಅರಸನು ತನ್ನ ರಾಜ್ಯದ ಸುತ್ತಲಿರುವ ಪುಟ್ಟ ರಾಷ್ಟ್ರಗಳನ್ನೊಂದೊಂದನ್ನೇ ಜೈಸಿ, ಬೆಂಗಳೂರನ್ನು ಮೊಗಲ್ ಸೇನಾಧಿಪತಿಯಿಂದ ಕ್ರಯಕ್ಕೆ ಪಡೆದು, ಮೈಸೂರು ರಾಜ್ಯವನ್ನು ಮೆಲ್ಲಮೆಲ್ಲನೆ ವಿಸ್ತರಿಸಿಕೊಂಡನು. ಕ್ರಿ. ಶಕ ೧೭೦೭ರಲ್ಲಿ ಮೈಸೂರು ರಾಜ್ಯವು ಇಕ್ಕೇರಿ ಅರಸನ ಕೆಲವು ಪ್ರಾಂತ್ಯವನ್ನೂ ಕೂಡಿಸಿಕೊಂಡು ದೊಡ್ಡದಾಗಿ ಬೆಳೆದಿತ್ತು. ಕ್ರಿ. ಶಕ ೧೭೩೪ರಲ್ಲಿ ಆ ಮೈಸೂರು ರಾಜ್ಯದ ಸಿಂಹಾಸನವನ್ನು ಐದು ವರ್ಷದ ಬಾಲಕನಾದ ಇಮ್ಮಡಿ ಕೃಷ್ಣರಾಜನು ಏರಿದನು. ಅರಸನು ಬಾಲಕನಾದ್ದರಿಂದ ರಾಜ್ಯಾಧಿಕಾರವೆಲ್ಲವೂ ದಳವಾಯಿ

ಯಾದ ದೇವರಾಜನ ಮತ್ತು ಸೇನಾಪತಿಯಾದ ನಂಜರಾಜನ ಕೈಗೆ ಸೇರಿತು. ಹೈದರನು ನಂಜರಾಜನ ಸೈನದಲ್ಲಿ ಸೈನಿಕನಾಗಿ ಸೇರಿದನು. ಅವನು ಸೈನಿಕನಾಗಿರುವಾಗಲೇ ತನ್ನ ಶೌರ್ಯ, ಚಾತುರ್ಯಗಳಿಂದ ನಂಜರಾಜನ ಮೆಚ್ಚಿಗೆಯನ್ನು ಪಡೆದು, ಕ್ರಿ. ಶಕ ೧೭೪೯ರಲ್ಲಿ ಮೈಸೂರು ಸೈನ್ಯದಲ್ಲಿ "ನಾಯಕ"ನೆಂಬ ಸಣ್ಣ ದಳಪತಿಯಾಗಿ ನೇಮಕಪಟ್ಟನು. ಅದರ ಬಳಿಕ, ಆರ್ಕಾಟಿನ ನವಾಬಸ್ಥಾನಕ್ಕೆ ನಡೆದ ಹೋರಾಟಗಳಲ್ಲಿ ಹೈದರನು ತನ್ನ ಶೌರ್ಯ, ಚಾತುರ್ಯಗಳಿಂದ ನಂಜರಾಜನ ಪ್ರೀತಿಯನ್ನು ಇನ್ನೂ ಘನಿಸಿ, ಡಿಂಡಿಗಲ್ಲಿನ ಫೌಜುದಾರನಾದನು. ಅವನ ರಾಜಕಾರ್ಯಕೌಶಲ್ಯಕ್ಕೆ ಮೆಚ್ಚಿದ ಮೈಸೂರಿನ ಅರಸನು ಅವನಿಗೆ ಕ್ರಿ. ಶಕ ೧೭೫೭ರಲ್ಲಿ ಬೆಂಗಳೂರು ಜಿಲ್ಲೆಯನ್ನು ಜಹಗೀರಾಗಿ ಕೊಟ್ಟನು.

ಕ್ರಿ. ಶಕ ೧೭೫೯ರಲ್ಲಿ ನಂಜರಾಜನನ್ನು ಮೈಸೂರು ಅರಸನು ಅಧಿಕಾರದಿಂದ ತಳ್ಳಿ, ಹೈದರನನ್ನೂ ಖಂಡೇರಾಯನೆಂಬ ಬ್ರಾಹ್ಮಣನನ್ನೂ ತನ್ನ ಬಳಿ ಸೇರಿಸಿಕೊಂಡನು. ಖಂಡೇರಾಯನು ಮೊತ್ತಮೊದಲು ಹೈದರನ ಸ್ನೇಹಿತನಾಗಿದ್ದರೂ – ಹೈದರನು ದಿನೇ ದಿನೇ ಪ್ರಬಲನಾಗುವದನ್ನು ಕಂಡು ಮತ್ಸರಗೊಂಡು, ಹೈದರನನ್ನು ನಾಶಪಡಿಸಬೇಕೆಂದು ನಿಶ್ಚೈಸಿದನು. ಆದರೆ ಹೈದರನು ಕ್ರಿ. ಶಕ ೧೭೬೧ರಲ್ಲಿ ಖಂಡೇರಾಯನು ಬೀಸಿದ ಜಾಳಿಗೆಯಿಂದ ತಪ್ಪಿಸಿಕೊಂಡು, ಖಂಡೇರಾಯನನ್ನು ಸೆರೆ ಹಿಡಿದು, ತಾನೇ ಮೈಸೂರಿನ ಸರ್ವಾಧಿಕಾರಿಯಾದನು. ಅದರ ಬಳಿಕ ಮೈಸೂರಿನ ರಾಜ್ಯಭಾರವು ಇಮ್ಮಡಿ ಕೃಷ್ಣರಾಜನ ಹೆಸರಲ್ಲೇ ನಡೆಯುತ್ತಿದ್ದರೂ ಹೈದರನು ಮೈಸೂರಿನ ನಿಜವಾದ ಒಡೆಯನಾದನು.

ಕ್ರಿ. ಶಕ ೧೭೬೩ರಲ್ಲಿ ಮೈಸೂರಿನ ಸರ್ವಾಧಿಕಾರಿಯಾಗಿದ್ದ ಹೈದರನಿಗೆ ಬೆದನೂರೂ ದೊರಕಿತು, ಬೆದನೂರಿನ ರಾಜಕೋಶದಲ್ಲಿ ಅಪರಿಮಿತ ದ್ರವ್ಯವೂ ದೊರಕಿತು. ಹೈದರನು ಅದರ ಬಳಿಕ ದಕ್ಷಿಣ ಹಿಂದುಸ್ಥಾನವನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳುವದಕ್ಕೆ ಹೊರಟನು.

## ೩. ಹೈದರನ ದಿಗ್ವಿಜಯ

ಬೆದನೂರು ಹೈದರನ ಕೈವಶವಾದ ಬಳಿಕ, ಹೈದರನು ತುಳುವಕ್ಕೆ ಇಳಿದು ಕಾರ್ಕಳಕ್ಕೆ ಬಂದು, ಅಲ್ಲಿ ಚೌಟ ಅರಸನನ್ನು ತರಿಸಿ, ಅವನ ಕಪ್ಪವನ್ನು ಪಡೆದು, ಮಂಗಳೂರಿಗೆ ಮುಂಬರಿದನು. ಮಂಗಳೂರಲ್ಲಿ ಬಂಗ, ಅಜಿಲರು ಹೈದರನು ನಿಶ್ಚೈಸಿದ ಕಪ್ಪವನ್ನು ಕೊಡಲೊಪ್ಪಿದರು. ಹೈದರನು ನೀಲೇಶ್ವರ ತನಕ ಹೋಗಿ

ಎಲ್ಲಾ ತುಳುವ ಸಾಮಂತರ ಶರಣಾಗತಿಯನ್ನು ಪಡೆದು, ಕಾರವಾರ ದಾರಿಯಿಂದ ಬೆದನೂರಿಗೆ ಮರಳಿದನು. ಹೈದರನು ಕ್ರಿ. ಶಕ ೧೭೬೫ರ ತನಕ ಬೆದನೂರಿನಲ್ಲೇ ಇದ್ದು, ತನ್ನ ರಾಜ್ಯವನ್ನು ಸುರಕ್ಷಿತಪಡಿಸಿಕೊಳ್ಳಲಿಕ್ಕೂ ಆ ರಾಜ್ಯದಿಂದ ತನ್ನ ಮುಂದಿನ ದಿಗ್ವಿಜಯಗಳಿಗೆ ಬೇಕಾಗುವ ದ್ರವ್ಯಸಹಾಯವನ್ನು ಸಂಪಾದಿಸಲಿಕ್ಕೂ, ಬೇಕಾಗುವ ಉಪಾಯಗಳನ್ನು ಚಿಂತಿಸಿಕೊಂಡಿದ್ದನು. ನೌಕಾಬಲವಿಲ್ಲದೆ ಇಂಗ್ಲೀಷರೊಡನೆ ತಾನು ಜಯಶೀಲನಾಗೆನೆಂದು ತಿಳಿದಿದ್ದ ಹೈದರನು ಪಶ್ಚಿಮ ಕರಾವಳಿಯಲ್ಲಿ ನೌಕಾಠಾಣ್ಯಗಳನ್ನೂ ಶಸ್ತ್ರಾಗಾರಗಳನ್ನೂ ಸ್ಥಾಪಿಸ ನಿಶ್ಚೈಸಿದನು. ಮಲ್ಪೆಯಲ್ಲಿ ದರಿಯಾ ಬಹದೂರ್ ಘಡವನ್ನು ಕಟ್ಟಿ, ಕುಂದಾಪುರ, ಕಾಪುಗಳಲ್ಲಿ ಕೋಟೆಗಳನ್ನು ಸ್ಥಾಪಿಸಿ, ಮಂಗಳೂರಿನಲ್ಲಿ ಯುದ್ಧದ ಹಡಗುಗಳು ನಿಲ್ಲಲಿಕ್ಕೆ ಬೇಕಾಗುವ ಅನುಕೂಲತೆಗಳನ್ನು ನಿರ್ಮಿಸಿ, ಕಣ್ಣಾನೂರಿನ ಸುಲ್ತಾನ ಆಲಿರಾಜನನ್ನು ತನ್ನ ನೌಕಾಪತಿಯಾಗಿ ನೇಮಿಸಿದನು. ತುಳುವದ ಕಂದಾಯವನ್ನೂ ಸಾಮಂತರಿಂದ ಬರತಕ್ಕ ಕಪ್ಪವನ್ನೂ ಏರಿಸಿದನು. ಸಾಗ್ವಳಿ ಮಾಡದೆ ಬಿಟ್ಟ ಭೂಮಿಗಳ ಮೇಲೆ ಇಕ್ಕೇರಿ ಅರಸರು ಕಂದಾಯವನ್ನು ಹೊರಿಸುತ್ತಿದ್ದಿಲ್ಲ; ಹೈದರನು ಸಾಗ್ವಳಿ ಮಾಡಿದ ಭೂಮಿಗಳ ಹುಟ್ಟುವಳಿಯಿಂದ ಸಾಗ್ವಳಿ ಮಾಡದೆ ಬಿಟ್ಟ ಭೂಮಿಗಳ ಕಂದಾಯವನ್ನು ಪಡೆಯತೊಡಗಿದನು. ಪಟೇಲರೂ ದೊಡ್ಡ ದೊಡ್ಡ ವರ್ಗದಾರರೂ ಆ ತನಕ ಕೊಡಬೇಕಾಗಿರದ ಕೆಲವು ತೆರಿಗೆಗಳನ್ನು ಅವರ ಮೇಲೂ ಹೊರಿಸಿದನು. ಸಾಮಂತರ ಕಪ್ಪಗಳನ್ನು ನೂರಕ್ಕೆ ಐವತ್ತರಂತೆ ಹೆಚ್ಚಿಸಿದನು.

ಕ್ರಿ. ಶಕ ೧೭೬೬ರಲ್ಲಿ ಹೈದರನು ಪುನಃ ಸೈನ್ಯ ಸಹಿತ ತುಳುವಕ್ಕಿಳಿದು ಮಲಬಾರನ್ನು ಜೈಸಿ, – ಕೊಚ್ಚಿ, ಪಾಲ್ಘಾಟು ಸಂಸ್ಥಾನಿಕರ ಕಪ್ಪವನ್ನು ಪಡೆದು, ಕೊಯಂಬತ್ತೂರಿಗೆ ಮುಂಬರಿದನು. ಹೈದರನು ಮಲಬಾರನ್ನು ಬಿಟ್ಟು ಮುಂಬರಿಯುತ್ತಲೇ ಮಲಬಾರಿನ ನಾಯರರು ದಂಗೆ ಎಬ್ಬಿಸಿದ್ದರಿಂದ ಹೈದರನು ಮಲಬಾರಿಗೆ ಮರಳಿ ಬಂದು, ಆ ದಂಗೆಯನ್ನು ಮುರಿದು, ಸುಮಾರು ೧೫,೦೦೦ ನಾಯರರನ್ನು ಹಿಡಿದು ಮೈಸೂರಿನ ಮಲೆನಾಡಿಗೆ ಕಳುಹಿಸಿದನು. ಆ ಬಳಿಕ ಪಾಲ್ಘಾಟಿನಲ್ಲಿ ಕೋಟೆಯೊಂದನ್ನು ಕಟ್ಟಿ, ಶ್ರೀರಂಗಪಟ್ಟಣಕ್ಕೆ ಮರಳಿದನು.

ಕ್ರಿ. ಶಕ ೧೭೬೭ರಲ್ಲಿ ಕೃಷ್ಣರಾಜನು ಮೃತನಾದ ಬಳಿಕ ಅವನ ಮಗನಾದ ನಂಜರಾಜನು ರಾಜ್ಯಾಧಿಕಾರವನ್ನು ತನ್ನ ಕೈಯಲ್ಲಿಟ್ಟುಕೊಳ್ಳಬೇಕೆಂದು

ಪ್ರಯುಕ್ತಿಸುತ್ತಿದ್ದುದರಿಂದ ಹೈದರನು ಆ ತನಕ ಅರಸು ಕುಟುಂಬಕ್ಕೆ ಕೊಡುತ್ತಿದ್ದ ಮೂರು ಲಕ್ಷ ವರಹಗಳನ್ನು ನಿಲ್ಲಿಸಿ, ಅರಮನೆಯ ಬಳಿ ತನ್ನ ಪಕ್ಷದ ಕಾವಲುಗಾರರನ್ನಿಟ್ಟನು.

ತುಳುವದ ಸಾಮಂತರಿಗೆ ಹೈದರನು ನಿಶ್ಚೈಸಿದ ಕಪ್ಪವನ್ನು ಕೊಡ ಸಾಧ್ಯವಾಗಲಿಲ್ಲ. ಹೈದರನ ಪ್ರತಿನಿಧಿಯಾಗಿ ತುಳುವವನ್ನಾಳುತ್ತಿದ್ದ ಶೇಕಾಲಿಯು ಬಂಗ, ಚೌಟ, ಮೂಲ, ಸಾವಂತ, ಅಜಿಲ, ತೋಳಹಾರರ ರಾಜ್ಯಗಳನ್ನೆಲ್ಲಾ ಅವರ ಕೈಯಿಂದ ಬಿಡಿಸಿ, ತನ್ನ ಸ್ವಾಧೀನಪಡಿಸಿಕೊಂಡನು. ಹೈದರನು ಅವರಲ್ಲಿ ಕೆಲವರಿಗೆ ವೇತನವನ್ನು ಕೊಟ್ಟನು; ಉಳಿದವರಿಗೆ ಅವರ ಖರ್ಚಿನ ಬಗ್ಗೆ ಸ್ವಲ್ಪ ಉಂಬಳಿ ಬಿಟ್ಟನು. ನೀಲೇಶ್ವರ ಅರಸನು ತಿರುವಾಂಕೂರಿಗೆ ಪಲಾಯನಮಾಡಿದ್ದರಿಂದ ಆತನ ರಾಜ್ಯವನ್ನು ತನ್ನ ಸ್ವಾಧೀನಪಡಿಸಿಕೊಂಡನು.

ಅದರ ಬಳಿಕ ಹೈದರನು ಮೈಸೂರು ರಾಜ್ಯವನ್ನು ವಿಸ್ತರಿಸುತ್ತಾ ಹೋಗಿ ಕೊಡಗು, ನೀಲಗಿರಿ, ಸೇಲಂ, ಕೊಯಮುತ್ತೂರು, ಬಳ್ಳಾರಿ, ಕಡಪ, ಕರ್ನೂಲು, ಅನಂತಪುರ, ಧಾರವಾಡಗಳನ್ನು ಮಲಬಾರು ಕನ್ನಡ ಜಿಲ್ಲೆಗಳೊಂದಿಗೆ ಆ ರಾಜ್ಯದಲ್ಲಿ ಸೇರಿಸಿಕೊಂಡನು. ಆದರೆ ಹೈದರನ ಈ ದಿಗ್ವಿಜಯಗಳಿಂದ ಮರಾಠರೂ ನಿಜಾಮರೂ ಕೆಣಕಿದಂತಾಗಿ, ಮೈಸೂರಿನ ಮೇಲೆ ದಾಳಿ ಮಾಡಿದರು. ಹೈದರನು ಮರಾಠರಿಗೆ ೩೫ ಲಕ್ಷ ರೂಪಾಯಿ ಕಪ್ಪವನ್ನು ಸಲ್ಲಿಸಿ ಅವರೊಡನೆ ಸಂಧಾನ ಬೆಳೆಸಬೇಕಾಯಿತು; ಬಳಿಕ ಅವನು ನಿಜಾಮನನ್ನೂ ಸಮಾಧಾನ ಪಡಿಸಿ, ಅವನ ರಾಜ್ಯಕ್ಕೆ ಮರಳುವಂತೆ ಅವನನ್ನು ಒಡಂಬಡಿಸಿದನು.

**೧ನೇ ಮೈಸೂರು ಯುದ್ಧ** (ಕ್ರಿ. ಶಕ ೧೭೬೭ರಿಂದ ೧೭೬೯) – ಕ್ರಿ. ಶಕ ೧೭೬೭ರಲ್ಲಿ ಹೈದರಾಲಿಗೂ ಇಂಗ್ಲೀಷರಿಗೂ ಯುದ್ಧ ಪ್ರಾರಂಭವಾಯಿತು. ಈ ಯುದ್ಧದ ನಡುವೆ ಮುಂಬೈಯಲ್ಲಿದ್ದ ಇಂಗ್ಲೀಷರು ಮಂಗಳೂರಿಗೆ ಸೈನ್ಯವನ್ನು ಕಳುಹಿಸಿ ಮಂಗಳೂರನ್ನು ಹಿಡಿದರು. ಆದರೆ ಹೈದರನು ಬಂದು ಅವರನ್ನು ಓಡಿಸಿ ಮಂಗಳೂರನ್ನು ಪುನಃ ತನ್ನ ಸ್ವಾಧೀನಪಡಿಸಿಕೊಂಡನು. ಕೊನೆಗೆ ಎರಡು ವರ್ಷಗಳ ಹೋರಾಟದ ಬಳಿಕ ಹೈದರನಿಗೂ ಇಂಗ್ಲೀಷರಿಗೂ ಸಂಧಾನವಾಯಿತು. ಈ ಯುದ್ಧದಲ್ಲಿ ಹೈದರನಿಗೆ ತಗಲಿದ ಖರ್ಚಿಗಾಗಿ ಹೈದರನು ಬಿದನೂರು ರಾಜ್ಯದ ವರ್ಗದಾರರಿಂದೆಲ್ಲಾ ವಂತಿಗೆಯನ್ನು ವಸೂಲು ಮಾಡಿದನು. ತನಗೆ ಸಹಾಯ ಮಾಡಿದ ಕೊಡಗಿನ ಅರಸನಿಗೆ ಪಂಜ ಮತ್ತು ಬೆಳ್ಳಾರೆ ಮಾಗಣೆಗಳನ್ನು ಕೊಟ್ಟನು.

ಮರಾಠರು ಕ್ರಿ. ಶಕ ೧೭೭೦ರಲ್ಲಿ ಪುನಃ ಮೈಸೂರಿನ ಮೇಲೆ ಸಾಗಿ ಬಂದರು. ಹೈದರನು ಪುನಃ ಅವರೊಡನೆ ಯುದ್ಧಮಾಡಿ, ಪರಾಜಿತನಾಗಿ, ಮೂವತ್ತು ಲಕ್ಷ ರೂಪಾಯಿ ಕಪ್ಪ ಕೊಡಬೇಕಾಯಿತು. ಆ ಯುದ್ಧದ ನಡುವೆ ಮೈಸೂರು ಅರಸನು ಮರಾಠರೊಡನೆ ಹೈದರನ ವಿರೋಧವಾಗಿ ಒಳಸಂಚು ನಡೆಸಿದ್ದರಿಂದ ಹೈದರನು ಅವನನ್ನು ಕೊಲ್ಲಿಸಿ ಅವನ ತಮ್ಮನನ್ನು ಸಿಂಹಾಸನ ಕ್ಕೇರಿಸಿದನು.

ಕ್ರಿ. ಶಕ ೧೭೭೨ರಲ್ಲಿ, ಮಾಧವರಾಯ ಪೇಶ್ವೆಯು ಕಾಲವಶನಾಗಿ ಮರಾಠರ ರಾಜ್ಯದಲ್ಲಿ ಗೊಂದಲಗಳೆದ್ದವು. ಹೈದರನು ಆ ಸಂದರ್ಭದಲ್ಲಿ ತಾನು ಮರಾಠರಿಗೆ ಹಿಂದೆ ಬಿಟ್ಟುಕೊಟ್ಟ ಪ್ರದೇಶಗಳನ್ನೆಲ್ಲಾ ಪುನಃ ತನ್ನ ಸ್ವಾಧೀನಪಡಿಸಿಕೊಂಡನು. ಕ್ರಿ. ಶಕ ೧೭೭೪ರಲ್ಲಿ ಹೈದರನು ಮಂಗಳೂರಿನಲ್ಲಿ ಈಗ ರುಜಾರಿಯೋ ಇಗರ್ಜಿ ಇರುವಲ್ಲಿದ್ದ ಪೋರ್ತುಗೀಸರ ಕೋಟೆಯನ್ನು ನೆಲಸಮ ಮಾಡಿ, ಈಗ ಹಜೂರು ಕಚೇರಿ ಇರುವಲ್ಲಿ ಬಂಗರು ಕಟ್ಟಿಸಿದ ಕೋಟೆಯನ್ನು ಭದ್ರಪಡಿಸಿ, ಬೋಳೂರಿನಲ್ಲಿ ಸುಲ್ತಾನ ಬತ್ತೇರಿಯನ್ನು ಕಟ್ಟಿಸಿದನು. ಕೊಡಗು ಅರಸನಿಂದ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಸುಳ್ಯ, ಬೆಳ್ಳಾರೆ, ಅಮರ ಮತ್ತು ಪಂಜ ಮಾಗಣೆಗಳನ್ನು ಬಿಡಿಸಿಕೊಂಡನು.

ಕ್ರಿ. ಶಕ ೧೭೭೬ರಲ್ಲಿ ಮೈಸೂರು ಅರಸನು ತೀರಿಹೋದ್ದರಿಂದ ಹೈದರನು (ಮುಮ್ಮಡಿ ಕೃಷ್ಣರಾಜನ ತಂದೆ) ಚಾಮರಾಜನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದನು. ೧೭೭೬ರಿಂದ ೧೭೮೦ರ ನಡುವೆ ತನ್ನ ರಾಜ್ಯವನ್ನು ಉತ್ತರಕ್ಕೆ ಕೃಷ್ಣಾನದಿಯ ತನಕ ವಿಸ್ತರಿಸಿ ಭದ್ರಪಡಿಸಿದನು.

**೨ನೇ ಮೈಸೂರು ಯುದ್ಧ**– ಮರಾಠರೊಡನೆ ಯುದ್ಧವೊದಗಿದಾಗ ಹೈದರನಿಗೆ ತಾವು ಸಹಾಯ ಮಾಡುವೆವೆಂದು ಹಿಂದೆ ಇಂಗ್ಲೀಷರು ಹೈದರನಿಗೆ ಭಾಷೆ ಕೊಟ್ಟಿದ್ದರು. ಆದರೆ ಆ ಪ್ರಕಾರ ಅವರು ಸಹಾಯ ಮಾಡದ್ದರಿಂದ ಹೈದರನು ಅವರ ಮೇಲೆ ತುಂಬಾ ರೇಗಿದ್ದನು. ಕ್ರಿ. ಶಕ ೧೭೭೮ರಲ್ಲಿ ಇಂಗ್ಲೀಷರಿಗೂ ಫ್ರೆಂಚರಿಗೂ ಯುದ್ಧವೊದಗಿದೊಡನೆ ಇಂಗ್ಲೀಷರ ಸೈನ್ಯವು ಮದ್ರಾಸಿನಿಂದ ಹೊರಟು, ಹೈದರನ ರಾಜ್ಯದಿಂದ ಹಾದುಹೋಗಿ, ಮಾಹೆಯನ್ನು ಸ್ವಾಧೀನಪಡಿಸಿಕೊಂಡಿತು. ತನ್ನ ಅನುಮತಿಯಿಲ್ಲದೆ ತನ್ನ ರಾಜ್ಯದಲ್ಲಿ ಇಂಗ್ಲೀಷ್ ಸೈನ್ಯವು ಪ್ರವೇಶವಾದ್ದನ್ನು ನೋಡಿ, ಹೈದರನ ಕೋಪವು ಮೇರೆತಪ್ಪಿತು. ಅವನು ೧೭೮೦ರಲ್ಲಿ ಪ್ರಚಂಡ ಸೈನ್ಯವನ್ನು ಕೂಡಿಸಿಕೊಂಡು, ಮೈಸೂರು ಘಟ್ಟ

ದಿಂವ ಪೂರ್ವಕ್ಕಿಳಿದು "ಕರ್ನಾಟಕ"ದ ಹಳ್ಳಿಗಳನ್ನೆಲ್ಲಾ ಭೀಕರ ರೀತಿಯಿಂದ ಹಾವಳಿ ಮಾಡಿದನು. ೧೭೮೧ರಲ್ಲಿ ಕೊನೆಗೆ ಪೊರ್ಟೋನೋವಿನಲ್ಲಿ ಇಂಗ್ಲೀಷರು ಹೈದರನನ್ನು ಸೋಲಿಸಿ, ಅವನ ಹಾವಳಿಯನ್ನು ತಡೆಗಟ್ಟಿದರು. ಅತ್ತ ಮಂಗಳೂರಿನಲ್ಲಿದ್ದ ಹೈದರನ ನೌಕಾಪಡೆಯನ್ನೂ ಇಂಗ್ಲೀಷರು ವಶಪಡಿಸಿದರು. ಇವರಿಂದ ತಡೆದಂತಾದ ಹೈದರನು ಇನ್ನೂ ಪ್ರಬಲ ಸನ್ನಾಹವನ್ನು ಮಾಡಿ, ಯುದ್ಧಕ್ಕೆ ಪುನಃ ಪ್ರಾರಂಭಿಸುತ್ತಿರುವಾಗ ಅಕಸ್ಮಾತ್ ವ್ಯಾಧಿಪೀಡಿತನಾಗಿ ಕ್ರಿ. ಶಕ ೧೭೮೨ನೇ ದಶಂಬರದಲ್ಲಿ ಮರಣಪಟ್ಟನು.

## ೪. ಟೀಪು

ಹೈದರನು ಕಾಲವಶನಾದೊಡನೆ ಅವನ ಮಗನಾದ ಟೀಪುವು ಶ್ರೀರಂಗಪಟ್ಟಣದ ಬೊಕ್ಕಸವನ್ನೂ ಮೈಸೂರು ಸೈನ್ಯವನ್ನೂ ತನ್ನ ಸ್ವಾಧೀನ ಮಾಡಿಕೊಂಡು, ಇಂಗ್ಲೀಷರೊಡನೆ ಯುದ್ಧವನ್ನು ಮಾಡತೊಡಗಿದನು. ಮುಂಬೈಯಿಂದ ಇಂಗ್ಲೀಷರು ಕಳುಹಿಸಿದ ಸೈನ್ಯವು ಕುಂದಾಪುರದಲ್ಲಿ ಇಳಿದು, ಅಲ್ಲಿದ್ದ ಸೈನಿಕರನ್ನು ಓಡಿಸಿ, ಹೊಸಂಗಡಿ ಹಾದಿಯಿಂದ ಘಟ್ಟ ಹತ್ತಿ, ಬೆದನೂರನ್ನು ಸ್ವಾಧೀನಪಡಿಸಿಕೊಂಡಿತ್ತು. ಟೀಪುವು ಅಲ್ಲಿಗೆ ಹೋಗಿ ಬೆದನೂರನ್ನು ಮುತ್ತಿದೊಡನೆ, ಇಂಗ್ಲೀಷರ ಸೇನಾಪತಿಯಾದ ಜನರಲ್ ಮೆಥ್ಯೂಸನು ಟೀಪುವಿಗೆ ಶರಣಾಗತನಾದನು. ೧೭೮೩ನೇ ಜನವರಿಯಲ್ಲಿ ಮಂಗಳೂರನ್ನು ಇಂಗ್ಲೀಷರ ಇನ್ನೊಂದು ದಳವು ಸ್ವಾಧೀನಪಡಿಸಿಕೊಂಡಿತ್ತು. ಟೀಪುವು ಮಂಗಳೂರಿಗೆ ಮುತ್ತಿಗೆ ಹಾಕಿ, ಅದನ್ನು ೧೭೮೪ರಲ್ಲಿ ಪುನಃ ಸ್ವಾಧೀನಪಡಿಸಿಕೊಂಡನು. ಅಲ್ಲಿಯ ದಳಪತಿಯೂ ಟೀಪುವಿಗೆ ಶರಣಾಗತನಾದನು.

ಅದರ ಬಳಿಕ ಟೀಪುವು ಇಂಗ್ಲೀಷರೊಡನೆ ಸಂಧಾನ ಬೆಳೆಸಿ, – ಇತ್ತಂಡದವರೂ ತಾವು ಯುದ್ಧದ ನಡುವೆ ಸ್ವಾಧೀನಪಡಿಕೊಂಡ ಪ್ರದೇಶಗಳನ್ನೆಲ್ಲಾ ಬಿಟ್ಟುಕೊಟ್ಟರು.

ಕ್ರಿ. ಶಕ ೧೭೮೪ರಿಂದ ೧೭೯೨ರ ತನಕ ಟೀಪುವು ಮೈಸೂರನ್ನು ಬಲಿಷ್ಠ ಸುಲ್ತಾನೀ ರಾಜ್ಯವನ್ನಾಗಿ ಮಾಡುವ ಪ್ರಯತ್ನದಲ್ಲಿದ್ದನು. ತುಳುವದಲ್ಲಿ ಇನ್ನೂ ರಾಜ್ಯಾಧಿಕಾರವನ್ನು ನಡೆಸುತ್ತಿದ್ದ ಕುಂಬಳೆ ಅರಸನು ಯುದ್ಧದ ನಡುವೆ ಇಂಗ್ಲೀಷರಿಗೆ ಸಹಾಯ ಮಾಡಿದ್ದರಿಂದ ಟೀಪುವು ಅವನ ರಾಜ್ಯವನ್ನು ಸ್ವಾಧೀನಪಡಿಸಿಕೊಂಡನು. ಅದರ ಬಳಿಕ ಕುಂಬಳೆ ಅರಸನು ತಲಚೇರಿಗೆ ಹೋಗಿ

ಇಂಗ್ಲೀಷರ ಆಶ್ರಯದಲ್ಲಿದ್ದನು. ಇಂಗ್ಲೀಷರಿಗೆ ಸಹಾಯವನ್ನು ಮಾಡಿದ್ದರೆಂಬ ಕಾರಣದಿಂದ ತುಳುವದ ರೋಮನ್ ಕೆಥೊಲಿಕ್ ಕ್ರೈಸ್ತರ ಮೇಲೆ ಟೀಪುವು ಭೀಕರ ರೀತಿಯಿಂದ ಸೇಡನ್ನು ತೀರಿಸಿದನು. ತುಳುವದಲ್ಲಿದ್ದ ಯಾವತ್ತೂ ರೋಮನ್ ಕೆಥೊಲಿಕರನ್ನು ಟೀಪುವಿನ ಸೈನಿಕರು ಅವರ ಮನೆಗಳಿಂದ ಹೊರಗೆ ಹಾಕಿ, ಕಾಲುದಾರಿಯಿಂದ ಶ್ರೀರಂಗಪಟ್ಟಣಕ್ಕೆ ಕೊಂಡು ಹೋಗಿ ಅವರನ್ನು ಅಲ್ಲಿ ಇಸ್ಲಾಮು ಮತಕ್ಕೆ ಸೇರಿಸಿದರು. ದಾರಿಯಲ್ಲಿ ಆ ಕ್ರೈಸ್ತರು ಅನೇಕ ಸಂಕಷ್ಟಗಳನ್ನು ಅನುಭವಿಸಿದರು. ತುಳುವದಲ್ಲಿ ಅಲ್ಲಲ್ಲಿದ್ದ ಕ್ರೈಸ್ತ ಇಗರ್ಜಿಗಳನ್ನು ಟೀಪುವು ನೆಲಸಮ ಮಾಡಿದನು. ಮಂಗಳೂರಿನ ಇಗರ್ಜಿಯೊಂದರ ಕಲ್ಲುಗಳಿಂದ ಬಾವಟೆಗುಡ್ಡದ ಮೇಲೆ ಇದ್ಗವನ್ನು ಕಟ್ಟಿಸಿದನು. ಕ್ರಿ. ಶಕ ೧೭೮೪ರಲ್ಲಿ ನೀಲೇಶ್ವರ ಅರಸನು ತನ್ನ ರಾಜ್ಯಕ್ಕೆ ಮರಳಿ, ದಂಗೆಯನ್ನು ಎಬ್ಬಿಸಿದೊಡನೆ ಆತನನ್ನು ಹಿಡಿದು ಗಲ್ಲಿಗೇರಿಸಿದನು.

ಟೀಪುವು ಹೈದರನಂತೆಯೇ ಶೂರನಾಗಿದ್ದರೂ ಹೈದರನ ದೀರ್ಘದರ್ಶಿತ್ವವಾಗಲಿ ರಾಜಕಾರ್ಯಕೌಶಲ್ಯವಾಗಲಿ ಟೀಪುವಿನಲ್ಲಿರಲಿಲ್ಲ. ಹೈದರನು ಮೈಸೂರಿನ ಹಿಂದೂ ಅರಸನನ್ನು ಮನ್ನಣೆಯಿಂದ ಕಾಪಾಡಿ, ರಾಜ್ಯಭಾರವನ್ನು ಆತನ ಹೆಸರಲ್ಲಿಯೇ ನಡೆಸುತ್ತಿದ್ದುದರಿಂದ ಅವನಿಗೆ ಮೈಸೂರಿನ ಹಿಂದುಗಳು ಕೂಡಾ ಬೆಂಬಲರಾಗಿದ್ದರು. ಹೈದರನಿಗೆ ನವಾಬನೆಂಬ ಬಿರುದೇ ಸಾಕೆಂದಿತ್ತು. ಟೀಪುವು ಹಿಂದೂ ಅರಸನನ್ನು ಸಂಪೂರ್ಣ ಮೂಲೆಗೊತ್ತಿ, ಸುಲ್ತಾನನೆಂಬ ಬಿರುದನ್ನು ಧರಿಸಿಕೊಂಡು, ದಕ್ಷಿಣ ಹಿಂದುಸ್ಥಾನದಲ್ಲಿ ಸುಲ್ತಾನೀ ರಾಜ್ಯವನ್ನು ಸ್ಥಾಪಿಸ ಹೊರಟನು. ಹೀಗಾಗಿ ಅವನಿಗೆ ಮೈಸೂರಿನ ಹಿಂದುಗಳ ಭಕ್ತಿಯೂ ತಪ್ಪಿ, ಅವನು ಮರಾಠರ ಕಡು ದ್ವೇಷವನ್ನೂ ಘಳಿಸಿದನು. ಟೀಪುವಿಗೆ ಮುಸ್ಲಿಮ್ ಮತದಲ್ಲಿ ಅಭಿಮಾನವಿದ್ದರೂ ಹಿಂದುಗಳ ಮೇಲೆ ದ್ವೇಷವಿರಲಿಲ್ಲ. ಆತನ ದ್ವೇಷವು ಪರದೇಶೀಯರಾದ ಇಂಗ್ಲೀಷರ ಮೇಲೆಯೇ ತುಂಬಿತ್ತು. ಇಂಗ್ಲೀಷರನ್ನು ದಕ್ಷಿಣ ಹಿಂದುಸ್ಥಾನದಿಂದ ಓಡಿಸಬೇಕೆಂದು ಟೀಪುವು ನಿಜಾಮನ ಮತ್ತು ಮರಾಠರ ಸ್ನೇಹವನ್ನು ಬಯಸಿದನು. ಆದರೆ ಟೀಪುವಿನ ಸ್ವಚ್ಛಂದ ವರ್ತನೆಯಿಂದ ನಿಜಾಮನಾಗಲಿ ಮರಾಠರಾಗಲಿ ಅವನೊಡನೆ ಮೈತ್ರತ್ವವನ್ನು ಬೆಳೆಸಲಿಕ್ಕೆ ಒಪ್ಪಲಿಲ್ಲ.

ಕ್ರಿ. ಶಕ ೧೭೮೮ರ ಬಳಿಕ ಟೀಪುವು ಈ ತನ್ನ ಸುಲ್ತಾನೀ ರಾಜ್ಯದ ಮಹತ್ವಾಕಾಂಕ್ಷೆಯನ್ನು ನೆರವೇರಿಸಿಕೊಳ್ಳುವ ಉಪಾಯಗಳ ಚಿಂತೆಯಲ್ಲಿದ್ದನು.

ಅವನು ಮಂಗಳೂರಿನಲ್ಲಿದ್ದ ಕೋಟೆಗಳನ್ನೆಲ್ಲಾ ಕೆಡಹಿ, ನರಸಿಂಹಘಡಕ್ಕೆ ಜಮಾಲಾಬಾದೆಂಬ ಹೆಸರನ್ನಿಟ್ಟು ಅಲ್ಲಿ ತನ್ನ ಸೈನ್ಯವೊಂದಿಟ್ಟನು. ಇಂಗ್ಲೀಷರ ಮತ್ತು ಇತರ ಬಿಳಿ ಮುಖದವರ ಸಂಪರ್ಕವನ್ನು ತಪ್ಪಿಸುವದಕ್ಕಾಗಿ ತುಳುವದ ಹೊರ ವ್ಯಾಪಾರದ ಮೇಲೆ ಅನೇಕ ನಿಬಂಧನೆಗಳನ್ನು ಹೊರಿಸಿ ಅದನ್ನು ತಗ್ಗಿಸಿದನು. ತುಳುವದಲ್ಲಿ ಮುಸ್ಲಿಮ್ ಅಮಿಲದಾರ, ಅಸೋಫರೆಂಬ ಅಧಿಕಾರಿಗಳನ್ನು ತನ್ನ ಪ್ರತಿನಿಧಿಗಳಾಗಿಟ್ಟನು. ಹಲವು ಗ್ರಾಮ ಮತ್ತು ತಾಲೂಕುಗಳಲ್ಲಿ ಕನ್ನಡ ಜಿಲ್ಲೆಗಳ ಜನರಿಂದ ಕಂದಾಯ ವಸೂಲಿಯ ಅಧಿಕಾರವನ್ನು ತಪ್ಪಿಸಿ, ಅವನ್ನು ಮೈಸೂರಿನಿಂದ ತಂದ ಕರ್ಣಾಟಕ ಬ್ರಾಹ್ಮಣರ ಕೈಯಲ್ಲಿಟ್ಟನು. ಸಾಮಂತ ಅರಸರಿಗೆ ಹೈದರನು ಕೊಡುತ್ತಿದ್ದ ಮಲ್ಲಿಖಾನೆಗಳನ್ನೂ ಹಿಂದೂ ದೇವಾಲಯುಗಳಿಗೂ ಬ್ರಾಹ್ಮಣರಿಗೂ ಹಿಂದಿನಿಂದ ಸಲ್ಲುತ್ತಿದ್ದ ತಸದೀಕು ಬ್ರಹ್ಮಾದಾಯುಗಳನ್ನೂ ಅವನು ಕಡಿಮೆ ಮಾಡಿದನು. ಮೈಸೂರು ಅರಸರಿಗೆ ಹೈದರನು ಕೊಡುತ್ತಿದ್ದ ವರ್ಷಾಶನವನ್ನು ತಗ್ಗಿಸಿದನು. ಹೀಗೆಲ್ಲಾ ತನ್ನ ಆರ್ಥಿಕ ಬಲವನ್ನು ಹೆಚ್ಚಿಸಿಕೊಂಡು, ಸುತ್ತುಮುತ್ತಲಿರುವ ರಾಷ್ಟ್ರಗಳನ್ನು ಮೈಸೂರು ರಾಜ್ಯಕ್ಕೆ ಸೇರಿಸ ಹೊರಟನು. ಕ್ರಿ. ಶಕ ೧೭೮೮ರಲ್ಲಿ ಅವನು ಮಲಬಾರು, ಕೊಡಗುಗಳಲ್ಲಿ ತನ್ನ ವಿರೋಧವಾಗಿ ದಂಗೆಯೆದ್ದವರನ್ನು ಸದೆಬಡಿದು, ತಿರುವಾಂಕೂರು ರಾಜ್ಯಕ್ಕೆ ನುಗ್ಗಿದನು. ಆಗ ತಿರುವಾಂಕೂರಿನ ಹಿಂದೂ ಅರಸನು ಇಂಗ್ಲೀಷರ ಸಹಾಯುವನ್ನು ಬೇಡಿದ್ದರಿಂದ, ಇಂಗ್ಲೀಷರು ನಿಜಾಮನ ಮತ್ತು ಮರಾಠರ ಸಹಾಯುವನ್ನು ಸಂಪಾದಿಸಿಕೊಂಡು, ಟೀಪುವಿನೊಡನೆ ಯುದ್ಧಕ್ಕೆ ಹೊರಟರು.

## ೩ನೇ ಮೈಸೂರು ಯುದ್ಧ (೧೭೯೦-೧೭೯೨)

ಇಂಗ್ಲೀಷರ ಗವರ್ನರ ಜನರಲನಾದ ಲಾರ್ಡ ಕಾರ್ನವಾಲ್ಲಿಸನು ಮೈಸೂರು ರಾಜ್ಯದೊಳಗೆ ನುಗ್ಗಿ, ಟೀಪುವನ್ನು ಸೋಲಿಸಿ ಶ್ರೀರಂಗಪಟ್ಟಣವನ್ನು ಹಿಡಿಯುಲಿಕ್ಕೆ ಮುಂಬರಿಯುತ್ತಿರುವಾಗ ಟೀಪುವು ಸಂಧಾನವನ್ನು ಬೇಡಬೇಕಾಯಿತು. ೩ ಕೋಟಿ ೩೦ ಲಕ್ಷ ರೂಪ್ಯಾಗಳನ್ನೂ ಮೈಸೂರು ರಾಜ್ಯದ ಅರ್ಧವನ್ನೂ ಟೀಪುವು ಇಂಗ್ಲೀಷರಿಗೂ ಅವರೊಡನೆ ಸೇರಿದ ನಿಜಾಮ, ಮರಾಠರಿಗೂ ಕೊಡಬೇಕಾಯಿತು. ಮಲಬಾರು ಮತ್ತು ಡಿಂಡಿಗಲ್ಲು ಇಂಗ್ಲೀಷರ ಪಾಲಿಗೆ ಹೋಗಿ, ಕೊಡಗು ಸ್ವತಂತ್ರವಾಯಿತು.

## ಟೀಪುವಿನ ಕೊನೆಗಾಲ (೧೭೯೯)

ಈ ಸಂಧಾನದ ಬಳಿಕ, ಟೀಪುವು ಸಂಪೂರ್ಣ ಮತಿಗೆಟ್ಟಂತಾಗಿ ಹೇಗಾದರೂ ಇಂಗ್ಲೀಷರ ನಾಶವನ್ನು ಮಾಡಬೇಕಾಗಿ ಚಿಂತಿಸುತ್ತಿದ್ದನು. ಅವನ ಒಳಸಂಚುಗಳನ್ನೆಲ್ಲಾ ಅರಿತ ಇಂಗ್ಲೀಷರು ಕ್ರಿ. ಶಕ ೧೭೯೮ರಲ್ಲಿ ನಾಲ್ಕನೇ ಮೈಸೂರು ಯುದ್ಧವನ್ನು ಪ್ರಾರಂಭಿಸಿದರು. ಮಲಬಾರು, ಮದ್ರಾಸುಗಳಿಂದ ಎರಡು ಸೈನ್ಯಗಳು ಹೊರಟು, ಟೀಪುವಿನ ಸೈನ್ಯಗಳನ್ನು ಸೋಲಿಸಿ, ಶ್ರೀರಂಗಪಟ್ಟಣವನ್ನು ಹಿಡಿದರು: ಟೀಪುವು ೧೭೯೯ರಲ್ಲಿ ಶ್ರೀರಂಗಪಟ್ಟಣದ ಮುತ್ತಿಗೆಯಲ್ಲಿ, ರಣರಂಗವಲ್ಲಿ ಹೋರಾಡಿ, ತನ್ನ ಜೀವವನ್ನರ್ಪಿಸಿದನು. ಅದರ ಬಳಿಕ ಮೈಸೂರು ರಾಜ್ಯವನ್ನು ಇಂಗ್ಲೀಷರು ಪಾಲು ಮಾಡಿ, ಕನ್ನಡ ಜಿಲ್ಲೆಯನ್ನೂ ಕೊಯಮುತ್ತೂರನ್ನೂ ತಾವು ಇಟ್ಟುಕೊಂಡು, ಈಗಿನ ಮೈಸೂರು ರಾಜ್ಯವನ್ನು ಪ್ರತ್ಯೇಕಿಸಿ, ಆ ರಾಜ್ಯದ ಸಿಂಹಾಸನಕ್ಕೆ ಮುಮ್ಮಡಿ ಕೃಷ್ಣರಾಜನನ್ನೇರಿಸಿದರು. ಉಳಿದ ಭಾಗವನ್ನು ನಿಜಾಮನಿಗೂ ಮರಾಠರಿಗೂ ಕೊಡಲಿಕ್ಕೆಂದು ವಿಂಗಡಿಸಿದರು.

ಟೀಪುವಿನ ಸುಲ್ತಾನೀ ರಾಜ್ಯದ ಮಹತ್ವಾಕಾಂಕ್ಷೆಯು ಈ ರೀತಿ ತಿರುಕನ ಕನಸಾಯಿತು. ತುಳುವವು ೩೭ ವರ್ಷ ತನಕ ಹೈದರ್ ಟೀಪುಗಳ ಮೈಸೂರು ರಾಜ್ಯದಲ್ಲಿ ಸೇರಿದ್ದು, ಕ್ರಿ. ಶಕ ೧೮೦೦ರಲ್ಲಿ ಇಂಗ್ಲೀಷರ ಕೈವಶವಾಗಿ, ಅವರ ಮದ್ರಾಸು ಪ್ರಾಂತ್ಯದೊಳಗೆ ಕೂಡಿಕೊಂಡಿತು. ಕನ್ನಡ ಜಿಲ್ಲೆಯು ಆಗ ಕಾರವಾರಿಸಿಂದ ಮಲಬಾರು ಗಡಿಯ ತನಕ ಒಂದೇಯಾಗಿತ್ತು. ಹೈದರ್ ಟೀಪುಗಳ ಕಾಲದಲ್ಲಿ ತುಳುವವು ಅವರ ಸೈನ್ಯಗಳ ಚಲನೆಯಿಂದಲೂ, ಅವರು ಕೃಷಿಕರ ಮೇಲೆ ಹೊರಿಸಿದ ಭಾರದಿಂದಲೂ ತುಂಬಾ ಕಂಗೆಟ್ಟು, ಹಿಂದಿನ ಸಂಪತ್ತನ್ನು ಕಳಕೊಂಡಿತ್ತು. ಕೊನೆಯ ಮೈಸೂರು ಯುದ್ಧದ ನಡುವೆ ಇಂಗ್ಲೀಷರ ಆಶ್ರಯದಲ್ಲಿ ಆ ತನಕವಿದ್ದ ಕುಂಬಳೆ, ವಿಟ್ಲ ಅರಸುಗಳು ತಮ್ಮ ತಮ್ಮ ರಾಜ್ಯಗಳಿಗೆ ಮರಳಿ, ಅಲ್ಲಿ ಲೂಟಿಯನ್ನು ಮಾಡಿದ್ದರಿಂದ ಟೀಪುವಿನ ಆಳಿಕೆಯ ಅಂತ್ಯಕ್ಕೆ ತುಳುವದ ಜನರ ಸಂಕಷ್ಟಗಳು ಇನ್ನೂ ಹೆಚ್ಚಿದವು. ಅದೇ ಸಮಯ ಅತ್ತ ಇಂಗ್ಲೀಷರ ಸಹಾಯಕ್ಕೆಂದು ಕೊಡಗು ರಾಜನೂ ತನ್ನ ಸೈನ್ಯವನ್ನು ತುಳುವಕ್ಕೆ ಕಳುಹಿಸಿ ಅಳದಂಗಡಿ, ಬೈಲಂಗಡಿ, ಬಂಗಾಡಿ, ಬಂಟವಾಳಗಳನ್ನು ಲೂಟಿ ಮಾಡಿ, ಬಂಟವಾಳದ ವೈಷ್ಣವ ಸಾರಸ್ವತರ ದೇವಾಲಯ

ದೊಳಗಣ ಮೂರ್ತಿಯನ್ನು ಕೂಡ ಕೊಡಗಿಗೆ ಕೊಂಡುಹೋದನು. ಬೆಳ್ಳಾರೆಯ ಕೊಡಗರೂ ಮಂಜೇಶ್ವರ, ಕುಂಬಳೆ ತನಕ ಹೋಗಿ ಅಲ್ಲಿ ಲೂಟಿ ಮಾಡಿದರು. ಶ್ರೀರಂಗಪಟ್ಟಣದ ಪತನದ ಸಮಯ ಕನ್ನಡ ಜಿಲ್ಲೆಯಲ್ಲೆಲ್ಲಾ ಈ ರೀತಿ ಅರಾಜ್ಯತೆಯೂ ಅಶಾಂತಿಯೂ ತುಂಬಿಕೊಂಡು, ಜನರ ಸ್ಥಿತಿಯೆಲ್ಲಾ ಕೆಟ್ಟುಹೋಗಿತ್ತು.

ಹೈದರ್, ಟೀಪುಗಳ ಕೆಳಗೆ ತುಳುವವು ತನ್ನ ದೀರ್ಘ ಚರಿತ್ರೆಯ ಬರೀ ೩೭ ವರ್ಷ ಕಾಲ ಮಾತ್ರವಿತ್ತು. ಆದರೆ ಅವರು ೩೭ ವರ್ಷಗಳ ನಡುವೆ ತುಳುವದಲ್ಲಿ ಅನೇಕ ಶತಮಾನಗಳಿಂದ ಬಾಳಿಕೊಂಡು ಬಂದಿದ್ದ ಹಲವು ನಿರ್ವೀರ್ಯ ಸಾಮಂತ ಕುಟುಂಬಗಳಿಂದ ರಾಜ್ಯಾಧಿಕಾರವನ್ನು ತಪ್ಪಿಸಿ,–ತುಳುವವು ಒಕ್ಕಟ್ಟಿನ, ಪ್ರಗತಿಯ, ದಾರಿಯನ್ನು ಹಿಡಿದು ಮುಂದೆ ಸಾಗಲಿಕ್ಕೆ ಸಹಾಯಕರಾದರು. ಸಂಕುಚಿತ ಧ್ಯೇಯಗಳಿಂದಲೂ ಪ್ರಾಚೀನ ಸಾಂಪ್ರದಾಯಗಳಿಂದಲೂ ಬಂಧಿತರಾಗಿ ಪ್ರಗತಿಯ ದಾರಿಗೆ ಅಡ್ಡವಾಗುತ್ತಿದ್ದ ಇಕ್ಕೇರಿಯ ಅರಸರನ್ನು ಅವರು ನಿರ್ನಾಮಗೊಳಿಸಿ, ತುಳುವವು ಸಮಗ್ರ ಹಿಂದು ಸ್ಥಾನದ ವಿಚಾರಗಳಲ್ಲಿ ಭಾಗಿಯಾಗಲಿಕ್ಕೆ ಅನುಕೂಲತೆಯನ್ನು ಕಲ್ಪಿಸಿ ಕೊಟ್ಟರು.

---

# ಅಧ್ಯಾಯ ೧೩

**೧. ತುಳುವದಲ್ಲಿ ಬ್ರಿಟಿಷ್ ಅಧಿಕಾರ ಸ್ಥಾಪನೆ. ೨. ವಿಟ್ಲ, ಕುಂಬಳೆ, ನೀಲೇಶ್ವರದ ಸಾಮಂತರು. ೩. ತುಳುವದ ಉಳಿದ ಸಾಮಂತರು. ೪. ತುಳುವದಲ್ಲಿ ಶಾಂತಿ ಸ್ಥಾಪನೆ.**

## ೧. ತುಳುವದಲ್ಲಿ ಬ್ರಿಟಿಷ್ ಅಧಿಕಾರ ಸ್ಥಾಪನೆ

ಟೀಪುವು ೧೭೯೯ನೇ ಮೇ ತಿಂಗಳಲ್ಲಿ ನಡೆದ ಶ್ರೀರಂಗಪಟ್ಟಣದ ಮುತ್ತಿಗೆಯಲ್ಲಿ ಮಡಿದ ಬಳಿಕ (ಈಗಿನ ಉತ್ತರ ಮತ್ತು ದಕ್ಷಿಣ ಕನ್ನಡಗಳಿರುವ) ಕನ್ನಡ ಜಿಲ್ಲೆಯು ಬ್ರಿಟಿಷರ ಪಾಲಿಗೆ ಬಂತು. ಮದ್ರಾಸು ಸರಕಾರದವರು ತಮ್ಮ ಸೈನ್ಯದಲ್ಲಿ ಆಗ ಕೆಪ್ಟನನಾಗಿದ್ದ ತೋಮಸ್ ಮನ್ರೋವನ್ನು ಜುಲ್ಯಾ ತಿಂಗಳಲ್ಲಿ ಕನ್ನಡ ಜಿಲ್ಲೆಯ ಕಲೆಕ್ಟರನಾಗಿ ನೇಮಕಮಾಡಿದರು. ಮನ್ರೋವು ಕನ್ನಡ ಜಿಲ್ಲೆಗೆ ಬರುವಾಗ ಅಲ್ಲಿಯ ಸ್ಥಿತಿಗತಿಗಳೆಲ್ಲಾ ಅಸ್ತವ್ಯಸ್ತವಾಗಿ ಬಿದ್ದಿದ್ದವು.

ಯಾರಿಂದ ಎಷ್ಟು ಕಂದಾಯ ಬರಲಿಕ್ಕಿದೆ? ಯಾವ ಸಾಮಂತರಿಗೆ ಯಾವ ರಾಜ್ಯದ ಮೇಲೆ ಅಧಿಕಾರವಿದೆ? ಕನ್ನಡ ಜಿಲ್ಲೆಯ ಮುಂದಿನ ಆಡಳಿತೆಯು ಬಗೆಯೇನು? ಈ ವಿಚಾರಗಳಿಗೆ ರಾಜನೀತಿವಿಶಾರದನಾದ ತೋಮಸ್ ಮನ್ರೋವು ಸಂಪೂರ್ಣ ಗಮನವನ್ನಿತ್ತು, – ಕನ್ನಡ ಜಿಲ್ಲೆಯ ಜನರು ಮುಂದೆ ಬ್ರಿಟಿಷರ ಪ್ರಜೆಗಳಾಗಿ ಸುಖಸಂತೋಷದಿಂದಿರಬೇಕೆಂದಾದರೆ ಏನು ಮಾಡ ಬೇಕೆಂಬ ಕುರಿತು ಹಲವು ತರದ ಸೂಚನೆಗಳನ್ನು ಮದ್ರಾಸು ಸರಕಾರದ ಮುಂದಿಟ್ಟನು. ಈ ಸೂಚನೆಗಳ ಫಲವಾಗಿ, ತುಳುವದ ಸಾಮಂತರ ರಾಜ್ಯಾಧಿ ಕಾರವೆಲ್ಲವನ್ನೂ ಲೋಪ ಮಾಡಿ, ಅವರಿಗೆ ಅವರವರ ಯೋಗ್ಯತೆಗನುಸಾರವಾಗಿ ಮಲ್ಲಿಖಾನೆಯನ್ನು ಕೊಡಬೇಕೆಂದು ಮದ್ರಾಸು ಸರಕಾರದವರು ನಿಶ್ಚೈಸಿದರು.

## ೨. ವಿಟ್ಲ, ಕುಂಬಳೆ, ನೀಲೇಶ್ವರದ ಸಾಮಂತರು

ತುಳುವದ ಸಾಮಂತರಲ್ಲಿ ಟೀಪುವಿನ ಕಾಲದಲ್ಲಿ ಕುಂಬಳೆ, ವಿಟ್ಲ ಮತ್ತು ನೀಲೇಶ್ವರದ ಅರಸರು ಮಾತ್ರ ಉಳಿದಿದ್ದರು.

### ವಿಟ್ಲದ ಹೆಗ್ಡೆ ಯಾ ಅರಸು

ಒಂದನೇ ಮೈಸೂರು ಯುದ್ಧದಲ್ಲಿ ಆಗಿನ ವಿಟ್ಲದ ಅರಸನಾದ ಅಚ್ಯುತ ಹೆಗ್ಡೆಯು ಇಂಗ್ಲೀಷರಿಗೆ ಸಹಾಯ ಮಾಡಿದ್ದರಿಂದ ಹೈದರನು ಅವನನ್ನು ವಿಟ್ಲ ದಿಂದ ಓಡಿಸಿ, – ಅವನು ಆ ಬಳಿಕ ಇಂಗ್ಲೀಷರ ಆಶ್ರಯದಲ್ಲಿ ತಲಚೇರಿಯಲ್ಲಿ ಅವರ ವೇತನದಾರನಾಗಿದ್ದನು. ಟೀಪುವಿನ ಕಾಲದಲ್ಲಿ ಅವನು ಆಗಾಗ ವಿಟ್ಲಕ್ಕೆ ಬಂದು ಸುಲಿಗೆ ಮಾಡುತ್ತಿದ್ದನು. ಟೀಪುವು ಕೊನೆಗೆ ಅವನನ್ನು ಹಿಡಿದು, ಅವನ ಶಿರಚ್ಛೇದನ ಮಾಡಿ, ವಿಟ್ಲದ ಅರಮನೆಯನ್ನು ಸುಟ್ಟನು. ಅವರ ಬಳಿಕ, ಪಟ್ಟಕ್ಕೆ ಬಂದ ರವಿವರ್ಮನರಸಿಂಹರಸ ಡೊಂಬ ಹೆಗ್ಡೆಯೂ ತಲಚೇರಿಯಲ್ಲಿ ಇಂಗ್ಲೀಷರ ಆಶ್ರಯದಲ್ಲಿಯೇ ಇದ್ದನು. ಕ್ರಿ. ಶಕ ೧೭೯೯ರಲ್ಲಿ ಶ್ರೀರಂಗ ಪಟ್ಟಣದ ಯುದ್ಧದ ಸಮಯದಲ್ಲಿ ಅವನು ವಿಟ್ಲಕ್ಕೆ ಬಂದು, ತನ್ನ ರಾಜ್ಯವನ್ನು ಸ್ವಾಧೀನಪಡಿಸಿಕೊಂಡು, ಮಂಜೇಶ್ವರಕ್ಕೆ ಹೋಗಿ ಅಲ್ಲಿಯ ಶ್ರೀಮದ್ ಅನಂತೇ ಶ್ವರ ದೇವಸ್ಥಾನವನ್ನು ಸುಲಿಗೆ ಮಾಡಿ, ಇಂಗ್ಲೀಷರು ಯುದ್ಧದಲ್ಲಿ ಜಯಶೀಲ ರಾದೊಡನೆ ದಂಗೆ ಎಬ್ಬಿಸಿದನು. ಇಂಗ್ಲೀಷರು ಅವನ ದಂಗೆಯನ್ನು ಮುರಿದು, ಅವನನ್ನು ಸೆರೆ ಹಿಡಿದು, ಅವನ ರಾಜ್ಯವನ್ನು ಸ್ವಾಧೀನಪಡಿಸಿಕೊಂಡರು.

ರಾಜ್ಯಾಧಿಕಾರದ ಬದಲಾಗಿ ಅವನಿಗೆ ಬ್ರಿಟಿಷರು ೬,೦೦೦ ರೂಪಾಯಿ ವರ್ಷಾಶನವನ್ನು ನಿಶ್ಚೈಸಿದರು. ವಿಟ್ಲದ ಅರಸುವಂಶದವರು ಈ ವರ್ಷಾಶನವನ್ನು ಪಡೆಯುತ್ತಾ ಈಗಲೂ ವಿಟ್ಲದಲ್ಲಿ ವಾಸ್ತವಿಸಿಕೊಂಡಿದ್ದಾರೆ.

ವಿಟ್ಲದ ಅರಸರ ಮೂಲವೇನೆಂದು ಹೇಳಸಾಧ್ಯವಿಲ್ಲ. ಅವರ ಪಟ್ಟದ ಹೆಸರು "ನರಸಿಂಹರಸ ಡೊಂಬ ಹೆಗಡೆ"ಯೆಂದಾಗಿದೆ. ಅವರು ವಿಜಯನಗರ ಕಾಲದ ಮೊದಲಿಂದಲೇ ಸಣ್ಣ ಸಂಸ್ಥಾನಿಕರಾಗಿ ಬಾಳಿಕೊಂಡಿದ್ದರು. ವಿಟ್ಲ ಕಸಬೆಯು ರಾಜಧಾನಿಯಾಗಿ, ವಿಟ್ಲದ ಸುತ್ತಲೂ ಕಂಗಿನ ಸುಂದರ ತೋಟಗಳಿಂದ ಕೂಡಿರುವ ೧೯ ಗ್ರಾಮಗಳು ಅವರ ರಾಜ್ಯಕ್ಕೆ ಸೇರಿದ್ದವು.

## ಕುಂಬಳೆ ಅರಸು

ಕುಂಬಳೆ ರಾಜ್ಯವು ಕದಂಬರ ಕಾಲದಿಂದಲೇ ಇತ್ತೆಂದು ತೋರುತ್ತದೆ. ಆ ರಾಜ್ಯವು ಮೊದಲು ನೇತ್ರಾವತಿಯಿಂದ ಪಯಸ್ವಿನೀ ತನಕ ಹರಡಿಕೊಂಡಿತ್ತು. ಶತಮಾನಗಳ ನಡುವೆ ಅದು ಕಿರಿದಾಗುತ್ತಾ ಬಂದು, ಕೊನೆಗೆ ಉಪ್ಪಳ ಹೊಳೆಯ ದಕ್ಷಿಣಕ್ಕೆ ಮಾತ್ರ ಉಳಿಯಿತು. ಇಕ್ಕೇರಿ ಅರಸರ ಕಾಲದಲ್ಲಿ ಕುಂಬಳೆ ಅರಸನು ಕೋಲತ್ತಿರಿ ಅರಸನೊಂದಿಗೆ ಸೇರಿ, ಇಕ್ಕೇರಿ ಅರಸನಿಗೆ ಕಪ್ಪವನ್ನು ಕೊಡತಪ್ಪಿದ್ದರಿಂದ ಕ್ರಿ. ಶಕ ೧೬೫೪ರಷ್ಟಕ್ಕೆ ಇಕ್ಕೇರಿಯ ಸೇನಾಪತಿಯಾದ ಶಿವಪ್ಪ ನಾಯಕನು ಸೈನ್ಯ ಸಹಿತ ತುಳುವಕ್ಕೆ ಬಂದು, ಕುಂಬಳೆ ಅರಸನನ್ನು ಸೋಲಿಸಿ – ಅಡೂರು, ಮದೂರು, ಕಾವು, ಕಣಿಪುರ(ಕುಂಬಳೆ)ವೆಂಬ ನಾಲ್ಕು ಸೀಮೆಗಳನ್ನು ಮಾತ್ರ ಅವನಿಗೆ ಬಿಟ್ಟು, ಉಳಿದ ಪೆರ್ಡಾಲ್, ಅಂಗಡಿಮೊಗರು, ಕಾಸರಗೋಡು ಸೀಮೆಗಳನ್ನು ಅವನಿಂದ ಸ್ವಾಧೀನಪಡಿಸಿಕೊಂಡನು. ಕುಂಬಳೆ ಅರಸನ ಅರಮನೆಯು ಆ ತನಕ ಕುಂಬಳೆಯಲ್ಲಿತ್ತು. ಅದರ ಬಳಿಕ ಅವನು ಮಾಯಿಪಾಡಿಯಲ್ಲಿ ಅರಮನೆ ಕಟ್ಟಿ, ಅಲ್ಲಿ ವಾಸ್ತವಿಸತೊಡಗಿದನು.

ಎರಡನೇ ಮೈಸೂರು ಯುದ್ಧದಲ್ಲಿ ಕುಂಬಳೆ ಅರಸನು ಇಂಗ್ಲೀಷರಿಗೆ ಸಹಾಯ ಮಾಡಿದ್ದರಿಂದ ಟೀಪುವು ಅವನನ್ನು ಅವನ ರಾಜ್ಯದಿಂದ ಓಡಿಸಿದನು. ಆ ಬಳಿಕ ಅವನು ತಲಚೇರಿಗೆ ಹೋಗಿ ಇಂಗ್ಲೀಷರ ಆಶ್ರಯದಲ್ಲಿದ್ದನು. ಶ್ರೀರಂಗಪಟ್ಟಣದ ಪತನದ ಸಮಯದಲ್ಲಿ ಕುಂಬಳೆ ಅರಸನು ತನ್ನ ರಾಜ್ಯಕ್ಕೆ ಬಂದು ಅದನ್ನು ತನ್ನ ಸ್ವಾಧೀನಪಡಿಸಿಕೊಂಡನು. ಇಂಗ್ಲೀಷರು ಟೀಪುವನ್ನು

ಜೈಸಿದ ಬಳಿಕ, ಕೆಲವು ಕಾಲ ಕುಂಬಳೆ ಅರಸನ ರಾಜ್ಯವನ್ನು ಅವನ ಸ್ವಾಧೀನವೇ ಬಿಟ್ಟರು. ಆದರೆ ಕೊನೆಗೆ ಕ್ರಿ. ಶಕ ೧೮೦೪ರಲ್ಲಿ ಅದನ್ನು ಅಂತ್ಯಗೊಳಿಸಿದರು. ಅಂದಿನಿಂದ ಕುಂಬಳೆ ಅರಸನಿಗೆ ಬ್ರಿಟಿಷರು ತಿಂಗಳಿಗೆ ೧,೦೦೦ ರೂಪಾಯಿ ಮಲ್ಲಿಖಾನೆಯಂತೆ ಕೊಡುತ್ತಿದ್ದರು. ಆ ಅರಸನ ವಂಶದವರು ಆ ಮಲ್ಲಿಖಾನೆಯನ್ನು ಈಗಲೂ ಪಡೆಯುತ್ತಾ ಮಾಯಿಪಾಡಿಯಲ್ಲಿ ವಾಸಿಸಿಕೊಂಡಿದ್ದಾರೆ. ತುಳುವದ ಸಾಮಂತರಲ್ಲಿ ಯಾರಿಗೂ ಅವರಷ್ಟು ದೊಡ್ಡ ಮಲ್ಲಿಖಾನೆಯಿಲ್ಲ.

ಕುಂಬಳೆ ಅರಸರ ಕುಟುಂಬದ ಸ್ತ್ರೀಯರು ಕಾಸರಗೋಡು ತಾಲೂಕಿನ ಎಂಟು ಬ್ರಾಹ್ಮಣ ಕುಟುಂಬಗಳಿಂದ ಒಬ್ಬನನ್ನು ವರಿಸುತ್ತಾರೆ. ಬ್ರಾಹ್ಮಣ ಸಂಬಂಧದಿಂದ ಹುಟ್ಟಿದವರೇ ಅರಸರಾಗುತ್ತಾರೆ ಅರಸುಗಳು ನಾಯರರ ಹೆಂಗಸರನ್ನು ಮದುವೆಮಾಡಿಕೊಳ್ಳುತ್ತಾರೆ; ಅವರ ಮಕ್ಕಳಿಗೆ ಅರಸುತನದ ಹಕ್ಕಿಲ್ಲ. ತುಳು, ಕೇರಳ ಸಾಂಪ್ರದಾಯಗಳೆರಡೂ ಈ ಕುಟುಂಬದಲ್ಲಿ ಮಿಶ್ರವಾಗಿ ನಡೆದುಬರುತ್ತಿವೆ.

## ನೀಲೇಶ್ವರ ಅರಸರು

ಇಕ್ಕೇರಿ ಅರಸರ ಕಾಲದ ತನಕ ಪಯಸ್ವನೀ ನದಿಯ ದಕ್ಷಿಣಕ್ಕಿರುವ ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ಅಂಶವು ತುಳುವದಿಂದ ಹೊರಗಿದ್ದು ಕೋಲತ್ತಿರಿ ಅರಸನ ಸ್ವಾಧೀನವಿತ್ತು. ಆ ಕೋಲತ್ತಿರಿ ಅರಸರಲ್ಲೊಬ್ಬನು ಅದರಲ್ಲಿ ಸೇರಿದ ನಾಲ್ಕು ಮಾಗಣೆಗಳಲ್ಲಿ ನೀಲೇಶ್ವರ, ತ್ರಿಕಾಟೆಂಬ ಎರಡು ಮಾಗಣೆಗಳನ್ನು ತನ್ನ ಮಗಳಿಗೆ ಕೊಟ್ಟು, ಅವಳಿಗೆ ನೀಲೇಶ್ವರದಲ್ಲಿ ಕೋಟೆ ಮತ್ತು ಅರಮನೆಗಳನ್ನು ಕಟ್ಟಿಸಿಕೊಟ್ಟನು.

ಕ್ರಿ. ಶಕ ೧೬೦೮ರಲ್ಲಿ ಹಿರಿಯ ವೆಂಕಟಪ್ಪ ನಾಯಕನು ತುಳುವಕ್ಕೆ ಬಂದು ಸಾಮಂತರ ಕಪ್ಪಗಳನ್ನು ಪಡೆಯುತ್ತಿರುವಾಗ, ತುಳುವಕ್ಕೆ ಆಗಿಂದಾಗ ತೊಂದರೆ ಕೊಡುತ್ತಿದ್ದ ಕೋಲತ್ತಿರಿ ಅರಸನನ್ನು ಸೋಲಿಸಿ, ಆತನಿಗೂ ಕಪ್ಪ ನಿಶ್ಚೈಸಿದನು. ಆದರೆ ಅದರ ಬಳಿಕ ಕೋಲತ್ತಿರಿ ಅರಸನು ಆ ಕಪ್ಪವನ್ನು ಕೊಡತಪ್ಪಿ, ಇಕ್ಕೇರಿ ಅರಸನಿಗೆ ವಿರೋಧವಾಗಿ ಬಂಗರಸನಿಗೆ ಸಹಾಯವನ್ನು ಮಾಡುತ್ತಿದ್ದುದರಿಂದ, ಇಕ್ಕೇರಿಯ ಸೇನಾಪತಿಯಾದ ಶಿವಪ್ಪ ನಾಯಕನು ಸುಮಾರು ಕ್ರಿ. ಶಕ ೧೬೩೪ರಷ್ಟಕ್ಕೆ ದೊಡ್ಡ ಸೈನ್ಯದೊಂದಿಗೆ ತುಳುವಕ್ಕೆ ಬಂದು ಕೋಲತ್ತಿರಿ ಅರಸನನ್ನು ಸೋಲಿಸಿ, ಪಯಸ್ವನಿಯಿಂದ ಚಿತ್ತಾರಿ ಹೊಳೆತನಕ ಇರುವ ಆತನ ರಾಜ್ಯದ

ಅಂಶವನ್ನು ತನ್ನ ಸ್ವಾಧೀನಪಡಿಸಿಕೊಂಡನು. ಆ ಪ್ರದೇಶದ ಭದ್ರತೆಗಾಗಿ ಅವನು ಚಂದ್ರಗಿರಿಯಲ್ಲಿರುತ್ತಿದ್ದ ಕೋಟೆಯನ್ನು ಸರಿಪಡಿಸಿ, ಬೇಕಲದಲ್ಲಿ ಹೊಸ ಕೋಟೆಯೊಂದನ್ನು ಕಟ್ಟಿದನು. ಅದರ ಬಳಿಕ ಈಗಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀಲೇಶ್ವರ ಅರಮನೆಯ ಕೆಳಗಿದ್ದ ಎರಡು ಮಾಗಣೆಗಳು ಮಾತ್ರ ಕೋಲತ್ತಿರಿ ಅರಸನಿಗೆ ಉಳಿದುವು. ಕೋಲತ್ತಿರಿ ಅರಸನು ತನ್ನ ರಾಜ್ಯವನ್ನು ಪುನಃ ಸ್ವಾಧೀನಪಡಿಸಿಕೊಳ್ಳಲಿಕ್ಕೆ ಪ್ರಯತ್ನಗಳನ್ನು ಮಾಡುತ್ತಲೇ ಇದ್ದನು. ಕ್ರಿ. ಶಕ ೧೭೫೩ರಷ್ಟಕ್ಕೆ ಇಕ್ಕೇರಿಯ ಅರಸನ ಪ್ರತಿನಿಧಿಯಾದ ಸೂರಪ್ಪಯ್ಯನು ಬಲಿಯ ಪಟ್ಟಣದ ಹೊಳೆವರೆಗಿನ ಕೋಲತ್ತಿರಿ ರಾಜ್ಯವನ್ನೆಲ್ಲಾ ಸ್ವಾಧೀನಪಡಿಸಿಕೊಂಡು ಕಾಂಞಂಗಾಡಿನಲ್ಲಿ ಹೊಸದುರ್ಗವೆಂಬ ಹೆಸರಿನ ಕೋಟೆಯನ್ನು ಕಟ್ಟಿಸಿದನು. ಆಬಳಿಕ ನೀಲೇಶ್ವರದ ಅರಮನೆಯವರು ಇಕ್ಕೇರಿ ಅರಸನಿಗೆ ಕಪ್ಪ ಸಲ್ಲಿಸಿ, ಅವನ ಕೆಳಗಿನ ಸಾಮಂತರಾದರು.

ಹೈದರನು ನೀಲೇಶ್ವರ ಅರಸನಿಂದ ಬರಬೇಕಾದ ಕಪ್ಪವನ್ನು ಹೆಚ್ಚಿಸಿದರಿಂದ ಅವನು ಅದನ್ನು ಕೊಡಲು ಶಕ್ತನಾಗದೆ ತಿರುವಾಂಕೂರಿಗೆ ಓಡಿಹೋದನು; ಹೈದರನು ಅವನ ರಾಜ್ಯವನ್ನು ತನ್ನ ಸ್ವಾಧೀನಪಡಿಸಿಕೊಂಡನು. ಟೀಪುವಿನ ಕಾಲದಲ್ಲಿ ನೀಲೇಶ್ವರ ಅರಸನು ತನ್ನ ರಾಜ್ಯಕ್ಕೆ ಮರಳಿ, ದಂಗೆಯೆಬ್ಬಿಸಿದ್ದರಿಂದ ಟೀಪುವಿನ ಸೇನಾಪತಿಯು ಅವನನ್ನು ಹಿಡಿದು ಗಲ್ಲಿಗೇರಿಸಿದನು.

ಕನ್ನಡ ಜಿಲ್ಲೆಯು ಇಂಗ್ಲೀಷರ ಸ್ವಾಧೀನವಾದೊಡನೆ, ಇಂಗ್ಲೀಷರು ನೀಲೇಶ್ವರ ಅರಸನಿಗೆ ರೂ ೩೨೦೦ ವರ್ಷಾಶನ ನಿಶ್ಚೈಸಿ, ಅವನ ರಾಜ್ಯವನ್ನು ಅವನಿಂದ ಸ್ವಾಧೀನಪಡಿಸಿಕೊಂಡರು. ಈ ವರ್ಷಾಶನವನ್ನು ಈಗಲೂ ಅನುಭವಿಸಿಕೊಂಡು ಆ ಅರಸು ವಂಶದವರು ನೀಲೇಶ್ವರದಲ್ಲಿ ವಾಸಿಸಿಕೊಂಡಿದ್ದಾರೆ.

## ೩. ತುಳುವದ ಉಳಿದ ಸಾಮಂತರು

ತುಳುವದ ಉಳಿದ ಸಾಮಂತರ ಗತಿಯೇನಾಯಿತೆಂದು ಇಲ್ಲಿ ನಾವು ತಿಳಕೊಳ್ಳುವದು ಅವಶ್ಯವಾಗಿದೆ. ತುಳುವದ ಸಾಮಂತದಲ್ಲಿ ಬಂಗರು, ಚೌಟರು, ಅಜಿಲರು, ಮೂಲರು, ಸಾವಂತರು, ಭೈರರಸರು, ತೊಳಹಾರರು ತುಳುವ ಚರಿತ್ರೆಯಲ್ಲಿ ಪ್ರಖ್ಯಾತಿಯನ್ನು ಪಡೆದಿರುತ್ತಾರೆ. ಅವರ ವಿವರಗಳನ್ನೂ ನಾವು ಇಲ್ಲಿ ತಿಳಕೊಳ್ಳಬಹುದು.

## ಬಂಗರು

ಬಂಗರ ಮೂಲದ ಕುರಿತು ವಿವಾದವಿದೆ. ಭೂತಾಳಪಾಂಡ್ಯನ ಚರಿತ್ರೆಯಲ್ಲಿ ಅವನು ತನ್ನ ೧ನೇ ಪತ್ನಿಯಾದ ಚಾರುಮತಿಯ ಮಕ್ಕಳಿಗೆ ಚೌಟರ ಸಂಸ್ಥಾನವನ್ನೂ ೨ನೇ ಅನಂತಮತಿಯ ಮಕ್ಕಳಿಗೆ ಬಂಗರ ಸಂಸ್ಥಾನವನ್ನೂ ಕೊಟ್ಟನೆಂದಿದ್ದರೂ ಹೊಯ್ಸಳರ ಕಾಲದ ಮೊದಲಿನ ಬಂಗರಸರ ವಿವರಗಳೇನೂ ದೊರಕಿರುವುದಿಲ್ಲ. ಹೊಯ್ಸಳ ಅರಸನಾದ ಬಿಟ್ಟಿದೇವನು ಜೈನಧರ್ಮವನ್ನು ತ್ಯಜಿಸಿ, ವಿಷ್ಣುವರ್ಧನನೆಂಬ ಹೆಸರನ್ನಿಟ್ಟುಕೊಂಡು, ವೈಷ್ಣವ ಮತವನ್ನು ಸ್ವೀಕರಿಸಿದೊಡನೆ ಮೈಸೂರಿನ ಮಲೆನಾಡಿನಲ್ಲಿರುತ್ತಿದ್ದ ಜೈನ ರಾಜವಂಶೀಯರು ಅಲ್ಲಿಯ ವಾತಾವರಣವನ್ನು ಅಸಹನೀಯವಾಗಿ ಕಂಡು, ತುಳುವಕ್ಕೆ ಇಳಿದು. ಅಲ್ಲಿ ಆಲೂಪರ ಆಶ್ರಯದಲ್ಲಿ ಪುಟ್ಟ ಸಂಸ್ಥಾನಗಳನ್ನು ಸ್ಥಾಪಿಸಿದರೆಂದು ನಾವು ಹಿಂದೆ ಓದಿರುತ್ತೇವೆ. ಬಂಗರು ಹಾಗೆ ತುಳುವಕ್ಕೆ ಬಂದ ರಾಜ ವಂಶೀಯರಲ್ಲೊಬ್ಬರಾಗಿದ್ದರು. ಅವರ ಮೂಲಪುರುಷನಾದ ವೀರನರಸಿಂಹ ಬಂಗರಾಜನು ಹೊಯ್ಸಳರಾಜನಾದ ೧ನೇ ನರಸಿಂಹನ ಕಾಲದಲ್ಲಿ ಬಂಗಾಡಿಯ ಸುತ್ತಲೂ ೨೦ ಮಾಗಣೆಗಳನ್ನು ಪಡೆದು, ಅಲ್ಲಿ ಆಲೂಪರ ಸಂಸ್ಥಾನಿಕನಾಗಿ ಆಳತೊಡಗಿದನು. ಆ ವೀರನರಸಿಂಹ ಬಂಗರಾಜನ ಮಗನಾದ ಚಂದ್ರಶೇಖರ ಬಂಗರಾಜನು ಕ್ರಿ. ಶಕ ೧೨೦೮ರಿಂದ ೧೨೨೪ರ ತನಕ ಆಳಿದನು. ಅವನು ಮಂಗಳೂರಿನಲ್ಲಿ (ಮೊನ್ನೆ ತನಕ ಯುರೋಪಿಯನರ ಕ್ಲಬ್ ಇದ್ದಲ್ಲಿ) ಅರಮನೆ ಕಟ್ಟಿಸಿ ಅಲ್ಲಿ ವಾಸ್ತವಿಸಿಕೊಂಡಿದ್ದನು. ಅವನು ಮಂಗಳಾವತಿ ದೇವಸ್ಥಾನ ವನ್ನು ಜೀರ್ಣೋದ್ಧಾರ ಮಾಡಿ, ಶರವಿನ ಗಣಪತಿ ದೇವಸ್ಥಾನವನ್ನು ಕಟ್ಟಿಸಿದನು.

ಅವನ ಬಳಿಕ ೧೨೮೭ರ ತನಕ ಬಂಗವಂಶದ ಇಬ್ಬರು ಅರಸರೂ ಇಬ್ಬರು ರಾಣಿಯರೂ ಆಳಿದರು. ಕ್ರಿ. ಶಕ ೧೨೮೭ಕ್ಕೆ ಪಟ್ಟಕ್ಕೆ ಬಂದ ೧ನೇ ಹಾವಳಿ ಬಂಗರಾಜನ ಕಾಲದಲ್ಲಿ ಅವನು ಬೆಳತಂಗಡಿಯಲ್ಲೊಂದು ಕೋಟೆಯನ್ನು ಕಟ್ಟಿಸಿ, ಅಲ್ಲಿ ಸಮೀಪವಿದ್ದ ಸೋಮನಾಥ ದೇವಾಲಯವನ್ನು ಜೀರ್ಣೋದ್ಧಾರ ಪಡಿಸಿದನು. ಅವನ ಬಳಿಕ ಅವನ ತಂಗಿಯಾದ ಶಂಕರದೇವಿಯು ೧೩೨೪ ರಿಂದ ೧೩೪೫ರ ತನಕ ಆಳಿದಳು. ಅವಳು ಆಲೂಪ ಅರಸನಾದ ಸೊಯಿದೇವ ನಿಂದ ಬಜಲ, ಮಣೇಲ, ಪೇಜಾವರ, ಮುಂಡ್ಕೂರು, ಬೈಲು, ವಾಮಂಜೂರು ನೀರಮಾರ್ಗ ಮಾಗಣೆಗಳನ್ನು ಪಡೆದು ಬಂಗರ ಸಂಸ್ಥಾನವನ್ನು ಈಗಿನ

ಮಂಜೇಶ್ವರದ ಸುತ್ತಲೂ ಮತ್ತು ಮಂಗಳೂರು, ಪುತ್ತೂರು ತಾಲೂಕುಗಳಲ್ಲಿಯೂ ವಿಸ್ತರಿಸಿದಳು. ಅವಳ ಕಾಲದಲ್ಲಿ ವಿಜಯನಗರ ಸ್ಥಾಪನೆಯಾಗಿ ಅವರ ಬಳಿಕ ಬಂಗರಸರು ವಿಜಯನಗರ ಸಾಮ್ರಾಟರಿಗೆ ಕಪ್ಪಕೊಡ ತೊಡಗಿದರು.

ಶಂಕರದೇವಿಯ ಬಳಿಕ ಅವಳ ಮಕ್ಕಳಾದ ೨ನೇ ಹಾವಳಿ ಬಂಗರಾಜನೂ ೧ನೇ ಲಕ್ಷ್ಮಪ್ಪರಸ ಬಂಗರಾಜನೂ ಕ್ರಿ. ಶಕ ೧೪೫೫ರ ತನಕ ಆಳಿದರು. ಲಕ್ಷ್ಮಪ್ಪರಸ ಬಂಗರಾಜನಿಗೆ ಉಮ್ಮಣ್ಣ ಬಂಗನೆಂದೂ ಕರೆಯುತ್ತಿದ್ದರು. ಅವನು ನೀಲೇಶ್ವರ ಅರಸನೊಡನೆ ಯುದ್ಧಮಾಡಿದಾಗ ಚೌಟ ಅರಸನು ಅವನಿಗೆ ಸಹಾಯಮಾಡಿದ್ದರಿಂದ ಅವನು ಮಣೇಲ್, ಪೇಜಾವರ, ಮುಂಡ್ಕೂರು ಸೀಮೆಗಳನ್ನು ಚೌಟ ಅರಸನಿಗೆ ಕೊಟ್ಟನು. ಉಮ್ಮಣ್ಣ ಬಂಗನು ನಂದಾವರದಲ್ಲಿ ಕೋಟೆ ಮತ್ತು ಅರಮನೆಗಳನ್ನು ಕಟ್ಟಿಸಿದನು.

ಉಮ್ಮಣ್ಣ ಬಂಗನ ಬಳಿಕ ಆತನ ತಂಗಿಯಾದ ಶಂಕರದೇವಿಯೂ ಅವಳ ಮಗನಾದ ೨ನೇ ಕಾಮರಾಯನೂ ಕ್ರಿ. ಶಕ ೧೫೭೭ರ ತನಕ ಬಂಗರಾಜ್ಯವನ್ನಾಳಿದರು. ೨ನೇ ಕಾಮರಾಯನು ವಿಜಯನಗರಕ್ಕೆ ಕಪ್ಪವನ್ನು ಕೊಡ ತಪ್ಪಿದ್ದರಿಂದ ವಿಜಯನಗರದ ಮಾಂಡಲಿಕನಾದ ಕೆಳದಿಯ ಸದಾಶಿವ ನಾಯಕನು ಮಂಗಳೂರಿಗೆ ಬಂದು, ಅದನ್ನು ಅವನಿಂದ ಪಡೆದು, ಸಾಮ್ರಾಟನಿಗೆ ಕಳುಹಿಸಬೇಕಾಯಿತು.

ಬಂಗರಾಜನ ರಾಜ್ಯದ ಬಂದರುಗಳಲ್ಲಿ ಆಗ ಹೊರದೇಶಗಳ ವ್ಯಾಪಾರವು ತುಂಬಾ ನಡೆಯುತ್ತಿತ್ತು. ಆ ವ್ಯಾಪಾರವು ಮೊದಲು ಮಾಪಿಳ್ಳೆಯರ ಮತ್ತು ಅರಬ್ ಮೂರರ ಕೈಯಲ್ಲಿತ್ತು. ಕ್ರಿ. ಶಕ ೧೫೧೦ರಷ್ಟಕ್ಕೆ ಪೊರ್ತುಗೀಸರು ಅವರಿಂದ ಆ ವ್ಯಾಪಾರವನ್ನು ಕಿತ್ತು, ತಮ್ಮ ವಶಮಾಡಿಕೊಂಡರು. ಪೊರ್ತುಗೀಸರು ತುಳುವದ ವ್ಯಾಪಾರಸ್ಥರಿಂದೆಲ್ಲಾ ಸುಂಕವನ್ನು ವಸೂಲ್ಮಾಡುತ್ತಿದ್ದರು. ಅವರು ತುಳುವದ ಬಂದರುಗಳಲ್ಲೆಲ್ಲಾ ಪ್ರಬಲರಾಗಿ ಹಾವಳಿ ಮಾಡತೊಡಗಿದ್ದರು.

**೨ನೇ ಲಕ್ಷ್ಮಪ್ಪರಸ.** ಕ್ರಿ. ಶಕ ೧೫೪೫ರಲ್ಲಿ ಬಂಗಸಿಂಹಾಸನವನ್ನೇರಿದ ೨ನೇ ಲಕ್ಷ್ಮಪ್ಪರಸ ಬಂಗರಾಜನು ಚೌಟ ರಾಣಿಯಾದ ಅಬ್ಬಕ್ಕಾದೇವಿಯನ್ನು ವರಿಸಿದನು. ಅವನಿಗೂ ವೇಣೂರಿನ ಆಜಿಲರಿಗೂ ಅನೇಕ ಸಲ ಯುದ್ಧವಾಗಿ ಕೊನೆಗೆ ಅವನು ಕ್ರಿ. ಶಕ ೧೫೫೬ರಲ್ಲಿ ಯುದ್ಧದಲ್ಲಿ ಮಡಿದನು.

**೩ನೇ ಕಾಮರಾಯ.** (೧೫೫೬ - ೧೬೧೨) ಅವನ ಬಳಿಕ ಅವನ ಅಳಿಯನಾದ ೩ನೇ ಕಾಮರಾಯನು ಬಂಗರಸನಾದನು. ಅವನಿಗೂ ಅವನ ಅತ್ತೆಯಾದ ಅಬ್ಬಕ್ಕಾದೇವಿಗೂ ದ್ವೇಷವುಂಟಾಗಿ– ಅವನು ಅವಳಿಂದ ಉಳ್ಳಾಲ ವನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಪೊರ್ತುಗೀಸರೊಡನೆ ಸ್ನೇಹ ಬೆಳೆಸಿ ದನು. ಪೊರ್ತುಗೀಸರು ಉಳ್ಳಾಲದ ಎದುರಾಗಿ ಮಂಗಳೂರಿನಲ್ಲಿ ಒಂದು ಕೋಟೆಯನ್ನು ಕಟ್ಟಿ, ಅಬ್ಬಕ್ಕಾದೇವಿಯೊಡನೆ ಹಲವು ಸಲ ಹೋರಾಡಿದರು. ಕೊನೆಗೆ ಅಬ್ಬಕ್ಕಾದೇವಿಗೂ ಪೊರ್ತುಗೀಸರಿಗೂ ಸಂಧಾನವಾಯಿತು. ಅದೇ ಸಮಯ, ಕಾಮರಾಯನಿಗೂ ಕಾರ್ಕಳದ ದಾವಣಿ ಇಮ್ಮಡಿ ಭೈರವ ರಾಯ ನಿಗೂ ನಿರಂತರ ಹೋರಾಟ ನಡೆಯುತ್ತಿತ್ತು. ಕಾಮರಾಯನ ಬಳಿಕ ಆಳಿದ ಬಂಗರಸರು ಇಕ್ಕೇರಿಯವರಿಗೆ ಸಲ್ಲಬೇಕಾದ ಕಪ್ಪವನ್ನು ಸಲ್ಲಿಸದೆ ಅವರ ಕೋಪಾಗ್ರಹಕ್ಕೆ ಗುರಿಯಾದರು. ಕ್ರಿ. ಶಕ ೧೬೩೧ರಲ್ಲಿ ಬಂಗಸಿಂಹಾಸನ ವನ್ನೇರಿದ ೩ನೇ ಶಂಕರದೇವಿಯ ಕಾಲದಲ್ಲಿ ಇಕ್ಕೇರಿಯ ಅರಸರು ಬಂಗರಿಂದ ಮಂಗಳೂರನ್ನು ಸ್ವಾಧೀನಪಡಿಸಿಕೊಂಡು ಅವರ ಅಲ್ಲಲ್ಲಿದ್ದ ಕೋಟೆಗಳನ್ನೆಲ್ಲಾ ಕೆಡಹಿದರು. ಅದರ ಬಳಿಕ ಬಂಗರು ಕುಳೂರಿನಲ್ಲಿ ಅರಮನೆ ಮಾಡಿಕೊಂಡಿ ದ್ದರು. ಅವರ ಬಲವು ತೀರಾ ಕ್ಷೀಣವಾಗಿತ್ತು.

೪ನೇ ಲಕ್ಷ್ಮಪ್ಪರಸ ಬಂಗರಾಜನ ಕಾಲದಲ್ಲಿ ಹೈದರನು (೧೭೬೩) ಬೆದ ನೂರನ್ನು ಸ್ವಾಧೀನಪಡಿಸಿಕೊಂಡು, ತುಳುವಕ್ಕೆ ಬಂದು, ಬಂಗರಿಂದ ಬರ ಬೇಕಾದ ಕಪ್ಪವನ್ನು ಹೆಚ್ಚಿಸಿದನು. ಇದನ್ನು ಬಂಗರಸನು ಕೊಡಶಕ್ತನಾಗದ್ದ ರಿಂದ ಹೈದರನ ಪ್ರತಿನಿಧಿಯಾದ ಶೇಕಾಲಿಯು ಅವನ ರಾಜ್ಯವನ್ನು ತನ್ನ ಸ್ವಾಧೀನಪಡಿಸಿಕೊಂಡನು. ಹೈದರನು ಬಂಗರಸನಿಗೆ ಅವನ ಖರ್ಚಿಗಾಗಿ ೧೫೦ ವರಹ ಉತ್ಪತ್ತಿಯ ಭೂಮಿಯನ್ನು ಉಂಬಳಿಯಾಗಿ ಬಿಟ್ಟನು.

ಕ್ರಿ. ಶಕ ೧೮೯೯ರಲ್ಲಿ ಇಂಗ್ಲಿಷರು ಬಂಗರಸನಿಗೆ ಬಿಟ್ಟ ಉಂಬಳಿಯನ್ನು ತಪ್ಪಿಸಿ, ಅವನಿಗೆ ೬೦ ವರಹ ವರ್ಷಾಶನವನ್ನು ನಿಶ್ಚೈಸಿದರು. ಕ್ರಿ. ಶಕ ೧೮೩೭ರಲ್ಲಾದ ಕಲ್ಯಾಣಪ್ಪನ ಕಾಟಕಾಯಿಯಲ್ಲಿ ಆಗಿನ ಬಂಗರಸನು ಸೇರಿದ್ದ ರಿಂದ ಅವನನ್ನು ಇಂಗ್ಲಿಷರು ಹಿಡಿದು, ಮಂಗಳೂರಿನ ಬಿಕ್ರನ ಕಟ್ಟೆಯ ಬಳಿ ಗಲ್ಲಿಗೆ ಹಾಕಿದರು. ಬಂಗರಸರ ಕುಟುಂಬಕ್ಕೆ ಆ ತನಕ ಸಲ್ಲುತ್ತಿದ್ದ ವರ್ಷಾ ಶನವನ್ನೂ ಅದರ ಬಳಿಕ ನಿಲ್ಲಿಸಿದರು. ಬಂಗರಸರ ವಂಶದವರು ಈಗ ಬೆಳ ತಂಗಡಿಯ ಬಳಿ ಇರುವ ಬಂಗಾಡಿಯಲ್ಲಿ, ಜನರ ದೃಷ್ಟಿಯಿಂದ ದೂರವಾಗಿ,

ವಾಸಿಸಿಕೊಂಡಿದ್ದಾರೆ. ಅವರ ಹಿಂದಿನ ಅರಸುತನದ ನೆನಪು ಈಗ ಅವರಲ್ಲಿ ಮಾತ್ರ ಉಳಿದಿದೆ.

## ಚೌಟರಸರು

ಚೌಟರಸರ ರಾಜಧಾನಿಯು ಮೊದಲು ಉಳ್ಳಾಲದ ಬಳಿ ಸೋಮೇಶ್ವರದಲ್ಲಿತ್ತು. ಕ್ರಿ. ಶಕ ೧೨೦೦ರಷ್ಟಕ್ಕೆ ಅವರು ಪುತ್ತಿಗೆ ಮತ್ತು ಮಿಜಾರ ಸೀಮೆಗಳನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡು, ಪುತ್ತಿಗೆಯಲ್ಲಿ ಅರಮನೆ ಮಾಡಿಕೊಂಡು, ಅಲ್ಲಿ ವಾಸಿಸ ತೊಡಗಿದರು. ಆದರೆ ಅದರ ಬಳಿಕವೂ ಉಳ್ಳಾಲ ಸೋಮೇಶ್ವರದ ಸೋಮನಾಥನೇ ಅವರ ಕುಲದೇವರಾಗಿದ್ದನು.

೨ನೇ ಚನ್ನರಾಯನ ಕಾಲದಲ್ಲಿ ಚೌಟರಸನಿಗೆ ಬಂಗ ಅರಸನಿಂದ ಮಣೇಲ್, ಪೇಜಾವರ, ಮುಂಡ್ಕೂರು ಸೀಮೆಗಳು ದೊರಕಿದ್ದರಿಂದ ಚೌಟರರ ಸಂಸ್ಥಾನವು ದೊಡ್ಡದಾಗಿ ವಿಸ್ತಾರಹೊಂದಿತು. ಕ್ರಿ. ಶಕ ೧೪೨೯ರಲ್ಲಿ ಪುತ್ತಿಗೆಯ ಬಳಿ ಇರುವ ಮೂಡಬಿದರೆಯಲ್ಲಿ ಅಲ್ಲಿಯ ಜೈನ ಸೆಟ್ಟಿಯರು ಕೂಡಿ ತ್ರಿಭುವನ ಚೈತ್ಯಾಲಯವೆಂಬ ಸಾವಿರಕಂಭದ ಬಸದಿಯನ್ನು ಪ್ರತಿಷ್ಠೆ ಮಾಡಿದರು.

ಬಂಗರಸರ ವಂಶದಂತೆ ಚೌಟರಸರ ವಂಶದಲ್ಲಿಯೂ ಹಲವು ಮಹಿಳೆಯರು ಪಟ್ಟಕ್ಕೆ ಬಂದಿದ್ದರು. ಕ್ರಿ. ಶಕ ೧೫೪೪ರಿಂದ ೧೫೮೨ರ ತನಕ ಚೌಟ ರಾಣಿಯಾಗಿದ್ದ ೨ನೇ **ಅಬ್ಬಕ್ಕಾದೇವಿ**ಯು ಇವರಲ್ಲಿ ಪ್ರಸಿದ್ಧಿ ಹೊಂದಿದವಳಾಗಿದ್ದಾಳೆ. ಅವಳು ಲಕ್ಷ್ಮಪ್ಪರಸ ಬಂಗನನ್ನು ವರಿಸಿ, ಅವನ ಜೀವಕಾಲದಲ್ಲಿ ಅವನು ಮಂಗಳೂರಿನಲ್ಲಿಯೂ ಅವಳು ಉಳ್ಳಾಲದಲ್ಲಿಯೂ ವಾಸಿಸಿಕೊಂಡಿರುತ್ತಿದ್ದರು. ಅವನು ಕ್ರಿ. ಶಕ ೧೫೫೬ರಲ್ಲಿ ಮೃತನಾದ ಬಳಿಕ, ಬಂಗರಸ ಪಟ್ಟಕ್ಕೇರಿದ ಅವನ ಅಳಿಯನಾದ ಕಾಮರಾಯನಿಗೂ ಅಬ್ಬಕ್ಕಾದೇವಿಗೂ ವೈಷಮ್ಯಗಳೆದ್ದು, ಅವನು ಉಳ್ಳಾಲವನ್ನು ಹಿಡಿಯಲಿಕ್ಕಾಗಿ ಪೋರ್ತುಗೀಸರ ಸಹಾಯವನ್ನು ಬೇಡಿದನು. ಕ್ರಿ. ಶಕ ೧೫೬೭ರಲ್ಲಿ ಪೋರ್ತುಗೀಸರು ಉಳ್ಳಾಲದ ಎದುರಾಗಿ ಒಂದು ಕೋಟೆಯನ್ನು ಕಟ್ಟಿ, ಹಡಗುಗಳಲ್ಲಿ ತಮ್ಮ ಸೈನ್ಯವನ್ನು ತುಂಬಿಸಿ ಉಳ್ಳಾಲದ ಬಳಿ ಲಂಗರು ಹಾಕಿದರು. ಅಬ್ಬಕ್ಕಾದೇವಿಯ ಸೈನಿಕರು ಆ ಹಡಗುಗಳ ಮೇಲೆ ಬಿದ್ದು ಪೋರ್ತುಗೀಸರ ಸೈನಿಕರನ್ನು ಓಡಿಸಿದರು. ಆದರೆ ಪೋರ್ತುಗೀಸರು ಪುನಃ ಬಂದು, ಉಳ್ಳಾಲವನ್ನು ಹಿಡಿದು ಸುಟ್ಟರು. ಅಬ್ಬಕ್ಕಾದೇವಿಯು ಆಗ ಉಳ್ಳಾಲದಿಂದ ತಲಪಾಡಿಗೆ ಓಡಿಹೋದಳು. ೧೫೬೯ರಲ್ಲಿ ಅಬ್ಬಕ್ಕಾದೇವಿಯು ತನ್ನ ರಾಜ್ಯದಿಂದ ಪೋರ್ತುಗೀಸರಿಗೆ ಸುಂಕವನ್ನು ಕೊಡಲಿಕ್ಕೆ

ಒಪ್ಪಿ, ಅವರೊಡನೆ ಸಂಧಾನ ಬೆಳೆಸಿದಳು. ಕ್ರಿ. ಶಕ ೧೫೮೧ರಲ್ಲಿ ಅಬ್ಬಕ್ಕಾ ದೇವಿಯು ಸುಂಕ ಕೊಡತಪ್ಪಿದ್ದರಿಂದ ಪೋರ್ತುಗೀಸರು ಪುನಃ ಉಳ್ಳಾಲವನ್ನು ಹಿಡಿದು, ಸುಟ್ಟು, ಅಬ್ಬಕ್ಕಾದೇವಿಯಿಂದ ಬರಬೇಕಾದ ಸುಂಕವನ್ನು ಪಡೆದರು.

**ತಿರುಮಲಾದೇವಿ** (೧೫೮೨ರಿಂದ ೧೬೦೬). ಅಬ್ಬಕ್ಕಾದೇವಿಯ ಬಳಿಕ ಅವಳ ಮಗಳಾದ ತಿರುಮಲಾದೇವಿಯು ಪಟ್ಟಕ್ಕೆ ಬಂದಳು. ಅವಳಿಗೂ ಕಾರ್ಕಳದ ಧಾವಣಿ ಇಮ್ಮಡಿ ಭೈರವರಾಯನಿಗೂ ಜಗಳ ಹುಟ್ಟಿ, ಸಾಣೂರು ಕಣಿವೆಯ ಬಳಿ ಯುದ್ಧ ನಡೆಯಿತು. ಭೈರವರಾಜನ ಸೇನಾಧಿಪತಿಯು ಯುದ್ಧದ ನಡುವೆ ತಿರುಮಲಾದೇವಿಯನ್ನು ಕೊಂದು, ಅವಳ ತಲೆಯನ್ನು ಕಾರ್ಕಳಕ್ಕೆ ಕೊಂಡುಹೋಗಿ ಭೈರವರಸನ ಮುಂದಿಟ್ಟನು. ಭೈರವರಸನು ಆ ತಲೆಯನ್ನು ಶೂಲಕ್ಕೇರಿಸಿದನು.

**ಚಂದ್ರಶೇಖರ ಚಿಕ್ಕರಾಯ** (೧೬೦೬ರಿಂದ ೧೬೨೮). ತಿರುಮಲಾ ದೇವಿಯ ಬಳಿಕ ಅವಳ ಮಗನಾದ ಚಂದ್ರಶೇಖರ ಚಿಕ್ಕರಾಯನು ಪಟ್ಟಕ್ಕೇರಿ, ತನ್ನ ತಾಯಿಯನ್ನು ಸಂಹರಿಸಿ ಅಪಮಾನಗೊಳಿಸಿದ ಸೇಡನ್ನು ತೀರಿಸಲಿಕ್ಕಾಗಿ, ಇಕ್ಕೇರಿ ಅರಸನಾದ ಹಿರಿಯ ವೆಂಕಟಪ್ಪನಾಯಕನ ಸಹಾಯವನ್ನು ಬೇಡಿದನು. ವೆಂಕಟಪ್ಪನಾಯಕನು ಕ್ರಿ. ಶಕ ೧೬೦೮ರಲ್ಲಿ ದೊಡ್ಡ ಸೈನ್ಯದೊಡನೆ ತುಳುವಕ್ಕೆ ಬಂದು ಭೈರರಸನನ್ನು ಸೋಲಿಸಿ, ಅವನ ರಾಜ್ಯವನ್ನು ಸ್ವಾಧೀನಪಡಿಸಿ ಕೊಂಡನು. ಅದರ ಬಳಿಕ ಚೌಟ ಅರಸನು ವೆಂಕಟಪ್ಪನಾಯಕನಿಗೆ ಉಳಿದ ಜೈನ ಸಾಮಂತರಿಂದ ಕಪ್ಪ ಪಡೆಯಲಿಕ್ಕೆ ಸಹಾಯ ಮಾಡಿದನು.

**ಭೋಜರಾಯ** (೧೬೦೩ರಿಂದ ೧೬೪೪). ಚಂದ್ರಶೇಖರ ಚಿಕ್ಕರಾಯನ ಬಳಿಕ ಆತನ ಸೊಸೆ ಚನ್ನಮ್ಮಾದೇವಿಯು ಎರಡು ವರ್ಷ ಚೌಟರಾಜ್ಯವನ್ನಾಳಿ ದಳು. ಬಳಿಕ, ಅವಳ ಮಗನಾದ ಭೋಜರಾಯನು ಪಟ್ಟಕ್ಕೇರಿದನು. ಅವನ ಕಾಲದಲ್ಲಿ ಇಕ್ಕೇರಿ ಅರಸರು ಉಳ್ಳಾಲ ಮಾಗಣೆಯನ್ನು ತಮ್ಮ ಸ್ವಾಧೀನ ಪಡಿಸಿಕೊಂಡದ್ದರಿಂದ ಭೋಜರಾಜನು ಮೂಡಬಿದರೆಯಲ್ಲಿ ಹೊಸ ಅರಮನೆ ಯನ್ನು ಕಟ್ಟಿ ಅಲ್ಲಿ ವಾಸ್ತವಿಸಿಕೊಂಡಿರ ತೊಡಗಿದನು. ಅವನ ಬಳಿಕ ಚೌಟ ಅರಸರ ಬಲವು ಕ್ಷೀಣವಾಯಿತು.

ಕ್ರಿ. ಶಕ ೧೭೬೩ರಲ್ಲಿ ಹೈದರನು ಬೆದನೂರನ್ನು ಹಿಡಿದು, ಕಾರ್ಕಳಕ್ಕೆ ಬಂದು ಚೌಟರಸನು ಕೊಡಬೇಕಾದ ಕಪ್ಪವನ್ನೇರಿಸಿದನು. ಚೌಟರಸನು ಅದನ್ನು ಕೊಡತಪ್ಪಿದ್ದರಿಂದ, ಕ್ರಿ. ಶಕ೧೭೬೫ರಲ್ಲಿ ಹೈದರನ ಪ್ರತಿನಿಧಿಯಾದ ಶೇಕಾ

ಲಿಯು ಚೌಟರಾಜ್ಯವನ್ನು ತನ್ನ ಸ್ವಾಧೀನಪಡಿಸಿಕೊಂಡನು. ಹೈದರನು ಚೌಟರಸನಿಗೆ ಖರ್ಚಿನ ಬಗ್ಗೆ ೪೫೫ ವರಹ ವರ್ಷಾಶನವನ್ನು ಕೊಡುತ್ತಿದ್ದನು. ಇದನ್ನು ಟೀಪುವು ಕಡಿಮೆ ಮಾಡಿದನು. ಇಂಗ್ಲಿಷರು ಕನ್ನಡ ಜಿಲ್ಲೆಯನ್ನು ಸ್ವಾಧೀನಪಡಿಸಿಕೊಂಡ ಬಳಿಕ ಚೌಟರಸನಿಗೆ ೧೯೮ ವರಹ ವರ್ಷಾಶನ ನಿಶ್ಚೈಸಿದರು.

ಚೌಟ ವಂಶದವರು ಈ ವರ್ಷಾಶನವನ್ನು ಅನುಭವಿಸುತ್ತಾ ಈಗಲೂ ಮೂಡಬಿದರೆಯಲ್ಲಿದ್ದಾರೆ.

## ಆಜಿಲರು

ಬಂಗ, ಚೌಟ, ಮೂಲ, ಸಾವಂತ, ತೊಳಹಾರರಂತೆ ಆಜಿಲರೂ ಜೈನರಾಗಿದ್ದರು. ಅವರಿಗೆ ಅಳದಂಗಡಿ, ಕೇಳ, ಬರಯಗಳಲ್ಲಿ ಅರಮನೆಗಳಿದ್ದರೂ ವೇಣೂರು ಅವರ ರಾಜಧಾನಿಯಾಗಿತ್ತು. ಅವರೂ ಹೊಯ್ಸಳರ ಕಾಲದಿಂದ ತುಳುವದಲ್ಲಿ ಸಾಮಂತರಾಗಿ ಆಳುತ್ತಿದ್ದರು. ಅವರ ರಾಜ್ಯದಲ್ಲಿ ೧೩ ಮಾಗಣೆಗಳಿದ್ದವು.

ಕ್ರಿ. ಶಕ ೧೫೫೦ರಿಂದ ೧೬೧೦ರ ತನಕ ಆಳಿದ ೪ನೇ ತಿಮ್ಮಣ್ಣಾಜಿಲನು ಆಜಿಲರಲ್ಲಿ ಪ್ರಖ್ಯಾತಿ ಹೊಂದಿದವನಾಗಿರುತ್ತಾನೆ. ಆತನು ವೇಣೂರಿನಲ್ಲಿ ಗೋಮಟೇಶ್ವರ ಪ್ರತಿಮೆಯನ್ನು ಪ್ರತಿಷ್ಠಿಸಿದನು (೧೬೦೪). ಇದರಿಂದಾಗಿ ಕಾರ್ಕಳದ ಭೈರವರರಸನಿಗೂ ಅವನಿಗೂ ಯುದ್ಧ ನಡೆಯಿತು. ಅದೇ ಕಾಲದಲ್ಲಿ ಅವನಿಗೂ ಬಂಗರಸನಿಗೂ ಕೂಡ ಅನೇಕ ಸಲ ಕಾದಾಟ ನಡೆದು, ಕೊನೆಗೆ ಬಂಗರಸನು ಪರಾಜಿತನಾದನು.

ಕ್ರಿ. ಶಕ ೧೭೬೫ರಲ್ಲಿ ಆಜಿಲರ ರಾಜ್ಯವನ್ನು ಹೈದರನು ಸ್ವಾಧೀನಪಡಿಸಿಕೊಂಡು ಅವರಿಗೆ ೬೦ ವರಹ ಉತ್ಪತ್ತಿಯ ಉಂಬಳಿ ಬಿಟ್ಟನು. ಇಂಗ್ಲಿಷರು ಕನ್ನಡ ಜಿಲ್ಲೆಯನ್ನು ಸ್ವಾಧೀನಪಡಿಸಿಕೊಂಡ ಬಳಿಕ, ಆಜಿಲರಿಗೆ ೨೦೦ ರೂಪ್ಯಾ ವರ್ಷಾಶನ ನಿಶ್ಚೈಸಿದರು. ಆಜಿಲ ವಂಶದವರು ಈ ವರ್ಷಾಶನವನ್ನು ಈಗಲೂ ಅನುಭವಿಸಿಕೊಂಡಿದ್ದಾರೆ.

## ಸಾವಂತರು

ಮೂಲ್ಕಿಯ ಸಾವಂತರು ವಿಜಯನಗರದ ಮೊದಲಿಂದಲೇ ಪಾವಂಜೆ ಮೂಲ್ಕಿ ಹೊಳೆಗಳ ನಡುವಿನ ಮಾಗಣೆಗಳನ್ನು ಸಾಮಂತರಾಗಿ ಆಳುತ್ತಿದ್ದರು. ಟೀಪುವು ಅವರ ರಾಜ್ಯವನ್ನು ಸ್ವಾಧೀನಪಡಿಸಿಕೊಂಡು ಅವರಿಗೆ ವರ್ಷಾಶನವನ್ನು

ನಿಶ್ಚೈಸಿದನು. ಇಂಗ್ಲೀಷರು ಸಾವಂತರಿಗೆ ರೂಪ್ಯಾ ೩೩೦ ವರ್ಷಾಶನವನ್ನು ಕೊಡುತ್ತಿದ್ದರು. ಸಾವಂತ ವಂಶದವರು ಈಗಲೂ ಈ ವರ್ಷಾಶನವನ್ನು ಅನುಭವಿಸಿಕೊಂಡಿದ್ದಾರೆ.

## ಬೈಲಂಗಡಿ ಮೂಲರು

ಇವರಿಗೆ ೧೨ ಮಾಗಣೆಗಳಿದ್ದವು. ಶಿಶಿಲದಲ್ಲಿಯೂ ಸಿಡ್ಗಲಿನಲ್ಲಿಯೂ ಅರಮನೆಗಳಿದ್ದವು; ಬೈಲಂಗಡಿಯು ಇವರ ರಾಜಧಾನಿಯಾಗಿತ್ತು, ಮೂಲರ ವಂಶದವರು ಈಗ ಯಾರೂ ಇಲ್ಲ. ಬೈಲಂಗಡಿಯು ಈಗ ನಿರ್ಜನ ಹಳ್ಳಿ ಯೊಂದಾಗಿದೆ.

ಮೂಲರ ಇತಿಹಾಸದಲ್ಲಿ ಸೋಮಳಾದೇವಿಯೆಂಬ ರಾಣಿಯ ದುರಂತ ವೃತ್ತಾಂತವೊಂದಿದೆ. ಅವಳು ಬಂಗರಸನನ್ನು ವರಿಸಿ, ಗಂಡಹೆಂಡಿರಿಬ್ಬರೂ ಬಂಗಾಡಿ ಮತ್ತು ಬೈಲಂಗಡಿ ರಾಜ್ಯಗಳನ್ನಾಳುತ್ತಿದ್ದರು. ಒಂದು ದಿನ ಅವರು ಬಂಗಾಡಿ ಅರಮನೆಯಲ್ಲಿ ಅನಂತನೋಂಪಿಯ ವ್ರತವನ್ನು ಜರಗಿಸುವಾಗ, ಬಂಗರಸನಿಗೆ ಬಲಕ್ಕೂ–ಸೋಮಳಾದೇವಿಗೆ ಅವನ ಬಳಿ ಎಡಕ್ಕೂ–ಆಸನ ಗಳನ್ನಿಟ್ಟಿದ್ದರು. ಸೋಮಳಾದೇವಿಯು ತಾನು ಅರಸಿಯಾದ್ದರಿಂದ ಬಲ ದಿಕ್ಕಿನ ಆಸನವು ತನಗಾಗಬೇಕೆಂದು ಹಟಹಿಡಿದು,–ಅದಕ್ಕೆ ಬಂಗರಾಜನು ಸಮ್ಮತಿಸದ್ದರಿಂದ ಸಿಟ್ಟಾಗಿ,–ವ್ರತದ ನಡುವೆ ಬೈಲಂಗಡಿಗೆ ಹೊರಟುಹೋದಳು. ಬಳಿಕ ಬೈಲಂಗಡಿಯಲ್ಲಿ, ಅವಳು ಬಸದಿಯೊಂದನ್ನು ಕಟ್ಟಿಸಿ, ತಾನು ಪ್ರತ್ಯೇಕ ಅನಂತನೋಂಪಿ ವ್ರತವನ್ನು ಜರಗಿಸಿದಳು. ಬಂಗರಾಜನು ಅದನ್ನು ಕೇಳಿ, ಅವಳನ್ನು ಶಿಕ್ಷಿಸಬೇಕೆಂದು ಸೈನ್ಯಸಹಿತ ಬೈಲಂಗಡಿಗೆ ಬಂದನು. ಅಲ್ಲಿ ಗಂಡ ಹೆಂಡಿರಲ್ಲಿ ಯುದ್ಧ ನಡೆದು, ಬಂಗರಾಜನು ರಣರಂಗದಲ್ಲಿ ಮಡಿದನು. ಸೋಮಳಾದೇವಿಯು ಯುದ್ಧವನ್ನು ಗೆದ್ದರೂ ಗಂಡನ ಮರಣದಿಂದ ಪಶ್ಚಾ ತ್ತಾಪ ಪೀಡಿತಳಾಗಿ, ಆತ್ಮಹತ್ಯ ಮಾಡಿಕೊಂಡಳು. ಬೈಲಂಗಡಿಯಲ್ಲಿ ಆ ಗಂಡ ಹೆಂಡಿರ ಸ್ಮಾರಕವಾಗಿ ಎರಡು ಸಮಾಧಿಗಳಿವೆ.

## ಸುರಾಲದ ತೊಳಹಾರರು

'ಸುರಾಲದ ತೊಳಹಾರರು ಚೌಟರ ಕುಟುಂಬದವರಾಗಿದ್ದರು. ಅವರು ಸುರಾಲಿನಲ್ಲಿ ರಾಜಧಾನಿಯನ್ನು ಮಾಡಿಕೊಂಡು ೧೮ ಮಾಗಣೆಗಳನ್ನು ಸಾಮಂತ ರಾಗಿ ಆಳುತ್ತಿದ್ದರು. ಕೊಕ್ಕರ್ಣೆ ಮತ್ತು ಬಸರೂರುಗಳು ಅವರ ರಾಜ್ಯದ

ಬಂದರುಗಳಾಗಿದ್ದವು. ಹದಿನೇಳನೇ ಶತಮಾನದಲ್ಲಿ ತೊಳಹಾರ ಅರಸರಿಗೂ ಪೊರ್ತುಗೀಸರಿಗೂ ಬಸರೂರಿನಲ್ಲಿ ಅನೇಕ ಸಲ ಕಾದಾಟ ನಡೆಯಿತು; ಕೊನೆಗೆ ಸಂಧಾನವಾಗಿ ತೊಳಹಾರ ಅರಸರು ಪೊರ್ತುಗೀಸರಿಗೆ ಬಸರೂರಿನಲ್ಲಿ ಕೋಟೆಯನ್ನು ಕಟ್ಟಿಸಲಿಕ್ಕೆ ಅನುಮತಿಯಿತ್ತರು.

ಹೈದರನು ತೊಳಹಾರ ಅರಸನಿಂದ ಅವನ ರಾಜ್ಯವನ್ನು ಸ್ವಾಧೀನಪಡಿಸಿಕೊಂಡನು. ತೊಳಹಾರರಿಗೆ ಉಂಬಳಿಯಾಗಲಿ ಮಲ್ಲಿಖಾನೆಯಾಗಲಿ ದೊರಕಲಿಲ್ಲ. ಅವರ ವಂಶದವರು ಈಗಲೂ ಸುರಾಲಲ್ಲಿದ್ದಾರೆ.

## ಕಾರ್ಕಳದ ಭೈರರಸ ಒಡೆಯರು

ಕಾರ್ಕಳದ ಭೈರರಸರು ಹುಂಬಚ್ಚದ ಶಾಂತಾರ ವಂಶದವರು. ಅವರೂ ಜೈನರು. ಅವರು ಹೊಯ್ಸಳರ ಕಾಲದಲ್ಲಿ ತಮ್ಮ ಹುಂಬಚ್ಚದ ರಾಜ್ಯದಿಂದ ತುಳುವಕ್ಕಿಳಿದು, ಕಾರ್ಕಳದ ಬಳಿ ರಾಜ್ಯವನ್ನು ಸ್ಥಾಪಿಸಿಕೊಂಡು, ಅಲ್ಲಿ ಮಂಡಲೇಶ್ವರರಾಗಿ ಆಳುತ್ತಿದ್ದರು. ಅವರು ಆಲೂಪರ ಸಂಬಂಧಿಕರಾಗಿದ್ದರು,–ಆಲೂಪರ ಕೆಳಗೆ ಸಾಮಂತರಾಗಿದ್ದಂತೆ ತೋರುವುದಿಲ್ಲ. ಅವರ ಕ್ರಿ. ಶಕ ೧೩೩೪ರ ಶಾಸನವೊಂದು ಕಾರ್ಕಳದ ಹಿರಿಯಂಗಡಿಯ ಗುರುಗಳ ಬಸದಿಯಲ್ಲಿದೆ. ಅದರಲ್ಲಿ ಅವರು ಹೊಯ್ಸಳ ಬಲ್ಲಾಳರ ಮಂಡಲೇಶ್ವರರಾಗಿದ್ದರೆಂದು ಹೇಳಿದೆ. ಭೈರರಸರಿಗೆ ಕಾರ್ಕಳ ಮತ್ತು ಕೆರವಾಶೆಗಳಲ್ಲಿ ರಾಜಧಾನಿಗಳಿದ್ದವು. ಕ್ರಿ. ಶಕ ೧೩೪೬ರ ಬಳಿಕ ಭೈರರಸರು ವಿಜಯನಗರದ ಸಾಮಂತರಾದರು.

ಭೈರರಸರಲ್ಲಿ ಪ್ರಸಿದ್ಧನಾದ ವೀರಪಾಂಡ್ಯನು ಕ್ರಿ. ಶಕ ೧೪೩೧ರಲ್ಲಿ ಕಾರ್ಕಳದ ಬೆಟ್ಟದ ಮೇಲೆ ಗೋಮಟೇಶ್ವರನ ಪ್ರತಿಮೆಯನ್ನು ಅತ್ಯಂತ ವಿಜ್ರಂಭಣೆಯಿಂದ ಪ್ರತಿಷ್ಠಿಸಿದನು. ಇನ್ನೊಬ್ಬನಾದ ಹಿರಿಯ ಭೈರವರಾಯನು ಕಾರ್ಕಳದಲ್ಲಿ ಪ್ರತ್ಯೇಕ ಜೈನ ಮಠವೊಂದನ್ನು ಸ್ಥಾಪಿಸಿದನು. ಆತನ ಅಳಿಯನಾದ ಇಮ್ಮಡಿ ಭೈರವರಾಯನು ಕಾರ್ಕಳದ ಅನಂತಶಯನ ದೇವಸ್ಥಾನವನ್ನು ಕ್ರಿ. ಶಕ ೧೫೬೭ರಲ್ಲಿಯೂ ಚತುರ್ಮುಖ ಬಸದಿಯನ್ನು ಕ್ರಿ. ಶಕ ೧೫೮೬ರಲ್ಲಿಯೂ ಕಟ್ಟಿಸಿದನು. ಅವನ ಕಾಲದಲ್ಲಿಯೇ ಗೋವೆಯ ವೈಷ್ಣವ ಸಾರಸ್ವತರು ಕಾರ್ಕಳಕ್ಕೆ ಬಂದು, ಅವನ ಆಶ್ರಯವನ್ನು ಪಡೆದು, ಅಲ್ಲಿ ತಮ್ಮ ದೇವಾಲಯವನ್ನೂ ಕಟ್ಟಿದರು. ರಾಮನಾಥನೆಂಬ ಇನ್ನೊಬ್ಬ ಭೈರರಸನು ಕಾರ್ಕಳದ ಪೂರ್ವದಲ್ಲಿ ಅಣೆಕಟ್ಟು ಕಟ್ಟಿ, ರಾಮಸಮುದ್ರವೆಂಬ ಜಲಾಶಯವನ್ನು ನಿರ್ಮಿಸಿದನು.

ಭೈರರಸರಲ್ಲಿ ಕೊನೆಯವನಾದ ದಾವಣಿ ಇಮ್ಮಡಿ ಭೈರವರಾಯನ ಕಾಲದಲ್ಲಿ ಅವನಿಗೂ ಇತರ ಜೈನ ಸಾಮಂತರಿಗೂ ನಿರಂತರ ಯುದ್ಧ ನಡೆಯಿತು. ಅವನಿಗೂ ಚೌಟ ರಾಣಿಯಾದ ತಿರುಮಲಾದೇವಿಗೂ ಸಾಣೂರಿನ ಬಳಿ ನಡೆದ ಯುದ್ಧದಲ್ಲಿ (೧೬೦೬) ಅವನ ಸೇನಾಧಿಪತಿಯು ಚೌಟ ರಾಣಿಯನ್ನು ಕೊಂದು ಅವಳ ತಲೆಯನ್ನು ಕಡಿದು ಭೈರರಸನಿಗೆ ಒಪ್ಪಿಸಿದನು. ಭೈರರಸನು ಅದನ್ನು ಕಾರ್ಕಳದಲ್ಲಿ ಶೂಲಕ್ಕೇರಿಸಿದರಿಂದ, ಅವಳ ಮಗನಾದ ಚಿಕ್ಕರಾಯನು ತನ್ನ ಸೇಡನ್ನು ತೀರಿಸಲಿಕ್ಕಾಗಿ ಇಕ್ಕೇರಿಯ ಹಿರಿಯ ವೆಂಕಟಪ್ಪನಾಯಕನ ಸಹಾಯವನ್ನು ಬೇಡಿದನು. ಹಿರಿಯ ವೆಂಕಟಪ್ಪನಾಯಕನು ೧೬೦೮ರಲ್ಲಿ ದೊಡ್ಡ ಸೈನ್ಯದೊಡನೆ ಕಾರ್ಕಳಕ್ಕೆ ಬಂದು ದಾವಣಿ ಭೈರವರಾಯನನ್ನು ಸೋಲಿಸಿ– ಅವನ ರಾಜ್ಯವನ್ನು ಸ್ವಾಧೀನಪಡಿಸಿಕೊಂಡನು. ಭೈರವರಾಯನು ರಣರಂಗದಲ್ಲಿ ಮಡಿದು ಅವನ ವಂಶವು ಅಳಿದುಹೋಯಿತು.

ಹೀಗಾಗಿ ಹೈದರನ ಮೊದಲೇ ಕಾರ್ಕಳದ ಭೈರರಸರ ರಾಜ್ಯವು ನಿರ್ನಾಮವಾಗಿತ್ತು. ಇಂಗ್ಲಿಷರು ಕನ್ನಡ ಜಿಲ್ಲೆಯನ್ನು ಸ್ವಾಧೀನಪಡಿಸಿಕೊಂಡ ಬಳಿಕ, ಒಟ್ಟಾರೆ ಆರು ಸಾಮಂತ ಕುಟುಂಬದವರಿಗೆ ಮಾತ್ರ (ಚೌಟ, ಅಜಿಲ, ಸಾವಂತ, ವಿಟ್ಲ, ಕುಂಬಳೆ, ನೀಲೇಶ್ವರ ಅರಸು ವಂಶದವರಿಗೆ) ತುಳುವದ ಕಂದಾಯದಿಂದ ಸುಮಾರು ೨೩ ಸಾವಿರ ರೂಪಾಯಿ ಪ್ರಕಾರ ವರ್ಷಾಶನ ಸಲ್ಲುತ್ತಿದೆ. ಇಂಗ್ಲಿಷರ ೧೪೭ ವರ್ಷದ ಆಳಿಕೆಯಲ್ಲಿ ಆ ಸಾಮಂತರಿಗೆ ಒಟ್ಟಿಗೆ ತುಳುವದಿಂದ ೩೪ ಲಕ್ಷರೂಪಾಯಿ ವರ್ಷಾಶನವಾಗಿ ಸಂದಿತೆಂದು ಹೇಳಬಹುದು.

## ೪. ತುಳುವದಲ್ಲಿ ಶಾಂತಿಸ್ಥಾಪನೆ

ಕನ್ನಡ ಜಿಲ್ಲೆಯು ಇಂಗ್ಲಿಷರ ಪಾಲಿಗೆ ಬರುವಾಗ ಅದರ ವಿಸ್ತೀರ್ಣವು ೭೩೪೦ ಚದರ ಮೈಲುಗಳಾಗಿತ್ತು; ಅದರಲ್ಲಿ ಬರೇ ಆರು ಲಕ್ಷ ಜನವಿದ್ದರು. ಶ್ರೀರಂಗಪಟ್ಟಣದ ಯುದ್ಧದಲ್ಲಿ ಕೊಡಗಿನ ಅರಸನು ಇಂಗ್ಲಿಷರಿಗೆ ಸಹಾಯ ಮಾಡಿದ್ದರಿಂದ ಹೈದರನು ಅವನಿಂದ ಕ್ರಿ. ಶಕ ೧೭೭೪ರಲ್ಲಿ ಸ್ವಾಧೀನಪಡಿಸಿಕೊಂಡ ಅಮರಸುಳ್ಯ, ಪಂಜೆ, ಬೆಳ್ಳಾರೆ ಮಾಗಣೆಗಳನ್ನು ಇಂಗ್ಲಿಷರು ಅವನಿಗೆ ಕೊಟ್ಟರು. ಉಳಿದ ಕನ್ನಡ ಪ್ರಾಂತ್ಯದಲ್ಲಿ ಬೇಕಲ, ಮಂಗಳೂರು, ಪುತ್ತೂರು, ವಿಟ್ಲ, ಕಡಬ, ಬಂಟ್ವಾಳ, ಮೂಲ್ಕಿ, ಕಾರ್ಕಳ, ಬಳಿಸಾವರ, ಬಾರ್ಕೂರು, ಕುಂದಾಪುರ ಎಂಬ ಹನ್ನೊಂದು ತಾಲೂಕುಗಳು ಈಗಿನ ದಕ್ಷಿಣ ಕನ್ನಡಕ್ಕೆ

ಸಂಬಂಧಪಟ್ಟವುಗಳು ಮತ್ತು ಹೊನ್ನಾವರ, ಅಂಕೋಲಾ, ಸೂಪಾ, ಸುಂದ, ಬನವಾಸಿ, ಬಿಳಿಗಿ ತಾಲೂಕುಗಳು ಈಗಿನ ಉತ್ತರ ಕನ್ನಡಕ್ಕೆ ಸಂಬಂಧಪಟ್ಟವುಗಳು ಸೇರಿದ್ದವು. ೧೭೯೯ನೇ ಮೇ ತಿಂಗಳಲ್ಲಿ ಸಂಭವಿಸಿದ ಟೇಪುವಿನ ಮರಣದ ಬಳಿಕ, ಟೇಪುವು ೧೭೮೭ರಲ್ಲಿ ತನ್ನ ಸ್ವಾಧೀನಪಡಿಸಿಕೊಂಡ ೫ ಅಮಿನಿ ದ್ವೀಪಗಳು ಕನ್ನಡ ಜಿಲ್ಲೆಯೊಂದಿಗೆ ಇಂಗ್ಲಿಷರ ಪಾಲಿಗೆ ಬಂದವು. ಆಗ ಕನ್ನಡ ಜಿಲ್ಲೆಯ ಸ್ಥಿತಿಯು ಕೆಟ್ಟುಹೋಗಿತ್ತು. ಜಮಾಲಾಬಾದು ಕೋಟೆಯಲ್ಲಿ ಟೇಪುವಿನ ಸೈನ್ಯವೊಂದಿತ್ತು; ಆ ಸೈನ್ಯವು ಇಂಗ್ಲಿಷರ ಅಧಿಕಾರವನ್ನು ಒಪ್ಪದೆ, ೧೭೯೯ನೇ ಅಕ್ಟೋಬರ ತನಕ ಹೋರಾಡಿತು. ಶ್ರೀರಂಗಪಟ್ಟಣದ ಮುತ್ತಿಗೆಯ ಸಮಯ, ನೀಲೇಶ್ವರ, ಕುಂಬಳೆ ಮತ್ತು ವಿಟ್ಲ ಅರಸುಗಳು ತಮ್ಮ ತಮ್ಮ ರಾಜ್ಯಗಳಿಗೆ ಮರಳಿ, ತಮ್ಮ ಅಧಿಕಾರವನ್ನು ಪುನಃ ಸ್ಥಾಪಿಸಿಕೊಳ್ಳ ಹತ್ತಿದ್ದರು. ಕೊಡಗಿನ ಅರಸನು ಕಾಸರಗೋಡಿನಿಂದ ಬಾರ್ಕೂರು ತನಕದ ಪ್ರಾಂತ್ಯದಲ್ಲೆಲ್ಲಾ ಲೂಟಿಮಾಡಿ, ಜನರನ್ನೂ ಜಾನುವಾರುಗಳನ್ನೂ ಕೊಡಗಿಗೆ ಕೊಂಡುಹೋಗಿದ್ದನು. ದೊಂಡಿಯನೆಂಬ ಮರಾಠ ಸ್ವತಂತ್ರ ದಳಪತಿಯೊಬ್ಬನು ಬೆದನೂರಿನಿಂದ ಕುಂದಾಪುರಕ್ಕೆ ಬಂದು ಕುಂದಾಪುರದ ಸುತ್ತಲೂ ಹಾವಳಿಮಾಡಿದ್ದನು. ಉತ್ತರ ಕನ್ನಡ ಬಿಳಿಗಿ, ಸುಂದ, ಅಂಕೋಲಗಳಲ್ಲಿ ಹಿಂದೂ ಪಾಳ್ಯಗಾರರೂ ಟೇಪುವಿನ ಸೈನಿಕರೂ ಇಂಗ್ಲಿಷರ ಅಧಿಕಾರವನ್ನು ಒಪ್ಪಿರಲಿಲ್ಲ. ತುಳುವದಲ್ಲಿ ಹೈದರ್, ಟೇಪುಗಳ ಕಾಲದ ಅನೇಕ ಯುದ್ಧಗಳ ದೆಸೆಯಿಂದಲೂ ಆ ಯುದ್ಧದ ಖರ್ಚಿಗಾಗಿ ಅವರು ನಡೆಸಿದ ಅಕ್ರಮಗಳಿಂದಲೂ ಅಶಾಂತಿ ತುಂಬಿ, ಕೃಷಿಗಾರರ ಸ್ಥಿತಿಯು ತೀರಾ ಶೋಚನೀಯವಾಗಿತ್ತು.

ಇಂಗ್ಲಿಷ್ ಸೈನ್ಯವೊಂದು ಅತ್ತ ದಂಗೆಗಾರರನ್ನೂ ತಂಟೆಖೋರ ಪಾಳ್ಯಗಾರರನ್ನೂ ಹತೋಟಿಗೆ ತರುತ್ತಿರುವಾಗ, ಇತ್ತ ರಾಜಕಾರ್ಯ ನಿಪುಣನಾದ ಮನ್ರೋವು ಜಿಲ್ಲೆಯ ವರ್ಗದಾರರನ್ನು ಕರೆಸಿ, ಅವರಿಂದ ಬರಬೇಕಾದ ಕಂದಾಯವನ್ನು ನಿಶ್ಚೈಸಿ, ಅವರನ್ನು ಇಂಗ್ಲಿಷ್ ಸರಕಾರದ ಬೆಂಬಲಕ್ಕೆ ಮೆಲ್ಲನೆ ಒಲಿಸಿಕೊಂಡನು. ಹೀಗಾಗಿ ೧೭೯೯ನೇ ದಶಂಬರದೊಳಗೆ ಕನ್ನಡ ಜಿಲ್ಲೆಯಲ್ಲಿ ಸಂಪೂರ್ಣ ಶಾಂತಿಸ್ಥಾಪನೆಯಾಗಿ, ಇಂಗ್ಲಿಷರ ಆಳಿಕೆ ಪ್ರಾರಂಭವಾಯಿತು. ವಿಟ್ಲ, ಕುಂಬಳೆ, ನೀಲೇಶ್ವರ ಸಾಮಂತ ಅರಸುಗಳಿಂದ ಇಂಗ್ಲಿಷರು ಅವರ ರಾಜ್ಯವನ್ನು ತಪ್ಪಿಸಿ, ಅವರಿಗೆ ವರ್ಷಾಶನವನ್ನು ನಿಶ್ಚೈಸಿದ್ದರಿಂದ ಇಡೀ ತುಳುವವು ಒಂದೇ ಆಳಿಕೆಯ ಕೆಳಗಾಯಿತು.

# ಅಧ್ಯಾಯ ೧೪

## ಬ್ರಿಟಿಷರ ಕಾಲ (೧೮೦೦ರಿಂದ ೧೮೬೨)

(I)

೧. ಇಂಗ್ಲೀಷರ ಆಳಿಕೆಯ ಪ್ರಾರಂಭ. ೨. ಕೊಡಗರ ದಂಗೆ. ೩. ಕುಂಪಣಿ ಸರಕಾರದ ಅಂತ್ಯ. ೪. ಕನ್ನಡ ಜಿಲ್ಲೆಯ ವಿಭಜನೆ.

### ೧. ಇಂಗ್ಲೀಷರ ಆಳಿಕೆಯ ಪ್ರಾರಂಭ

ಕನ್ನಡ ಜಿಲ್ಲೆಯು ಇಂಗ್ಲೀಷರ ಕೈವಶವಾಗುವಾಗ, ಇಂಗ್ಲೀಷರು ಮುಂದೆ ಈ ಹಿಂದುಸ್ಥಾನದ ಒಡೆಯರಾಗುವರೆಂದು ಯಾರಿಗೂ ತಿಳಿಯಸಾಧ್ಯವಿರಲಿಲ್ಲ. ಟೀಪುವು ೧೭೯೯ನೇ ಮೇ ತಿಂಗಳಲ್ಲಿ ತನ್ನ ಸುಲ್ತಾನೀ ರಾಜ್ಯದ ಮಹತ್ವಾಕಾಂಕ್ಷೆಯನ್ನು ತ್ಯಜಿಸಿ, ಇಹಯಾತ್ರೆಯನ್ನು ಮುಗಿಸುವಾಗ, ಇಂಗ್ಲೀಷರು ಹಿಂದುಸ್ಥಾನದಲ್ಲಿ ಅಲ್ಲಿ ಇಲ್ಲಿ ಕೆಲವು ಪ್ರದೇಶಗಳನ್ನು ಆಳಿಕೊಂಡಿದ್ದರೂ, ಆ ಪ್ರದೇಶಗಳು ಒಂದರಿಂದೊಂದು ದೂರವಿದ್ದು, ಅವುಗಳ ಸುತ್ತಲೂ ಬಲಿಷ್ಠ ಮರಾಠರು ತಮ್ಮ ರಾಷ್ಟ್ರವನ್ನು ಸ್ಥಾಪಿಸಿಕೊಂಡಿದ್ದರು; ದೂರದರ್ಶಿಯೂ ರಾಜತಂತ್ರ ನಿಪುಣನೂ ಆದ ನಾನಾಫಡನಾವೀಸನ ಸಂಚಾಲಕತ್ವದಲ್ಲಿ, ಮರಾಠಾ ಪೇಷ್ವೆಯೇ ಧಿಲ್ಲಿಯ ಸಿಂಹಾಸನವನ್ನೇರಬಹುದೋ ಎಂದು ಆಗ ವಿಚಾರಿಗಳು ಎಣಿಸುತ್ತಿದ್ದರು. ಆ ಮರಾಠರ ಭೀತಿಯಿಂದಲೇ, ಇಂಗ್ಲೀಷರು ಟೀಪುವಿನ ಮರಣದ ಬಳಿಕ ಅವನ ರಾಜ್ಯವನ್ನು ಸಂಪೂರ್ಣ ತಮ್ಮ ಸ್ವಾಧೀನಪಡಿಸಿಕೊಳ್ಳದೆ, ಹಿಂದಿನ ಮೈಸೂರು ರಾಜ್ಯದೊಂದಿಗೆ ಬೆದನೂರು ರಾಜ್ಯದ ಅಂಶಗಳನ್ನು ಸೇರಿಸಿ, ಚಿಕ್ಕ ರಾಷ್ಟ್ರವೊಂದನ್ನು ರಚಿಸಿ, ಹಿಂದೂ ರಾಜವಂಶದ ಮುಮ್ಮಡಿ ಕೃಷ್ಣರಾಜನನ್ನು ಆ ರಾಷ್ಟ್ರದ ಸಿಂಹಾಸನಕ್ಕೆ ಏರಿಸಿದರು. ಟೀಪುವಿನ ಉಳಿದ ರಾಜ್ಯವನ್ನು ಮಾತ್ರ ಇಂಗ್ಲೀಷರು ನಿಜಾಮನೊಂದಿಗೂ ಮರಾಠರೊಂದಿಗೂ ಹಂಚಿಕೊಂಡರು. ಇಂಗ್ಲೀಷರಿಗೆ ಮೂರನೇ ಮತ್ತು ನಾಲ್ಕನೇ ಮೈಸೂರು ಯುದ್ಧಗಳ ಫಲವಾಗಿ ಕನ್ನಡ ಜಿಲ್ಲೆ, ಮಲಬಾರು, ಸೇಲಂ, ಮಧುರೆ, ಕೊಯಮುತ್ತೂರು ಮತ್ತು ವೈನಾಡು ಜಿಲ್ಲೆಗಳು ತಮ್ಮ ಪಾಲಾಗಿ ದೊರಕಿದವು. ಬಳಿಕ ನಿಜಾಮನ ಸಹಾಯಕ್ಕೆಂದು ಅವರು ಇಟ್ಟ ಸೈನ್ಯದ ಖರ್ಚಿಗಾಗಿ, ಅವರು ನಿಜಾಮನಿಂದ

ಬಳ್ಳಾರಿ, ಕಡಪ, ಕರ್ನೂಲು, ಅನಂತಪುರ ಜಿಲ್ಲೆಗಳನ್ನು ಮರಳಿ ಪಡಕೊಂಡು, ಕ್ರಿ. ಶಕ ೧೮೦೦ರಲ್ಲಿ ಆ ಜಿಲ್ಲೆಗಳಿಗೆ ತಂಜಾವೂರನ್ನೂ ಆರ್ಕಾಟು ನವಾಬನ ಕೆಳಗಿದ್ದ ಜಿಲ್ಲೆಗಳನ್ನೂ ಕೂಡಿಸಿಕೊಂಡು, ೧೮೦೧ರಲ್ಲಿ ವಿಸ್ತಾರವಾದ "ಮದ್ರಾಸ್ ಆಧಿಪತ್ಯ"ವನ್ನು ರಚಿಸಿಕೊಂಡರು.

ಆ ನಡುವೆ ಅತ್ತ ಕ್ರಿ. ಶಕ ೧೮೦೦ರಲ್ಲಿ ನಾನಾಫಡನಾವೀಸನು ಕಾಲಾಧೀನನಾಗಿ, ಮರಾಠರ ರಾಜ್ಯದಲ್ಲಿ ಒಕ್ಕಟ್ಟು ತಪ್ಪಿ, ಅಂತಃಕಲಹಗಳು ಪುನಃ ತೊಡಗಿ, ಇಂಗ್ಲೀಷರಿಗೆ ಅವುಗಳಲ್ಲಿ ಪ್ರವೇಶಿಸಲಿಕ್ಕೆ ಎಡೆ ದೊರಕಿತು. ಇಂಗ್ಲೀಷರು ಕ್ರಿ. ಶಕ ೧೮೧೮ರೊಳಗೆ ಎಲ್ಲಾ ಮರಾಠ ಸರದಾರರನ್ನೂ ತಗ್ಗಿಸಿ, ಪೇಷ್ವೆಯ ರಾಜ್ಯವನ್ನು ತಮ್ಮ ಸ್ವಾಧೀನಪಡಿಸಿಕೊಂಡು, ಈಗಿನ ಮುಂಬಯಿ ಆಧಿಪತ್ಯವನ್ನೂ ಸ್ಥಾಪಿಸಿದರು. ಕ್ರಿ. ಶಕ ೧೮೧೮ರ ಬಳಿಕ ಇಂಗ್ಲೀಷರು ಹಿಂದುಸ್ಥಾನದ ಸಾರ್ವಭೌಮರಾಗುವರೆಂಬುದಕ್ಕೆ ಹೆಚ್ಚಿನ ಸಂಶಯವುಳಿಯಲಿಲ್ಲ.

ಕನ್ನಡ ಜಿಲ್ಲೆಯು ಕ್ರಿ. ಶಕ ೧೭೯೯ರಲ್ಲಿ ಕಾರವಾರಿನಿಂದ ಮಲಬಾರು ಗಡಿ ತನಕ ಒಂದೇಯಾಗಿತ್ತು. ಕ್ರಿ. ಶಕ ೧೮೦೦ರಲ್ಲಿ ಇಂಗ್ಲೀಷರು ಆ ಜಿಲ್ಲೆಯಲ್ಲಿ ಇನ್ನೂ ರಾಜ್ಯಾಧಿಕಾರ ನಡೆಸಲೆಳಸುತ್ತಿದ್ದ ಸಾಮಂತ ಅರಸರಿಗೆಲ್ಲಾ ವರ್ಷಾಶನ ನಿಶ್ಚೈಸಿ, ಇಡೀ ಜಿಲ್ಲೆಯನ್ನು ತಮ್ಮ ಸ್ವಾಧೀನಪಡಿಸಿಕೊಂಡರು. ಆದರೆ ಅದರಲ್ಲಿ (ಈಗಿನ ಪುತ್ತೂರು ತಾಲೂಕಿನ) ಅಮರಸುಳ್ಯ, ಪಂಜ, ಬೆಳ್ಳಾರೆ ಮಾಗಣೆಗಳನ್ನು ಟೀಪುವಿನ ಯುದ್ಧದಲ್ಲಿ ತಮಗೆ ಸಹಾಯಮಾಡಿದ ಕೊಡಗು ರಾಜನಿಗೆ ಕೊಟ್ಟರು. ಕನ್ನಡ ಜಿಲ್ಲೆಯೊಂದಿಗೆ ಮಂಗಳೂರು ಕಚೇರಿಯ ಆಡಳಿತೆಗೊಳಪಟ್ಟ, ಪಶ್ಚಿಮ ಸಮುದ್ರದಲ್ಲಿದ್ದ ಅಮೀನದೀವಿಗಳೆಂಬ ಐದು ದ್ವೀಪಗಳ ಶ್ರೇಣಿಯೂ ಇಂಗ್ಲೀಷರ ವಶವಾಯಿತು.

ಕನ್ನಡ ಜಿಲ್ಲೆಗೆ ಕಲೆಕ್ಟರನಾಗಿ ನೇಮಕಪಟ್ಟ ಕೆಪ್ಟನ್ ಮನ್ರೋವು ೧೭೯೯ನೇ ಜುಲ್ಯಾಯಲ್ಲಿ ಕನ್ನಡ ಜಿಲ್ಲೆಗೆ ಬಂದು, ಕ್ರಿ. ಶಕ ೧೮೦೦ರ ಅಂತ್ಯದ ತನಕ ಕನ್ನಡ ಜಿಲ್ಲೆಯಲ್ಲಿದ್ದು, ಅಲ್ಲಿ ಸಂಪೂರ್ಣ ಶಾಂತಿಸ್ಥಾಪನೆಯಾಗಿ ಇಂಗ್ಲೀಷರ ಅಧಿಕಾರವು ಸ್ಥಿರವಾದ ಬಳಿಕ, ಕರ್ನಲ್ ಸ್ಥಾನಕ್ಕೆ ನೇಮಕಹೊಂದಿ ಜಿಲ್ಲೆಯನ್ನು ಬಿಟ್ಟುಹೋದನು. ಸೈನಿಕ ಶಾಖೆಯಲ್ಲಿದ್ದರೂ ಮನ್ರೋವು ದೂರದರ್ಶಿಯೂ, ರಾಜನೀತಿವಿಶಾರದನೂ, ಪ್ರಜಾಹಿತಕಾಂಕ್ಷಿಯೂ ಆಗಿದ್ದು ಇಂಗ್ಲೀಷ್ ಸರಕಾರದ ಮನ್ನಣೆಯನ್ನು ಪಡೆದಿದ್ದನು. ಅವನು ಕನ್ನಡ ಜಿಲ್ಲೆಯ ಆಡಳಿತೆಯ ಕುರಿತು ಆಗಿನ ಕಂದಾಯ ಶಾಖೆಯ ಬೋರ್ಡಿನ ಮುಂದಿಟ್ಟ

ಹಲವು ಸೂಚನೆಗಳನ್ನು ಅವನ ಬಳಿಕ ಬಂದ ಕಲೆಕ್ಟರರು ಕೂಡ ಕನ್ನಡ ಜಿಲ್ಲೆಯ ಆಡಳಿತೆಯಲ್ಲಿ ತಮ್ಮ ಮುಂದಿಟ್ಟುಕೊಂಡು, ಆ ಪ್ರಕಾರ ವರ್ತಿಸಬೇಕೆಂದು ಆ ಬೋರ್ಡಿನವರು ಆಜ್ಞೆ ಇತ್ತರು. ಕರ್ನಲ್ ಮನ್ರೋವು ಮುಂದೊಂದು ಸಲ ಮದರಾಸು ಪ್ರಾಂತ್ಯದ ಗವರ್ನರನಾಗಿ ಬಂದು, ಕೃಷಿಕರ ಹಿತಕ್ಕಾಗಿ ಅನೇಕ ಏರ್ಪಾಡುಗಳನ್ನು ಮಾಡಿದನು.

ಕ್ರಿ. ಶಕ ೧೮೦೦ರಿಂದ ೧೮೪೪ರ ತನಕದ ಕನ್ನಡ ಜಿಲ್ಲೆಯ ಆಡಳಿತೆಯ ಕುರಿತು ಆ ಕಾಲದ ಕಲೆಕ್ಟರರಿಗೂ ಬೋರ್ಡಿಗೂ ನಡೆದ ಕಾಗದಪತ್ರಗಳೆಲ್ಲವೂ ಛಾಪೆಯಾಗಿ, ದಕ್ಷಿಣಕನ್ನಡ ಜಿಲ್ಲಾ ಕಲೆಕ್ಟರರವರ ಕಚೇರಿಯ ಪುಸ್ತಕಭಂಡಾರ ದಲ್ಲಿವೆ. ಕ್ರಿ. ಶಕ ೧೮೦೧ರಲ್ಲಿ ಮದರಾಸು ಸರಕಾರದ ಅಪೇಕ್ಷೆ ಪ್ರಕಾರ ಫ್ರಾನ್ಸಿಸ್ ಬುಕಾನನೆಂಬ ಇಂಗ್ಲೀಷ್ ಅಧಿಕಾರಿಯು ಕನ್ನಡ ಜಿಲ್ಲೆಯನ್ನು ಸಂಚರಿಸಿ, ಇಲ್ಲಿಯ ಸ್ಥಿತಿಗತಿಗಳ ಕುರಿತು ತನ್ನ "ಪ್ರವಾಸದ ವೃತ್ತಾಂತ"ದಲ್ಲಿ ಕೂಲಂಕಷ ಬರೆದಿರುತ್ತಾನೆ. ಆ ಗ್ರಂಥದಿಂದಲೂ, ಆ ಕಾಗದಪತ್ರಗಳಿಂದಲೂ ನಮಗೆ ಆ ಕಾಲದ ಸಂಗತಿಗಳನೇಕ ತಿಳಿದುಬರುತ್ತವೆ.

ಇಂಗ್ಲೀಷರ ಆಳಿಕೆಯ ಪ್ರಾರಂಭದಲ್ಲಿ ಕನ್ನಡ ಜಿಲ್ಲೆಯು ವಿಜಯನಗರ ಮತ್ತು ಇಕ್ಕೇರಿ ಅರಸರ ಕೆಳಗೆ ೪ ಶತಮಾನ ಕಾಲ ಅನುಭವಿಸಿದ್ದ ಸುಖ ಸಂಪತ್ತನ್ನೆಲ್ಲಾ ಕಳಕೊಂಡು ತೀರಾ ನಿಸ್ತೇಜವಾಗಿತ್ತು. ಹೈದರ್ ಟೀಪುಗಳ ಕಾಲದ ನಿರಂತರ ಯುದ್ಧಗಳ ಪೆಸೆಯಿಂದಲೂ – ಆ ಯುದ್ಧಗಳ ಖರ್ಚಿಗಾಗಿ ಅವರು ಕನ್ನಡ ಜಿಲ್ಲೆಯವರ ಮೇಲೆ ಹೊರಿಸಿದ ಕಂದಾಯ, ತೆರಿಗೆ, ವಂತಿಗೆ ಗಳಿಂದಲೂ – ತುಳುವವು ಕೃಶವಾಗಿತ್ತು. ಕೃಷಿಭೂಮಿಯೆಲ್ಲಾ ಕಿರಿದಾಗುತ್ತಾ ಬಂದು, – ಕೃಷಿಗಾರರೊಡನೆ ತಮ್ಮ ಭೂಮಿಗಳನ್ನು ಉತ್ತಮ ರೀತಿಯಿಂದ ಕಾಪಾಡಿಕೊಳ್ಳಲಿಕ್ಕೆ ಬೇಕಾಗುವಷ್ಟು ಹಣವೂ ಇಲ್ಲದೆ – ಜನಸಂಖ್ಯೆಯೂ ವಿರಳವಾಗ ಹತ್ತಿತ್ತು.

ಮನ್ರೋವು ಆ ಸ್ಥಿತಿಯನ್ನು ನೋಡಿ, ಕೃಷಿಗಾರರ ಮೇಲಣ ಭಾರವನ್ನು ತಗ್ಗಿಸುವ ಕುರಿತು ಅನೇಕ ಸಲಹೆಗಳನ್ನಿತ್ತಿದ್ದನು. ಆದರೆ ಆ ಸಲಹೆಗಳನ್ನು ಮೀರಿ, ಅವನ ಬಳಿಕ ಬಂದ ಕಲೆಕ್ಟರರು ಹೈದರ್ ಟೀಪುಗಳ ಕಾಲದ ಕಂದಾಯವನ್ನೇ ಜನರ ಮೇಲೆ ಹೊರಿಸಿದರು. ತುಳುವದಲ್ಲಾಗ ಕೈಗಾರಿಕೆ ಗಳೇನೂ ಇರಲಿಲ್ಲ. ಜನರಿಗೆ ಕೃಷಿಯೊಂದೇ ಜೀವನೋಪಾಯವಾಗಿತ್ತು. ಕಂದಾಯದೇರಿಕೆಯೊಂದಿಗೆ – ಜನರಿಗೆ ಹೈದರ್ ಟೀಪುಗಳ ಕಾಲದಲ್ಲಿದ್ದ ಅನು

ಕೊಲತೆಗಳು ಕೂಡ ಇಂಗ್ಲೀಷರ ಆಳಿಕೆ ಪ್ರಾರಂಭವಾದ ಬಳಿಕ ಮಾಯವಾಗ ತೊಡಗಿದವು. ಇಂಗ್ಲೀಷ್ ಸರಕಾರವು ಆಗ ಕುಂಪಣಿ ಸರಕಾರವಾಗಿತ್ತು. ಕ್ರಿ. ಶಕ ೧೬೦೦ರಲ್ಲಿ ಹಿಂದುಸ್ಥಾನದೊಡನೆ ವ್ಯಾಪಾರ ಬೆಳೆಸಲಿಕ್ಕೆಂದು ಬಂದ ಈಸ್ಟ್ ಇಂಡಿಯಾ ಕಂಪೆನಿಯು, ಕ್ರಿ. ಶಕ ೧೭೫೭ರ ಬಳಿಕ ಸಾಮ್ರಾಜ್ಯ ಸ್ಥಾಪನೆಗೆ ಹೊರಟರೂ ಅದರ ದೃಷ್ಟಿಯು ಜನರ ಹಿತದ ಕಡೆ ಲವಷ್ಟಾದರೂ ಇರಲಿಲ್ಲ. ತಮ್ಮ ಸ್ವಾಧೀನ ಬಂದ ಪ್ರಾಂತ್ಯಗಳಿಂದ ಹೇಗೆ ತಾವು ಆದಷ್ಟು ಲಭ್ಯವನ್ನು ಪಡೆಯಬಹುದೆಂಬ ವಿಚಾರವೊಂದೇ ಆ ಕುಂಪಣಿ ಸರಕಾರವನ್ನು ಮುಸುಕಿತ್ತು. ಕನ್ನಡ ಜಿಲ್ಲೆಯಲ್ಲಿ ಆ ತನಕ ಜೀವನಾವಶ್ಯಕತೆಗಳಾದ ಉಪ್ಪು, ಹೊಗೆಸೊಪ್ಪುಗಳನ್ನು ಜನರು ನಿರಾತಂಕವಾಗಿ ತರಿಸಿ ಮಾರಾಟಮಾಡ ಬಹುದಿತ್ತು. ಕುಂಪಣಿ ಸರಕಾರದವರು ಉಪ್ಪು, ಹೊಗೆಸೊಪ್ಪಿನ ವ್ಯಾಪಾರ ವನ್ನು ತಮ್ಮ ಕೈಯಲ್ಲಿಟ್ಟುಕೊಂಡದ್ದರಿಂದ ಅವುಗಳ ದರವು ಹೆಚ್ಚಿತು. ಅವುಗಳು ದೊರಕುವುದೂ ಕಷ್ಟವಾಗ ತೊಡಗಿತು. ಜಿಲ್ಲೆಯಿಂದ ಹೊರ ಹೋಗುತ್ತಿದ್ದ ಅಕ್ಕಿ, ಒಳ್ಳೇ ಮೆಣಸು, ಅಡಕೆಗಳ ಮೇಲೆ ಬಂದರುಗಳಲ್ಲಿ ಅದೇ ಸಮಯ ಸುಂಕಯೇರಿಸಿದ್ದರಿಂದ ಆ ಜೀನಸುಗಳು ಜಿಲ್ಲೆಯಲ್ಲಿ ಇಲ್ಲಿಯ ಅವಶ್ಯಕತೆಗಳನ್ನು ಮೀರಿ, ಉಳಿದವು. ಅವುಗಳ ಕ್ರಯವೂ ಬಿತ್ತು. ಈ ಜಿಲ್ಲೆಗೆ ಆ ತನಕ ವ್ಯಾಪಾರಕ್ಕಾಗಿ ಹೊರಗಿನಿಂದ ಬರುತ್ತಿದ್ದ ವರ್ತಕರು ಇಲ್ಲಿ ಬರುವದನ್ನು ಬಿಟ್ಟು, ಬೇರೆ ಜಿಲ್ಲೆಗಳಿಗೆ ಹೋಗ ತೊಡಗಿದ್ದರಿಂದ ಕೃಷಿಕರ ಉತ್ಪತ್ತಿಗೆ ಬೆಲೆ ದೊರಕದಂತಾಯಿತು. ಹೀಗೆಲ್ಲಾ ಕಾರಣಗಳಿಂದ ಕ್ರಿ. ಶಕ ೧೮೧೪ರೊಳಗೆ ಈ ಜಿಲ್ಲೆಯ ಜನರ ಆರ್ಥಿಕ ಸ್ಥಿತಿಯು ತೀರಾ ಕೆಟ್ಟುಹೋಗಿ, ಅವರಲ್ಲಿ ಅಶಾಂತಿ ತುಂಬಿತು. ಕೃಷಿಭೂಮಿಗಳು ಬಂಜರಾಗಿ ಬಿದ್ದು, ಜನರು ಕೂಟಕೂಡಿ ತೀರ್ವೆ ಕೊಡಲಾತಂಕಿಸ ತೊಡಗಿದರು. ಕೊನೆಗೆ ಕ್ರಿ. ಶಕ ೧೮೧೯ರಲ್ಲಿ ಜೋರ್ಡಿನವರು ಕಂದಾಯವನ್ನು ತಗ್ಗಿಸಿ, ಅಶಾಂತಿಯನ್ನು ಕಡಿಮೆಮಾಡ ಪ್ರಯತ್ನಿಸಿದರೂ ಅವರ ಪ್ರಯತ್ನಗಳು ಸಂಪೂರ್ಣ ಫಲಕಾರಿಯಾಗಲಿಲ್ಲ. ಜನರ ಸೌಕರ್ಯಗಳ ಕಡೆಯೂ ಕುಂಪಣಿ ಸರಕಾರವು ಆಗ ತೀರಾ ಉದಾಸೀನ ವನ್ನು ತೋರಿಸುತ್ತಿತ್ತು. ಕ್ರಿ. ಶಕ ೧೮೩೦–೩೧ರಲ್ಲಿ ರೈತರಲ್ಲಿ ಪ್ರಬಲ ಕೂಟ ಗಳೆದ್ದು, ದಂಗೆಯಾಗುವ ಸಂಭವವು ತೋರಿತು. ಕೊನೆಗೆ ಕ್ರಿ. ಶಕ ೧೮೩೩ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯು ಇನ್ನು ವ್ಯಾಪಾರ ಮಾಡಕೂಡದೆಂದೂ, ತನ್ನ ವಶವಿದ್ದ ರಾಜ್ಯದ ಆಡಳಿತೆಯ ಕುರಿತು ಮಾತ್ರ ಮನಸ್ಸಿಡಬೇಕಾಗಿಯೂ

ಇಂಗ್ಲೀಷ್ ಪಾರ್ಲಿಮೆಂಟಿನವರು ವಿಧಿಸಿದರಿಂದ, ಕುಂಪಣಿ ಸರಕಾರದ ದೃಷ್ಟಿಯು ತಮ್ಮ ಲಭ್ಯದ ಕಡೆಯಿಂದ ಜನರ ಹಿತದ ಕಡೆ ತಿರುಗ ತೊಡಗಿತು.

## ೨. ಕೊಡಗರ ದಂಗೆ (ಕಲ್ಯಾಣಪ್ಪನ ಕಾಟಕಾಯಿ)

ಕ್ರಿ. ಶಕ ೧೮೩೪ರಲ್ಲಿ ಇಂಗ್ಲೀಷರು ಕೊಡಗು ರಾಜನಾದ ವೀರರಾಜೇಂದ್ರನನ್ನು ಸಿಂಹಾಸನದಿಂದ ತಳ್ಳಿ, ಅವನ ರಾಜ್ಯವನ್ನು ಸ್ವಾಧೀನಪಡಿಸಿಕೊಂಡರು. ಪಂಜ, ಬೆಳ್ಳಾರೆ, ಸುಳ್ಯ ಅಮರ ಮಾಗಣೆಗಳು ಅದರ ಬಳಿಕ ಪುನಃ ಕನ್ನಡ ಜಿಲ್ಲೆಗೆ ಸೇರಿದವು. ಆದರೆ ಆ ನಾಲ್ಕು ಮಾಗಣೆಗಳ ಜನರಿಗೂ, ಕೊಡಗಿನಲ್ಲಿಯೇ ಇದ್ದ ಜನರಿಗೂ, ಇಂಗ್ಲೀಷರ ಮೇಲೇನೂ ಭಕ್ತಿಯಿರಲಿಲ್ಲ. ವೀರರಾಜೇಂದ್ರನ ಅತ್ಯಾಚಾರಗಳು ಅವರಿಗೆ ಬೇಗನೇ ಮರೆತುಹೋದವು. ಆರ್ಥಿಕ ಸಂಪತ್ತನ್ನು ಸೂರೆಗೊಂಡು, ಸದ್ದಿಲ್ಲದೆ ರಕ್ತವನ್ನು ಹೀರುವ ಇಂಗ್ಲೀಷ್ ಅನ್ಯ ಸರಕಾರದ ಮೇಲೆ ಅವರ ಜುಗುಪ್ಸೆಯು ಹೆಚ್ಚತೊಡಗಿತು.

ಕ್ರಿ. ಶಕ ೧೮೩೭ರಲ್ಲಿ ಕೊಡಗರೆಲ್ಲಾ ದಂಗೆ ಮಾಡಬೇಕೆಂದೂ – ಕನ್ನಡ ಜಿಲ್ಲೆಯವರೂ ಇತರರೂ ಅವರೊಂದಿಗೆ ಸೇರಬೇಕೆಂದೂ ಪಿತೂರಿ ನಡೆಯಿತು. ಈ ಪಿತೂರಿಯ ವಾಸನೆಯು ಸ್ವಲ್ಪವಾದರೂ ಇಂಗ್ಲೀಷ್ ಸರಕಾರಕ್ಕೆ ಸಿಕ್ಕಲಿಲ್ಲ. ಆದರೆ ಇಂಗ್ಲೀಷ್ ಸರಕಾರದ ಕೆಳಗಿರುವ ಉದ್ಯೋಗಸ್ಥರೂ ಪ್ರಜೆಗಳಲ್ಲಿ ಹೆಚ್ಚಿನವರೂ ಆ ಪಿತೂರಿಗೆ ಸೇರಿದರೂ, ಆ ಪಿತೂರಿಯು ಯಶಸ್ವಿಯಾಗಲಿಲ್ಲ. ಸೈನಿಕ ಶಿಕ್ಷಣವೂ ಇಲ್ಲ, ಸಮರಸನ್ನಾಹಗಳೂ ಇಲ್ಲದ ಜನರು – ಒಕ್ಕಟ್ಟಿನ ಕಾರ್ಯಕ್ರಮಗಳಿಲ್ಲದೆ-ದಂಗೆಯೆದ್ದು ಫಲವಿಲ್ಲವೆಂದು ಮಾತ್ರ ಆ ಪಿತೂರಿಯು ತೋರಿಸಿಕೊಟ್ಟಿತು.

ಕೊಡಗರ ದಂಗೆ ಅಥವಾ ಕಲ್ಯಾಣಪ್ಪನ ಕಾಟಕಾಯಿಯೆಂದು ಹೆಸರುಗೊಂಡ ಆ ಪಿತೂರಿಯಲ್ಲಿ, ಕೊಡಗು ಅರಸನ ಸಂತಾನದವನೆಂದು ಹೇಳಿಕೊಳ್ಳುತ್ತಿದ್ದ ಪುಟ್ಟ ಬಸಪ್ಪನು ಮುಖ್ಯ ಸೂತ್ರಧಾರನಾಗಿದ್ದನು. ೧೮೩೭ನೇ ಮಾರ್ಚಿ ಅಂತ್ಯಕ್ಕೆ ಬೆಳ್ಳಾರೆಯಲ್ಲಿ ದಂಗೆಯು ಪ್ರಾರಂಭಿಸಿ, ೭ ದಿನಗಳಲ್ಲಿ ಮಂಗಳೂರೂ, ಮಂಗಳೂರಿನ ತೆಂಕಣ ದಿಕ್ಕಿಗಿರುವ ಕನ್ನಡ ಜಿಲ್ಲೆಯೂ ದಂಗೆಗಾರರ ಕೈವಶವಾಯಿತು. ಮಂಗಳೂರಿನಲ್ಲಿದ್ದ ಲುಯಿಸ್ ಎಂಬ ಇಂಗ್ಲೀಷ್ ಕಲೆಕ್ಟರನು ದಂಗೆಗಾರರಿಗೆ ಹೆದರಿ, ಎಪ್ರಿಲ್ ೫ನೇ ದಿನ ತನ್ನ ಮತ್ತು ಇತರ ಇಲ್ಲಿದ್ದ ಇಂಗ್ಲೀಷರ ಕುಟುಂಬಗಳನ್ನೆಲ್ಲಾ ಕಣ್ಣಾನೂರಿಗೆ ಹಡಗಿನಲ್ಲಿ ಹಾಕಿ ಕಳುಹಿಸಿ

ದನು. ಆದರೆ ಇಂಗ್ಲೀಷ್ ಸೈನ್ಯವೊಂದು ಎಪ್ರಿಲ್ ೧೧ರೊಳಗೆ ಮಂಗಳೂರಿಗೆ ಮುಟ್ಟಿದೊಡನೆ, ದಂಗೆಗಾರರು ಎದೆಗೆಟ್ಟು ಚದರ ತೊಡಗಿದರು. ಹಾಗೆ ಚದರಿದ ಬಳಿಕ ಇಂಗ್ಲೀಷ್ ಸೈನಿಕರು ಅವರ ಮುಖ್ಯಸ್ಥರನ್ನೆಲ್ಲಾ ಹಿಡಿದು ಶಿಕ್ಷೆಗೆ ಗುರಿ ಮಾಡಿದರು. ಮುಖಂಡರಲ್ಲೊಬ್ಬನಾದ ಕಲ್ಯಾಣಪ್ಪ ಎಂಬವನನ್ನೂ ದಂಗೆ ಗಾರರೊಂದಿಗೆ ಸೇರಿದ ಬಂಗರಸನನ್ನೂ ಇಂಗ್ಲೀಷರು ಬಿಕ್ರನ ಕಟ್ಟೆಯಲ್ಲಿ ಗಲ್ಲಿಗೆ ಹಾಕಿದರು. ಬಂಗರಸನ ವಂಶದವರಿಗೆ ಆ ತನಕ ಕೊಡುತ್ತಿದ್ದ ವರ್ಷಾಶನವನ್ನು ಅದರ ಬಳಿಕ ಅವರು ನಿಲ್ಲಿಸಿದರು.

ಈ ದಂಗೆಯು ಬರೇ ಏಳೆಂಟು ದಿನ ಮಾತ್ರ ನಡೆದರೂ ದಂಗೆಗಾರರು ಕಾಸರಗೋಡು, ಕುಂಬಳೆ, ಮಂಜೇಶ್ವರ, ಮಂಗಳೂರು, ಬಂಟ್ವಾಳ, ಪುತ್ತೂರು, ಬೆಳ್ಳಾರೆಗಳಲ್ಲಿದ್ದ ಸರಕಾರಿ ಕಚೇರಿಗಳನ್ನು ಸ್ವಾಧೀನಪಡಿಸಿಕೊಂಡು–ಮಂಗಳೂ ರಿನ ಕಚೇರಿಯ ರಿಕಾರ್ಡನ್ನೆಲ್ಲಾ ಸುಟ್ಟು ಹಾಕಿದ್ದರು. ಅವರ ವಿರೋಧವಾಗಿ ಜನರ್‍ಯಾರೂ ಇಂಗ್ಲೀಷರಿಗೆ ಸಹಾಯಮಾಡಲಿಲ್ಲ. ಇಂಗ್ಲೀಷರಿಗೆ ತಮ್ಮ ಕೆಳ ನೌಕರರಲ್ಲಿ ಕೂಡ ತಮ್ಮ ಹಿತಚಿಂತಕರಿಲ್ಲವೆಂಬದು ಆ ದಂಗೆಯಲ್ಲಿ ಸ್ಪಷ್ಟ ವಾಯಿತು. ಕೊಡಗಿನಲ್ಲಾಗಲಿ ಮಂಗಳೂರಿನ ಉತ್ತರಕ್ಕಾಗಲಿ ಅದೇ ಸಮಯ ಜನರು ದಂಗೆಯೆದ್ದಿದ್ದರೆ ರೈಲ್, ತಂತಿಗಳಿಲ್ಲದ ಆ ಕಾಲದಲ್ಲಿ ಇಂಗ್ಲೀಷರಿಗೆ ವರ್ತಮಾನಗಳು ಸಿಕ್ಕಲಿಕ್ಕೂ ಸೈನ್ಯವನ್ನು ಕಳುಹಿಸಲಿಕ್ಕೂ ತೊಂದರೆಯಾಗಿ ಅವರ ಕಷ್ಟಗಳು ಭೀಕರವಾಗಬಹುದಿತ್ತು. ಆದರೆ ಅವರ ಅದೃಷ್ಟದಿಂದ ಹಾಗೇನೂ ಸಂಭವಿಸಲಿಲ್ಲ.

## ೩. ಕುಂಪಣಿ ಸರಕಾರದ ಅಂತ್ಯ

ಕ್ರಿ. ಶಕ ೧೮೩೭ರ ಬಳಿಕ ಕುಂಪಣಿ ಸರಕಾರದವರು ಪ್ರಜೆಗಳ ಹಿತದ ಕುರಿತು ವಿಚಾರವನ್ನೀಯಲಿಕ್ಕೆ ತೊಡಗಿದರು. ಟೀಪುವು ಕ್ರಿ. ಶಕ ೧೭೮೪ರಲ್ಲಿ ಕನ್ನಡ ಜಿಲ್ಲೆಯಿಂದ ಶ್ರೀರಂಗಪಟ್ಟಣಕ್ಕೆ ಓಡಿಸಿಕೊಂಡು ಹೋದ ರೋಮನ್ ಕೆಥೊಲಿಕ್ ಕ್ರೈಸ್ತರು ಇಂಗ್ಲೀಷರ ಅಧಿಕಾರ ಸ್ಥಾಪನೆಯಾದ ಬಳಿಕ ಕನ್ನಡ ಜಿಲ್ಲೆಗೆ ಮರಳಿದರು. ಅವರಲ್ಲಿ ಇಲ್ಲಿಂದ ಹೋದ ೬೦,೦೦೦ ಜನರಲ್ಲಿ ಒಟ್ಟಾರೆ ೧೫,೦೦೦ ಜನರು ಮಾತ್ರ ಮರಳಿದರು. ಉಳಿದವರ ಪಾಡೇನಾಯಿತೆಂದು ತಿಳಿಯುವುದಿಲ್ಲ. ಅವರು ಇಂಗ್ಲೀಷರ ಆಶ್ರಯದಲ್ಲಿ ಕೃಷಿಯಿಂದಲೂ ಸರಕಾರೀ ಹುದ್ದೆಗಳಿಂದಲೂ ಆಸ್ತಿ, ಪಾಸ್ತಿಗಳನ್ನು ಪುನಃ ಮಾಡಿಕೊಂಡು, ಟೀಪುವು

ಕೆಡಹಿದ ತಮ್ಮ ಇಗರ್ಜಿಗಳೊಂದೊಂದನ್ನೇ ಪುನಃ ಕಟ್ಟಿಕೊಂಡು ಪ್ರಬಲರಾದರು. ಕ್ರಿ. ಶಕ ೧೮೩೭ರಲ್ಲಿ ಅವರು ತಮ್ಮ ಮತವಿಚಾರಗಳ ವಿಷಯದಲ್ಲಿ ಗೋವಾಂತಕದ ಆರ್ಚಬಿಶೋಪರ ಸಂಬಂಧವನ್ನು ಬಿಟ್ಟು ಮಲಬಾರಿನಲ್ಲಿರುವ ಕೊಸ್ಸುವೇಟ್ ವಿಕಾರ್ ಎಪ್ರೊಸ್ಟೊಲಿಕ್ಕಿನ ಕೆಳಗೆ ಬಂದರು.

ಇಂಗ್ಲೀಷರ ಆಳಿಕೆಯಲ್ಲಿ ಕನ್ನಡ ಜಿಲ್ಲೆಯಲ್ಲಿ ಒಟ್ಟಾರೆ ಶಾಂತಿಯು-ಸ್ಥಿರವಾಗಿತ್ತೆಂದು ಹೇಳಬಹುದು. ಸಾಮಂತ ಅರಸರ ಕಚ್ಚಾಟಗಳೆಲ್ಲಾ ನಿಂತು ಹೋಗಿ, ಕನ್ನಡ ಜಿಲ್ಲೆಯು ವಿಶಾಲ ಇಂಗ್ಲೀಷ್ ಸಾಮ್ರಾಜ್ಯದ ಅಂಗವಾದ್ದರಿಂದ ವ್ಯಾಪಾರದ ಅನುಕೂಲತೆಗಳೂ ದೊರಕಿದ್ದವು. ಕನ್ನಡ ಜಿಲ್ಲೆಯಲ್ಲಿ ಕೆಲವು ವರ್ಷಗಳು ದಾಟುತ್ತಲೇ ಆರ್ಥಿಕ ಬಲವು ಹಿಂದಿನ ಕೃಷಿಗಾರರನ್ನು ಬಿಟ್ಟು ಮೆಲ್ಲಗೆ ಹೊಸ ಕೃಷಿಗಾರರಾದ ಕ್ರೈಸ್ತರ ಮತ್ತು ವರ್ತಕವರ್ಗದ ಕೈಗೆ ಸೇರ ತೊಡಗಿತು; ಅನಾದಿಯಿಂದ ಭೂಮ್ಸಾಲಿಕರಾಗಿ ಬಾಳಿ ಬಂದ ವರ್ಗದಾರರಿಂದ ಆಸ್ತಿಗಳು ತಪ್ಪಿ, ಹೊಸ ಭೂಮ್ಸಾಲೀಕರ ಕೈಸೇರ ತೊಡಗಿದವು.

ಇಂಗ್ಲೀಷರು ಕನ್ನಡ ಜಿಲ್ಲೆಯಿಂದ ಘಟ್ಟಕ್ಕೆ ಹೋಗುವ ಮಾರ್ಗಗಳನ್ನು ಸರಿಪಡಿಸಿ, ಒಳಚಲಾವಣೆಗೂ ಮಾರ್ಗಗಳನ್ನು ಸುವ್ಯವಸ್ಥೆಗೆ ತರತೊಡಗಿದ್ದರಿಂದ ಒಳವ್ಯಾಪಾರವೂ ಬೆಳೆಯಿತು. ಹೀಗೆ ಹಿಂದಿನ ಆರ್ಥಿಕ ದುರವಸ್ಥೆಯು ಮೆಲ್ಲಗೆ ಮಾಯವಾಗಿ ಶಾಂತಿಯು ನೆಲೆಸಿತು.

ಕ್ರಿ. ಶಕ ೧೮೫೭ರಲ್ಲಿ ಉತ್ತರ ಹಿಂದುಸ್ಥಾನದಲ್ಲಿ ಸಿಪಾಯಿಗಳ ಮತ್ತು ಜಹಗೀರುದಾರರ ಪ್ರಚಂಡ ಸ್ವಾತಂತ್ರ್ಯ ಸಮರವೊಂದು ಜರಗಿ, ಇಂಗ್ಲೀಷ್ ಸರಕಾರವನ್ನು ಬೇರಿಸಿಂದ ತುದಿಯ ತನಕ ಅಲ್ಲಾಡಿಸಿ ಬಿಟ್ಟಿತು. ದಕ್ಷಿಣ ಹಿಂದುಸ್ಥಾನವು ಆ ಸಮರದಲ್ಲಿ ಭಾಗಿಯಾಗಲಿಲ್ಲ; ಆ ಸಮರವು ಯಶಸ್ವಿಯಾಗಲೂ ಇಲ್ಲ. ಆದರೆ ಅದರ ಪರಿಣಾಮವಾಗಿ ಕುಂಪಣಿ ಸರಕಾರವು ಮುಕ್ತಾಯ ಹೊಂದಿ, ಇಂಗ್ಲಾಂಡಿನ ಮಹಾರಾಣಿಯು ಹಿಂದುಸ್ಥಾನದ ಆಡಳಿತೆಯನ್ನು ತನ್ನ ಕೈಗೆ ತೆಕ್ಕೊಳ್ಳಬೇಕಾಯಿತು. ಕ್ರಿ. ಶಕ ೧೮೫೮ರಲ್ಲಿ ಕನ್ನಡ ಜಿಲ್ಲೆಯ ಜನರು ಇತರ ಹಿಂದುಸ್ಥಾನದ ಜನರೊಂದಿಗೆ ವಿಕ್ಟೋರಿಯಾ ಮಹಾರಾಣಿಯ ಪ್ರಜೆಗಳಾದರು.

## ೪. ಕನ್ನಡ ಜಿಲ್ಲೆಯ ವಿಭಜನೆ

ಮಹಾರಾಣೀ ಸರಕಾರದ ಕೆಳಗೆ ಬಂದ ಮೇಲೆ ಹಿಂದುಸ್ಥಾನದಲ್ಲಿ ನಾಗರೀಕ, ಸುಧಾರಿತ ರೀತಿಯ ರಾಜ್ಯಾಡಳಿತೆಗೆ ಪ್ರಾರಂಭವಾಯಿತು; ಪ್ರಾಂತಿಕ

ರಚನೆಯೂ ತಿದ್ದುಪಡಿ ಹೊಂದಿತು. ವಿಶ್ವವಿದ್ಯಾಲಯಗಳೂ ಉಚ್ಚ ನ್ಯಾಯ ಸ್ಥಾನಗಳೂ ಹಿಂದುಸ್ಥಾನದ ಮುಖ್ಯ ನಗರಗಳಲ್ಲಿ ಸ್ಥಾಪನೆಯಾದವು. ಎಲ್ಲಾ ಕಡೆಗಳಲ್ಲಿ ಪ್ರಜಾಹಿತ ದೃಷ್ಟಿಯ ಅನೇಕ ಸಂಸ್ಥೆಗಳೆದ್ದವು.

ಅದೇ ಸಮಯ ಮೈಸೂರು ಕೊಡಗುಗಳಲ್ಲಿ ಕಾಫಿಬೀಜದ ಕೃಷಿಯು ಪ್ರಾರಂಭವಾಗಿ, ಅಲ್ಲಿ ಇಂಗ್ಲೀಷ್ ಜನರು ತೋಟಗಳನ್ನು ಮಾಡ ತೊಡಗಿದರು. ಆ ತೋಟಗಳಲ್ಲಿ ಕನ್ನಡ ಜಿಲ್ಲೆಯ ಅನೇಕ ಬಡಜನರಿಗೆ ಜೀವನೋಪಾಯ ದೊರಕಿತು. ಆ ತೋಟಗಾರರಿಗೆ ಮಂಗಳೂರು ಅವರ ಹೊರದೇಶಗಳ ವ್ಯಾಪಾರಕ್ಕೆ ಹೆದ್ದಾರಿಯಾಗಿದ್ದರಿಂದ ಕಾಫಿತೋಟದ ಬಿಳೇ ಮುಖದವರೆಲ್ಲಾ ಮಂಗಳೂರಿನಲ್ಲಿ ಬಂಗ್ಲೆ, ಭಂಡಸಾಲೆಗಳನ್ನು ಕಟ್ಟತೊಡಗಿದರು.

ಬರುತ್ತಾ ಬರುತ್ತಾ ಕನ್ನಡ ಜಿಲ್ಲೆಯು ಬಹಳ ಉದ್ದವಾಗಿ ಆಡಳಿತೆಗೆ ಕಷ್ಟವಾಗಿದೆಯೆಂಬದು ವ್ಯಕ್ತವಾಯಿತು. ಕ್ರಿ. ಶಕ ೧೮೬೨ರಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು ಮುಂಬೈ ಪ್ರಾಂತ್ಯಕ್ಕೆ ಸೇರಿಸಿ, ಉಳಿದ ಭಾಗವಂದರೆ ಈಗಿನ ದಕ್ಷಿಣ ಕನ್ನಡ ಜಿಲ್ಲೆಯನ್ನು ಮಾತ್ರ ಮದ್ರಾಸ್ ಆಧಿಪತ್ಯದಲ್ಲಿ ಬಿಟ್ಟು ಆ ಪ್ರಾಂತ್ಯಗಳ ಪುನರ್ರಚನೆಯಾಯಿತು.

---

# ಅಧ್ಯಾಯ ೧೫

## ಬ್ರಿಟಿಷರ ಕಾಲ (೧೮೬೨ರಿಂದ ೧೯೧೪)

## (II)

೧. ಪಾಶ್ಚಾತ್ಯ ವಿದ್ಯೆಯ ಪ್ರಸರಣ. ೨. ರಾಜ್ಯಾಡಳಿತೆಯಲ್ಲಿ ಸುಧಾರಣೆಗಳು. ೩. ಸಾಮಾಜಿಕ ಸ್ಥಿತಿಗತಿಗಳು.

### ೧. ಪಾಶ್ಚಾತ್ಯ ವಿದ್ಯೆಯ ಪ್ರಸರಣ

ಕ್ರಿ. ಶಕ ೧೮೬೨ರಲ್ಲಿ ಉತ್ತರ ಕನ್ನಡವನ್ನು ಪ್ರತ್ಯೇಕಿಸಿ ಮುಂಬೈ ಪ್ರಾಂತ್ಯಕ್ಕೆ ಸೇರಿಸಿದ ಬಳಿಕ, ದಕ್ಷಿಣ ಕನ್ನಡ ಜಿಲ್ಲೆಯ ಜನರು ಪಾಶ್ಚಾತ್ಯ ವಿದ್ಯೆ, ಪಾಶ್ಚಾತ್ಯ ನಾಗರೀಕತೆಗಳಲ್ಲಿ ತುಂಬಾ ಉತ್ಸಾಹದಿಂದ ಭಾಗಿಗಳಾಗ ತೊಡಗಿದರು. ಕ್ರಿ. ಶಕ ೧೮೩೪ರಷ್ಟಕ್ಕೆ ಮಂಗಳೂರಿಗೆ ಬಂದ ಬಾಸೆಲ್ ಮಿಶ್ಯನಿನವರೂ ಕ್ರಿ. ಶಕ

೧೮೭೮ಕ್ಕೆ ಇಲ್ಲಿಗೆ ಬಂದ ಜೆಸುವಿಟ್ ಪಾದರಿಗಳೂ ಈ ವಿದ್ಯಾಪ್ರಸರಣಕ್ಕೆ ತುಂಬಾ ಸಹಾಯಕರಾದರು. ಮಿಶ್ಯನ್ ಹ್ಯಾಸ್ಕೂಲು ಈ ಜಿಲ್ಲೆಯಲ್ಲಿ ಪ್ರೌಢ ಶಿಕ್ಷಣವನ್ನೀಯಲಿಕ್ಕೆ ಸ್ಥಾಪಿಸಿದ ಪ್ರಥಮ ಸಂಸ್ಥೆಯಾಗಿದೆ. ಅದು ಸ್ಥಾಪನೆ ಯಾದ ಸುಮಾರು ೨೧ ವರ್ಷಗಳ ಬಳಿಕ (೧೮೬೫ರಲ್ಲಿ) ಸರಕಾರದವರು ಮಂಗಳೂರಿನಲ್ಲಿ ಪ್ರಾವಿನ್ಸಿಯಲ್ ಹ್ಯಾ ಸ್ಕೂಲನ್ನು ಸ್ಥಾಪಿಸಿ, ಅದನ್ನು ೧೮೬೮ರಲ್ಲಿ ಗವರ್ನಮೆಂಟ ಕಾಲೇಜಾಗಿ ಮಾರ್ಪಡಿಸಿ, ಅದರಲ್ಲಿ ಎಫ್. ಎ. ತರಗತಿಗಳನ್ನು ಕೂಡಿಸಿದರು.

ಕ್ರಿ. ಶಕ ೧೮೮೦ಲ್ಲಿ ಸೆಂಟ್ ಎಲೊಯ್ಸಿಯಸ್ ಕಾಲೇಜು ಅದೇ ರೀತಿ ಹ್ಯಾ ಸ್ಕೂಲಾಗಿ ಪ್ರಾರಂಭವಾಗಿ, ೧೮೮೨ರಲ್ಲಿ ಎಫ್. ಎ. (ಈಗಿನ ಇಂಟರ್) ತರಗತಿ ಳನ್ನೂ ೧೮೮೭ರಲ್ಲಿ ಬಿ. ಎ. ತರಗತಿಗಳನ್ನೂ ಸ್ಥಾಪಿಸಿತು. ೧೮೯೧ರಲ್ಲಿ ಕೆನರಾ ಹ್ಯಾಸ್ಕೂಲು ಸ್ಥಾಪನೆಯಾಯಿತು. ಇವುಗಳಲ್ಲಿಯೂ ಆ ಬಳಿಕ ಸ್ಥಾಪನೆಯಾದ ಇತರ ಹ್ಯಾ ಸ್ಕೂಲುಗಳಲ್ಲಿಯೂ ಈ ಜಿಲ್ಲೆಯ ಬಾಲಕರೂ ಯುವಕರೂ ಸಾವಿರಗಟ್ಲೆಯಿಂದ ಸೇರಿ ಪಾಶ್ಚಾತ್ಯ ನಾಗರೀಕತೆಯ ಅರಿವನ್ನು ಪಡೆದರು.

ಬಾಲಕರ ಶಿಕ್ಷಣದೊಂದಿಗೆ ಬಾಲಿಕೆಯರಿಗಾಗಿಯೂ ಪ್ರತ್ಯೇಕ ವಿದ್ಯಾ ಮಂದಿರಗಳು ತಲೆದೋರಿದವು. ೧೮೯೪ರಲ್ಲಿ ಕೆನರಾ ಗರ್ಲ್ಸ್ ಸ್ಕೂಲೊಂದು ಬಾಲಿಕೆಯರಿಗೆ ಐದನೇ ತರಗತಿಯ ತನಕ ಶಿಕ್ಷಣಕೊಡ ಪ್ರಾರಂಭಿಸಿತು. ಬಾಲಿಕೆಯರ ಪ್ರೌಢ ಶಿಕ್ಷಣದ ಬಗ್ಗೆ ಕ್ರಿ. ಶಕ ೧೯೦೦ರ ಬಳಿಕ ಪ್ರತ್ಯೇಕ ಹ್ಯಾ ಸ್ಕೂಲು, ಕಾಲೇಜುಗಳು ಅಲ್ಲಲ್ಲಿ ಸ್ಥಾಪನೆಯಾದವು.

ಈ ಜಿಲ್ಲೆಯಲ್ಲಿ ಪಾಶ್ಚಾತ್ಯ ವಿದ್ಯೆಯನ್ನು ಸಾರಸ್ವತರು ಉಳಿದ ಎಲ್ಲವರಿಗಿಂತಲೂ ಮೊದಲು ಪಡೆದು, ಕೆಲವು ಕಾಲ ಸರಕಾರೀ ಉದ್ಯೋಗಗಳ ಲ್ಲಿಯೂ ಸಾರ್ವಜನಿಕ ಚಟುವಟಿಕೆಗಳಲ್ಲಿಯೂ ಅವರೇ ಈ ಜಿಲ್ಲೆಯ ಮುಂದಾಳಾದರು. ಆದರೆ ಕಾಲಹೋಗುತ್ತಾ, ಎಲ್ಲಾ ಜಾತಿ, ಮತಗಳ, ಜನರೂ ಆ ವಿದ್ಯಾಪ್ರವಾಹದಲ್ಲಿ ಸೇರಿ ಈ ಜಿಲ್ಲೆಯು ಪಾಶ್ಚಾತ್ಯ ನಾಗರೀಕತೆ ಯಲ್ಲಿ ಈ ಪ್ರಾಂತ್ಯದ ಇತರ ಅನೇಕ ಜಿಲ್ಲೆಗಳಿಗಿಂತಲೂ ಮುಂದಾಯಿತು.

ಬಾಸೆಲ್ ಮಿಶ್ಯನಿನವರು ಮುದ್ರಣಾಲಯವೊಂದನ್ನು ಕ್ರಿ. ಶಕ ೧೮೪೧ಲ್ಲಿ ಸ್ಥಾಪಿಸಿ, ಕನ್ನಡ ಸಾಹಿತ್ಯದ ಬೆಳವಣಿಗೆಗೆ ಅನೇಕ ರೀತಿಯಿಂದ ಸಹಾಯಕ ರಾದರು. ಅವರು ಧರ್ಮಪ್ರಚಾರದ ಕಾರ್ಯಕ್ಕಾಗಿಯೇ ಹೆಚ್ಚಾಗಿ ಶ್ರಮಿಸು ತ್ತಿದ್ದರೂ ಅವರ ಕಾರ್ಯಗಳ ಫಲವು ಸರ್ವ ಜನರಿಗೂ ಪ್ರಯೋಜನಕರ

ದ್ದಾಯಿತು. ಆವರು ಸತ್ಯದೀಪಿಕೆಯೆಂಬ ವಾರಪತ್ರಿಕೆಯನ್ನೂ ಪ್ರಾರಂಭಿಸಿ, ಈ ಜಿಲ್ಲೆಯು ಪತ್ರಿಕೋದ್ಯಮಕ್ಕೆ ಅಡಿಗಲ್ಲನ್ನಿಟ್ಟರು.

ಈ ಜಿಲ್ಲೆಯು ಕೈಗಾರಿಕೆಗಳಲ್ಲಿ ಪ್ರಥಮಸ್ಥಾನವನ್ನು ಕೊಡಬೇಕಾದ ಹಂಚಿನ ಕೈಗಾರಿಕೆಯನ್ನೂ ಬಾಸೆಲ್ ಮಿಶ್ಯನಿನವರೇ ಪ್ರಾರಂಭಿಸಿದ್ದಾಗಿದೆ. ಕ್ರಿ. ಶಕ ೧೮೬೬ರಲ್ಲಿ ಅವರು ಜಪ್ಪುವಿನಲ್ಲಿಯೂ, ೧೮೮೨ರಲ್ಲಿ ಅವರು ಕುದ್ರೋಳಿ ಯಲ್ಲಿಯೂ, ಸ್ಥಾಪಿಸಿದ ಹಂಚಿನ ಕಾರ್ಖಾನೆಗಳು ಅನೇಕ ಬಡ ಜನರಿಗೆ ಜೀವನೋಪಾಯವನ್ನು ಕಲ್ಪಿಸಿಕೊಟ್ಟವು.

ಮಿಶ್ಯನಿನವರು ತಾವು ಪ್ರಚಾರ ಮಾಡುತ್ತಿದ್ದ ಪ್ರೊಟೆಸ್ಟಾಂಟ್ ಕ್ರೈಸ್ತ ಮತದ ಬಡ ಜನರಿಗೆಂದು ನೇಯಿಗೆಯ ಕಾರ್ಖಾನೆಗಳನ್ನೂ ತೆರೆದರು. ಹೀಗೆ ಕೃಷಿಯೊಂದೇ ಜೀವನೋಪಾಯವಾಗಿದ್ದ ತುಳುವದಲ್ಲಿ ನಾನಾ ಕೈಗಾರಿಕೆಗಳು ಪ್ರಾರಂಭವಾದವು.

## ತಂತೀ, ರೈಲ್ವೆ ಮತ್ತು ಇತರ ಸೌಕರ್ಯಗಳು

ಈ ಜಿಲ್ಲೆಯಲ್ಲಿ ಕ್ರಿ. ಶಕ ೧೮೬೫ರಲ್ಲಿ ತಂತೀ ಟಪ್ಪಾಲೂ, ೧೯೦೭ರಲ್ಲಿ ರೈಲ್ವೆ ಚಲಾವಣೆಯೂ ಪ್ರಾರಂಭವಾದವು. ಕ್ರಿ. ಶಕ ೧೮೭೦ರಲ್ಲಿ, ಮುಂಬೈ "ಕೋಸ್ಟ್ ಎಂಡ್ ರಿವರ್ ಕಂಪೆನಿ"ಯೆಂಬ ಹೆಸರಿನ ಸ್ಟೀಮರ್ ಕಂಪೆನಿ ಯೊಂದು ಮಂಗಳೂರಿನಿಂದ ಪ್ರಯಾಣಿಕರನ್ನೂ ಸರಕುಗಳನ್ನೂ ಒಯ್ಯ ಪ್ರಾರಂಭಿಸಿ, – ಕ್ರಿ, ಶಕ ೧೮೮೭ರಲ್ಲಿ ಈಗಿನ "ಬಿ. ಎಸ್. ಎನ್. ಕಂಪೆನಿ"ಯು ಸ್ಥಾಪನೆಯಾಗಿ ಆ ಕಾರ್ಯವನ್ನು ತಾನು ವಹಿಸಿಕೊಂಡಿತು. ಸರಕಾರದವರು ಘಟ್ಟದ ಮಾರ್ಗಗಳನ್ನೂ ಜಿಲ್ಲೆಯ ಒಳಮಾರ್ಗಗಳನ್ನೂ ಮೋಟೋರ್ ಚಲಾ ವಣೆಗೆ ಯೋಗ್ಯವಾಗುವಂತೆ ಸರಿಪಡಿಸಿದರಿಂದ ಮೋಟೋರ್ ಕಾರುಗಳೂ, ಬಸ್ಸುಗಳೂ, ಲೋರ್ರಿಗಳೂ ಜಿಲ್ಲೆಯಲ್ಲಿ ತುಂಬಿದವು. ಹಿಂದಿನ ಹೇರೆತ್ತು, ಎತ್ತಿನ ಗಾಡಿ, ದೋಣಿಗಳ ಉಪಯೋಗವು ಕಡಿಮೆಯಾಯಿತು. ಅನೇಕ ಹೊಳೆಗಳಿಗೆ ಸಂಕವಾಗಿ, ಮೈಸೂರು ಕೊಡಗುಗಳಿಂದ ಕಾಫಿಬೀಜ ಮೊದಲಾದ ಅಲ್ಲಿಯ ಉತ್ಪತ್ತಿಗಳು ಮಂಗಳೂರಿಗೆ ಮುಟ್ಟಿ, ಅಲ್ಲಿ ಸಿಪ್ಪೆ ತೆಗೆಯುವಕಾರ್ಖಾನೆ ಗಳೆದ್ದವಲ್ಲದೆ, ಮಂಗಳೂರು ದಿನ ಹೋಗುತ್ತಾ ದೊಡ್ಡ ದೊಡ್ಡ ಬಂದರಾ ಗುತ್ತ ಬೆಳೆಯಿತು. ಜಿಲ್ಲೆಯಲ್ಲಿ ಮಂಗಳೂರಲ್ಲದೆ ಗಂಗೊಳ್ಳಿ, ಮಲ್ಪೆ, ಹಂಗಾರ ಕಟ್ಟೆ ಮೊದಲಾದ ಇತರ ಬಂದರುಗಳೂ ವ್ಯಾಪಾರದ ಕ್ಷೇತ್ರಗಳಾಗಿಬೆಳೆದವು.

## ೨. ರಾಜ್ಯಾಡಳಿತೆಯಲ್ಲಿ ಸುಧಾರಣೆಗಳು

೧೮೫೮ರ ಬಳಿಕ ಈ ಜಿಲ್ಲೆಯು ವಿಶಾಲ ಆಂಗ್ಲ ಚಕ್ರಾಧಿಪತ್ಯದ ಅಂಗವಾದ್ದರಿಂದ ಪ್ರಗತಿಯ ಪ್ರವಾಹದಲ್ಲಿ ಸೇರಿ, ಆ ಚಕ್ರಾಧಿಪತ್ಯದ ಇತರ ಭಾಗಗಳೊಂದಿಗೆ ಆಧುನಿಕ ನಾಗರೀಕತೆಯಲ್ಲಿ ತಾನೂ ಭಾಗಿಯಾಯಿತು.

ಹಿಂದುಸ್ಥಾನದ ಆಡಳಿತೆಯು ಕಾಲದಿಂದ ಕಾಲಕ್ಕೆ ಸುಧಾರಣೆಯನ್ನು ಹೊಂದಿದಂತೆ ಈ ಜಿಲ್ಲೆಯ ಆಡಳಿತೆಯೂ ಸುವ್ಯವಸ್ಥಿತ ರೀತಿಯನ್ನು ಪಡೆಯಿತು. ಕ್ರಿ. ಶಕ ೧೮೬೩ರಲ್ಲಿ ದೇವಾಲಯ, ಮಶೀದಿಗಳಿಗೆ ಸಲ್ಲತಕ್ಕ ತಸದೀಕು, ಇನಾಮುಗಳ ತನಖಿ ನಡೆದು, ತಸದೀಕು ಇನಾಮುಗಳು ದೊರಕುವ ಸಂಸ್ಥೆಗಳ ಆಡಳಿತೆಯ ಕುರಿತು ಸರಕಾರದವರು ದೃಷ್ಟಿಯನ್ನಿಡ ತೊಡಗಿದರು. "ಟೌನ್ ಇಂಪ್ರೂವ್‌ಮೆಂಟ್ ಆಕ್ಟು" ಎಂಬ ಹೆಸರಿನ ಕ್ರಿ. ಶಕ ೧೮೬೬ನೇ ಆಕ್ಟಿನ ಮೇರೆಗೆ ನಗರಗಳಲ್ಲಿ ಒಳ ಆಡಳಿತೆಯನ್ನು ಪೌರಸಭೆಯವರಿಗೆ ಸರಕಾರದವರು ಒಪ್ಪಿಸ ತೊಡಗಿದೊಡನೆ ಮಂಗಳೂರಿನಲ್ಲಿಯೂ ಮ್ಯುನಿಸಿಪಾಲಿಟಿಯೊಂದು ಸ್ಥಾಪನೆಯಾಯಿತು. ೧೮೮೪ನೇ ಲೋಕಲ್‌ಬೋರ್ಡ್ಸ್ ಆಕ್ಟಿಗನುಗುಣವಾಗಿ ಡಿಸ್ಟ್ರಿಕ್ಟ್ ಬೋರ್ಡು ಒಂದು, ತಾಲೂಕು ಬೋರ್ಡುಗಳು ಮೂರು ಸ್ಥಾಪನೆಯಾದವು. ಇಂಗ್ಲೀಷ್ ಸರಕಾರದವರು ಕ್ರಿ. ಶಕ ೧೮೯೭ರಲ್ಲಿ ಈ ಜಿಲ್ಲೆಯನ್ನು ಕ್ರಮಪ್ರಕಾರ ಸರ್ವೆಮಾಡಿ, ಕ್ರಿ. ಶಕ ೧೯೦೨ರಿಂದ ೧೯೦೪ರ ನಡುವೆ ಇಲ್ಲಿ ಕಂದಾಯದ "ಸೆಟ್ಲಮೆಂಟ"ನ್ನು ಮಾಡಿದರು.

ಜಿಲ್ಲೆಯಲ್ಲಿ ಆ ಸೆಟ್ಲಮೆಂಟ ಪ್ರಕಾರ ಐದು ತಾಲೂಕುಗಳನ್ನು ಸ್ಥಾಪಿಸಿದರೂ ಆ ಏರ್ಪಾಡು ಸರಿಯಾಗದೆ, ೧೯೧೨ರಲ್ಲಿ ಕೊನೆಗೆ ಜಿಲ್ಲೆಯನ್ನು ಈಗಿನ ಆರು ತಾಲೂಕುಗಳಾಗಿ ವಿಂಗಡಿಸಿದರು:–

| ತಾಲೂಕು. | ಗ್ರಾಮುಗಳ ಸಂಖ್ಯೆ. |
|---|---|
| ೧. ಮಂಗಳೂರು | ೧೭೮ |
| ೨. ಕಾರ್ಕಳ | ೧೦೫ |
| ೩. ಕಾಸರಗೋಡು | ೧೧೪ |
| ೪. ಉಡುಪಿ | ೧೧೫ |
| ೫. ಕುಂದಾಪುರ | ೧೦೩ |
| ೬. ಪುತ್ತೂರು | ೧೮೪ |
| (೧೯೨೭ರ ತನಕ ಉಪ್ಪಿನಂಗಡಿ ತಾಲೂಕು ಎಂದು ಕರೆಯುತ್ತಿತ್ತು.) | ಜುಮ್ಲಾ ೭೯೯ |

ಸಿವಿಲ್, ಕ್ರಿಮಿನಲ್, ರೆವೆನ್ಯು, ಪೊಲೀಸ್ ಅಧಿಕಾರಗಳನ್ನು ನಡೆಸಲಿಕ್ಕೆ ಪ್ರತ್ಯೇಕ ಇಲಾಖೆಗಳೂ ಶಿಬಂದಿಯೂ ಸ್ಥಾಪಿತವಾದವು. ಬ್ರಿಟಿಷರ ಕಾಲದಲ್ಲಿ ಶೇಂದಿ, ಶರಾಬು ಮಾರುವ ಹಕ್ಕನ್ನು ಹರಾಜು ಮಾಡತೊಡಗಿದ್ದರಿಂದ ಆ ವಿಷಯ ಮೇಲ್ವಿಚಾರಕ್ಕೆ ಅಬ್ಕಾರಿ ಇಲಾಖೆಯೊಂದೂ ಸ್ಥಾಪಿತವಾಯಿತು. ಸುಂಕದ ಬಗ್ಗೆ ಕಸ್ಟಮ್ಸ್, ಬಂದರುಗಳ ಬಗ್ಗೆ ಪೋರ್ಟ್, ಕೃಷಿ ಬಗ್ಗೆ ಎಗ್ರಿಕಲ್ಚರಲ್, ಗೋರಕ್ಷಣೆ ಬಗ್ಗೆ ವೆಟರಿನರಿ, ಚಿಕಿತ್ಸೆಯ ಬಗ್ಗೆ ಮೆಡಿಕಲ್, ಆರೋಗ್ಯ ರಕ್ಷಣೆಯ ಕುರಿತು ಹೆಲ್ತ್, ವಿದ್ಯಾಪ್ರಚಾರಕ್ಕೆ ಎಡ್ಯುಕೇಶನಲ್ – ಹೀಗೆ ನಾನಾ ಹೆಸರಿನ ಇಲಾಖೆಗಳು ತಲೆದೋರಿದವು. ಜನರ ಅಭಿವೃದ್ಧಿಯ ಕುರಿತು ಈ ಇಲಾಖೆಗಳಿಂದ ಪ್ರಯೋಜನವಾಯಿತು. ಇವೆಲ್ಲಾ ಪ್ರಾಂತಿಕ ಆಡಳಿತೆಯ ಭಾಗವಾಗಿ ಈ ಜಿಲ್ಲೆಯಲ್ಲಿ ತಲೆದೋರಿದ್ದರಿಂದ ಅವುಗಳ ಕುರಿತು ಇಲ್ಲಿ ಹೆಚ್ಚಿನ ವಿಚಾರಗಳನ್ನು ಬರೆಯುವ ಅಗತ್ಯವಿರದು.

## ೩. ಸಾಮಾಜಿಕ ಸ್ಥಿತಿಗತಿಗಳು

ಇಷ್ಟೆಲ್ಲಾ ಚಟುವಟಿಕೆಗಳಿಂದ ಈ ಜಿಲ್ಲೆಯು ತುಂಬುತ್ತಿರುವಾಗ ಸಾಮಾಜಿಕ ಸ್ಥಿತಿಗತಿಗಳಲ್ಲಿಯೂ ಜನರ ದೃಷ್ಟಿಯಲ್ಲಿಯೂ ಅನೇಕ ತರದಿಂದ ಬದಲಾವಣೆಗಳಾದುದರಲ್ಲಿ ಆಶ್ಚರ್ಯವಿಲ್ಲ. ಪ್ರಾಚೀನ ಸಾಂಪ್ರದಾಯಗಳ ಬಿಗಿತವು ಸಡಿಲಾಗಿ, ಜನರಲ್ಲಿ ಪಾಶ್ಚಾತ್ಯ ವಿದ್ಯೆಯ ಸಂಪರ್ಕದಿಂದ ನೂತನ ಜಾಗೃತಿಯು ತಲೆದೋರಿತು. ಕ್ರಿ. ಶಕ ೧೮೭೦ರಲ್ಲಿ ಉಪಾಸನಾ ಸಮಾಜ ಒಂದು ಮಂಗಳೂರಿನಲ್ಲಿ ಸ್ಥಾಪನೆಯಾಗಿ, ಅದು ೧೯೧೩ರಲ್ಲಿ ಬ್ರಹ್ಮಸಮಾಜ ವೆಂಬ ಹೆಸರನ್ನಿಟ್ಟುಕೊಂಡು ಹಿಂದೂಮತದಲ್ಲಿ ಬೇರೂರಿದ ಕಲ್ಮಷಗಳ ಕಡೆ ಜನರ ದೃಷ್ಟಿಯನ್ನು ಸೆಳೆಯ ತೊಡಗಿತು. ಈ ಸಮಾಜಕ್ಕೆ ಸೇರಿದ ಸಾರಸ್ವತರಲ್ಲೊಬ್ಬರಾದ ಶ್ರೀ ಕುದ್ಮುಲ್ ರಂಗರಾಯರು, ಹೀನಾವಸ್ಥೆಯಲ್ಲಿ ಬಿದ್ದು ಪಾಶವೀ ಜೀವನವನ್ನು ನಡೆಸುತ್ತಿದ್ದ, ತುಳುವದ ಮೂಲನಿವಾಸಿಗಳ ಉದ್ಧಾರಕ್ಕೆ ಬದ್ಧಕಂಕಣರಾದರು. ಅವರ ಅವಿಶ್ರಾಂತ ಪ್ರಯತ್ನಗಳಿಂದ ಆ ಮೂಲನಿವಾಸಿಗಳ ಏಳಿಗೆಯ ಬಗ್ಗೆ ಶಾಲೆಯೊಂದು, ಬೋರ್ಡಿಂಗ್ ಹೌಸ್‌ವೊಂದು, ವಸಾಹತಿಯೊಂದು ಸ್ಥಾಪನೆಯಾಗಿ ಕೊನೆಗೆ ಆ ಕಾರ್ಯವನ್ನು ಸರ್ವೆಂಟ್ ಆಫ್ ಇಂಡಿಯಾ ಸೊಸ್ಯಾಟಿಯವರು ವಹಿಸಿಕೊಂಡರು. ಆ ಮೂಲನಿವಾಸಿಗಳ ಉದ್ಧಾರದ ಕಡೆ ಸರಕಾರದವರೂ ಗಮನವನ್ನೀಯಲಿಕ್ಕೆ ತೊಡಗಿದ್ದರಿಂದ ಅಲ್ಲಲ್ಲಿ

ಅವರಿಗಾಗಿ ಶಾಲೆಗಳು ಸ್ಥಾಪಿಸಲ್ಪಟ್ಟವು, – ವಸಾಹತುಗಳು ತಲೆದೋರಿದವು ಪ್ರತ್ಯೇಕ ಇಲಾಖೆಯೊಂದೂ ಸ್ಥಾಪನೆಯಾಯಿತು.

ಈ ಐವತ್ತು ವರ್ಷಗಳ ನಡುವೆ, ಜನರ ಉಡಿಗೆತೊಡಿಗೆಗಳಲ್ಲಿಯೂ, ರೀತಿ ನಡವಳಿಕೆಗಳಲ್ಲಿಯೂ, ಧ್ಯೇಯಗಳಲ್ಲಿಯೂ ಕ್ರಾಂತಿಕಾರಕ ವ್ಯಾಪಾರಗಳು ತೋರಹತ್ತಿದವು. ಬ್ರಿಟಿಷರ ಕಾಲದ ಮೊದಲು ತಮ್ಮ ಗ್ರಾಮ, ತಮ್ಮ ಗುತ್ತುಗಳ ಹೊರಗಣ ಸಂಗತಿಗಳಲ್ಲಿ ಏನೂ ಕುತೂಹಲವಿಲ್ಲದ ತುಳುವದ ಅನೇಕ ಜನರಲ್ಲಿ ತಾವೂ ಹಿಂದೀಯರೆಂಬ ಜ್ಞಾನವೂ ಅಭಿಮಾನವೂ ಉದಯಿಸಿದವು.

---

# ಅಧ್ಯಾಯ ೧೬

## ಬ್ರಿಟಿಷರ ಕಾಲದ ಕೊನೆಯ ಭಾಗ
## (೧೯೧೪ರಿಂದ ೧೯೪೭)

ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿ ಹಿಂದೀಯರಲ್ಲಿ ಬ್ರಿಟಿಷರ ಆಳಿಕೆಯನ್ನು ವಿರೋಧಿಸುವ ಚಳವಳಗಳು ತಲೆದೋರಿದವು. ಕ್ರಿ. ಶಕ ೧೯೦೫ರಲ್ಲಿ ಜಪಾನಿನ ಬಳಿ ನಡೆದ ಯುದ್ಧದಲ್ಲಿ ಜಪಾನು ಬಲಿಷ್ಠ ರಶ್ಯವನ್ನು ಸುಲಭದಲ್ಲಿ ಹಿಮ್ಮೆಟ್ಟಿಸಿ, ಬಿಳೀ ಜನರ ಬಲವು ಶಾಶ್ವತವಲ್ಲವೆಂಬುದನ್ನು ಜಗತ್ತಿನ ಜನರಿಗೆ ತೋರಿಸಿಕೊಟ್ಟಿತು. ಅದೇ ಸಮಯ ಹಿಂದುಸ್ಥಾನದಲ್ಲಿ ವ್ಯಾಸರಾಯಾಗಿ ಆಳುತ್ತಿದ್ದ ಲಾರ್ಡ್ ಕರ್ಜನನು ಜನರ ಅಪೇಕ್ಷೆಯನ್ನು ಅಲಕ್ಷಿಸಿ, ಬಂಗಾಳವನ್ನು ವಿಭಜನೆಮಾಡಿ, ಪ್ರಚಂಡ ಚಳವಳವೊಂದಕ್ಕೆ ಕಾರಣನಾದನು. ಕ್ರಿ. ಶಕ ೧೮೮೫ರಲ್ಲಿ ಹಿಂದೀಜನರ ಉದ್ಧಾರಕ್ಕಾಗಿ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಗಿತ್ತು; ಕಾಂಗ್ರೆಸ್ಸು ಆ ಚಳವಳವನ್ನು ಪ್ರೋತ್ಸಾಹಿಸಿದ್ದರಿಂದ ಹಿಂದುಸ್ಥಾನದ ಹಳ್ಳಿಗಳ ಮೂಲೆಮೂಲೆಗೂ ಸರಕಾರಕ್ಕೆ ವಿರೋಧವಾದ ಆ ಚಳವಳವು ಹರಡಿತು. ತುಳುವದಲ್ಲಿಯೂ ಆ ಚಳವಳದಿಂದ ಜನಜಾಗೃತಿಯು ಹೆಚ್ಚಿತು.

೧೯೧೪ರಲ್ಲಿ ಬ್ರಿಟಿಷರು ಜರ್ಮನರೊಡನೆ ಮಹಾ ಯುದ್ಧವನ್ನು ಪ್ರಾರಂಭಿಸಬೇಕಾಯಿತು. ಆ ಯುದ್ಧದ ನಡುವೆ ಹಿಂದೀ ಸೈನಿಕರು ಪರರಾಜ್ಯಗಳಿಗೆ ಹೋಗಿ ಬ್ರಿಟಿಷರಿಗಾಗಿ ಹೋರಾಡಬೇಕಾಯಿತು; ಹಿಂದುಸ್ಥಾನದಿಂದ ಅನೇಕ ಕೋಟಿ ರೂಪಾಯಿಗಳನ್ನು ಬ್ರಿಟಿಷರು ತಮ್ಮ ಯುದ್ಧದ ಖರ್ಚಿಗಾಗಿ ಪಡೆದರು. ಇದರಿಂದ ಹಿಂದೀಯರಲ್ಲಿ ಜಾಗೃತಿ ಹೆಚ್ಚಾಗಿ, – ಹಿಂದುಸ್ಥಾನದ

ರಾಜ್ಯಭಾರವನ್ನು ತಾವೇ ಕೈಕೊಳ್ಳಬೇಕೆಂಬ ದೃಢ ಪ್ರಯತ್ನಗಳಿಗೆ ಪ್ರಾರಂಭ ವಾಯಿತು. ೧೯೧೮ರಲ್ಲಿ ಮಹಾ ಯುದ್ಧವು ಅಂತ್ಯವಾಗಿ ಬ್ರಿಟಿಷರು ಜಯ ಶೀಲರಾದರೂ ಆ ಯುದ್ಧದ ಬಳಿಕ ಒದಗಿದ ಅನೇಕ ಕಾರಣಗಳಿಂದ ಹಿಂದೀಯರಲ್ಲಿ ಸರಕಾರದ ಕಡೆ ವಿರೋಧವು ಇನ್ನೂ ಬೆಳೆಯುತ್ತಾ ಬಂತು. ಅಷ್ಟರಲ್ಲಿ ದಕ್ಷಿಣ ಆಫ್ರಿಕದಿಂದ ಹಿಂದುಸ್ಥಾನಕ್ಕೆ ಮರಳಿದ ಮಹಾತ್ಮಾ ಗಾಂಧಿ ಯವರು ಕಾಂಗ್ರೆಸ್ ನಾಯಕತ್ವವನ್ನು ವಹಿಸಿ, ಜನರಲ್ಲಿ ಸತ್ಯಾಗ್ರಹದ ಜ್ಞಾನ ವನ್ನು ಕಲ್ಪಿಸಿ, ಸಂಘಟಿತ ಶಕ್ತಿಯಿಂದ ನಿಶ್ಶಸ್ತ್ರ ಜನರು ಕೂಡ ಮದಾಂಧ ಸರಕಾರಗಳನ್ನು ಹೇಗೆ ಬಗ್ಗಿಸಬಹುದೆಂದು ತೋರಿಸಿದರು. ಕ್ರಿ. ಶಕ ೧೯೨೧ಲ್ಲಿ ಅವರು ಹೂಡಿದ ಅಸಹಕಾರ ಚಳವಳವು ಇಡೀ ಹಿಂದುಸ್ಥಾನಕ್ಕೆ ಹರಡಿ, ವಿದ್ಯಾರಹಿತ ಜನತೆಯಲ್ಲಿ ಕೂಡ ಉಜ್ವಲ ರಾಷ್ಟ್ರಭಕ್ತಿಯನ್ನು ಉಂಟುಮಾಡಿತು. ಈ ಜಿಲ್ಲೆಯೂ ಆ ಚಳವಳದಲ್ಲಿ ಭಾಗಿಯಾಯಿತು.

ಮಹಾತ್ಮರು ಆ ಚಳವಳವು ಹಿಂಸಾತ್ಮಕ ರೂಪವನ್ನು ತಾಳತೊಡಗಿದೆ ಯೆಂದು ಅದನ್ನು ೧೯೨೨ರಲ್ಲಿ ನಿಲ್ಲಿಸಿದರೂ, ಅದರಿಂದ ಉತ್ಪನ್ನವಾದ ಶಕ್ತಿಗಳು ಪ್ರಬಲವಾಗಿ ಕೊನೆಗೆ ಶಾಸನಭಂಗದ ರೂಪವನ್ನು ತಾಳಿ, ೧೯೩೫ರಲ್ಲಿ ಬ್ರಿಟಿಷ ಸರಕಾರದಿಂದ ಪ್ರಾಂತಿಕ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡವು. ೧೯೩೫ನೇ ವರ್ಷದ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟಿನ ಮೇರೆಗೆ ಜನರಿಂದ ಆರಿಸಲ್ಪಟ್ಟ ನ್ಯಾಯವಿಧಾಯಕ ಸಭೆಯೊಂದು ಮದ್ರಾಸಿನಲ್ಲಿಯೂ ಸ್ಥಾಪನೆಯಾಗಿ, ಆ ಸಭೆ ಯಲ್ಲಿ ಬಹುಸಂಖ್ಯಾಕರಾಗಿದ್ದ ಕಾಂಗ್ರೆಸ್ಸಿನವರು ಈ ಪ್ರಾಂತ್ಯದ ಆಡಳಿತೆಯನ್ನು ೧೯೩೭ರಲ್ಲಿ ಕೈಕೊಂಡರು. ಈ ಜಿಲ್ಲೆಯಿಂದ ಆರಿಸಿದ ಪ್ರತಿನಿಧಿಗಳು ಆ ಶಾಸನ ಸಭೆಯಲ್ಲಿ ಸೇರಿ ಪ್ರಾಂತಿಕ ಆಡಳಿತೆಯಲ್ಲಿ ಭಾಗವಹಿಸತೊಡಗಿದರು. ೧೯೩೯ರಲ್ಲಿ ಎರಡನೇ ಮಹಾ ಯುದ್ಧವೊದಗಿ, ೧೯೪೫ರ ತನಕ ಇಡೀ ಭೂಲೋಕವನ್ನೇ ದಹಿಸಿತು. ಆ ಯುದ್ಧದ ನಡುವೆ ಕಾಂಗ್ರೆಸ್ಸು ಪ್ರಾಂತಿಕ ಆಡಳಿತೆಯನ್ನು ಬಿಟ್ಟು ಕಾರಾಗೃಹದಲ್ಲಿ ಸೇರಿಕೊಂಡಿತು. ಎರಡನೇ ಮಹಾ ಯುದ್ಧದಲ್ಲಿಯೂ ಬ್ರಿಟಿಷರು ವಿಜಯಿಗಳಾದರೂ ಅವರ ಶಕ್ತಿಯು ಆ ಮಹಾ ಯುದ್ಧದಿಂದಾಗಿ ಸಂಪೂರ್ಣ ಕುಂದಿ, ತಮ್ಮ ಸಾಮ್ರಾಜ್ಯವನ್ನು ಇಟ್ಟುಕೊಳ್ಳುವದು ಅವರಿಗೆ ಕಷ್ಟ ವಾಯಿತು. ಕೊನೆಗೆ ಅವರು ಈ ದೇಶವನ್ನು ಹಿಂದೀ ಯೂನಿಯನ್ ಮತ್ತು ಪಾಕಿಸ್ತಾನಗಳಾಗಿ ವಿಭಜನೆಮಾಡಿ, ಎರಡು ಭಾಗಗಳಿಗೂ ಸ್ವಾತಂತ್ರ್ಯವನ್ನಿತ್ತು ಶಾಂತರೀತಿಯಿಂದ ತಮ್ಮ ಅಧಿಕಾರಗಳನ್ನೆಲ್ಲಾ ಹಿಂದೀಯರಿಗೆ ಬಿಟ್ಟುಕೊಟ್ಟರು.

ಈ ವಿಷಯಗಳೆಲ್ಲಾ ಈಗ ನಡೆಯುತ್ತಿರುವ ಕಾಲಕ್ಕೆ ಸಂಬಂಧಪಟ್ಟ ವಾದ್ದರಿಂದ ಈ ಇತಿಹಾಸದಲ್ಲಿ ಅವುಗಳನ್ನು ವಿವರಿಸುವ ಅಗತ್ಯವಿಲ್ಲ; ಅವು ಗಳೆಲ್ಲಾ ಸಮಗ್ರ ಭಾರತದ ಇತಿಹಾಸಕ್ಕೆ ಸಂಬಂಧಪಟ್ಟವುಗಳಲ್ಲದೆ ತುಳುವದ ಇತಿಹಾಸಕ್ಕೆ ಸಂಬಂಧಪಟ್ಟವುಗಳೆಂದೂ ಹೇಳಸಾಧ್ಯವಿಲ್ಲ. ಈ ರಾಜಕೀಯ ಕ್ರಾಂತಿಯಲ್ಲೆಲ್ಲಾ ತುಳುವದ ಜನರೂ ಉತ್ಸಾಹದಿಂದ ಭಾಗ ವಹಿಸಿ ದ್ದರು. ತುಳುವದ ಸಾರಸ್ವತ ಕುಟುಂಬಗಳಲ್ಲೊಂದಕ್ಕೆ ಸಂಬಂಧಪಟ್ಟ ಶ್ರೀಮತಿ ಕಮಲಾದೇವಿಯರು ಈಗ ಅಖಿಲಭಾರತದ ಸಾಮ್ಯವಾದ ಪಕ್ಷದ ಅಗ್ರ ಧುರೀಣರಲ್ಲೊಬ್ಬರಾಗಿ ಪ್ರಖ್ಯಾತಿಯನ್ನು ಪಡೆದು, ಭೂಲೋಕದ ಎಲ್ಲಾ ನಾಗರೀಕ ದೇಶಗಳನ್ನೂ ಸಂಚರಿಸಿ ಅಲ್ಲಿಯೂ ತಮ್ಮ ಖ್ಯಾತಿಯನ್ನು ಸ್ಥಾಪಿಸಿರು ತ್ತಾರೆ. ಸಾರಸ್ವತರಲ್ಲಿನ್ನೊಬ್ಬರಾದ ದಿವಂಗತ ಕಾರ್ನಾಡ ಸದಾಶಿವ ರಾಯರು ಹಿಂದಿನ ಸ್ವಾತಂತ್ರ್ಯ ಸ್ಥಾಪನೆಯ ಚಳವಳಗಳಿಗಾಗಿ ಲಕ್ಷೋಪಲಕ್ಷ ತಮ್ಮ ಸ್ವಧನವನ್ನು ವೆಚ್ಚಮಾಡಿ, ಕಾಂಗ್ರೆಸ್ಸಿಗೆ ಈ ಜಿಲ್ಲೆಯಿಂದ ತುಂಬಾ ಬೆಂಬಲ ದೊರಕುವಂತೆ ದುಡಿದಿದ್ದರು.

ರಾಷ್ಟ್ರ ಮತ್ತು ಪ್ರಾಂತಿಕ ಶಾಸನಸಭೆಗಳಲ್ಲಿ ಭಾಗ ವಹಿಸಿದ, ಮಂತ್ರಿ ಪದವಿಗಳನ್ನು ಅಲಂಕರಿಸಿದ, ಐ. ಸಿ. ಯಸ್. ಪರೀಕ್ಷೆಯಲ್ಲಿ ಜಯಶೀಲರಾಗಿ ಅನೇಕ ಜಿಲ್ಲೆಗಳನ್ನಾಳಿದ ಅನೇಕ ಮಹನೀಯರೂ ಈ ಜಿಲ್ಲೆಯವರಾಗಿದ್ದಾರೆ. ಅವರ ವಿವರಗಳನ್ನು ಇಲ್ಲಿ ಕೊಡಸಾಧ್ಯವಿಲ್ಲ. ತಮ್ಮ ಸಮಾಜಗಳಿಗಾಗಿ ಶ್ರಮಪಟ್ಟು ಕೀರ್ತಿಸಂಪಾದಿಸಿದ ಇತರ ಕೆಲವು ಮಹನೀಯರೂ ಇದ್ದಾರೆ. ಅವರ ವಿವರಗಳನ್ನೂ ಈ ಚಿಕ್ಕ ಇತಿಹಾಸದಲ್ಲಿ ಕೊಡುವ ಅವಶ್ಯ ತೋರುವುದಿಲ್ಲ.

೧೪೭ ವರ್ಷ ಬ್ರಿಟಿಷರ ಕೆಳಗೆ ಸರ್ವತೋಮುಖದ ಪ್ರಗತಿಯನ್ನು ಹೊಂದಿ ಈ ಜಿಲ್ಲೆಯು ಈಗ ಸ್ವಾತಂತ್ರ್ಯದ ನವಯುಗದಲ್ಲಿ ಇತರ ಹಿಂದುಸ್ಥಾನ ದೊಡನೆ ಕಾಲಿಟ್ಟಿದೆ. ಕ್ಷುದ್ರ, ಸಂಕುಚಿತ ಧ್ಯೇಯ, ವಿಚಾರಗಳಿನ್ನು ತುಳುವರ ಹೃದಯದಿಂದ ಅಳಿಸಿಹೋಗಿ – ಆ ನೂತನ ಯುಗಕ್ಕೆ ಯೋಗ್ಯವಾದ ವಿಕಾಸವು ಅಲ್ಲಿ ತಲೆದೋರಿ, ತುಳುವವು ಆ ಚಂದ್ರಾರ್ಕ ಈ ನಮ್ಮ ಹಿಂದುಸ್ಥಾನದ ಸ್ವಾತಂತ್ರ್ಯ ರಕ್ಷಣೆಗೂ ಸರ್ವ ಹಿಂದುಸ್ಥಾನದ ಜನರ ಉನ್ನತಿಗೂ ತನ್ನ ಸಂಘಟಿತ ಬಲವನ್ನು ಉಪಯೋಗಿಸುವಂತಾಗಲಿ.

—: ಸಮಾಪ್ತಿ :—

# ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಸ್ಥಳಗಳು

## ೧. ಜೈನರ ಪವಿತ್ರ ಸ್ಥಳಗಳು:

**ಕಾರ್ಕಳ, ಮೂಡಬಿದರೆ, ವೇಣೂರು.**

---

### ಕಾರ್ಕಳ

ಇದು ಮಂಗಳೂರಿನಿಂದ ಸುಮಾರು ೩೩ ಮೈಲು ದೂರ ಈಶಾನ್ಯಕ್ಕೆ ಇದೆ. ಇಲ್ಲಿ ಹಿಂದೆ ಜೈನ ಮಂಡಲೇಶ್ವರರಾದ ಭೈರರಸರ ರಾಜಧಾನಿ ಇತ್ತು. ಭೈರರಸರ ವಂಶವು ಅಳಿದುಹೋಗಿರುತ್ತದೆ. ಅವರ ಅರಮನೆಯೂ ಬಿದ್ದು ಹೋಗಿರುತ್ತದೆ. ಆದರೆ ಅವರು ಕಟ್ಟಿಸಿದ ಗೋಮಟೇಶ್ವರ ಪ್ರತಿಮೆ, ಚತುರ್ಮುಖ ಬಸದಿ, ಅನಂತಶಯನ ದೇವಾಲಯ ಮತ್ತು ಇತರ ಬಸದಿಗಳು ಇನ್ನೂ ಒಳ್ಳೇ ಸ್ಥಿತಿಯಲ್ಲಿವೆ. ಅವುಗಳನ್ನು ನೋಡಲಿಕ್ಕೆ ಜಿಲ್ಲೆಯ ಹೊರಗಿನಿಂದ ವರ್ಷಕ್ಕೆ ಸಾವಿರಾರು ಜನರು ಈಗಲೂ ಬರುತ್ತಿದ್ದಾರೆ.

ಕಾರ್ಕಳದಲ್ಲಿ ಗೋಮಟೇಶ್ವರ ಪ್ರತಿಮೆಯು ಒಂದು ಚಿಕ್ಕ ಬೆಟ್ಟದ ಮೇಲಿದೆ. ಪ್ರತಿಮೆಯು ಸುಮಾರು ೪೨ ಫೀಟು ಎತ್ತರವಾಗಿ ನಿರ್ವಾಣದಲ್ಲಿದೆ. ಆ ಪ್ರತಿಮೆಯು ಒಂದೇ ಕಲ್ಲಿನಲ್ಲಿ ಅತೀ ಆಶ್ಚರ್ಯಕರವಾಗಿ ಕೊರೆಯಲ್ಪಟ್ಟದ್ದಾಗಿದೆ; ಅದನ್ನು ಕ್ರಿ. ಶಕ ೧೪೩೨ರಲ್ಲಿ ವೀರಪಾಂಡ್ಯನೆಂಬ ಭೈರರಸನು ಪ್ರತಿಷ್ಠಿಸಿದ್ದು. ಆ ಪ್ರತಿಮೆಯ ಎದುರಿಗೆ ಶಿಲಾಕಂಬದ ಮೇಲೆ ಬ್ರಹ್ಮನ ವಿಗ್ರಹವಿದೆ.

ಚತುರ್ಮುಖ ಬಸದಿಯನ್ನು ಇನ್ನೊಬ್ಬ ಭೈರರಸನಾದ ಇಮ್ಮಡಿ ಭೈರವ ರಾಯನು ಕ್ರಿ. ಶಕ ೧೫೮೬ರಲ್ಲಿ ಕಟ್ಟಿಸಿದ್ದು. ಅದು ತೀರ ಕಗ್ಗಲ್ಲಿನಿಂದ ನಿರ್ಮಿತವಾದ ಸುಂದರ ಕಟ್ಟಡವಾಗಿದೆ. ಅದಕ್ಕೆ ನಾಲ್ಕು ಕಡೆಯಲ್ಲಿಯೂ ದ್ವಾರಗಳಿವೆ. ದ್ವಾರಗಳನ್ನು ತೆರೆಯುತ್ತಲೇ ಒಳಗಿರುವ ತೀರ್ಥಂಕರರ ಮೂರು ವಿಗ್ರಹಗಳು ಪ್ರತಿ ದ್ವಾರದಲ್ಲಿಯೂ ಕಾಣುತ್ತವೆ.

ಅನಂತಶಯನ ದೇವಾಲಯವನ್ನು ಅದೇ ಇಮ್ಮಡಿ ಭೈರವರಾಯನು ಜೈನ ಬಸದಿಗೆಂದು ಕಟ್ಟಿಸಿದ್ದಾಗಿದೆ. ಆದರೆ ಅಲ್ಲಿ ಜೈನ ವಿಗ್ರಹವು ಪ್ರತಿಷ್ಠೆಯಾಗುವ ಮೊದಲೇ ಶೃಂಗೇರಿಯ ಸ್ವಾಮಿಯವರು ಕಾರ್ಕಳಕ್ಕೆ ಬಂದು,

ಇಮ್ಮಡಿ ಭೈರವ ರಾಯನಿಂದ ಅಲ್ಲಿ ಅನಂತಶಯನ ಮೂರ್ತಿಯನ್ನು ಪ್ರತಿಷ್ಠಿಸಿದರು. ಆ ಮೂರ್ತಿಯು ಅತ್ಯಂತ ಸುಂದರವಾಗಿದೆ. ಮಹಾಶೇಷನ ಮೇಲೆ ಪವಡಿಸಿದ ವಿಷ್ಣು, ನಾಭಿಕಮಲದಿಂದ ಮೇಲಕ್ಕೆದ್ದ ಬ್ರಹ್ಮ, ಕಾಲಿನ ಬಳಿ ಪತಿಯ ಸೇವೆಯನ್ನು ಮಾಡುತ್ತಿರುವ ಲಕ್ಷ್ಮಿ- ಇವೆಲ್ಲ ಒಂದೇ ಕಗ್ಗಲ್ಲಿನಲ್ಲಿ ಕೆತ್ತಿದ ವಿಚಿತ್ರವಾದ ಕೆಲಸವನ್ನು ಆ ದೇವಾಲಯದಲ್ಲಿ ನೋಡಬಹುದು.

ಇವಲ್ಲದೆ ಕಾರ್ಕಳದ ಹಿರಿಯಂಗಡಿಯಲ್ಲಿ ಸುಮಾರು ೩೩ ಫೀಟು ಎತ್ತರವಿರುವ ಕಲ್ಲಿನ ಮಾನಸ್ತಂಭ ಮತ್ತು ಅನೇಕಾನೇಕ ಜೈನ ಬಸದಿಗಳಿವೆ. ಭೈರ ಅರಸರು ಕಟ್ಟಿಸಿದ ರಾಮಸಮುದ್ರವೆಂಬ ಜಲಾಶಯವನ್ನೂ- ವೈಷ್ಣವ ಸಾರಸ್ವತರ ಶ್ರೀವೆಂಕಟ್ರಮಣ ದೇವಾಲಯ, ಶ್ರೀನಿವಾಸ ಆಶ್ರಮಗಳನ್ನೂ ಕಾರ್ಕಳದಲ್ಲಿ ನೋಡಬಹುದು.

## ಮೂಡಬಿದರೆ

ಇದು ಮಂಗಳೂರಿನಿಂದ ಕಾರ್ಕಳಕ್ಕೆ ಹೋಗುವ ದಾರಿಯಲ್ಲಿ ಮಂಗಳೂರಿನಿಂದ ಸುಮಾರು ೨೩ ಮೈಲು ದೂರವಿದೆ. ಅಲ್ಲಿ ಜೈನರ ಹದಿನಾರು ಬಸದಿಗಳಿವೆ. ಸಾವಿರ ಕಂಭದ ಬಸದಿಯೆಂಬ ಜೈನ ಚೈತ್ಯಾಲಯವೂ ಚೌಟರರ ಅರಮನೆಯೂ ನೋಡಲಿಕ್ಕೆ ಯೋಗ್ಯವಾಗಿವೆ.

## ವೇಣೂರು

ಇದು ಹಿಂದೆ ಜೈನ ಸಾಮಂತರಾದ ಅಜಿಲರ ರಾಜಧಾನಿಯಾಗಿತ್ತು. ಅಲ್ಲಿಯೂ ಗೋಮಟೇಶ್ವರನ ಪ್ರತಿಮೆಯೊಂದಿದೆ; ಕೆಲವು ಜೈನ ಬಸದಿಗಳೂ ಇವೆ.

## ಗೋಮಟೇಶ್ವರ

ಈ ಗೋಮಟೇಶ್ವರ ಪ್ರತಿಮೆಗಳು ಜೈನರ ಆದಿತೀರ್ಥಂಕರರಾದ ಶ್ರೀ ಋಷಭನಾಥ ಸ್ವಾಮಿಯು ಅವನ ಪೂರ್ವಾಶ್ರಮದಲ್ಲಿ ಪುರುದೇವನೆಂಬ ಹೆಸರಿನಿಂದ ಅಯೋಧ್ಯೆಯಲ್ಲಿ ಆಳುತ್ತಿರುವಾಗ ಅವನಿಗೆ ಹುಟ್ಟಿದ ಬಾಹುಬಲಿ ಎಂಬ ಪುತ್ರನ ಪ್ರತಿಮೆಗಳಾಗಿವೆ. ಪುರುದೇವನಿಗೆ ಆ ಬಾಹುಬಲಿಯಲ್ಲದೆ ಇನ್ನೊಬ್ಬ ಭರತನೆಂಬ ಮಗನಿದ್ದನು. ಪುರುದೇವನ ಬಳಿಕ ಭರತನು ಅಯೋಧ್ಯೆಯಲ್ಲಿಯೂ ಬಾಹುಬಲಿಯು ಪೌದನ ಪುರದಲ್ಲಿಯೂ ಆಳತೊಡಗಿದರು. ಭರತನು

ದಿಗ್ವಿಜಯಕ್ಕೆ ಹೊರಟಾಗ, ಬಾಹುಬಲಿಯ ರಾಜ್ಯಕ್ಕೆ ಬಂದು, ಅಲ್ಲಿ ಅಣ್ಣ ತಮ್ಮಂದಿರಿಗೆ ಕಾಳಗವಾಯಿತು. ಆ ಕಾಳಗದಲ್ಲಿ ಇಬ್ಬರಿಗೂ ಜಯವಾಗಲಿಲ್ಲ; ಆದರೆ ಯುದ್ಧದ ನಡುವೆ ಬಾಹುಬಲಿಯು ವೈರಾಗ್ಯವನ್ನು ತಾಳಿ ಜೈನದೀಕ್ಷೆಯನ್ನು ಕೈಕೊಂಡು ಒಂದು ವರ್ಷ ಪ್ರತಿಮಾ ಯೋಗವನ್ನು ಮಾಡಿ, ಕೈಲಾಸಕ್ಕೆ ಮುಟ್ಟಿ, ಅಲ್ಲಿ ಆದಿಭಟ್ಟಾರಕನಾದನು. ಆ ಆದಿಭಟ್ಟಾರಕನಾದ ಭುಜಬಲಿಯ ಬಿಂಬಗಳೇ ಗೋಮಟೇಶ್ವರ ಪ್ರತಿಮೆಗಳು.

## ೨. ತುಳುವದ ರಾಜಧಾನಿಗಳು

### ಉದ್ಯಾವರ, ಬಾರಕೂರು, ಮಂಗಳೂರು.

ಉದ್ಯಾವರ (ಅಥವಾ ಉದಯಪುರ)ವು ಕ್ರಿ. ಶಕ ೨ನೇ ಶತಮಾನದಿಂದ ಸುಮಾರು ೮ನೇ ಶತಮಾನದ ಅಂತ್ಯದ ತನಕ ಆಲೂಪ ಅರಸರ ರಾಜಧಾನಿಯಾಗಿತ್ತು. ಅದು ಉಡುಪಿಯಿಂದ ಸುಮಾರು ೨-೩ ಮೈಲು ದಕ್ಷಿಣಕ್ಕಿದೆ. ಅಲ್ಲಿ ಆಲೂಪರ ಕೋಟೆಯ ಕುರುಹುಗಳೂ, ಶಂಭುಕಲ್ಲು ದೇವಸ್ಥಾನವೂ ಇವೆ. ಉದ್ಯಾವರವು ಈಗ ಬರೇ ಹಳ್ಳಿಯಾಗಿದೆ.

### ಬಾರಕೂರು

ಇದು ಹಿಂದಿನ ಜೈನ ಅರಸರ ರಾಜಧಾನಿಯಾಗಿತ್ತು. ಆ ಜೈನ ವಂಶವು ಅಳಿದುಹೋದ ಬಳಿಕ, ಆಲೂಪ ಅರಸರು ತಮ್ಮ ರಾಜಧಾನಿಯನ್ನು ಸುಮಾರು ಒಂಭತ್ತನೇ ಶತಮಾನದ ಆದಿಯಲ್ಲಿ ಬಾರಕೂರಿಗೆ ಕೊಂಡುಹೋದರು. ಹದಿಮೂರನೇ ಶತಮಾನದ ಅಂತ್ಯದ ತನಕ ಅದು ಆಲೂಪ ಅರಸರ ರಾಜಧಾನಿಯಾಗಿತ್ತು. ವಿಜಯನಗರ ಕಾಲದಲ್ಲಿ ಅಲ್ಲಿ ಸಾಮ್ರಾಟನ ಪ್ರತಿನಿಧಿಯೊಬ್ಬನು ಆಳುತ್ತಿದ್ದನು.

ಬಾರಕೂರು ಈಗ ಬರೇ ಒಂದು ಹಳ್ಳಿಯಾಗಿದೆಯಾದರೂ ಅದರ ಹಿಂದಿನ ವೈಭವವನ್ನು ನಾವು ಅಲ್ಲಿ ಕಾಣಬಹುದು. ಅದು ಸೀತಾನದಿಯ ತೀರದಲ್ಲಿ, ಉಡುಪಿಯಿಂದ ಸುಮಾರು ೧೦ ಮೈಲು ದೂರದಲ್ಲಿದೆ. ಅನೇಕ ದೇವಸ್ಥಾನಗಳೂ, ಹಾಳುಬಿದ್ದ ಕೋಟೆಗಳ ಕುರುಹುಗಳೂ, ಬಿದ್ದುಹೋದ ಜೈನ ಬಸದಿಗಳೂ, ನಿರ್ಜನವಾದ ಕೇರಿಗಳೂ ಅಲ್ಲಿವೆ.

## ಮಂಗಳೂರು

ಇದು ಈಗಲೂ ಜಿಲ್ಲೆಯ ರಾಜಧಾನಿಯಾಗಿ ದೊಡ್ಡ ವ್ಯಾಪಾರದ ಕ್ಷೇತ್ರವೂ ಬಂದರವೂ ಆಗಿದೆ. ಹಿಂದಿನ ಕಾಲದ ಮಂಗಳಾವತಿ ದೇವಸ್ಥಾನ, ಕದ್ರಿ ಮಂಜುನಾಥ ದೇವಸ್ಥಾನಗಳು ಇನ್ನೂ ಒಳ್ಳೇ ಸ್ಥಿತಿಯಲ್ಲಿವೆ. ಬಂಗರ ಕೋಟೆಯ ಕುರುಹುಗಳನ್ನೂ ಬಂಗರು ಕಟ್ಟಿಸಿದ ಶರವಿನ ಗಣಪತಿ ದೇವಾಲಯ ವನ್ನೂ ಇಲ್ಲಿ ಕಾಣಬಹುದು. ಬಾವಟೆ ಗುಡ್ಡದ ಮೇಲಿರುವ ಇದ್ಗವೂ, ಗೋಳಿಕಟ್ಟೆ ಬಜಾರಿನ ಬಳಿ ಇರುವ ಸುಲ್ತಾನ್ ಪಳ್ಳಿಯೂ, ಬೋಳೂರಲ್ಲಿರುವ ಸುಲ್ತಾನ್ ಬತ್ತೇರಿಯೂ ಈ ಜಿಲ್ಲೆಯು ೩೬ ವರ್ಷ ಮುಸ್ಲಿಮ್ ಅರಸರ ಕೆಳಗಿದ್ದ ಕಾಲವನ್ನು ನೆನಪು ಮಾಡುತ್ತಿವೆ. ಇಂಗ್ಲೀಷರ ಕಾಲದ ಅನೇಕಾನೇಕ ಕಚೇರಿ, ಶಾಲೆ, ಕಾಲೇಜು, ಭಂಡಸಾಲೆ, ಇಗರ್ಜಿಗಳು ಮಂಗಳೂರಿನಲ್ಲಿ ತುಂಬಿವೆ.

ಮಂಗಳೂರು (ಮಂಗಳಪುರ) ರಾಷ್ಟ್ರಕೂಟರ ಕಾಲದಲ್ಲಿಯೇ ದೊಡ್ಡ ನಗರವಾಗಿತ್ತು. ಘಟ್ಟಕ್ಕೆ ಹೋಗುವ ಅನೇಕ ಮಾರ್ಗಗಳೂ ರೈಲ್ವೆಮಾರ್ಗವೂ ಇಲ್ಲಿ ಕೂಡಿ, ಅದರ ಇಕ್ಕಡೆಯಿಂದ ನೇತ್ರಾವತಿ ಫಲುಗುಣಿ ನದಿಗಳು ಹರಿದು ಬಂದು ಇಲ್ಲಿ ಸಂಗಮವಾಗುವದರಿಂದ ಮಂಗಳೂರು ಅತ್ಯಂತ ಪ್ರಾಮುಖ್ಯದ ವ್ಯಾಪಾರ ಕ್ಷೇತ್ರವಾಗಿ ಬೆಳೆದಿರುತ್ತದೆ.

## ೩. ಹಿಂದೂ ಪುಣ್ಯಕ್ಷೇತ್ರಗಳು

### ಉಡುಪಿ

ಇಲ್ಲಿ ಶ್ರೀಮನ್ಮಧ್ವಾಚಾರ್ಯರು ಪ್ರತಿಷ್ಠಿಸಿದ ಶ್ರೀಕೃಷ್ಣ ದೇವಾಲಯವೂ, ಅವರು ಸ್ಥಾಪಿಸಿದ ಅಷ್ಟ ಮಠಗಳೂ ಇದ್ದು ದಕ್ಷಿಣ ಹಿಂದುಸ್ಥಾನದ ಎಲ್ಲಾ ಕಡೆಗಳಿಂದ ಜನರು ಇಲ್ಲಿ ಯಾತ್ರಾರ್ಥವಾಗಿ ಬರುತ್ತಾರೆ. ಉಡುಪಿಯಲ್ಲಿ ಕ್ರಿ. ಶಕ ೧೯೩೫ರಲ್ಲಿ ಮ್ಯುನಿಸಿಪಾಲಿಟಿಯು ಸ್ಥಾಪನೆಯಾಗಿದೆ. ಮಲ್ಪೆ ಬಂದರವು ಉಡುಪಿಯಿಂದ ಸುಮಾರು ೨-೩ ಮೈಲು ದೂರವಿದೆ.

### ಕೊಲ್ಲೂರು

ಇದು ಕುಂದಾಪುರ ತಾಲೂಕಿನಲ್ಲಿ ಘಟ್ಟದ ಬುಡದಲ್ಲಿರುವ ಒಂದು ಹಳ್ಳಿ. ಅಲ್ಲಿ ಶ್ರೀ ಶಂಕರಾಚಾರ್ಯರು ಪ್ರತಿಷ್ಠಿಸಿದ ಶಿವಲಿಂಗವಿದ್ದು ಆ ಶಿವಲಿಂಗದ

ಬಳಿ ಮೂಕಾಂಬಿಕೆಯ ಸುಂದರ ಪ್ರತಿಮೆ ಇದೆ. ಇಕ್ಕೇರಿ ಅರಸರು ಮೂಕಾಂಬಿಕೆಯಲ್ಲಿ ಕಡು ಶ್ರದ್ಧೆಯುಳ್ಳವರಾಗಿದ್ದರಿಂದ ಅವರು ದೇವಾಲಯ ವನ್ನು ಸುಂದರವಾಗಿ ಕಟ್ಟಿಸಿರುತ್ತಾರೆ. ಇಲ್ಲಿ ಮಲಯಾಳದಿಂದ ದಿನಂಪ್ರತಿ ಯಾತ್ರಿಕರು ಬರುತಿದ್ದಾರೆ.

## ಧರ್ಮಸ್ಥಳ

ಇದು ಪುತ್ತೂರು ತಾಲೂಕಿನಲ್ಲಿ ಬೆಳತಂಗಡಿಯಿಂದ ಸುಮಾರು ೯ ಮೈಲು ದೂರವಿದೆ. ಇಲ್ಲಿರುವ ಶ್ರೀ ಮಂಜುನಾಥ ದೇವಾಲಯವು ಜೈನರಾದ ಶ್ರೀ ಮಂಜಯ್ಯ ಹೆಗ್ಡೆರ ಕೈಕೆಳಗಿದೆ. ಇಲ್ಲಿ ಬರುವ ಯಾತ್ರಿಕರಿಗೆ ಜಾತಿಭೇದ ವಿಲ್ಲದೆ ದೇವಾಲಯದಿಂದ ಊಟದ ಪಡಿ ದೊರಕುವುದರಿಂದ ಅದಕ್ಕೆ ಧರ್ಮ ಸ್ಥಳವೆಂಬ ಹೆಸರು ಬರಲಿಕ್ಕೆ ಕಾರಣವಾಗಿದೆ. ಬ್ರಿಟಿಷರು ಟೀಪುವಿನ ಮರಣದ ಬಳಿಕ ತಮ್ಮ ಅಧಿಕಾರವನ್ನು ಸ್ಥಾಪಿಸುವಾಗ ಆಗಿನ ಧರ್ಮಸ್ಥಳದ ಹೆಗ್ಡೆಯರು ಬ್ರಿಟಿಷರಿಗೆ ತುಂಬಾ ಸಹಾಯಮಾಡಿದ್ದರು. ಧರ್ಮಸ್ಥಳದ ಕೀರ್ತಿಯು ಈಗಿನ ಹೆಗ್ಡೆಯರ ಕಾಲದಲ್ಲಿ ತುಂಬಾ ಪ್ರಸರಿಸಿ, ಈಗ ಜಿಲ್ಲೆಯಲ್ಲಿರುವ ಹಿಂದೂ ಪುಣ್ಯಕ್ಷೇತ್ರಗಳಲ್ಲಿ ಧರ್ಮಸ್ಥಳವು ಪ್ರಾಮುಖ್ಯದ ಸ್ಥಾನವೊಂದನ್ನು ಪಡೆದಿದೆ.

## ಸುಬ್ರಹ್ಮಣ್ಯ

ಇದೂ ಪುತ್ತೂರು ತಾಲೂಕಿನಲ್ಲಿ, ಧರ್ಮಸ್ಥಳದಿಂದ ದಕ್ಷಿಣಕ್ಕಾಗಿ, ಕುಮಾರಧಾರೀ ನದಿಯ ತೀರದಲ್ಲಿದೆ. ಇಲ್ಲಿರುವ ದೇವಾಲಯವು ಮೈಸೂರಿ ನವರಿಗೆ ಪವಿತ್ರವಾಗಿದ್ದು ಮೈಸೂರು ಅರಸರಿಂದ ತಸದೀಕನ್ನು ಪಡೆಯುತ್ತದೆ. ಅಲ್ಲಿ ವರ್ಷಾವಧಿ ವಿಜ್ರಂಭಣೆಯಿಂದ ನಡೆಯುವ ಷಷ್ಠಿ ಜಾತ್ರೆಯ ಸಮಯ ಒಂದು ಜಾನುವಾರ ಸಂತೆಯೂ ಕೂಡುವುದರಿಂದ ಜಿಲ್ಲೆಯ ಜನರೂ ಮೈಸೂರಿನ ಜನರೂ ಕೂಡಿ ಅಲ್ಲಿ ದೊಡ್ಡ ಜನಸ್ತೋಮವಾಗುತ್ತದೆ.

# ೪. ವೀರಶೈವರ ಮಠ

## ಗುರುಪುರ

ಇದು ಇಕ್ಕೇರಿ ಅರಸರ ಕಾಲದಲ್ಲಿ ಪ್ರಸಿದ್ಧಿಪಟ್ಟ ಸ್ಥಳ. ಅಲ್ಲಿ ಜಂಗಮ (ವೀರಶೈವ)ರ ಮಠವಿರುವುದರಿಂದ ಅದಕ್ಕೆ ಗುರುಪುರವೆಂಬ ಹೆಸರು ಬಂತು.

ಅಲ್ಲಿಂದ ಸ್ವಲ್ಪದೂರ ಗಂಜಿ ಊಟದ ಛತ್ರವಿತ್ತು. ಅದಕ್ಕೆ ಗಂಜೀಮಠವೆಂಬ ಹೆಸರು ಈಗಲೂ ಉಳಿದಿದೆ. ಗುರುಪುರದಲ್ಲಿ ಈಗ ವೈಷ್ಣವ ಸಾರಸ್ವತರ ದೇವಾಲಯವೂ ಪೇಟೆಯೂ ಕಾರ್ಕಳದಿಂದ ಮಂಗಳೂರಿಗೆ ಹೋಗುವ ಬಸ್ ರಸ್ತೆಯ ಬಳಿ ಇವೆ.

## ೫. ವೈಷ್ಣವಸಾರಸ್ವತರ ಪ್ರಸಿದ್ಧ ದೇವಾಲಯಗಳು

**ಮಂಜೇಶ್ವರ, ಮೂಲ್ಕಿ, ಕಾರ್ಕಳ, ಬಂಟವಾಳಗಳಲ್ಲಿವೆ.**

ಮಂಜೇಶ್ವರ ದೇವಾಲಯವು ಅತ್ಯಂತ ಪ್ರಾಚೀನದ್ದಾಗಿದೆ. ಉಳಿದ ದೇವಾಲಯಗಳನ್ನು ಪೊರ್ತುಗೀಸರ ಕಾಲದಲ್ಲಿ ಗೋವೆಯನ್ನು ಬಿಟ್ಟುಬಂದ ವೈಷ್ಣವಸಾರಸ್ವತರು ಕಟ್ಟಿಸಿದ್ದಾಗಿರುತ್ತದೆ. ಅವುಗಳು ೧೬ನೇ ಶತಮಾನಕ್ಕೆ ಒಪ್ಪಿದವುಗಳು. ಮಂಗಳೂರಿನಲ್ಲಿಯೂ ಸರಕಾರದಿಂದ ತಸದೀಕನ್ನು ಪಡೆಯುವ ವೈಷ್ಣವಸಾರಸ್ವತರ ಮಹಮ್ಮಾಯಿ, ವೆಂಕಟ್ರಮಣ ದೇವಸ್ಥಾನಗಳಿವೆ.